ಇಟ್ಟ ಹೆಜ್ಜೆ – ಪಟ್ಟ ಶ್ರಮ

ಸಂಪಾದಕರು:
ಮಂ.ಅ. ವೆಂಕಟೇಶ್
ಎನ್. ಆನಂದ ರಾಮರಾವ್
ಮು. ಪಾರ್ಥಸಾರಥಿ

ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ
ಜಾಲಹಳ್ಳಿ, ಬೆಂಗಳೂರು - ೫೬೦ ೦೧೩.

ಇಟ್ಟ ಹೆಜ್ಜೆ - ಪಟ್ಟ ಶ್ರಮ

ಕನ್ನಡ ಚಳುವಳಿ ನಡೆದು ಬಂದ ದಾರಿ

ಸಂಪಾದಕರು

ಮಂ. ಅ. ವೆಂಕಟೇಶ್

ಎನ್. ಆನಂದ ರಾಮರಾವ್

ಮು. ಪಾರ್ಥಸಾರಥಿ

ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ

ಹಿತರಕ್ಷಕ ಸಮಿತಿ (ನೋಂ)

ಜಾಲಹಳ್ಳಿ, ಬೆಂಗಳೂರು - ೫೬೦ ೦೧೩.

ಇಟ್ಟ ಹೆಜ್ಜೆ-ಪಟ್ಟ ಶ್ರಮ - ಕನ್ನಡ ಚಳುವಳಿ ನಡೆದು ಬಂದ ದಾರಿ
(ಏಕೀಕೃತ ಕರ್ನಾಟಕದಲ್ಲಿ ಕಳೆದ ಐವತ್ತು ವರ್ಷಗಳಿಂದ ನಡೆದಿರುವ ಹೋರಾಟ ಮತ್ತು ಚರಿತ್ರೆ)


ITTA HEJJE - PATTA SHRAMA - Kannada Chaluvali Nadedhu Bandha Daari (A Glimpse of Kannada movement and history during the last Fifty years in United Karnataka.

ಲೇಖಕರು	:	ಮಂ. ಅ. ವೆಂಕಟೇಶ್ ಎನ್. ಆನಂದರಾಮ ರಾವ್ ಮು. ಪಾರ್ಥಸಾರಥಿ
ಪುಟಗಳು	:	XVI + ೧೬೭
ಪ್ರಕಾಶಕರು	:	ಬಿ.ಇ.ಎಲ್ ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ (ನೋಂ) ಜಾಲಹಳ್ಳಿ, ಬೆಂಗಳೂರು - ೫೬೦ ೦೧೩
ಪ್ರಥಮ ಮುದ್ರಣ	:	೨೦೦೫, ಸೆಪ್ಟೆಂಬರ್
ಕೃತಿಸ್ವಾಮ್ಯ	:	ಪ್ರಕಾಶಕರು
ಬೆಲೆ	:	ಐವತ್ತು ರೂಪಾಯಿಗಳು
ಮುದ್ರಕರು	:	ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ. ನಂ. ೧೬೪, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮.

ಅರ್ಪಣೆ

- ಕರ್ನಾಟಕ ಏಕೀಕರಣ ಹೋರಾಟದಲ್ಲಿ ಮಡಿದ ಬಳ್ಳಾರಿಯ **ರಂಜಾನ್ ಸಾಬ್**
- ಮಹಾಜನ ವರದಿ ವಿರುದ್ಧದ ರೈಲು ಸತ್ಯಾಗ್ರಹದಲ್ಲಿ ಮಡಿದ **ಮು.ಗೋವಿಂದ ರಾಜು**
- ಗೋಕಾಕ್ ವರದಿ ಚಳುವಳಿ ಸಂಬಂಧದಲ್ಲಿ ಮಡಿದ **ಅರಸಪ್ಪ**
- ವಿವಿಧ ಕನ್ನಡ ಪರ ಹೋರಾಟಗಳಲ್ಲಿ ಮಡಿದ ಅಸಂಖ್ಯಾತ ಹುತಾತ್ಮರ ನೆನಪಿಗಾಗಿ.

ಅಧ್ಯಕ್ಷರ ಮಾತು



ಸಾಧಾರಣವೆನಿಸಿದರೂ ನನ್ನ ದೃಷ್ಟಿಯಲ್ಲಿ ಇದೊಂದು 'ಅಸಾಧಾರಣ' ಕೃತಿ. ಇದು ಸೃಜನಶೀಲ ಸಾಹಿತ್ಯಕೃತಿ ಅಲ್ಲದಿರಬಹುದು. ಆದರೆ ಒಂದು ನೆಲದ ಆಸೆ-ನಿರಾಸೆಗಳ, ಕೆಚ್ಚು - ನೆಚ್ಚುಗಳ ಮತ್ತು ನೋವು-ನಲಿವುಗಳ ಬದುಕಿನ ಒಂದು ವಸ್ತುನಿಷ್ಠ ನಿರೂಪಣೆಯ ಕೃತಿಯಂತೂ ಹೌದು.

'ಇಟ್ಟ ಹೆಜ್ಜೆ-ಪಟ್ಟ ಶ್ರಮ' ಏಕೀಕೃತ ಕರ್ನಾಟಕದಲ್ಲಿ ಕನ್ನಡಿಗರು ತಮ್ಮ ಅಸ್ತಿತ್ವಕ್ಕಾಗಿ, ಆತ್ಮಗೌರವಕ್ಕಾಗಿ ಕಳೆದ ಐವತ್ತು ವರ್ಷಗಳಿಂದ ನಡೆಸಿರುವ, ಇನ್ನೂ ನಡೆಸಬೇಕಾಗಿರುವ ಹೋರಾಟ ಮತ್ತು ಚಳವಳಿಗಳ ಚರಿತ್ರೆ ಎನ್ನಬಹುದು. 'ಕನ್ನಡ-ಕನ್ನಡಿಗ-ಕರ್ನಾಟಕ'ಕ್ಕಾಗಿ ನಡೆದ ಹೋರಾಟದ ಮಹತ್ವದ ಘಟನೆಗಳನ್ನೆಲ್ಲ ಶ್ರೀ ಮಂ.ಅ. ವೆಂಕಟೇಶ್, ಶ್ರೀ ಎನ್. ಆನಂದರಾಮರಾವ್ ಮತ್ತು ಶ್ರೀ ಮು. ಪಾರ್ಥಸಾರಥಿ ಅವರು ಇಲ್ಲಿ ದಾಖಲಿಸಿದ್ದಾರೆ. ಉಪಲಬ್ಧ ಮಾಹಿತಿಯನ್ನೆಲ್ಲ ಸಂಗ್ರಹಿಸಿ ಇಂತಹ ಉಪಯುಕ್ತ ಕೃತಿಯನ್ನು ರಚಿಸಿರುವ ಈ ಮೂವರು ಆತ್ಮೀಯರನ್ನು ಅಭಿನಂದಿಸುತ್ತೇನೆ.

ಈ ಕೃತಿಯಲ್ಲಿ 'ಕರ್ನಾಟಕ ಏಕೀಕರಣದ ಕನಸು-ಸಾಧನೆ' ಯಿಂದ ಹಿಡಿದು ಇಂದು ನಡೆಯುತ್ತಿರುವ 'ಶಿಕ್ಷಣ ಮಾಧ್ಯಮ' ಸಂಬಂಧದ ಹೋರಾಟದವರೆಗೆ ಅನೇಕ ಸಂಗತಿಗಳಿವೆ. ಕನ್ನಡಪರವಾದ ಪ್ರತಿಯೊಂದು ಚಳವಳಿಯ ಹಿನ್ನೆಲೆ, ಸ್ವರೂಪ ಮತ್ತು ಪರಿಣಾಮಗಳನ್ನು ತುಂಬ ಸರಳವಾಗಿ ನಿರೂಪಿಸಲಾಗಿದೆ. ಇಲ್ಲಿರುವ ವಸ್ತುನಿಷ್ಠತೆಗೆ ಮುಖ್ಯ ಕಾರಣ ಕೃತಿಕರ್ತರಾದ ಮೂವರೂ ಕನ್ನಡ ಚಳವಳಿಯ ಭಾಗವಾಗಿರುವುದು.

ಕನ್ನಡಿಗರ ಚಳವಳಿಗಳನ್ನು ಕುರಿತು ಅನ್ಯಭಾಷೆಯವರು ಅಸಹನೆಯಿಂದ ಆಡಿಕೊಂಡಿರುವುದು ಒತ್ತಟ್ಟಿಗಿರಲಿ, ಕನ್ನಡಿಗರೇ ಆದ ಕೆಲವು 'ಉದಾರಿ'ಗಳು ಚಳವಳಿಯಲ್ಲಿ ತೊಡಗಿದ ಕಾರ್ಯಕರ್ತರನ್ನು ಕುರಿತು 'ಇದು ದುರಭಿಮಾನ, ಅಂಧ ಧೋರಣೆ, ಸಂಕುಚಿತ ದೃಷ್ಟಿ' - ಎಂಬೆಲ್ಲ ಮಾತುಗಳನ್ನು ಬಳಸಿರುವುದೂ ಉಂಟು. ಆದರೆ, ಇಂತಹ ಪ್ರದರ್ಶನ 'ಉದಾರಿ'ಗಳ ಮಾತುಗಳಿಗೆ ಕಿವಿಗೊಡದೆ ನಮ್ಮ ಕಾರ್ಯಕರ್ತರು ಕನ್ನಡದ ಹಿರಿಮೆ-ಗರಿಮೆಗಳ ರಕ್ಷಣೆಗಾಗಿ ಬೀದಿಗಿಳಿದು ಬವಣೆ ಅನುಭವಿಸಿದ್ದಾರೆ. ಕನ್ನಡಿಗರೆಂದೂ ಅಂಧಾಭಿಮಾನಿಗಳಲ್ಲ. ಆದರೆ, ತಮ್ಮ ಅಸ್ತಿತ್ವ-ಅಭಿಮಾನಗಳಿಗೇ ಅಪಾಯವೊದಗುವ ಸಂದರ್ಭಗಳು ಬಂದಾಗ ಅನಿವಾರ್ಯವಾಗಿ ಸಿಡಿದೆದ್ದಿದ್ದಾರೆ. ಬಹುಶಃ, ಅವರು ಅಷ್ಟನ್ನೂ ಮಾಡದಿದ್ದರೆ ಈ 'ಪ್ರದರ್ಶನ ಉದಾರಿ'ಗಳು ಪ್ರಮಾದಕ್ಕೊಳಗಾಗಬೇಕಾಗಿತ್ತು.

ನಮ್ಮ ಇಡೀ ಕನ್ನಡ ಚಳವಳಿಯ ಆಶಯಕ್ಕೆ ಕನ್ನಡಿ ಹಿಡಿದಂತೆ ಈ ಕೃತಿಕರ್ತರು ಅತ್ಯಂತ ಮೌಲಿಕವಾದ ಮತ್ತು ಬಹಳ ಜನರಿಗೆ ತಿಳಿಯದಿರುವ ಒಂದು ದೃಢವಾದ ದಾಖಲೆ ಒದಗಿಸಿದ್ದಾರೆ. ಅದು ಕನ್ನಡ ಸಂಘಟನೆಗಳ ಸಂಯುಕ್ತರಂಗದ ಪ್ರಧಾನ ಕಾರ್ಯದರ್ಶಿಯಾಗಿದ್ದ, 'ಕನ್ನಡದ ವೀರಸೇನಾನಿ' ಎಂದೇ ಹೆಸರಾಗಿದ್ದ ದಿವಂಗತ ಮ. ರಾಮಮೂರ್ತಿ ಅವರು ೧೯೬೨ರ ಜೂನ್ ೧ ರಂದು ನೀಡಿರುವ ಪತ್ರಿಕಾ ಹೇಳಿಕೆಯ ಪೂರ್ಣಪಾಠ. ಅನ್ಯ ಭಾಷಿಗರಿಗೂ ಕನ್ನಡಿಗರ ಧ್ಯೇಯ-ಧೋರಣೆಗಳು, ನೀತಿ-ನಿಲುವುಗಳು ಅರಿವಾಗಲೆಂದು ಆ ಹೇಳಿಕೆಯನ್ನು ಇಂಗ್ಲಿಷಿನಲ್ಲಿ ನೀಡಿದ್ದಾರೆ.

ಬೆಂಗಳೂರಿನಲ್ಲಿ ನಡೆಯುವ ಪ್ರತಿಷ್ಠಿತ ರಾಮೋತ್ಸವ ಸಂದರ್ಭದಲ್ಲಿ ಇಲ್ಲಿನ ವ್ಯವಸ್ಥಾಪಕರು ಈ ನೆಲದ ಕಲಾವಿದರನ್ನು ಕಡೆಗಣಿಸಿ ತಮಿಳುನಾಡಿನ ಕಲಾವಿದರಿಗೆ ಮಣೆ ಹಾಸುತ್ತಿದ್ದುದರ ವಿರುದ್ಧ ಅ.ನ.ಕೃ ಅವರ ಹಿರಿತನದಲ್ಲಿ ನಡೆದ ಪ್ರತಿಭಟನಾ ಚಳವಳಿ ಸಂದರ್ಭದಲ್ಲಿ ತಮಿಳು ಪತ್ರಿಕೆಗಳು ಕನ್ನಡಿಗರ ವಿರುದ್ಧ ಅವಹೇಳನಕಾರಿ ಪ್ರಚಾರ ನಡೆಸಿ, ಕನ್ನಡಿಗರು ತಮಿಳರ ಕ್ಷಮಾಪಣೆ ಕೇಳಬೇಕೆನ್ನುವಷ್ಟು ವಿಕೃತವಾದಾಗ, ನಮ್ಮವರೇ ಆದ ಕೆಲವರು, 'ಸಂಗೀತ ಕಾರ್ಯಕ್ರಮಗಳಿಗೆ ಭಾಷೆಯ ಗಡಿ ಇರಬಾರದು' ಎಂಬ ರಾಗ ಎಳೆದಾಗ, ಸಾರ್ವಜನಿಕರಲ್ಲಿ ಮೂಡಬಹುದಾದ ತಪ್ಪು ಕಲ್ಪನೆಯನ್ನು ನಿವಾರಿಸುವ ಅಗತ್ಯವನ್ನು ಮನಗಂಡು ನೀಡಿರುವ ಆ ಹೇಳಿಕೆಯಲ್ಲಿ "All our movement stands for is to make the life of average Kannadiga endurable and to create a respectable place

for him in his own land" (ನಮ್ಮ ಚಳವಳಿಯ ಉದ್ದೇಶವೇ ಸಾಮಾನ್ಯ ಕನ್ನಡಿಗನ ಬದುಕನ್ನು ಸಹನೀಯವಾಗಿಸುವುದು ಮತ್ತು ಕನ್ನಡಿಗನಿಗೆ ತನ್ನ ನೆಲದಲ್ಲೇ ಒಂದು ಉತ್ತರದಾಯಿತ್ವದ ಗೌರವದ ಸ್ಥಾನವನ್ನು ಕಲ್ಪಿಸುವುದೇ ಆಗಿದೆ) ಎಂದು ಸ್ಪಷ್ಟಪಡಿಸಿದ್ದಾರೆ. ಬಹುಶಃ, ಈ ಮಾತುಗಳು ಕನ್ನಡಿಗರ ಇಡೀ ಚಳವಳಿಯ 'ಕ್ಷ'ಕಿರಣವೂ ಹೌದು; ಕ್ರಿಯಾರೂಪವೂ ಹೌದು; ಸಾರ್ವಕಾಲಿಕ ಅನ್ವಯವೂ ಹೌದು.

ಈ ಕೃತಿಯಲ್ಲಿ ಮೊದಲೇ ನನ್ನ ಗಮನ ಸೆಳೆದ ಮತ್ತು ಹೃದಯ ತಟ್ಟಿದ ಒಂದು ಅಂಶವೆಂದರೆ, ಕೃತಿಯ 'ಅರ್ಪಣೆ'. **'ಇಟ್ಟ ಹೆಜ್ಜೆ - ಪಟ್ಟ ಶ್ರಮ'**ವನ್ನು ಕರ್ನಾಟಕ ಏಕೀಕರಣ ಹೋರಾಟ, ಮಹಾಜನ ವರದಿ ಸಂಬಂಧದ ರೈಲು ಸತ್ಯಾಗ್ರಹ ಮತ್ತು ಗೋಕಾಕ್ ವರದಿ ಚಳವಳಿಗಳಲ್ಲಿ ಮಡಿದ ಮೂವರು ಕನ್ನಡ ಬಂಧುಗಳಿಗೆ ಮತ್ತು ಕನ್ನಡಪರ ಹೋರಾಟಗಳಲ್ಲಿ ಜೀವತೆತ್ತವರಿಗೆ ಅರ್ಪಿಸಲಾಗಿದೆ. ಇದು ನಾಡು-ನುಡಿಗಳಿಗಾಗಿ ಮಡಿದವರಿಗೆ ಸಲ್ಲಿಸಿದ ಅರ್ಥಪೂರ್ಣ ಅರ್ಪಣೆ, ಸಾರ್ಥಕ ಸ್ಮರಣೆ ಎಂದು ನಾನು ಭಾವಿಸುತ್ತೇನೆ.

ಕಳೆದ ಇಪ್ಪತ್ತೈದು ವರ್ಷಗಳಿಂದ ಈಚೆಗೆ ನಡೆದಿರುವ ಬಹುತೇಕ ಕನ್ನಡಪರ ಹೋರಾಟ ಮತ್ತು ಚಳವಳಿಗಳಲ್ಲಿ ನಮ್ಮ ಬಿ.ಇ.ಎಲ್ ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಸದಸ್ಯರು ಸಕ್ರಿಯ ಪಾತ್ರ ವಹಿಸಿರುವುದನ್ನು ಇಲ್ಲಿ ತಿಳಿಸಲು ನಾನು ಹೆಮ್ಮೆಪಡುತ್ತೇನೆ. ಆ ಕಾರಣದಿಂದಲೇ, ಈ 'ಚಳವಳಿ ಚರಿತ್ರೆ'ಯ ಕೃತಿಯನ್ನು ನಮ್ಮ ಸಮಿತಿಯ ಬೆಳ್ಳಿಹಬ್ಬದ ಸಂದರ್ಭದಲ್ಲಿ ಪ್ರಕಟಿಸಲು ಹೆಚ್ಚು ಅಭಿಮಾನವೆನಿಸುತ್ತದೆ; ಅಷ್ಟೇ ಸಂದರ್ಭೋಚಿತವೆನಿಸುತ್ತದೆ.

ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ ಸದಸ್ಯರ ವಿಶೇಷವೆಂದರೆ, ಕನ್ನಡದ ಕೆಲಸ ಯಾವುದೇ ಇರಲಿ, ಎಲ್ಲೇ ಇರಲಿ, ಅದೊಂದು ಸೇವೆ ಎಂದು ಭಾವಿಸಿ ದುಡಿಯುತ್ತಾರೆ. ಸಂದರ್ಭ ಬಂದರೆ ಕೆಲಸಕ್ಕೆ ರಜಾ ಹಾಕಿ ಹೋಗುತ್ತಾರೆ. ಚಳವಳಿಯ ನೋವುಗಳನ್ನೆಲ್ಲ ನಗುತ್ತಲೇ ಸಹಿಸಿಕೊಳ್ಳುತ್ತಾರೆ. ಅವರ ಈ ಅರ್ಪಣಾಭಾವದಿಂದಾಗಿಯೇ ಕೇಂದ್ರೋದ್ಯಮವಾದ ಬಿ.ಇ.ಎಲ್ ಕಾರ್ಖಾನೆಯ ಆವರಣದಲ್ಲಿ ಕನ್ನಡದ ತಿಳಿಗಾಳಿ ಬೀಸಲು ಸಾಧ್ಯವಾಗಿರುವುದು. ಈ ದೃಷ್ಟಿಯಿಂದ ಅವರು ಉಳಿದ ಕಾರ್ಮಿಕ ಬಂಧುಗಳಿಗೂ ಮಾದರಿಯಾಗಿದ್ದಾರೆ ಎಂದರೆ ಕೇವಲ ಅಭಿಮಾನದ ಮಾತಲ್ಲ; ವಾಸ್ತವ ಸಂಗತಿ.

'ಇಟ್ಟ ಹೆಜ್ಜೆ - ಪಟ್ಟ ಶ್ರಮ' ಕೃತಿ ರಚನೆಗಾಗಿ ಕೃತಿಕರ್ತರು ಸಾಕಷ್ಟು ಶ್ರಮಪಟ್ಟು ಮಾಹಿತಿ ಸಂಗ್ರಹಿಸಿದ್ದಾರೆ. ಇದು ನಾಡುನುಡಿಗಳ ಬಗೆಗೆ ಅವರಿಗಿರುವ

ಅನನ್ಯ ನಿಷ್ಠೆ ಮತ್ತು ಅಭಿಮಾನಗಳಿಗೆ ಸಾಕ್ಷಿಯಾಗಿದೆ. ಇದು ವಾಸ್ತವವಾಗಿ ಸಂಶೋಧಕರು ಮಾಡಬೇಕಾದ ಕೆಲಸ. ಆದರೂ ಕೇವಲ ಆಸಕ್ತಿಯಿಂದ ಈ ತ್ರಿಮೂರ್ತಿಗಳು ಇಂತಹ ಉಪಯುಕ್ತ ಕೃತಿ ರಚಿಸಿದ್ದಾರೆ. ಚಳವಳಿಯ ಭಾಗವಾದ ಬಹುತೇಕ ವ್ಯಕ್ತಿಗಳು ಮತ್ತು ಸಂಘಟನೆಗಳನ್ನು ಕೊನೆಯಲ್ಲಿ ಪಟ್ಟಿ ಮಾಡಿದ್ದಾರೆ. ಅವರೇ ಹೇಳಿರುವಂತೆ ಎಷ್ಟೋ ಹೆಸರುಗಳು ಬಿಟ್ಟು ಹೋಗಿರುವ ಸಾಧ್ಯತೆ ಇದೆ. ಹಾಗೊಂದು ವೇಳೆ ಬಿಟ್ಟು ಹೋಗಿದ್ದರೆ ಅದು ಕೇವಲ ಆಕಸ್ಮಿಕ. ಏನೇ ಇದ್ದರೂ, ಈ ಮೂವರು ಕನ್ನಡ ಬಂಧುಗಳು ಮಾಡಿರುವ ಕೆಲಸ ಸಾರ್ಥಕವಾಗಿದೆ.

ಕನ್ನಡ ಜನ ಸಮುದಾಯಕ್ಕೆ ಸ್ವಾಭಿಮಾನ ಮತ್ತು ಆತ್ಮ ವಿಶ್ವಾಸಗಳನ್ನು ತುಂಬಲು, ಕನ್ನಡ ನಾಡು-ನುಡಿಗಳ ಸ್ಥಾನಮಾನಕ್ಕೆ ಆಪತ್ತು ಒದಗಿದ ಸಂದರ್ಭಗಳಲ್ಲಿ ನಡೆಯುವ ನ್ಯಾಯಯುತ ಚಳವಳಿಗಳಲ್ಲಿ ಸ್ವಯಂಪ್ರೇರಿತರಾಗಿ ಪಾಲುಗೊಳ್ಳಲು **'ಇಟ್ಟ ಹೆಜ್ಜೆ - ಪಟ್ಟ ಶ್ರಮ'** ಪ್ರೇರಣೆ ನೀಡುವಂತಾಗಲಿ.

ಬೆಂಗಳೂರು
೦೧.೦೯.೨೦೦೫

ಗೊ.ರು. ಚನ್ನಬಸಪ್ಪ
ಅಧ್ಯಕ್ಷ
ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ

ಸ್ವಾಭಿಮಾನದ ದಾಖಲೆ



೧೯೫೧-೧೯೭೦ರ ದಶಕದಲ್ಲಿ ಕರ್ನಾಟಕದಲ್ಲಿ, ಅದರಲ್ಲೂ ಬೆಂಗಳೂರಿನಲ್ಲಿ ಕೈಗಾರಿಕಾ ಬೆಳವಣಿಗೆಯಿಂದ ಯಥೇಚ್ಛ ಉದ್ಯೋಗಾವಕಾಶಗಳು ಲಭ್ಯವಾಗತೊಡಗಿತು. ಜೊತೆಯಲ್ಲೇ ಪರಪ್ರಾಂತೀಯರು ಕರ್ನಾಟಕಕ್ಕೆ ಹಿಂಡು ಹಿಂಡಾಗಿ ವಲಸೆ ಬರುವುದೂ ಹೆಚ್ಚಾಯಿತು. ಸ್ಥಳೀಯ ಕನ್ನಡಿಗರೇ ಉದ್ಯೋಗಾವಕಾಶಗಳಿಂದ ವಂಚಿತರಾಗುವ ಪರಿಸ್ಥಿತಿ ಉಂಟಾಯಿತು. ಕನ್ನಡ-ಕನ್ನಡಿಗ - ಕರ್ನಾಟಕದ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವಂತಹ ಪರಿಸ್ಥಿತಿಯೂ ನಿರ್ಮಾಣವಾಯಿತು. ಕನ್ನಡಿಗ ತನ್ನ ನಾಡಿನಲ್ಲಿ ತಾನೇ ಪರಕೀಯ ಎಂಬ 'ಪ್ರಜ್ಞೆ' ಕಾಡಿದಾಗ ಕನ್ನಡ ಚಳವಳಿಗೆ ನಾಂದಿ ಹಾಡಿತು.

ಅದೇ ಪರಿಸ್ಥಿತಿಯನ್ನು ನಮ್ಮ ಬಿ.ಇ.ಎಲ್. ಕಾರ್ಖಾನೆಯಲ್ಲೂ ಕಾಣಬಹುದಾಗಿತ್ತು. ಕನ್ನಡೇತರರು ಕನ್ನಡಿಗರ ಮೇಲೆ ನಡೆಸುತ್ತಿದ್ದ ದರ್ಪ, ದೌರ್ಜನ್ಯ, ದಬ್ಬಾಳಿಕೆಯ ಹಾವಳಿಯಿಂದ ರೋಸಿ ಹೋಗಿದ್ದ ಕನ್ನಡಿಗರು ೧೯೭೯ರಲ್ಲಿ ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯನ್ನು ಸ್ಥಾಪಿಸಿದರು.

ಕನ್ನಡಿಗರ ಹೋರಾಟದ ಆರಂಭದಿಂದಲೂ ಹೆಚ್ಚು ಹೆಚ್ಚು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವುದು ಕೈಗಾರಿಕಾ ಕ್ಷೇತ್ರದ ಕನ್ನಡ ಸಂಘಗಳು. ಕನ್ನಡ ನಾಡು-ನುಡಿ, ನೆಲ, ಜಲ, ಗಡಿ ಮುಂತಾದ ಕನ್ನಡ ಪರ ಹೋರಾಟಗಳಲ್ಲಿ ಕಾರ್ಮಿಕರು ಮುಂದಿದ್ದಾರೆ. ಬೆಂಗಳೂರಿನಲ್ಲಿ ಕನ್ನಡ, ಕನ್ನಡಿಗರು ಉಳಿದಿದ್ದರೆ, ಅದಕ್ಕೆ ಕಾರಣ ಕಾರ್ಮಿಕ ಕ್ಷೇತ್ರದ ಕನ್ನಡ ಪರ ಚಳುವಳಿಗಾರರೇ ಎಂದರೆ ತಪ್ಪಾಗಲಾರದು.

ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ ತನ್ನ ಬೆಳ್ಳಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ಸಂದರ್ಭದಲ್ಲಿ, ಇತ್ತೀಚಿನ ಕಾಲದಲ್ಲಿ ನಡೆದ ಕನ್ನಡ ಚಳವಳಿಯ ಹೋರಾಟಗಳನ್ನು ದಾಖಲಿಸುವ ಪುಸ್ತಕವೊಂದನ್ನು ತರಬೇಕೆಂದು ನನ್ನ ಆತ್ಮೀಯ ಸ್ನೇಹಿತರಾದ ಮು. ಪಾರ್ಥಸಾರಥಿಯವರು ನನಗೆ ಸಲಹೆಯನ್ನಿತ್ತರು. ಅವರ ಸೂಕ್ತ ಸಲಹೆಯನ್ನು ಕಾರ್ಯರೂಪಕ್ಕೆ ತರಲು ನಮ್ಮ ಸಮಿತಿಯ ಪದಾಧಿಕಾರಿಗಳಾದ ನಾ. ಶ್ರೀಧರ, ಎಂ. ಗೋವಿಂದರಾಜು, ಎಂ. ಜನಾರ್ಧನ, ಎಂ.ಕೆ. ಕೋಮಾರಿಗೌಡ, ಎಲ್.ಜಿ. ರಾಮಚಂದ್ರಪ್ಪ, ಗೀತಾ, ಮಲ್ಲಿಕಾರ್ಜುನ, ಎ.ಕೆ. ವೆಂಕಟರಾಮ ಅವರುಗಳು ಸಹ ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ಸದಾ ಕನ್ನಡ ಪರ ಚಿಂತಕರಾದ ನಮ್ಮ ಬಿ.ಇ.ಎಲ್. ಕಾರ್ಖಾನೆಯವರೇ ಆಗಿದ್ದ ಮಂ.ಅ. ವೆಂಕಟೇಶ್, ಎನ್. ಆನಂದರಾಮ ರಾವ್, ಮು. ಪಾರ್ಥಸಾರಥಿ ಯವರಿಗೆ ಪುಸ್ತಕ ರಚನೆ ಮಾಡಿಕೊಡುವಂತೆ ಕೇಳಿಕೊಳ್ಳಲಾಯಿತು.

ಈ ಮೂರೂ ಮಂದಿ ತುಂಬಾ ಶ್ರಮಪಟ್ಟು ಕನ್ನಡಪರ ಚಳವಳಿಯ ಹೆಜ್ಜೆಯ ಗುರುತುಗಳನ್ನು ದಾಖಲಿಸಿದ್ದಾರೆ. ಸಮಗ್ರ ಅಲ್ಲದಿದ್ದರೂ ಹೋರಾಟದ ನೈಜ ಘಟನೆಯ ಸತ್ಯ ಸಂಗತಿಗಳನ್ನು ಖಚಿತ ಪಡಿಸಿಕೊಂಡು ವಿವರವಾಗಿ ದಾಖಲಿಸಿದ್ದಾರೆ. ಅದಕ್ಕಾಗಿ ಅವರಿಗೆ ಸಮಿತಿಯು ಆಭಾರಿಯಾಗಿದೆ.

ನಮ್ಮ ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಅಧ್ಯಕ್ಷರೂ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದ ಪೂಜ್ಯ ಶ್ರೀ ಗೊ.ರು. ಚನ್ನಬಸಪ್ಪ ಅವರು ನಮಗೆ ಪ್ರೇರಕಶಕ್ತಿಯಾಗಿ, ಮಾರ್ಗದರ್ಶಕರಾಗಿ ಸಲಹೆ, ಸೂಚನೆಗಳನ್ನು ನೀಡಿ ಸಮಿತಿಯನ್ನು ಮುನ್ನಡೆಸುತ್ತಿದ್ದಾರೆ. ಈ ಪುಸ್ತಕದ ಕರಡು ಪ್ರತಿಯನ್ನು ಓದಿ ಸಂತೋಷ ಪಟ್ಟಿದ್ದಾರೆ. ಕೆಲವು ಸಲಹೆಗಳನ್ನೀಡಿ ಪುಸ್ತಕಕ್ಕೆ **'ಇಟ್ಟ ಹೆಜ್ಜೆ - ಪಟ್ಟ ಶ್ರಮ'** ಹೆಸರನ್ನು ಸೂಚಿಸಿ, ಮೆಚ್ಚುಗೆಯ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ಈ ಪುಸ್ತಕದ ಪ್ರಕಟಣೆಯ ಮೂಲ ಉದ್ದೇಶ ಕನ್ನಡ ಚಳವಳಿಯ ಹೋರಾಟದ ಇತಿಹಾಸದ ಪಕ್ಷಿನೋಟ. ಇವು ಕೇವಲ ಗತಿಸಿ ಹೋದ ನೆನಪುಗಳು ಮಾತ್ರವಲ್ಲ, ಇಂದಿನ-ಮುಂದಿನ ಪೀಳಿಗೆಗೆ ಮಾರ್ಗದರ್ಶಿ ಕೈಪಿಡಿಯಾಗಿ ದೊರಯಬೇಕೆಂಬುದೇ ನಮ್ಮ ಆಶಯ. ಸಂಘಟನೆಗಳನ್ನು ನಡೆಸುವವರಿಗೆ, ಸ್ಫೂರ್ತಿ ನೀಡಿ, ದಾರಿ ದೀಪವೂ ಆಗುವಂತಾಗಲಿ ಎಂಬುದೇ ನಮ್ಮ ಅಪೇಕ್ಷೆ.

ಬೆಂಗಳೂರು
ತಾ. ೦೧.೦೯.೨೦೦೫

ಸಿದ್ಧಯ್ಯ
ಪ್ರಧಾನ ಕಾರ್ಯದರ್ಶಿ
ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ


ಇಟ್ಟ ಹೆಜ್ಜೆ - ಪಟ್ಟ ಶ್ರಮ

ಕನ್ನಡ ಚಳುವಳಿ ನಡೆದು ಬಂದ ದಾರಿ

ಸಂಪಾದಕರು



ಮಂ. ಆ. ವೆಂಕಟೇಶ್



ಎನ್. ಆನಂದ ರಾಮರಾವ್



ಮು. ಪಾರ್ಥಸಾರಥಿ

ಸಂಪಾದಕರ ಮಾತು

ಬಿ.ಇ.ಎಲ್ ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯು ಬಿ.ಇ.ಎಲ್ ಕಾರ್ಖಾನೆಯಲ್ಲಿ ಕನ್ನಡದ ವಾತಾವರಣವನ್ನು ಮೂಡಿಸಲು ಹಾಗೂ ಕನ್ನಡಿಗರಿಗೆ ಕಾರ್ಖಾನೆಯಲ್ಲಿ ನ್ಯಾಯವಾದ ಉದ್ಯೋಗ ರಕ್ಷಣೆಗಾಗಿ ಹೋರಾಡುವ ಮಹಾದಾಶೆಯಿಂದ ಸ್ಥಾಪಿತವಾಯಿತು.

ತನ್ನ ಇಪ್ಪತ್ತೈದು ವರ್ಷಗಳ ಅಸ್ತಿತ್ವದಲ್ಲಿ ಸಮಿತಿಯು ಕಾರ್ಖಾನೆಯಲ್ಲಿ ಕನ್ನಡಪರ ಚಟುವಟಿಕೆಗಳಿಗೆ ಮಾತ್ರ ತನ್ನನ್ನು ಮೀಸಲಾಗಿಟ್ಟುಕೊಳ್ಳದೆ ಕಾರ್ಖಾನೆಯ ಹೊರಗೂ ನಡೆದ ಎಲ್ಲ ಕನ್ನಡಪರ ಚಟುವಟಿಕೆಗಳಲ್ಲಿಯೂ ಭಾಗವಹಿಸಿದೆ. ಗೋಕಾಕ್ ಚಳುವಳಿಯಲ್ಲಂತೂ ಇದರ ಪಾತ್ರ ಅತ್ಯಂತ ಗಣನೀಯ.

ಇದೀಗ ರಜತ ಮಹೋತ್ಸವವನ್ನು ಆಚರಿಸುತ್ತಿರುವ ಸಮಿತಿಯು, ಆ ಸಂದರ್ಭದಲ್ಲಿ ಪ್ರಕಟಿಸುತ್ತಿರುವ ಸ್ಮರಣ ಸಂಚಿಕೆಗಾಗಿ ಕನ್ನಡ ಚಳುವಳಿಯ ಬಗ್ಗೆ ಒಂದು ಲೇಖನವನ್ನು ಬರೆದು ಕೊಡುವ ಜವಾಬ್ದಾರಿಯನ್ನು ನಮಗೆ ವಹಿಸಿತು.

ಈ ಕರೆಗೆ ಓಗೊಟ್ಟು ಕಳೆದ ಶತಮಾನದ ಅರವತ್ತರ ದಶಕದಿಂದ ಇಂದಿನವರೆಗೆ ಹಲವು ಹಂತಗಳಲ್ಲಿ ನಡೆದು ಬಂದ ಚಳುವಳಿಯ ಹೋರಾಟದ ವಿವರಗಳನ್ನು ಸಂಗ್ರಹಿಸಲು ಹೊರಟಾಗ ನಮಗೆ ಎಲ್ಲೆಡೆಯಿಂದ ಸಿಕ್ಕ ಪ್ರೋತ್ಸಾಹ, ಮಾಹಿತಿ ಅಪಾರ. ನಮ್ಮ ನಿರೀಕ್ಷೆಗೂ ಮೀರಿ ಸಂಗ್ರಹವಾದ ಈ ವಿಷಯವನ್ನು, ಸ್ಮರಣ ಸಂಚಿಕೆಯಲ್ಲಿ ಕೆಲವು ಪುಟಗಳ ಲೇಖನಕ್ಕೆ ಸೀಮಿತಗೊಳಿಸಿ, ಉಳಿದುದನ್ನು ಒಂದು ಪುಸ್ತಕ ರೂಪವಾಗಿ ಪ್ರಕಟಿಸುವುದಾಗಿ ಸಮಿತಿ ಅಭಿಪ್ರಾಯಪಟ್ಟಿತು. ಹಾಗಾಗಿ ಇದೀಗ ಈ ಪುಸ್ತಕ ಪ್ರಕಟವಾಗುತ್ತಿದೆ.

ಗೋಕಾಕ್ ವರದಿಯ ಚಳುವಳಿ ಕಾಲದಿಂದಲೂ, ಎಲ್ಲಾ ಕನ್ನಡಪರ ಹೋರಾಟಗಳಲ್ಲೂ ಪ್ರಧಾನವಾಗಿ ತೊಡಗಿಸಿಕೊಂಡಿದ್ದ ಸಮಿತಿಯ ಸುತ್ತೋಲೆಗಳು ಪ್ರಕಟಣೆಗಳು ಹಾಗೂ ಕಡತಗಳಿಂದ ನಮ್ಮ ಮಾಹಿತಿ ಸಂಗ್ರಹಕ್ಕೆ ಅನುಕೂಲವಾಯಿತು. ಪುಸ್ತಕ ರಚನೆಯ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಿಸಿ ಮಾಹಿತಿಯ ಬಗ್ಗೆ ಕೋರಿದಾಗ ಹಾಗೂ ವೈಯುಕ್ತಿಕವಾಗಿ ಸಂಪರ್ಕಿಸಿದಾಗ ಬಹಳಷ್ಟು ಜನ

ಸಕಾರಾತ್ಮಕವಾಗಿ ಸ್ಪಂದಿಸಿ ತಮ್ಮಲ್ಲಿದ್ದ ಮಾಹಿತಿಯನ್ನು, ಚಿತ್ರಗಳನ್ನು ಕಳಿಸಿಕೊಟ್ಟು ತಮ್ಮ ಸಹಕಾರವನ್ನು ನೀಡಿದರು.

ಅರವತ್ತರ ದಶಕದ ಅ.ನ.ಕೃ. ಮತ್ತು ಮ.ರಾಮಮೂರ್ತಿಯವರ ನಾಯಕತ್ವದಲ್ಲಿ ನಡೆದ ಚಳುವಳಿಯ ಸಂಬಂಧ ಮಾಹಿತಿ ಸಂಗ್ರಹಣೆಗಾಗಿ, ಅಂದು ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಶ್ರೀ ಎಂ.ವಿ. ಸುಬ್ಬರಾವ್, ಶ್ರೀ ಕೆ.ಟಿ. ಚಂದ್ರಶೇಖರ್, ಶ್ರೀ ಎಂ.ವಿ. ವರದಯ್ಯ, ಶ್ರೀ ಮನು ಪಾಟೀಲ ಮುಂತಾದವರನ್ನು ಸಂಪರ್ಕಿಸಿದಾಗ ಅವರೆಲ್ಲರೂ ತಮ್ಮ ನೆನಪಿನ ಭಂಡಾರದಿಂದ ಸಾಕಷ್ಟು ಮಾಹಿತಿ ಹಾಗೂ ಅನುಭವಗಳನ್ನು ವಿವರಿಸಿ ಉಪಕರಿಸಿದರು.

ಎಂ.ವಿ. ಸುಬ್ಬರಾಯರು ತಮ್ಮ ಬಳಿಯಿದ್ದ ಅಂದಿನ ಪತ್ರಿಕಾ ವರದಿಗಳ ಸಂಗ್ರಹದಿಂದ ವಿವರಗಳ ರಾಶಿಯನ್ನೇ ನಮ್ಮ ಮುಂದೆ ಇಟ್ಟರು.

ಚಳುವಳಿಯ ಹಾಗೂ ಹೋರಾಟದ ವಿವರಗಳು ಕೇವಲ ಬೆಂಗಳೂರಿಗೆ ಸೀಮಿತಗೊಳ್ಳದೆ ಇತರೆಡೆಗಳಲ್ಲಿನ ವಿವರಗಳೂ ಇರಬೇಕೆಂಬ ಉದ್ದೇಶದಿಂದ ಮೈಸೂರು ಹಾಗೂ ಹುಬ್ಬಳ್ಳಿಗಳಿಗೂ ಭೇಟಿ ನೀಡಿ ಕ್ರಮವಾಗಿ ಅಲ್ಲಿನ "ಮೈಸೂರು ಮಿತ್ರ" ಹಾಗೂ "ಸಂಯುಕ್ತ ಕರ್ನಾಟಕ" ಪತ್ರಿಕಾ ಕಛೇರಿಗಳಿಗೆ ಭೇಟಿ ನೀಡಿದಾಗ ಅವರೆಲ್ಲರಿಂದ ನಮಗೆ ಉತ್ತೇಜಕ ಪ್ರೋತ್ಸಾಹ ದೊರೆಯಿತು.

ಗೋಕಾಕ್ ಚಳುವಳಿ ಕಾಲದಲ್ಲಿ ನಲವತ್ತೊಂಬತ್ತು ದಿನಗಳ ಕಾಲ ಸುಧೀರ್ಘ ಉಪವಾಸ ಮಾಡಿದ ಶ್ರೀ ಗಂಗಾಧರ ಕೊರಳ್ಳಿಯವರ ಬಗ್ಗೆ ವಿಚಾರಿಸಿದಾಗ "ಸಂಯುಕ್ತ ಕರ್ನಾಟಕ"ದ ಎನ್.ವಿ. ಜೋಷಿಯವರು ಬಿಜಾಪುರದ ಪ್ರತಿನಿಧಿಯನ್ನು ಸಂಪರ್ಕಿಸಿ ವಿವರವನ್ನೂ ಮತ್ತು ಕೊರಳ್ಳಿಯವರ ಭಾವಚಿತ್ರವನ್ನೂ ತಕ್ಷಣವೇ ತರಿಸಿಕೊಟ್ಟರು.

ಚಳುವಳಿಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡ ಹಲವು ಮಹನೀಯರನ್ನು ಭೇಟಿಮಾಡಿ ಅವರಿಂದಲೂ ಸಹ ವಿಷಯ ಸಂಗ್ರಹಣೆ ಮಾಡಲಾಗಿದೆ. ಇವರೆಲ್ಲರಿಗೂ ನಮ್ಮ ವಿಶ್ವಾಸ ಪೂರಕ ಧನ್ಯವಾದಗಳು.

ಚಳುವಳಿಗೆ ಸಂಬಂಧಪಟ್ಟಹಾಗೆ ಈಗಾಗಲೇ ಹಲವು ಪುಸ್ತಕಗಳು ಬಂದಿರುವಾಗ ಈ ಪುಸ್ತಕದ ಪ್ರಕಟಣೆಯ ಅವಶ್ಯಕತೆಯಾದರೂ ಏನು? ಎಂಬ ಪ್ರಶ್ನೆ ಬರಬಹುದು. ನಿಜ, ಆದರೆ ಪ್ರತಿಯೊಂದು ಪುಸ್ತಕವೂ ತನ್ನನೇ ಆದ ಓದುಗ ವರ್ಗವನ್ನು ಹೊಂದಿರುತ್ತದೆ. ಅದರಲ್ಲಿಯೂ ಈ ಪುಸ್ತಕ ಪ್ರಕಟವಾಗುತ್ತಿರುವುದು ಬಿ.ಇ.ಎಲ್ ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಆಶ್ರಯದಲ್ಲಿ. ಹಾಗಾಗಿ

ಈ ಸಮಿತಿಯ ಸದಸ್ಯರು ಹಾಗೂ ಅವರ ಕುಟುಂಬದವರು ಹಿಂದೆ ನಡೆದ ಚಳುವಳಿಯ ಬಗ್ಗೆ ವಿವರವಾಗಿ ತಿಳಿದುಕೊಳ್ಳುವ ಅವಕಾಶ ಸಿಗುತ್ತದೆ. ಇದರಿಂದ ಅವರ ಕನ್ನಡ ಪ್ರಜ್ಞೆಯ ಜಾಗೃತಿಗೆ ಸಹಾಯವಾಗಬಹುದೆಂಬ ನಂಬಿಕೆ ನಮ್ಮದಾಗಿದೆ. ಇಂತಹ ಪ್ರಯತ್ನಗಳು, ಕೃತಿ ರಚನೆಗಳು ಆಯಾ ಕ್ಷೇತ್ರದಲ್ಲಿ ಜನಸಾಮಾನ್ಯರಿಗೆ ಮತ್ತಷ್ಟು ತಲುಪಲು ಸಹಕಾರಿಯಾಗುತ್ತವೆ.

ಕನ್ನಡ ಚಳುವಳಿಯಲ್ಲಿ ತೊಡಗಿಸಿಕೊಂಡ ಎಷ್ಟೋ ಜನರು ಅಪರಿಚಿತರಾಗಿಯೇ ಉಳಿದಿದ್ದಾರೆ. ಚಳುವಳಿಯ ಅಗ್ರಪಂಕ್ತಿಯಲ್ಲಿದ್ದ ಹಲವರ ಬಗೆಗೂ ನಿರ್ದಿಷ್ಟ ದಾಖಲೆಗಳು ಲಭ್ಯವಾಗಿಲ್ಲ. "**ಇಟ್ಟ ಹೆಜ್ಜೆ-ಪಟ್ಟ ಶ್ರಮ**"ದ ಮೂಲಕ ಅಂತಹ ಕೆಲವರ ಹೆಸರುಗಳನ್ನಾದರೂ ಇಲ್ಲಿ ಸ್ಮರಿಸಲು ಅವಕಾಶ ದೊರಕಿದ್ದು ನಮ್ಮ ಸುಕೃತವೆಂದು ಭಾವಿಸಿದ್ದೇವೆ.

ಚಳುವಳಿಯಲ್ಲಿ ಭಾಗವಹಿಸಿದ ಸಂಘ ಸಂಸ್ಥೆಗಳ ಹಾಗೂ ಮಹನೀಯರ ಹೆಸರುಗಳನ್ನು ಅನುಬಂಧದಲ್ಲಿ ಕೊಡಲು ಪ್ರಯತ್ನಿಸಲಾಗಿದೆ. ಈ ಪಟ್ಟಿ ಅಪೂರ್ಣವೆಂದೂ ಎಲ್ಲರ ಹೆಸರುಗಳನ್ನು ಸೇರಿಸಲು ಸಾಧ್ಯವಾಗಿಲ್ಲವೆಂದೂ ನಮಗೆ ತಿಳಿದಿದೆ. ಹಾಗಾಗಿ ಕ್ಷಮೆ ಇರಲಿ.

ಈ ಪುಸ್ತಕ ರಚನೆಯಲ್ಲಿ ನಮ್ಮೊಂದಿಗೆ ಸಹಕರಿಸಿದ, ಮಾಹಿತಿಗಳನ್ನಿತ್ತ, ಛಾಯಾ ಚಿತ್ರಗಳನ್ನಿತ್ತ ಮಹನೀಯರಿಗೆ, ಚಳುವಳಿ ಮಿತ್ರರಿಗೆ ನಮ್ಮ ಧನ್ಯವಾದಗಳು.

ಪುಸ್ತಕವನ್ನು ಓದಿ ಸೂಕ್ತ ಸಲಹೆಗಳನ್ನಿತ್ತ ಹಾಗೂ ಪುಸ್ತಕಕ್ಕೆ ಹೆಸರನ್ನು ಸೂಚಿಸಿದ ಸಮಿತಿಯ ಅಧ್ಯಕ್ಷರಾದ ಹಾಗೂ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಶ್ರೀ ಗೊ.ರು. ಚನ್ನಬಸಪ್ಪ ಅವರಿಗೆ ನಮ್ಮ ಕೃತಜ್ಞತೆಗಳು.

ಈ ಕೃತಿಯನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟಿದ್ದೇ ಅಲ್ಲದೆ ಎಲ್ಲಾ ರೀತಿಯಲ್ಲಿಯೂ ಸಹಕರಿಸಿದ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ಧಯ್ಯನವರಿಗೂ ಹಾಗೂ ಸಮಿತಿಯ ಎಲ್ಲ ಪದಾಧಿಕಾರಿಗಳಿಗೂ ನಮ್ಮ ವಂದನೆಗಳು.

ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್ ಅವರಿಗೆ ಧನ್ಯವಾದಗಳು.

ಮಂ. ಅ. ವೆಂಕಟೇಶ್
ಎನ್. ಆನಂದ ರಾಮರಾವ್
ಮು. ಪಾರ್ಥಸಾರಥಿ

ತಾ. ೦೩.೦೯.೨೦೦೫

ಪರಿವಿಡಿ

ಕರ್ನಾಟಕ ಏಕೀಕರಣದ ಕನಸು ಮತ್ತು ಸಾಧನೆ

ಭಾರತ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿ ಇವು ಕನ್ನಡಿಗರ ದೃಷ್ಟಿಯಿಂದ ಕಳೆದ ಶತಮಾನದಲ್ಲಿ (ಇಪ್ಪತ್ತನೆ ಶತಮಾನದಲ್ಲಿ) ಸಂಭವಿಸಿದ ಎರಡು ಮಹತ್ತರ ಘಟನೆಗಳು.

ಭಾರತ ಸ್ವಾತಂತ್ರ್ಯವಾಗುವವರೆಗೂ, ಅದರ ಹೋರಾಟದಲ್ಲಿ ಮಗ್ನರಾಗಿದ್ದ ಕರ್ನಾಟಕದ ನಾಯಕರು ಸ್ವಾತಂತ್ರ್ಯಾ ನಂತರ ಕರ್ನಾಟಕ ಏಕೀಕರಣ ಚಳುವಳಿಗೆ ಹೆಚ್ಚು ಗಮನ ಕೊಟ್ಟರು.

ಸ್ವಾತಂತ್ರ್ಯ ಚಳುವಳಿಯೊಂದಿಗೆ ಕರ್ನಾಟಕ ಏಕೀಕರಣ ಚಳುವಳಿಗೂ ಜೊತೆ ಜೊತೆಯಾಗಿ ಹೋರಾಟ ನಡೆಸಿದರೂ, ಏಕೀಕರಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದು ದೇಶ ಸ್ವತಂತ್ರ ಹೊಂದಿದ ಮೇಲೆ; ಅಂದರೆ ಆಗಸ್ಟ್ ೧೫, ೧೯೪೭ರ ನಂತರವೇ.

ಏಕೀಕರಣದ ಕಲ್ಪನೆಯು ಮೂಲವನ್ನು ಹುಡುಕಿದಾಗ ನಮಗೆ ಗೋಚರವಾಗುವುದು ೧೯೦೩ರಲ್ಲಿ ಬೆನಗಲ್ ರಾಮರಾವ್ ಅವರು ಧಾರವಾಡದಲ್ಲಿ ಮಾಡಿದ ಭಾಷಣದಿಂದ. ಅವರು ಅಂದು ಮೊಟ್ಟ ಮೊದಲಿಗೆ ಕನ್ನಡ ಭಾಷೆಯ ಪ್ರದೇಶಗಳೆಲ್ಲವೂ ಒಂದು ಪ್ರಾಂತವಾಗಿ ರೂಪುಗೊಳ್ಳಬೇಕೆಂದು ಹೇಳಿದರು.

೧೯೦೬ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರ ಜೊತೆಗಾರರೂ, ಖ್ಯಾತ ಸ್ವಾತಂತ್ರ್ಯ ಯೋಧರೂ ಆಗಿದ್ದ ನ್ಯಾಯಮೂರ್ತಿ ಎಸ್.ಎಸ್. ಸೆಟ್ಲೂರ್‌ರವರೂ ಸಹ ಇದೇ ರೀತಿಯ ಒಂದು ಬೇಡಿಕೆಯನ್ನು ಧಾರವಾಡದ ಉಪನ್ಯಾಸ ಒಂದರಲ್ಲಿ ಹೇಳಿದ್ದರು.

೧೯೦೭ರಲ್ಲಿ ಆಲೂರು ವೆಂಕಟರಾಯರು 'ವಾಗ್ಭೂಷಣ' ಪತ್ರಿಕೆಯಲ್ಲಿ ಏಕೀಕರಣವನ್ನು ಸಮರ್ಥಿಸಿ ಒಂದು ಲೇಖನವನ್ನೂ ಬರೆದರು.

ಹೀಗಾಗಿ ಈ ಮಹನೀಯರೇ ಏಕೀಕರಣ ಚಳುವಳಿಯ ಮುಂದಾಳುಗಳೆಂದು ಹೇಳಬಹುದು.

ಮೇಲ್ಕಂಡ ಈ ಮೂವರು ಮಹನೀಯರು ಏಕೀಕರಣದ ಕಲ್ಪನೆಯನ್ನು ಜನತೆಯ ಮುಂದಿಟ್ಟರೂ ಈ ಕನಸಿನ ಕಲ್ಪನೆಗೆ ಒಂದು ಮೂರ್ತ ಸ್ವರೂಪ ಕೊಟ್ಟು ಅದರ ಸಿದ್ಧಿಗಾಗಿ ಸಾಧನೆ ಮಾಡಿದವರು ಆಲೂರು ವೆಂಕಟರಾಯರು.

೧೯೦೫ನೇ ಇಸವಿಯ ಮೇ ತಿಂಗಳ ನಾಲ್ಕನೇ ದಿನಾಂಕದಂದು ಆಲೂರು ವೆಂಕಟರಾಯರು ಆನೆಗೊಂದಿಗೆ ಹೋದಾಗ ಅವರಿಗೆ ಹಂಪಿಯ ವಿರೂಪಾಕ್ಷ ದೇವಾಲಯದ ಉನ್ನತ ರಾಯಗೋಪುರವು ಗೋಚರವಾಯಿತು. ಅವರ ಹೃದಯದಲ್ಲಿ ಕರ್ಣಾಟಕ ದೇವಿಯ ಸುಂದರವಾದ ಮೂರ್ತಿಯು ಒಡಮೂಡಿ ಅವರ ಜೀವನ ಕ್ರಮದಲ್ಲಿ ಒಂದು ಕ್ರಾಂತಿಯನ್ನು ಮೂಡಿಸಿತು.

ಅಂದು ಅವರಲ್ಲಿ ಮೂಡಿಸಿದ ಕ್ರಾಂತಿಯೇ ಕರ್ಣಾಟಕ ಏಕೀಕರಣಕ್ಕೆ ನಾಂದಿ ಆಯಿತು.

ಆಗ ಆರಂಭವಾದ ಏಕೀಕರಣದ ಬೇಡಿಕೆ ಹಲವು ಹತ್ತು ಹೋರಾಟಗಳು ಮತ್ತು ಚಳುವಳಿಗಳ ಫಲವಾಗಿ ೧ನೇ ನವೆಂಬರ್ ೧೯೫೬ ರಂದು ಸಾಕಾರಗೊಂಡಿತು.

ಕನ್ನಡಿಗರ ಬಹುದಿನಗಳ ಕನಸು ಅಂದು ನನಸಾದರೂ, ಚಳುವಳಿಯ ಸಾರ್ಥಕ್ಯವಾದರೂ, ಕನ್ನಡದ ಅನೇಕ ಭಾಗಗಳು- ಅನಂತಪುರ, ಮಡಕಶಿರಾ, ನೀಲಗಿರಿ, ಹೊಸೂರು, ಸೊಲ್ಲಾಪುರ, ಅಕ್ಕಲಕೋಟೆ, ಕಾಸರಗೋಡು ಭಾಗಗಳು ದೂರ ಉಳಿದುವಲ್ಲಾ ಎಂಬ ವ್ಯಥೆ ಏಕೀಕರಣ ಹೋರಾಟಗಾರರನ್ನು ಬಾಧಿಸುತ್ತಿತ್ತು.

ಆಗಿನ ಹಲವಾರು ಕಾರಣಗಳಿಂದ 'ಕರ್ನಾಟಕ'ದ ಹೆಸರಿನ ಬದಲಿಗೆ 'ವಿಶಾಲ ಮೈಸೂರು' ಆಯಿತು. ಎಸ್. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಗಳಾದರು. ಶ್ರೀ ಜಯಚಾಮರಾಜ ಒಡೆಯರ್ ಅವರು ಪ್ರಥಮ ರಾಜ್ಯಪಾಲರಾದರು.

ರಾಜಧಾನಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ರಾಷ್ಟ್ರಪತಿ ರಾಜೇಂದ್ರಪ್ರಸಾದ್ ಅವರು ನೂತನ ರಾಜ್ಯವನ್ನು ಉದ್ಘಾಟನೆ ಮಾಡಿದರು.

ವಿಜಯನಗರದ ರಾಜಧಾನಿಯಾಗಿದ್ದ ಹಂಪಿಯಲ್ಲಿ, ಪಂಪಾ ವಿರೂಪಾಕ್ಷನ ಸನ್ನಿಧಿಯಲ್ಲಿ, ಕರ್ನಾಟಕದ ಕನಸನ್ನು ನನಸಾಗಿ ಕಂಡ ಕರ್ನಾಟಕ ಕುಲಪುರೋಹಿತರೆನಿಸಿದ, ವಯೋವೃದ್ಧ ಆಲೂರು ವೆಂಕಟರಾಯರ ನಾಯಕತ್ವದಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಕರ್ನಾಟಕದ ಎಲ್ಲಾ ಪ್ರತಿನಿಧಿಗಳೂ ಅಂದು ಆ ಸಮಾರಂಭದಲ್ಲಿ ಹಾಜರಿದ್ದರು. ಅವರೆಲ್ಲರೂ

ವಿಶೇಷವಾಗಿ ತಮ್ಮ ತಮ್ಮ ಭಾಗದ ನದಿಗಳ ನೀರನ್ನೂ, ಮಣ್ಣನ್ನೂ ವಿಶೇಷವಾಗಿ ತಂದಿದ್ದರು. ಆ ನೀರನ್ನೂ, ಮಣ್ಣನ್ನೂ ಬೆರೆಸಿ ಸಸಿಯೊಂದನ್ನು ನೆಟ್ಟರು. ಅದೊಂದು ಹೃದಯಸ್ಪರ್ಶಿ ಸನ್ನಿವೇಶವಾಗಿತ್ತು.

ಒಟ್ಟಿನಲ್ಲಿ ಹೇಳುವುದಾದರೆ, ಏಕೀಕರಣ ಚಳುವಳಿ ಕನ್ನಡಪ್ರದೇಶಗಳೆಲ್ಲ ಒಂದಾಗಿ ಕನ್ನಡಿಗರು ತಮ್ಮದೇ ಆದ ರಾಜ್ಯವನ್ನು ಪಡೆಯುವಲ್ಲಿ ಸಾಫಲ್ಯತೆಯನ್ನು ಪಡೆಯಿತು.

❑

ಕನ್ನಡ ಚಳುವಳಿ – ಕಾರಣ

ಕರ್ನಾಟಕ ಏಕೀಕರಣವಾಯಿತು - ಕನ್ನಡಿಗರ ಸಮಸ್ಯೆ ಪರಿಹಾರವಾದೀತು- ರಾಜ್ಯದಲ್ಲಿ ಕನ್ನಡದ ಸ್ಥಾನಮಾನ ಹೆಚ್ಚೀತು - ಕನ್ನಡಿಗರು ಉದ್ಧಾರವಾದಾರು ಎಂದು ಹೊಂದಿದ್ದ ನಂಬಿಕೆ ಭ್ರಮನಿರಸನವಾಗಲು ಬಹಳ ಕಾಲ ಬೇಕಾಗಲಿಲ್ಲ.

ರಾಜ್ಯವೇನೋ ಕರ್ನಾಟಕವಾಯಿತು. (ಹೆಸರು ವಿಶಾಲ ಮೈಸೂರಾದರೂ) ಆದರೆ ಕನ್ನಡ ರಾಜ್ಯ ಭಾಷೆಯಾಗಲಿಲ್ಲ. ಕನ್ನಡಿಗರಿಗೆ ಉದ್ಯೋಗ ದಕ್ಕಲಿಲ್ಲ. ಕನ್ನಡಿಗರಲ್ಲಿ ಅಸಮಾನತೆಯ ಅಸಮಾಧಾನ ಹೆಚ್ಚಾಯಿತು. ಇದಕ್ಕೆ ಕನ್ನಡಿಗರ ಮನೋಸ್ಥಿತಿಯೂ ಕಾರಣವೆನ್ನಬಹುದು.

ಕನ್ನಡಿಗರ ಮನೋಧರ್ಮ

ಸ್ವಭಾವತಃ ಮೃದು ಮನಸ್ಸಿನ ಕನ್ನಡಿಗರು ತಾವಾಯಿತು ತಮ್ಮದಾಯಿತು ಎನ್ನುವ ಮನೋಭಾವದವರು. ಉದಾರ ಹೃದಯಿಗಳು; ಪರಮತ ಸಹಿಷ್ಣುಗಳು, ಪರಭಾಷಾ ಸಹಿಷ್ಣುಗಳು.ಹೀಗಾಗಿ ಕರ್ನಾಟಕಕ್ಕೆ ಎಲ್ಲಾ ಮತ ಸ್ಥಾಪಕರೂ ಬಂದರು. ಎಲ್ಲಾ ಭಾಷೆಯವರೂ ಬಂದರು.

ಅನ್ನ ಅರಸಿಕೊಂಡು ಬಂದರು, ಉದ್ಯೋಗ ಹುಡುಕಿಕೊಂಡು ಬಂದರು. ಇಲ್ಲಿಯೇ ನೆಲೆಯನ್ನು ಕಂಡರು, ನೆಲವನ್ನೂ ಕೊಂಡರು. ಇಷ್ಟೆಲ್ಲಾ ಆದರೂ ಇಲ್ಲಿಯ ಜನರೊಂದಿಗೆ ಬೆರೆಯಲಿಲ್ಲ. ಇಲ್ಲಿಯ ಭಾಷೆ ಕಲಿಯಲಿಲ್ಲ. ಅದಕ್ಕೆ ತಕ್ಕ ಹಾಗೆ ನಮ್ಮವರೂ ಅವರಿಗೇ ಹೊಂದಿಕೊಂಡು ತಮ್ಮ ತನವನ್ನೇ ಮರೆತರು.

ಇನ್ನು ನಮ್ಮ ಕನ್ನಡಿಗರು ಹುಟ್ಟುತಲೇ ಸಭ್ಯರು; ಸೌಜನ್ಯಶೀಲರು. ನಾಲ್ಕು ಜನರ ಮಧ್ಯೆ ಕುಳಿತಿದ್ದಾಗ ನಾವು ನಮ್ಮ ನಾಡು-ಭಾಷೆ, ಸಂಸ್ಕೃತಿಯ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡಿದರೆ, ಅವರೆಲ್ಲಿ ನಾವು ಅಹಂಕಾರಿಗಳೆಂದುಕೊಂಡು ಬಿಡುತ್ತಾರೋ ಎಂದು ಭಯಪಟ್ಟುಕೊಳ್ಳುವಷ್ಟು ಸಭ್ಯರು. ಇದು ನಮ್ಮ ರಕ್ತಕ್ಕೆ ಅಂಟಿದ ಗುಣವೆಂದು ಕಾಣುತ್ತದೆ.

ಕನ್ನಡಿಗರ ಈ ಉದಾರ ಗುಣವನ್ನೇ (!) ಕವಿ ರಾಜರತ್ನಂ ಒಂದು ಪದ್ಯದಲ್ಲಿ ಹೀಗೆಂದಿದ್ದಾರೆ:

ಜನರು ಕರ್ಣಾಟಕದವರು ಬಲು
ಘನರು ದಾನದ ದೃಢದ ಪದ್ಮಾ
ಸನರು ಪರಹಿತಕಾಗಿ ಜೀವವ ತೇದುವಾ ಮನರು
ವಿನಯದಿಂದ್ಯೆತರಲಿ ಮೇಣ್ ಕಡು
ಮುನಿಸಿನಿಂದಲೆ ಬರಲಿ ಕರೆದೊಳ
ಮನೆಯ ಸರುವಸ್ವವನು ಸುರಿವರು ಕರ್ಣನಾಟಕರು ॥

ಮನೆಯ ದಿವಾನ ಖಾನೆಯಲ್ಲಿ ಕುಳಿತು ಕೈಕುಲುಕಿ ಕುಶಲ ಹೇಳಿ ತೆರಳ ಬೇಕಾದವರು ಬಲ ಪ್ರಯೋಗಿಸಿಯೋ, ಭಯಪಡಿಸಿಯೋ, ಉಪಾಯದಿಂದಲೋ, ನಮ್ಮ ನಡುಮನೆಯನ್ನೇ ಆಕ್ರಮಿಸಿಕೊಂಡರೂ ಮನೆಯಲ್ಲಿಯ ಸರ್ವಸ್ವವನ್ನೂ ಅವರು ಸೂರೆಗೊಂಡರೂ ಮನೆಯಾತ ಸುಮ್ಮನಿದ್ದರೆ ಯಾರಿಗೆ ಹೇಳಿಕೊಳ್ಳಬೇಕು? ಹೇಳಿಕೊಳ್ಳಲು ಶಕ್ತಿಯಾದರೂ ಇದ್ದೀತೆ? ಇಂತಹ ಆತ್ಮಘಾತಕ ಧಾರಾಳತನದಿಂದಲೇ ಕನ್ನಡಿಗರು ದಯನೀಯ ಪರಿಸ್ಥಿತಿಗೆ ಒಳಗಾದರು. ಎಲ್ಲರಿಂದಲೂ ಶೋಷಣೆಗೆ ಒಳಗಾದರು. ಹೀಗಾಗಿ ಕನ್ನಡದ ನೆಲದಲ್ಲಿಯೇ ಕನ್ನಡಿಗರಿಗೆ ಅನಾಥಪ್ರಜ್ಞೆ ಕಾಡ ತೊಡಗಿತು.

ಅದರಲ್ಲೂ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗ ನಿರ್ಲಕ್ಷ್ಯಕ್ಕೊಳಗಾದ. ಕೇಂದ್ರ ಸರ್ಕಾರದ, ಕೇಂದ್ರ ಕೈಗಾರಿಕೆಗಳ ಉದ್ಯೋಗಗಳು ಪರಭಾಷೆಯವರ ಪಾಲಾದವು. ಪರಭಾಷಾಚಿತ್ರಗಳು ಮೆರೆದರೆ ಕನ್ನಡ ಚಿತ್ರಗಳು ಸೊರಗುತ್ತಿದ್ದುವು. ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗುವುದೇ ದುರ್ಲಭವಾಗುತ್ತಿತ್ತು. ಪರಭಾಷಾ ಸಂಗೀತಗಾರರಿಗೆ-ಕಲಾವಿದರಿಗೆ ಅಗ್ರಮನ್ನಣೆ, ಸನ್ಮಾನ; ಕನ್ನಡ ಸಂಗೀತಗಾರರು-ಕಲಾವಿದರಿಗೆ ನಂತರದ ಸ್ಥಾನ. ವಾಣಿಜ್ಯ ಸಂಸ್ಥೆಗಳ ನಾಮಫಲಕಗಳಲ್ಲಿ ಪರಭಾಷೆಗಳೇ ಪ್ರಧಾನವಾಗಿದ್ದರೆ, ಕನ್ನಡಕ್ಕೆ ಎಲ್ಲೋ ಒಂದೆಡೆ ಮೂಲೆಯಲ್ಲಿ ಕಂಡೂ ಕಾಣದಂತಹ ಜಾಗ ಅಥವ ಅದೂ ಇಲ್ಲವೇ ಇಲ್ಲ.

ಹೀಗೆ ಕನ್ನಡ ನಾಡಿನಲ್ಲೇ ಕನ್ನಡ-ಕನ್ನಡಿಗರು ಉಪೇಕ್ಷೆಗೆ ಒಳಪಟ್ಟಾಗ ಅಸಮಾಧಾನದ ಅಲೆ ಸಹಜವಾಗಿಯೇ ಅಲ್ಲಲ್ಲೇ ಏಳತೊಡಗಿತು. ಸಣ್ಣದಾಗಿ ಆರಂಭವಾದ ಕಿಚ್ಚು ಮೆಲ್ಲಗೆ ಹಬ್ಬತೊಡಗಿ ಕಾಳ್ಗಿಚ್ಚಾಗುವ ಸಮಯ ಬಂದೇ ಬಂದಿತು. ಏಕೀಕರಣ ಚಳುವಳಿಯ ನಂತರ ಕನ್ನಡದ ಚಳುವಳಿಗೆ ಕನ್ನಡಿಗ ಸಿದ್ಧನಾಗಬೇಕಾಯಿತು - ತನ್ನ ಉಳಿವಿಗಾಗಿ. ಹಾಗೆ ನೋಡಿದರೆ ಕನ್ನಡದ ನೆಲದಲ್ಲಿ,

ಕನ್ನಡದ ಉಪೇಕ್ಷೆ ಕನ್ನಡಿಗನ ನಿರ್ಲಕ್ಷ್ಯ ಇಂದಿನದಲ್ಲ. ಕನ್ನಡ ಚಳುವಳಿಯೂ ಹೊಸತಲ್ಲ.

ಕನ್ನಡ ಚಳುವಳಿಗೆ ಶತ ಶತಮಾನಗಳ ಇತಿಹಾಸವಿದೆ. ಅದು ಹೊಮ್ಮಿದ್ದು ಸಾಹಿತ್ಯದ ಮೂಲಕ.

ಆದಿಕವಿ ಪಂಪ, ನಯಸೇನ, ಆಂಡಯ್ಯ, ಹರಿಹರ, ವಿದ್ಯಾರಣ್ಯರು ಐತಿಹಾಸಿಕ ಪುರುಷರಾದರೆ ಬಿ.ಎಂ.ಶ್ರೀ, ಬೇಂದ್ರೆ, ಕುವೆಂಪು, ಅ.ನ.ಕೃ, ತ.ರಾ.ಸು, ಮ. ರಾಮಮೂರ್ತಿ ಮುಂತಾದ ಸಮಕಾಲೀನರು ನಮ್ಮ ಕಣ್ಮುಂದೆ ಚಳುವಳಿಯ ನೇತಾರರಾಗಿ ವಿರಾಜಿಸುತ್ತಾರೆ.

ವಚನಕಾರರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರು ಹನ್ನೆರಡನೆಯ ಶತಮಾನದಲ್ಲಿ ಆಡುಭಾಷೆ ಕನ್ನಡದಲ್ಲಿಯೇ ತಮ್ಮ ಚಿಂತನೆಯನ್ನು ಸರಳ ವಚನಗಳ ಮುಖಾಂತರ ಕನ್ನಡ ಜನತೆಯಲ್ಲಿ ಮೂಡಿಸಿದರು. ನಂತರ ಬಂದ ಹರಿದಾಸ ಪರಂಪರೆಯ ಪುರಂದರ ದಾಸರೇ ಆದಿಯಾಗಿ ಎಲ್ಲ ದಾಸವರೇಣ್ಯರು ಸರಳ ಕನ್ನಡದಲ್ಲಿ ತತ್ವ ಚಿಂತನೆಗಳನ್ನು ಕೀರ್ತನೆಗಳ ಮುಖಾಂತರ, ಜನಗಳ ಮನೆ-ಮನಗಳಿಗೆ ತಲುಪಿಸುವಲ್ಲಿ ಯಶಸ್ವಿಯಾದರು. ಹರಿದಾಸರೆಲ್ಲ ಕನ್ನಡಿಗರೇ ಆಗಿ, ಅವರ ರಚನೆಗಳೆಲ್ಲ ಕನ್ನಡದಲ್ಲೇ ಆಗಿ ಕನ್ನಡ ಸಾಹಿತ್ಯ - ಸಂಗೀತ ಜನಸಾಮಾನ್ಯರ ಮನ ಮುಟ್ಟಿದುವು.

ಆಧುನಿಕ ಕಾಲದಲ್ಲಿ ಅಂದರೆ ಇಪ್ಪತ್ತನೇ ಶತಮಾನದಲ್ಲಿ ಕನ್ನಡ ಚಳುವಳಿಯನ್ನು ಆರಂಭಿಸಿದವರು ಬಿ.ಎಂ.ಶ್ರೀ ಎನ್ನಬಹುದು. ಅವರನ್ನು ಸ್ಮರಿಸದೆ ಈ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ, ಸಾಂಸ್ಕೃತಿಕ ಚರಿತ್ರೆ ಪೂರ್ಣಗೊಳ್ಳುವುದಿಲ್ಲ. ನಿಜವಾದ ಅರ್ಥದಲ್ಲಿ ಬಿ.ಎಂ.ಶ್ರೀಕಂಠಯ್ಯನವರೇ, ಕನ್ನಡದ ಮೊದಲ ಚಳುವಳಿಗಾರರು.

ಹಳೆಯ ಮೈಸೂರಿನಲ್ಲಿ ಬಿ.ಎಂ.ಶ್ರೀಯವರು ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡಿದರೆ, ನವೋದಯ ಕವಿಗಳಾದ ಬೇಂದ್ರೆ, ಕುವೆಂಪು ಮೊದಲಾದವರು ಸಹ ಚಳುವಳಿಗೆ ಸ್ಫೂರ್ತಿಯನ್ನೊದಗಿಸಿದ ಮಹಾಪುರುಷರಾದರು.

ಆಲೂರು ವೆಂಕಟರಾಯರ 'ಕರ್ನಾಟಕ ಗತ ವೈಭವ' ಕನ್ನಡಿಗರಲ್ಲಿ ಕನ್ನಡಾಭಿಮಾನ, ಸ್ವಾಭಿಮಾನ ಪ್ರಜ್ವಲಿಸಲು ಕಾರಣವಾಯಿತು.

ಕನ್ನಡಿಗರಲ್ಲಿ ಕನ್ನಡತ್ವವನ್ನು ಮೂಡಿಸಲು ನೆರವಾದ ಎರಡು ಪ್ರಮುಖ ಸಂಸ್ಥೆಗಳನ್ನಂತೂ ಈ ಸಂದರ್ಭದಲ್ಲಿ ನೆನೆಯಲೇ ಬೇಕು. ಅವುಗಳಲ್ಲಿ ಒಂದು

ಧಾರವಾಡದ ವಿದ್ಯಾವರ್ಧಕ ಸಂಘ (ಸ್ಥಾಪನೆ ೧೮೯೦); ಮತ್ತೊಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು (ಸ್ಥಾಪನೆ ೧೯೧೫)

ಈ ಎರಡು ಸಂಸ್ಥೆಗಳೊಂದಿಗೆ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಅಲ್ಲದೆ ಹಲವು ಪ್ರದೇಶಗಳಲ್ಲಿ ಕರ್ನಾಟಕ ಸಂಘಗಳು ಸ್ಥಾಪನೆಯಾಗಿ ಆಯಾ ಕ್ಷೇತ್ರಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಉಪನ್ಯಾಸ ಕಾರ್ಯಕ್ರಮಗಳು, ಪುಸ್ತಕಗಳ ಪ್ರಕಟಣೆ ಇತ್ಯಾದಿ ಚಟುವಟಿಕೆಗಳಿಂದ ಕನ್ನಡದ ಅಸ್ತಿತ್ವವನ್ನು ಕಾಪಾಡಿ ಕೊಂಡು ಬರಲು ಸಹಾಯಕವಾಯಿತು.

ಕನ್ನಡ ನಾಡಿನಲ್ಲಿ ಪರಭಾಷಿಗರ ಪ್ರಾಬಲ್ಯ

ಕನ್ನಡ ನೆಲದಲ್ಲಿ ಕನ್ನಡಿಗರ ಉಪೇಕ್ಷೆಯೂ ಹೊಸದಲ್ಲ, ಪರಭಾಷೆಯ ಪ್ರಭಾವವೂ ಹೊಸದಲ್ಲ.

ಹಿಂದಿನ ಮೈಸೂರು ಸಂಸ್ಥಾನವು ಮಹಾರಾಜರ ಆಳ್ವಿಕೆಯಲ್ಲಿತ್ತು. ಹೆಸರಿಗೆ ಮಹಾರಾಜರಿದ್ದರೂ, ಆಡಳಿತ ನಡೆಯುತ್ತಿದ್ದುದು-ಮದರಾಸು ಸರ್ಕಾರದಿಂದ; ಆಂಗ್ಲರು ಮತ್ತು ಪ್ರಭಾವಶಾಲಿಗಳಾದ ತಮಿಳರಿಂದ. ಮೈಸೂರಿನ ದಿವಾನರಲ್ಲಿ ಅನೇಕರು ಮದರಾಸ್ ಪ್ರಾಂತದವರು.

ಮದ್ರಾಸಿನವರ ಪ್ರಭಾವ ಮೈಸೂರಿನವರ ಮೇಲೆ ಎಷ್ಟಿತ್ತು ಎಂಬುದರ ಬಗ್ಗೆ ಹಿರಿಯರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ತಮ್ಮ ಒಂದು ಲೇಖನದಲ್ಲಿ ಬರೆದಿರುವುದನ್ನು ಇಲ್ಲಿ ಉಲ್ಲೇಖಿಸಬಹುದು:

> "೧೮೩೧ ರಿಂದ ೫೦ ವರ್ಷಗಳವರೆಗೆ ಮೈಸೂರು ಬ್ರಿಟಿಷರ ನೇರವಾದ ಆಡಳಿತದಲ್ಲಿತ್ತು. ಆಗ ಮದರಾಸ್ ಅಧಿಕಾರಿಗಳ ಪ್ರಭಾವವೇ ಹೆಚ್ಚು. ದೊಡ್ಡ ದೊಡ್ಡ ಉದ್ಯೋಗಗಳ ಮಾತು ಹಾಗಿರಲಿ, ಚಿಲ್ಲರೆ ಉದ್ಯೋಗಗಳೂ ಸಹ ಮದರಾಸಿಗಳ ಪಾಲಾಗಿದ್ದವು. ಆಗ ಮೈಸೂರಿನ ಕೆಲವರು ಅಂದಿನ "ಗವರ್ನರ್ ಜನರಲ್" ರವರಿಗೆ ಅರ್ಜಿ ಹಾಕಿಕೊಂಡು ಹೊಟ್ಟೆ ಪಾಡಿಗಾಗಿ ಗೋಗರೆಯಬೇಕಾಗಿ ಬಂತೆಂಬುದನ್ನು ದೆಹಲಿಯ "ನ್ಯಾಷನಲ್ ಆರ್ಕೀವ್ಸ್" ನಲ್ಲಿರುವ ಐತಿಹಾಸಿಕ ಕಾಗದ ಪತ್ರಗಳಲ್ಲೊಂದು ಸಾರುತ್ತಿದೆ. ೧೮೮೧ರಲ್ಲಿ ಒಡೆಯರ್ ಮನೆತನದ ಪುನರುದ್ಧಾರವಾಯಿತು. ರಂಗಾಚಾರ್ಲು-ಶೇಷಾದ್ರಿ ಅಯ್ಯರ್ ದಿವಾನಗಿರಿ ಮೊದಲಾಯಿತು. ಅಂದಿನಿಂದ ಮೈಸೂರು - ಮದರಾಸ್ 'ಹೊಡೆದಾಟ' ಬೇರೂರಿತು.
>
> ದಿವಾನ್ ಶೇಷಾದ್ರಿ ಅಯ್ಯರ್‌ರವರು ಸ್ವರ್ಗಸ್ಥರಾದಾಗ ಅವರನ್ನು ಕುರಿತು ಅನೇಕರು ಪ್ರಶಂಸೆ ಮಾಡಿದರು. ಅನೇಕ ಪತ್ರಿಕೆಗಳವರೂ ಮೆಚ್ಚುಗೆಯ ಪ್ರಧಾನ ಲೇಖನಗಳನ್ನು ಬರೆದುವು".

"ಟೈಂಸ್ ಆಫ್ ಇಂಡಿಯಾ"ದ ಪತ್ರಿಕೆಯ ಲೇಖನದ ವಚನವನ್ನು ಇಂದು ವಾಚಕರು ಗಮನಿಸಬೇಕು:

> "The late Dewan had to endure much adverse criticism at the hands of those who thought that native Mysoreans were not provided with as many posts in the public service at their native state as they had a right to expect. The late Dewan, too, had probably the defects of a strong man and was less considerate to the claims of educated Mysoreans than he need have been"

> "ಕೀರ್ತಿಶೇಷರಾದ ದಿವಾನರು ಅವರ ಆಡಳಿತದ ವಿರುದ್ಧ ಟೀಕೆಗಳನ್ನು ಸಹಿಸಬೇಕಾಯಿತು. ಮೈಸೂರಿನವರನೇಕರು ನಮ್ಮ ಸಂಸ್ಥಾನದಲ್ಲಿ ನಮ್ಮ ಜನಕ್ಕೇ ಹೆಚ್ಚು ಉದ್ಯೋಗಗಳನ್ನು ಕೊಡುತ್ತಿಲ್ಲ; ಹಾಗೆ ಪಡೆಯತಕ್ಕದ್ದು ನಮ್ಮ ಹಕ್ಕು ಎಂದು ಭಾವಿಸಿದ್ದು ನಿರೀಕ್ಷಿಸಿದ್ದು ನ್ಯಾಯವಾಗಿದೆ. ಸ್ವರ್ಗವಾಸಿ ದಿವಾನರೂ ಸಹ ಎಲ್ಲ ಪ್ರಬಲರಂತೆ ದೋಷಯುಕ್ತರಾಗಿದ್ದರು. ವಿದ್ಯಾವಂತ ಮೈಸೂರಿನವರ ಬೇಡಿಕೆಗಳಿಗೆ ಅವರು ಹೆಚ್ಚು ಪುರಸ್ಕಾರ ನೀಡಬಹುದಾಗಿತ್ತು."

> ಆ ಕಾಲದ ಪ್ರಜಾಪ್ರತಿನಿಧಿ ಸಭಾ ಕಾರ್ಯಕ್ರಮಗಳ ವರದಿಗಳನ್ನು ನೋಡಿದರೆ "ಮೈಸೂರಿನವರಿಗಾಗಿ ಮೈಸೂರು" ಎಂಬ ಚಳುವಳಿ ಎಷ್ಟು ಉಗ್ರವಾಗಿ ನಡೆಯಿತು, ಮೈಸೂರಿನ ಸಾರ್ವಜನಿಕ ನಾಯಕರೆಷ್ಟು ದೇಶಾಭಿಮಾನದಿಂದ ಹೊಡೆದಾಡಿದರೆಂಬುದು ವ್ಯಕ್ತವಾಗುತ್ತದೆ.

ಹೀಗಾಗಿ ಉದ್ಯೋಗದಲ್ಲಿ ಬಹು ಪಾಲು ತಮಿಳಿನವರೇ ಆಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಅಲ್ಲದೆ ಬೆಂಗಳೂರಿನ ದಂಡು ಪ್ರದೇಶದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳೆಲ್ಲ ತಮ್ಮ ಪರಿಚಾರಿಕೆಗೆ ಭಂಟರನ್ನು ಮದ್ರಾಸಿನಿಂದಲೇ ಕರೆದುಕೊಂಡು ಬಂದಿರುತ್ತಿದ್ದುದರಿಂದ ದಂಡಿನ ಪ್ರದೇಶವೆಲ್ಲ ತಮಿಳುಮಯವಾಯಿತು.

ಸ್ವಾತಂತ್ರ್ಯಾನಂತರವಾದರೋ, ಭಾರತ ಸರ್ಕಾರ ಪಂಚವಾರ್ಷಿಕ ಯೋಜನೆಗಳಲ್ಲಿ, ರಾಜ್ಯದಲ್ಲಿ, ಅದರಲ್ಲೂ ರಾಜಧಾನಿ ಬೆಂಗಳೂರಿನಲ್ಲಿ ಹಲವು ಕೇಂದ್ರೋದ್ಯಮ ಕೈಗಾರಿಕೆಗಳನ್ನು ಆರಂಭಿಸಿತು (ಹೆಚ್.ಎಂ.ಟಿ. ಮುಂತಾದುವು). ಇವುಗಳ ಬಹುತೇಕ ಅಧಿಕಾರಿಗಳು ಪರಭಾಷಿಗರಾದುದರಿಂದ, ಅಲ್ಲಿಯ ಕೆಲಸ ಕಾರ್ಯಗಳಿಗೆ ತಮ್ಮ ತಮ್ಮ ಪ್ರಾಂತ್ಯಗಳಿಂದಲೇ ಜನರನ್ನು ಕರೆತರಲಾರಂಭಿಸಿದರು. ನೇಮಕ ಮಾಡಿದರು. ಅಖಿಲಭಾರತಮಟ್ಟದ ರೈಲ್ವೆ ಇಲಾಖೆ, ಅಂಚೆ ಕಛೇರಿ ಬ್ಯಾಂಕುಗಳಲ್ಲಿಯೂ ಕನ್ನಡಿಗರ ಸಂಖ್ಯೆ ಅತಿ ಕಡಿಮೆಯಾಯಿತು.

ಇಲ್ಲಿ ಸ್ಥಾಪಿತವಾದ ಕಾರ್ಖಾನೆಗಳಿಗೆ ನೆಲ, ಜಲ, ವಿದ್ಯುತ್ ಮುಂತಾದ ಮೂಲಭೂತ ಸೌಲಭ್ಯವನ್ನು ರಾಜ್ಯ ಒದಗಿಸಿದರೂ ಉದ್ಯೋಗದ ಫಲ ಮಾತ್ರ ಕನ್ನಡಿಗರಿಗೆ ದಕ್ಕಲಿಲ್ಲ.

ಹೀಗಾಗಿ ನಿರುದ್ಯೋಗದ ಕರಾಳ ಸಮಸ್ಯೆಯನ್ನು ಎದುರಿಸಬೇಕಾದ ಕನ್ನಡ ಯುವಕರಲ್ಲಿ ಅಶಾಂತಿ, ಅಸಹನೆ, ಕ್ರೋಧ ಮೂಡಿದ್ದು ಅಸಹಜವೇನಲ್ಲ. ಹಾಗಾಗಿ ಅವರು ಹೋರಾಟದ ಹಾದಿ ಹಿಡಿಯದೇ ಅನ್ಯಮಾರ್ಗವೇ ಇರಲಿಲ್ಲ.

ಹೀಗೆ ಅವಕಾಶವಂಚಿತರಾದ, ನಿರಾಶೆ ಹೊಂದಿದ ವಿದ್ಯಾವಂತ ಯುವಕರ ಸಂಖ್ಯೆ ಹೆಚ್ಚತೊಡಗಿತ್ತು. ಯುವಶಕ್ತಿಯಲ್ಲಿ ಅಸಹನೆ ಗರಿಗೆದರತೊಡಗಿತ್ತು. ಕನ್ನಡ ನಾಡಿನಲ್ಲಿಯೇ ಕನ್ನಡಿಗನಿಗೆ ಅನಾಥ ಪ್ರಜ್ಞೆ ಕಾಡಿತ್ತು. ಬೂದಿ ಮುಚ್ಚಿದ ಕೆಂಡದಂತೆ ಒಳಗೊಳಗೊಳಗೇ ಕನ್ನಡಿಗರು ಸಿಡಿಯ ತೊಡಗಿದರು. ಆದರೆ ಅದು ಸ್ಫೋಟಗೊಳ್ಳಲು ಸೂಕ್ತ ವಾತಾವರಣವಿರಲಿಲ್ಲ.

ಅಂದಿನ ಸ್ಥಿತಿ ಎಷ್ಟರಮಟ್ಟಿಗಿತ್ತೆಂದರೆ ಬೆಂಗಳೂರಿನ ಎಲ್ಲಾ ವಾಣಿಜ್ಯ ಸಂಸ್ಥೆಗಳ ನಾಮಫಲಕಗಳೂ ಪರಭಾಷೆಗಳಲ್ಲಿರುತ್ತಿದ್ದುವು. ಬೆಂಗಳೂರು ಕಬ್ಬನ್ ಪಾರ್ಕ್‌ನಲ್ಲಿ ಭಾನುವಾರಗಳಂದು ನಡೆಸುತ್ತಿದ್ದ ವಾದ್ಯಗೋಷ್ಠಿಯಲ್ಲೂ ಸಹ ಕೇವಲ ಪರಭಾಷಾ ಚಿತ್ರಗೀತೆಗಳಿಗೆ ಆದ್ಯತೆ ಇತ್ತೇ ಹೊರತು, ಕನ್ನಡ ಚಿತ್ರಗೀತೆಗಳಿಗಲ್ಲ. ರಾಜಧಾನಿ ಬೆಂಗಳೂರಿನ ಪರಿಸ್ಥಿತಿ ಇದಾದರೆ, ರಾಜ್ಯದ ಇತರ ಪ್ರದೇಶಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾದುದಾಗಿರಲಿಲ್ಲ.

ರಾಜ್ಯ ಪುನರ್ವಿಂಗಡಣಾ ಆಯೋಗದ ವರದಿಯಂತೆ ಬೆಳಗಾಂ ಕರ್ಣಾಟಕಕ್ಕೆ ಸೇರಿದರೂ ಕನ್ನಡದ ವಾತಾವರಣ ಅಲ್ಲಿ ಶೋಚನೀಯವಾಗಿತ್ತು. ಹಿಂದಿನ ಮಹಾರಾಷ್ಟ್ರದ ಸರ್ಕಾರದ ಮಲತಾಯಿ ಧೋರಣೆಯಂತೆ ಕನ್ನಡದ ಶಾಲೆಗಳಿಗೆ ಒಳ್ಳೆಯ ಕಟ್ಟಡವಿಲ್ಲದೆ ಸರಿಯಾದ ಅಧ್ಯಾಪಕರಿಲ್ಲದ ಕೊರತೆಯೂ ಇತ್ತು. ಆದರೆ ಮರಾಠಿ ಶಾಲೆಗಳ ಪರಿಸ್ಥಿತಿ ಇದಕ್ಕೆ ತದ್ವಿರುದ್ಧ. ಒಳ್ಳೆಯ ಕಟ್ಟಡ, ಉತ್ತಮ ಅಧ್ಯಾಪಕರು. ಹೀಗಾಗಿ ಎಷ್ಟೋ ಕನ್ನಡದ ಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ಮರಾಠಿ ಶಾಲೆಗೆ ಕಳಿಸುತ್ತಿದ್ದುದರಲ್ಲಿ ಆಶ್ಚರ್ಯವೇನಿರಲಿಲ್ಲ. ಮರಾಠಿಗರ ಸಾಂಸ್ಕೃತಿಕ ಕಾರ್ಯಕ್ರಮಗಳು ಹೇರಳವಾಗಿ ನಡೆಯುತ್ತಿದ್ದರೆ, ಕನ್ನಡದ ಕಾರ್ಯಕ್ರಮಗಳನ್ನು ನಡೆಸುವುದೇ ಕಷ್ಟಸಾಧ್ಯವಾಗಿತ್ತು. ನಾಮಫಲಕಗಳಲ್ಲಿ ಕನ್ನಡ ಕಾಣುವುದೇ ಅಪರೂಪವಾಗಿ ಮರಾಠಿ ಭಾಷೆ ಎಲ್ಲ ಕಡೆ ಮೆರೆಯುತ್ತಿತ್ತು.

ಏಕೀಕರಣದ ನಂತರವೂ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ.

ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರೇ ಶಾಸನ ಸಭೆಗೆ ಬೆಳಗಾಂನಿಂದ ಶಾಸಕರಾಗಿ ಆರಿಸಿಬರುತ್ತಿದ್ದು, ಕನ್ನಡಿಗರು ಕರ್ನಾಟಕದಲ್ಲಿಯೇ ಇದ್ದರೂ, ಮರಾಠಿಗರ ಪುಂಡಾಟಿಕೆಯ ಭಯದಲ್ಲಿಯೇ ಜೀವಿಸುವಂತಾಯಿತು. ಮರಾಠಿಗರ ತಂತ್ರಗಳಿಗೆ ಪ್ರತಿತಂತ್ರವನ್ನು ಹೂಡಲೇಬೇಕಾಯಿತು. ಹಾಗಾಗಿ ಬೆಳಗಾಂನಲ್ಲಿ ಕನ್ನಡ ಸಂಘಗಳು, ಸಂಸ್ಥೆಗಳು ಹುಟ್ಟಿಕೊಳ್ಳಲು ಕಾರಣವಾಯಿತು.

ಬೆಳಗಾಂ ಪರಿಸ್ಥಿತಿ ಇದಾದರೆ ಕೋಲಾರ ಮತ್ತು ಅದರ ಗಡಿಪ್ರದೇಶಗಳು ಆಂಧ್ರ ಮತ್ತು ತಮಿಳುನಾಡು ಪ್ರದೇಶಗಳಿಗೆ ಹೊಂದಿಕೊಂಡಿದ್ದರಿಂದ ಆ ಪ್ರದೇಶದಲ್ಲಿ ಕನ್ನಡ ವಾತಾವರಣ ಪ್ರಭಾವಶಾಲಿಯಾಗಿರಲಿಲ್ಲ.

ಅದರಲ್ಲಿಯೂ ಕೋಲಾರ ಚಿನ್ನದ ಗಣಿ ಪ್ರದೇಶದ (ಕೆ.ಜಿ.ಎಫ್) ಬಹಳಷ್ಟು ಜನಸಂಖ್ಯೆ ತಮಿಳು ಭಾಷಿಕರನ್ನೇ ಹೊಂದಿದ್ದು, ಅಲ್ಲಿಯ ಕನ್ನಡಿಗರು ಅತಂತ್ರ ಪರಿಸ್ಥಿತಿಯನ್ನೆದುರಿಸಬೇಕಾಗಿ ಬಂದು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದರೆಂದರೆ ತಪ್ಪಾಗಲಾರದು.

ಹೀಗೆ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳಗಳಿಗೆ ಹೊಂದಿಕೊಂಡಂತೆ ಇರುವ ಕರ್ನಾಟಕದ ಎಲ್ಲ ಗಡಿ ಪ್ರದೇಶಗಳಲ್ಲಿ ಪರಭಾಷಿಗರ ಹಾವಳಿಯೇ ಹೆಚ್ಚಾಗಿ ಎಲ್ಲ ಕಡೆಗಳಿಂದಲೂ ಕನ್ನಡಿಗರಿಗೆ ಹೊಡೆತವೇ ಹೆಚ್ಚಾಗಿತ್ತು.

ಇದಕ್ಕೆ ಮುಖ್ಯ ಕಾರಣ ಮೊದಲಿನಿಂದಲೂ ಸಹನಶೀಲರಾದ ಎಲ್ಲ ಕನ್ನಡಿಗರೂ ತಮ್ಮ ಭಾಷೆಯಷ್ಟೇ ಬೇರೆ ಭಾಷೆಯನ್ನು ಸಲೀಸಾಗಿ ಮಾತನಾಡುವ ಸಾಮರ್ಥ್ಯ ಹೊಂದಿ, ತಮ್ಮ ಭಾಷೆಯನ್ನು ಬಿಟ್ಟು ಪರಭಾಷೆಯೊಂದಿಗೇ ವ್ಯವಹರಿಸುವ ಉದಾರ ಗುಣ ಹೊಂದಿದ್ದರಿಂದ ಬೇರೆ ಭಾಷೆಯವರು ಕನ್ನಡ ಕಲಿಯುವ ಪ್ರಶ್ನೆಯೇ ಉದ್ಭವಿಸಲಿಲ್ಲ. ಹಾಗಾಗಿ ಆಯಾ ಗಡಿ ಪ್ರದೇಶಗಳ ಕನ್ನಡಿಗರು ತಮ್ಮ ಸಂಪರ್ಕ ಭಾಷೆಯನ್ನಾಗಿ ಆಯಾ ಪ್ರದೇಶಗಳ ಭಾಷೆಯನ್ನು ಅವಲಂಬಿಸಿದ್ದರಿಂದ ಕನ್ನಡೇತರರು ತಮ್ಮ ಭಾಷೆಯನ್ನು ಮೆರೆಸಿದರೇ ಹೊರತು ನಾಡಿನ ಭಾಷೆಯನ್ನು ಕಲಿಯುವ ಗೋಜಿಗೇ ಹೋಗಲಿಲ್ಲ.

ಇಂದು ಬೆಂಗಳೂರಿನಲ್ಲಿ ಆಗಿರುವುದು ಹಾಗೆಯೇ. ಎಲ್ಲ ಭಾಷೆಯವರ ಸಮ್ಮಿಳನ ಬೆಂಗಳೂರಿನಲ್ಲಿ ಆಗಿರುವುದರಿಂದ ಕನ್ನಡಿಗರು ಎಲ್ಲಾ ಭಾಷೆಯವರನ್ನು ಅನುಸರಿಸಲು ಹೋಗಿ, ಎಲ್ಲ ಭಾಷೆಗಳನ್ನು ತಾವು ಕಲಿತಿರುವರೇ ಹೊರತಾಗಿ, ತಮ್ಮ ಭಾಷೆಯನ್ನು ಅನ್ಯಭಾಷಿಗರಿಗೆ ಕಲಿಸುವ ಗೋಜಿಗೇ ಹೋಗಿಲ್ಲ.

ಬೆಂಗಳೂರಿನ ಯಾವುದೇ ಅಂಗಡಿಗೆ ಹೋಗಲಿ, ಯಾರು ಯಾವ ಭಾಷೆಯನ್ನೇ ಮಾತನಾಡಲಿ, ಕನ್ನಡಿಗ ಮಾಲೀಕ ಆಗಿದ್ದಲ್ಲಿ ತನ್ನಲ್ಲಿ ವ್ಯಾಪಾರಕ್ಕೆ

ಬಂದ ಗಿರಾಕಿಗಳ ಭಾಷೆಯಲ್ಲಿಯೇ ಮಾತನಾಡುತ್ತಾನೆಯೇ ಹೊರತು, ತನ್ನ ಭಾಷೆಯನ್ನು ಅಪ್ಪಿ ತಪ್ಪಿಯೂ ಮಾತನ್ನಾಡುವುದಿಲ್ಲ. ಅವನಿಗೆ ತನ್ನ ವ್ಯವಹಾರದ ಮೇಲೆ, ವ್ಯಾಪಾರದ ಮೇಲೆ, ಲಾಭದ ಮೇಲೆ ಗಮನವಿರುತ್ತದೆಯೇ ಹೊರತು, ಕನ್ನಡ ಭಾಷೆ - ಸಂಸ್ಕೃತಿಗಳತ್ತ ಗಮನ ಹರಿಸುವುದಿಲ್ಲ. ಹೀಗಾಗಿ ಬೇರೆಯವರು ಸ್ಥಳೀಯ ಭಾಷೆ ಕಲಿಯಬೇಕಾದ ಅಗತ್ಯವೇ ಕಾಣುವುದಿಲ್ಲ.

ಆದರೆ ಬೇರೆ ರಾಜ್ಯಗಳಲ್ಲಿ ಈ ಪರಿಸ್ಥಿತಿ ತದ್ವಿರುದ್ಧ. ಅಲ್ಲಿ ಅಂಗಡಿಯವರೊಂದಿಗಾಗಲಿ, ರಿಕ್ಷಾಚಾಲಕರೊಂದಿಗಾಗಲೀ ಅಥವಾ ಇನ್ನಿತರೇ ಜನಸಾಮಾನ್ಯರೊಂದಿಗಾಗಲೀ ವ್ಯವಹರಿಸುವಾಗ ಆಯಾ ಸ್ಥಳೀಯ ಭಾಷೆಯಲ್ಲಿಯೇ ಮಾತನಾಡುವ ನಿರ್ಬಂಧವನ್ನು ಅಪ್ರತ್ಯಕ್ಷವಾಗಿ ಹೇರುತ್ತಾರೆ. ಆದ್ದರಿಂದ ಗತ್ಯಂತರವಿಲ್ಲದೆ ಅಲ್ಲಿಯ ಭಾಷೆಯನ್ನು ಕಲಿಯಲೇಬೇಕಾಗುತ್ತದೆ.

❑

ಕನ್ನಡ ಚಳುವಳಿಯ ಆರಂಭ

ಸರಿಯಾದ ನಾಯಕತ್ವವಿಲ್ಲದೆ ಮೂಕ ಸಂಕಟ ಅನುಭವಿಸುತ್ತಿದ್ದ ಹತಾಶ ಕನ್ನಡ ಯುವಕರಿಗೆ ಬೂದಿ ಮುಚ್ಚಿದ ಕೆಂಡದಂತಿದ್ದ ಅಭಿಮಾನದ ಸೆಲೆ ಪ್ರಜ್ವಲಿಸಲು ಕಾರಣವಾದ ಎರಡು ಘಟನೆಗಳನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ.

ಮೊದಲನೆಯದಾಗಿ, ಕನ್ನಡದ ಕಟ್ಟಾಳು, ಕನ್ನಡ ಕಾದಂಬರಿ ಸಾರ್ವಭೌಮ ಎಂದು ಖ್ಯಾತರಾಗಿದ್ದ ಕನ್ನಡದ ಹಿರಿಯ ಕಾದಂಬರಿಗಾರ ಅ.ನ. ಕೃಷ್ಣರಾಯರನ್ನು ೧೯೬೦ ಡಿಸೆಂಬರ್ ೨೭, ೨೮, ೨೯ ರಂದು ಮಣಿಪಾಲ (ಉಡುಪಿ) ದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿದುದು.

ಸಾಮಾನ್ಯವಾಗಿ, ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಿಯೂ ಸಮ್ಮೇಳನದ ಅಧ್ಯಕ್ಷ ಭಾಷಣಗಳು, ಕನ್ನಡನಾಡು, ಕನ್ನಡ ಭಾಷೆ, ಕನ್ನಡಿಗರ ಹಿತಾಸಕ್ತಿಯ ಬಗ್ಗೆ ಒತ್ತು ಕೊಡುವಂತಹುದೇ ಆಗಿದ್ದರೂ, ಅ.ನ.ಕೃ ಭಾಷಣ ಅತ್ಯಂತ ಹರಿತವಾಗಿ ನರ ಸತ್ತಂತಿದ್ದ ಕನ್ನಡಿಗರನ್ನು ಬಡಿದೆಚ್ಚರಿಸುವಂತಿತ್ತು.

ಕನ್ನಡ ಭಾಷೆಯ, ಕನ್ನಡಿಗರ ಎಲ್ಲ ಸಮಸ್ಯೆಗಳನ್ನು ಸಾಹಿತ್ಯ ಸಮ್ಮೇಳನದ ತಮ್ಮ ಭಾಷಣದಲ್ಲಿ ಪದರ ಪದರವಾಗಿ ವಿಶ್ಲೇಷಿಸಿದ ಅವರು ಕನ್ನಡದ ಏಳಿಗೆಗೆ ಕನ್ನಡದ ಉಳಿವಿಗೆ ಕನ್ನಡಿಗರು ಟೊಂಕಕಟ್ಟಿ ನಿಲ್ಲಬೇಕು ಎಂದು ಕರೆ ನೀಡಿದರು.

ಎರಡನೆಯದಾಗಿ, ರಾಜ್ಯ ಕಂಡ ಪ್ರಾಮಾಣಿಕ ರಾಜಕಾರಣಿ ಸಮಾಜವಾದಿ ಪಕ್ಷದ ನಾಯಕ ಶಾಂತವೇರಿ ಗೋಪಾಲ ಗೌಡರ ಅನೇಕ ಶಿಷ್ಯರಲ್ಲಿ ಕೋಣಂದೂರು ಲಿಂಗಪ್ಪನವರೂ ಒಬ್ಬರು. ಕಾಲೇಜು ದಿನಗಳಿಂದಲೂ ಅಪ್ಪಟ ಕನ್ನಡ ಪ್ರೇಮಿಯಾಗಿಯಾಗಿದ್ದವರು.

ಸೋಷಿಯಲಿಸ್ಟ್ ನಾಯಕರಾದ ಲೋಹಿಯಾ ಅವರು, ಇಂಗ್ಲೀಷ್ ಭಾಷೆಯ ಬಳಕೆಯ ಬಗ್ಗೆ ತಮ್ಮ ಪಕ್ಷದ ವಿರೋಧವನ್ನು ವ್ಯಕ್ತಪಡಿಸುತ್ತ, 'ಅಂಗ್ರೇಜಿ ಹಟಾವೋ' ಚಳುವಳಿಯನ್ನು ಹಮ್ಮಿಕೊಂಡು ಇಂಗ್ಲೀಷಿಗೆ ಬದಲಾಗಿ ಪ್ರಾಂತೀಯ ಭಾಷೆಗಳಿಗೆ ರಾಜ್ಯಮಟ್ಟದಲ್ಲಿ ಪ್ರಾತಿನಿಧ್ಯವಿರಬೇಕೆಂದು ಹೋರಾಟವನ್ನು ಹಮ್ಮಿಕೊಂಡಿದ್ದರು. ಇದರಿಂದ ಪ್ರೇರಿತರಾದ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ

ಮಾಡುತ್ತಿದ್ದ ಕೋಣಂದೂರು ಲಿಂಗಪ್ಪನವರು ಕನ್ನಡ ಚಳುವಳಿಯ ಆರಂಭಕ್ಕೆ ಚಾಲನ ಶಕ್ತಿಯನ್ನು ನೀಡಿ ತಮ್ಮಂತಹ ಸಮಾನ ಮನಸ್ಕರ, ಉತ್ಸಾಹಿ ತರುಣರ ಪಡೆಯನ್ನೇ ನಿರ್ಮಿಸಿದರು. ಯುವಕರದೇ ಆದ ಈ ಸಭೆಗೆ "ಕನ್ನಡ ಯುವಜನ ಸಭಾ" ಎಂದು ನಾಮಕರಣವೂ ಆಯಿತು.

ಅಲ್ಲದೆ ಲಿಂಗಪ್ಪನವರ ಕನ್ನಡ ಜಾಗೃತಿಗೆ, ಹೋರಾಟಕ್ಕೆ ಬೆಂಗಳೂರಿನಲ್ಲಿ ಆದ ಒಂದು ಘಟನೆಯೂ ಸ್ಫೂರ್ತಿಯನ್ನಿತ್ತಿತು. ಅವರ ಮಾರ್ಗದರ್ಶಕರೂ ಹಿತೈಷಿಗಳೂ ಆದ ಶಾಂತವೇರಿ ಗೋಪಾಲ ಗೌಡರು ಬೆಂಗಳೂರಿನ ಚಿಕ್ಕ ಲಾಲ್‌ಬಾಗ್ ಬಳಿಯ ಪೂರ್ಣಯ್ಯ ಛತ್ರದ ರಸ್ತೆಯಲ್ಲಿನ ಒಂದೆಡೆ ಇರುತ್ತಿದ್ದರು. ಅವರನ್ನು ನೋಡಲು ಬಂದ, ಬೆಂಗಳೂರಿಗೆ ಅಷ್ಟೊಂದು ಪರಿಚಿತರಲ್ಲದ ಲಿಂಗಪ್ಪನವರು ವಿಳಾಸವನ್ನು ಹುಡುಕಿಕೊಂಡು ಅವರಿವರನ್ನು ವಿಚಾರಿಸುತ್ತಿದ್ದಾಗ, ಅಲ್ಲಿದ್ದ ಕೆಲವು ತಮಿಳರು, ಕನ್ನಡದಲ್ಲಿ ಮಾತಾನಾಡುತ್ತಿದ್ದ ಲಿಂಗಪ್ಪನವರನ್ನು ಅಪಹಾಸ್ಯ ಮಾಡಿ ಅವಮಾನಿಸಿದರಂತೆ. ಇದರಿಂದ ಮನನೊಂದ ಅವರು ಕನ್ನಡ ನಾಡಿನ ರಾಜಧಾನಿ ಬೆಂಗಳೂರಿನಲ್ಲಿಯೇ ಕನ್ನಡಕ್ಕಾದ ಈ ಅವಮಾನದಿಂದ ಆಘಾತಿತರಾಗಿ ಮನನೊಂದು ಏನಾದರಾಗಲೀ ಕನ್ನಡನಾಡಿನಲ್ಲಿ ಕನ್ನಡಕ್ಕಾಗಿ ಹೋರಾಡಲೇಬೇಕು ಎಂದು ಚಳುವಳಿಗೆ ಸಜ್ಜಾದರು.

ಈ ದಿಸೆಯಲ್ಲಿ ಪೂರ್ಣಚಂದ್ರ ತೇಜಸ್ವಿ, ಕೆ.ಆರ್. ಶಾಮಣ್ಣ, ಕೆ.ಹೆಚ್. ಶ್ರೀನಿವಾಸ ಮುಂತಾದ ಸಮಾನ ಮನಸ್ಕರು ಇವರ ಜೊತೆಯಲ್ಲಿ ಕನ್ನಡದ ಕೆಲಸಗಳಲ್ಲಿ ಒಂದಾದರು.

ಹೀಗೆ ರೂಪುಗೊಂಡ "ಕನ್ನಡ ಯುವಜನ ಸಭಾ" ಕರ್ನಾಟಕದ ಕನ್ನಡ ಸಂಘಟನೆಗಳಲ್ಲಿ, ಕನ್ನಡ ಚಳುವಳಿಯಲ್ಲಿ ಪ್ರಮುಖವಾದುದು. ಈ ಸಂಘಟನೆಗೆ ಕೋಣಂದೂರು ಲಿಂಗಪ್ಪನವರನ್ನೇ ಸಂಚಾಲಕರನ್ನಾಗಿ ಆರಿಸಲಾಯಿತು.

ಕನ್ನಡನಾಡಿನಲ್ಲಿ ಕನ್ನಡಕ್ಕೆ ಸೂಕ್ತ ಸ್ಥಾನ ದೊರಕಿಸಲು, ಕನ್ನಡಿಗರು ತಲೆ ಎತ್ತಿ ಆತ್ಮಾಭಿಮಾನದಿಂದ ಬಾಳಲು ಇಡೀ ಕನ್ನಡ ನಾಡಿನಲ್ಲಿ ಜಾಗೃತಿಯನ್ನುಂಟು ಮಾಡುವುದಕ್ಕಾಗಿ, ಯುವಶಕ್ತಿಯ ಸಂಘಟನೆಗಾಗಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡ ಲಿಂಗಪ್ಪನವರು ನೂರಕ್ಕೂ ಹೆಚ್ಚು ಶಾಖೆಗಳನ್ನು ರಾಜ್ಯಾದ್ಯಂತ ತೆಗೆಯಲು ಕಾರಣವಾದರು.

'ಇದೇ ಸಂದರ್ಭದಲ್ಲಿ ಅ.ನ.ಕೃ ಅವರ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರಪೂರಿತ ಭಾಷಣಕ್ಕೆ ಓಗೊಟ್ಟವರೂ ಸಹ ಕನ್ನಡ ಯುವಜನ ಸಭಾದ ಸಕ್ರಿಯ ಸದಸ್ಯರೇ.

ಅ.ನ.ಕೃ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದುದಕ್ಕೆ ಹರ್ಷಪಟ್ಟು ಕನ್ನಡಪರ ಚಿಂತನೆ ಮಾಡುತ್ತಿದ್ದ ಯುವಕರು ಹಾಗೂ ಯುವಜನಸಭಾದ ಕಾರ್ಯಕರ್ತರು, ಅ.ನ.ಕೃ. ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ಹಾಜರಾದರು.

ಅ.ನ.ಕೃ ಅವರ ಭಾಷಣದಿಂದ ಪುಳಕಿತರಾದ ಕೋಣಂದೂರು ಲಿಂಗಪ್ಪ ಮತ್ತು ಸಂಗಡಿಗರು ಸಮ್ಮೇಳನದ ಸ್ಥಳದಲ್ಲಿಯೇ ವರಕವಿ ದ.ರಾ.ಬೇಂದ್ರೆಯವರಿಂದ ಕನ್ನಡ ಯುವಜನ ಸಭೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಸಮ್ಮೇಳನ ಮುಕ್ತಾಯಗೊಂಡ ನಂತರ ಅ.ನ. ಕೃಷ್ಣರಾಯರು ಬೆಂಗಳೂರಿಗೆ ಹಿಂತಿರುಗುವ ಮುಂಚೆ ಲಿಂಗಪ್ಪ ಮತ್ತು ಸಂಗಡಿಗರಾದ ಶಾಮಣ್ಣ, ಕೆ.ಹೆಚ್. ಶ್ರೀನಿವಾಸ, ಕೆ.ಜಿ. ಮಹೇಶ್ವರಪ್ಪ, ಬಂದಗದ್ದೆ ರಮೇಶ್ ಮುಂತಾದವರೊಂದಿಗೆ ಹಲವೆಡೆ ಕನ್ನಡಿಗರ ಸಂಘಟನಾ ಸಭೆಗಳನ್ನು ನಡೆಸಿದರು.

ಕನ್ನಡ ಚಳುವಳಿಯ ಆರಂಭ ಮತ್ತು ಸಿದ್ಧತೆ

ಬೆಂಗಳೂರಿನಲ್ಲಿ ಕನ್ನಡಿಗರ ಹಿತಾಸಕ್ತಿಗಾಗಿ ದುಡಿಯುತ್ತಿದ್ದ ಹಲವು ಹತ್ತು ಸಂಸ್ಥೆಗಳು ಇದ್ದವಾದರೂ ಅವುಗಳಲ್ಲಿ ಪ್ರಮುಖವಾದುದು "ಕನ್ನಡ ಸಾಹಿತ್ಯ ಕುಟೀರ" ಎಂಬ ಸಂಸ್ಥೆ. ಇದರ ಸ್ಥಾಪಕರು ಸೈಕಲ್ ಸುಬ್ಬರಾಯರೆಂದೇ ಎಲ್ಲರಿಂದ ಕರೆಸಿಕೊಳ್ಳುತ್ತಿದ್ದ ಎಂ.ವಿ. ಸುಬ್ಬರಾಯರು.

ಬೆಂಗಳೂರಿನ ಕನ್ನಡಿಗರ ಸ್ಥಿತಿಗತಿ ಬಗ್ಗೆ ಆಲೂರು ವೆಂಕಟರಾಯರು ಬೆಂಗಳೂರಿಗೆ ಬಂದಿದ್ದಾಗ ಅವರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದ ಸುಬ್ಬರಾಯರು, ಆಲೂರರ ಸಲಹೆಯಂತೆ 'ಕನ್ನಡ ಸಾಹಿತ್ಯ ಕುಟೀರ'ವನ್ನು ಆರಂಭಿಸಿದರು. ೧೦.೯.೧೯೬೧ ರಂದು ಮಾಜೀ ಮುಖ್ಯ ಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರು ಅ.ನ.ಕೃ. ಅವರ ಅಧ್ಯಕ್ಷತೆಯಲ್ಲಿ ಕುಟೀರವನ್ನು ಉದ್ಘಾಟಿಸಿದರು.

ಸುಬ್ಬರಾಯರು ಕನ್ನಡದ ಸ್ಥಿತಿಗತಿಗಳ ಬಗ್ಗೆ, ಅದರಲ್ಲಿಯೂ ಪ್ರಮುಖವಾಗಿ, ಬೆಂಗಳೂರಿನಲ್ಲಿ, ಕನ್ನಡ-ಕನ್ನಡಿಗರ ಉಳಿವಿನ ಬಗ್ಗೆ ಚರ್ಚಿಸಲು ಒಂದು ವಿಚಾರ ಸಂಕಿರಣವನ್ನು ನಡೆಸುವ ಜವಾಬ್ದಾರಿ ಹೊತ್ತರು. ಮಂಗಳವೇಡೆ ಶ್ರೀನಿವಾಸರಾವ್, ಮ.ರಾಮಮೂರ್ತಿ, ನಾ.ಕೃ. ಸತ್ಯನಾರಾಯಣ ಮುಂತಾದವರು ಭಾಗವಹಿಸಿದ್ದ ಸಭೆಯ ಅಧ್ಯಕ್ಷತೆಯನ್ನು ಅ.ನ.ಕೃ ಅವರು ವಹಿಸಿದ್ದರು.

ಸುಧೀರ್ಘ ಚರ್ಚೆಯ ನಂತರ ಬೆಂಗಳೂರಿನಲ್ಲಿ ಕನ್ನಡಿಗರನ್ನು ಎಚ್ಚರಿಸಲು ದೊಡ್ಡ ಪ್ರಮಾಣದಲ್ಲಿ ಕನ್ನಡ ಚಳುವಳಿಯನ್ನು ಆರಂಭಿಸುವ ನಿರ್ಣಯವನ್ನು ಅಲ್ಲಿ ಕೈಗೊಳ್ಳಲಾಯಿತು.

ಆ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಒಂದು ಕ್ರಿಯಾ ಸಮಿತಿಯ ರಚನೆಯಾಗಿ ಕೋಣಂದೂರು ಲಿಂಗಪ್ಪನವರು ಕಾರ್ಯದರ್ಶಿಗಳಾಗಿಯೂ, ಎಂ.ವಿ. ಸುಬ್ಬರಾಯರು ಸಹಕಾರ್ಯದರ್ಶಿಗಳಾಗಿಯೂ ಯುವಜನ ಸಭೆಯ ಖಜಾಂಚಿಗಳಾದ ಜಿ. ಚಂದ್ರಶೇಖರ್ ಅವರು ಕೋಶಾಧ್ಯಕ್ಷರಾಗಿಯೂ ಸದಸ್ಯರುಗಳಾಗಿ ನಗರದ ಹಲವಾರು ಕನ್ನಡ ಸಂಸ್ಥೆಗಳಿಂದ ಒಬ್ಬೊಬ್ಬ ಪ್ರತಿನಿಧಿಯನ್ನೂ ಆರಿಸಲಾಯಿತು. ಮಂಗಳೂರಿನ ಪತ್ರಿಕೋದ್ಯಮಿ ಬನ್ನಂಜೆ ರಾಮಾಚಾರ್ಯರೂ ಈ ಸಭೆಯಲ್ಲಿ ಮಾತನಾಡಿ ಸಮ್ಮೇಳನಕ್ಕೆ ಸಂಪೂರ್ಣ ಸಹಕಾರವನ್ನು ನೀಡುವ ಭರವಸೆಯನ್ನು ಕೊಟ್ಟರು.

ಈ ಮಧ್ಯೆ ಕರ್ನಾಟಕ ಕುಲಪುರೋಹಿತ ವಯೋವೃದ್ಧ ಆಲೂರು ವೆಂಕಟರಾಯರೂ ಸಹ ಬೆಂಗಳೂರಿಗೆ ಆಗಮಿಸಿದ್ದರು. ಬೆಂಗಳೂರಿನಲ್ಲಿ ಕನ್ನಡದ ಸ್ಥಿತಿಗತಿಯನ್ನು ಕಂಡು ನೊಂದ ಅವರೂ ಸಹ ಕನ್ನಡದ ಉಳಿವಿಗಾಗಿ ಚಳವಳಿಯನ್ನು ಮಾಡದೆ ಗತ್ಯಂತರವಿಲ್ಲ ಎಂದು ಉತ್ತೇಜಿಸಿದರು.

ಹೀಗಾಗಿ, ಬೆಂಗಳೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ೧೯೬೧ರ ನವಂಬರ್ ಒಂದರಂದು ಚಿಕ್ಕಲಾಲ್‌ಬಾಗಿನಲ್ಲಿ ರಾಜ್ಯೋತ್ಸವವನ್ನು ಆಚರಿಸಲಾಯಿತು. ದಿನಾಂಕ ೨೩.೧೧.೬೧ರಂದು ಬೆಂಗಳೂರಿನಲ್ಲಿ 'ಕನ್ನಡ ದಿನ'ವನ್ನು ಆಚರಿಸಲಾಯಿತು.

ಇದರ ನಂತರ ಇದೇ ವರ್ಷದ, ಅಂದರೆ ೧೯೬೧ರ, ಕೊನೆಯಲ್ಲಿ ದಾವಣಗೆರೆಯಲ್ಲಿ ಯುವಜನ ಸಭಾದವರು ಮೊದಲ ಅಧಿವೇಶನ ನಡೆಸಿ ನಾಡು ನುಡಿಗಳಿಗೆ ಸಂಬಂಧಪಟ್ಟ ಅನೇಕ ನಿರ್ಣಯಗಳನ್ನೂ ಅಂಗೀಕರಿಸಿದರು.

ಸಮ್ಮೇಳನ

ಮೇಲ್ಕಂಡ ಕಾರ್ಯ ಕ್ರಮಗಳೆಲ್ಲವೂ ಕನ್ನಡಿಗರಲ್ಲಿ ಜನ ಜಾಗೃತಿ ಮೂಡಿಸಲು ನಡೆಸಿದ ಪ್ರಯತ್ನಗಳಾದರೂ, ಇದೆಲ್ಲಕ್ಕೂ ಕಿರೀಟವಿಟ್ಟಂತೆ ಒಂದು ಬೃಹತ್ ಸಮ್ಮೇಳನವನ್ನು ಫೆಬ್ರವರಿ ೧೯೬೨ರಲ್ಲಿ ಆಯೋಜಿಸಲಾಯಿತು.

ದಿನಾಂಕ ೪.೨.೧೯೬೨ರಂದು ನಗರದಲ್ಲಿ ಕನ್ನಡ ಯುವಜನ ಸಭಾದ ಅಧಿವೇಶನವನ್ನು ನಡೆಸಲಾಯಿತು. ನಾಡಿನ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳು

ಆಗಮಿಸಿದ್ದು ಬೆಂಗಳೂರಿನ ಕೆಂಪೇಗೌಡ ರಸ್ತೆಯ ಮೈಸೂರು ವಾಣಿಜ್ಯ ಭವನದಲ್ಲಿ ಅತಿಯಾದ ಉತ್ಸಾಹ ಸಡಗರಗಳಿಂದ ನಡೆಯಿತು.

ಕನ್ನಡದ ಹಿರಿಯ ಸಾಹಿತಿಗಳು, ಕಲಾವಿದರು, ಜನಪ್ರತಿನಿಧಿಗಳು, ಕನ್ನಡಸಂಘ ಸಂಸ್ಥೆಗಳ ಪ್ರತಿನಿಧಿಗಳು, ಕನ್ನಡಪ್ರೇಮಿಗಳು ಅತ್ಯಧಿಕವಾಗಿ ನೆರೆದು ಸಭಾಂಗಣ ತುಂಬಿ ತುಳುಕುತ್ತಿತ್ತು. ಎಲ್ಲರಲ್ಲಿಯೂ ಏನೋ ಉತ್ಸಾಹ, ಏನೋ ಸಡಗರ. ಹಿಂದೆಂದೂ ಕನ್ನಡ ಚಳುವಳಿಯ ಹೆಸರಿನಲ್ಲಿ ಇಷ್ಟೊಂದು ಅಗಾಧವಾದ ಸಭೆ ನಡೆದಿರಲ್ಲಿಲ್ಲವೆಂಬುದು ಅಲ್ಲಿ ನೆರೆದಿದ್ದ ಅನೇಕರ ಅಭಿಮತವಾಗಿದ್ದಿತು.

ಇಂತಹ ಚರಿತ್ರಾರ್ಹವೂ, ಕನ್ನಡಿಗರ ಹೋರಾಟಕ್ಕಾಗಿ ನಡೆದ ಪ್ರಪ್ರಥಮ ಸಮ್ಮೇಳನವೂ ಆದ ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದವರು ನಾಟಕಕಾರ ಶ್ರೀರಂಗರು. ಉದ್ಘಾಟಕರು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು.

ಈ ಸಮ್ಮೇಳನದ ಮತ್ತೊಂದು ವೈಶಿಷ್ಟ್ಯವೆಂದರೆ, ಕನ್ನಡ ಚಳುವಳಿಯ ಧ್ಯೇಯೋದ್ದೇಶಗಳನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ 'ಕನ್ನಡ ಯುವಜನ' ಎಂಬ ವಾರಪತ್ರಿಕೆಯನ್ನು ಆರಂಭಿಸಿದ್ದು. ಚಳುವಳಿಯ ಇತಿಹಾಸದಲ್ಲಿ ಈ ಪತ್ರಿಕೆ ವಹಿಸಿದ್ದ ಪಾತ್ರ ಮಹತ್ತರವಾದುದು. ಈ ಪತ್ರಿಕೆಯ ಸಂಪಾದಕರಾದವರು ಕನ್ನಡ ಚಳುವಳಿಯ ಧೀಮಂತ ನಾಯಕರೂ, ತಮ್ಮ ಪತ್ತೇದಾರಿ ಕಾದಂಬರಿಗಳಿಂದ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದವರೂ ಆದ ಮ. ರಾಮಮೂರ್ತಿ ಅವರು. ತಮ್ಮ ಧೀಮಂತ ಬರಹಗಳಿಂದ ಹಾಗೂ ಭಾಷಣಗಳಿಂದ ಕನ್ನಡದ ಅಭಿಮಾನವನ್ನು ಉಕ್ಕಿಸುತ್ತಿದ್ದರು. 'ಪತ್ತೇದಾರಿ' ರಾಮಮೂರ್ತಿಯಾಗಿದ್ದವರು, 'ಚಳುವಳಿ' ರಾಮಮೂರ್ತಿಗಳಾಗಿ, ಕನ್ನಡ ವಿರೋಧಿ ಧೋರಣೆಗಳನ್ನು ತಮ್ಮ ಹರಿತ ಲೇಖನಿಗಳಿಂದ ಖಂಡ ತುಂಡವಾಗಿ ಟೀಕಿಸುತ್ತಿದ್ದರು.

'ಯುವಜನ' ಪತ್ರಿಕೆಯನ್ನು ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಖಾದ್ರಿ ಶಾಮಣ್ಣನವರು ಉದ್ಘಾಟಿಸಿದರು.

ಪ್ರಥಮ ಸಂಚಿಕೆಯ ಹರಾಜು

ಹತ್ತು ನಯಾ ಪೈಸೆಯ 'ಯುವಜನ' ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಹರಾಜು ಹಾಕಿದಾಗ ಭಾರತೀಂದ್ರ ಸ್ವಾಮಿಯವರು ೩೬೫ ರೂಪಾಯಿಗೆ ಕೊಂಡರು. ಲಾವಣಿ ಸುಬ್ಬಣ್ಣನವರು ೧೦೧ರೂ. ದಾನ ಮಾಡಿದರು.

ಕನ್ನಡ-ಕನ್ನಡಿಗರ ಹಿತರಕ್ಷಣೆಗಾಗಿ ಏರ್ಪಟ್ಟ ಈ ಸಮ್ಮೇಳನದಲ್ಲಿ ನಾಡಿನ ಸಂಗೀತಗಾರರು, ಕಲಾವಿದರು, ಅವಕಾಶ ವಂಚಿತರಾಗಿರುವುದನ್ನು ತಪ್ಪಿಸಿ, ಕನ್ನಡವು ಆಡಳಿತ ಭಾಷೆ ಆಗುವುದರ ಬಗ್ಗೆ, ಗೋವಾ ಕರ್ನಾಟಕದೊಂದಿಗೆ ವಿಲೀನವಾಗುವ ಬಗ್ಗೆ, ಬೇರೆ ರಾಜ್ಯದಲ್ಲಿರುವ ಕನ್ನಡ ಪ್ರದೇಶಗಳು ರಾಜ್ಯದೊಂದಿಗೆ ಸೇರುವ ಬಗ್ಗೆ, ಕನ್ನಡ ಚಿತ್ರರಂಗದ ಏಳಿಗೆ, ಡಬ್ಬಿಂಗ್ ವಿರೋಧಿ ನೀತಿ, ರಾಜ್ಯಕ್ಕೆ 'ಕರ್ನಾಟಕ' ಎಂದು ಪುನರ್ನಾಮಕರಣವಾಗುವ ಬಗ್ಗೆ - ಹೀಗೆ ಹಲವು ಹತ್ತು ಮಹತ್ವದ ನಿರ್ಣಯಗಳನ್ನು ಈ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಡಿ.ವಿ. ಗುಂಡಪ್ಪ, ಪದ್ಮಶ್ರೀ ಪ್ರಶಸ್ತಿ ಪಡೆದ ಸಿ.ಕೆ. ವೆಂಕಟರಾಮಯ್ಯ, ವೆಸ್ಟ್ ಇಂಡೀಸ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಪರವಾಗಿ ಭಾಗವಹಿಸಲು ಆರಿಸಲ್ಪಟ್ಟ ಕನ್ನಡ ಯುವಕರಾದ ಪ್ರಸನ್ನ, ಜಯಸಿಂಹ ಮತ್ತು ಕುಂದರಂ ಅವರನ್ನು ಅಭಿನಂದಿಸುವ ನಿರ್ಣಯಗಳನ್ನು ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಅಂದಿನ ಪರಿಸ್ಥಿತಿಯಲ್ಲಿ ಈ ಸಮ್ಮೇಳನ ಕನ್ನಡಿಗರ ಮನಸ್ಸಿನಲ್ಲಿ ಸುಪ್ತವಾಗಿದ್ದ ಕನ್ನಡದ ಅಭಿಮಾನವನ್ನು ಹೊರಹೊಮ್ಮಿಸುವಲ್ಲಿ ಸಫಲವಾಯಿತೆಂದು ಹೇಳಬಹುದು.

❑

ಕನ್ನಡ ಚಳುವಳಿಗೆ ರಾಮೋತ್ಸವದ ಪ್ರಭಾವ

ಸಮ್ಮೇಳನದಲ್ಲಿ ನಿರ್ಣಯಗಳನ್ನು ಕೈಗೊಂಡ ನಂತರ ಅವುಗಳನ್ನು ಅನುಷ್ಠಾನಕ್ಕೆ ತರುವ ಹೋರಾಟದ ಆರಂಭ ಸೂಚಕವಾಗಿ, ನಗರದ ರಾಮೋತ್ಸವಗಳಲ್ಲಿ ಕನ್ನಡ ಸಂಗೀತಗಾರರು ಅವಕಾಶ ವಂಚಿತರಾಗುತ್ತಿದ್ದುದನ್ನು ಹೋರಾಟದ ಅಂಗವಾಗಿ ತೆಗೆದುಕೊಂಡು ಎಲ್ಲಾ ರಾಮೋತ್ಸವದ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಕನ್ನಡ ಕಲಾವಿದರಿಗೆ ಆದ್ಯತೆ ನೀಡಲು ಮನವಿ ಮಾಡಲಾಯಿತು.

ಅಂದಿನ ಪರಿಸ್ಥಿತಿ ಹೇಗಿತ್ತೆಂದರೆ ರಾಮೋತ್ಸವ, ಗಣೇಶೋತ್ಸವಗಳಲ್ಲಿ ಸಂಗೀತ ಕಛೇರಿ ಹಾಗೂ ಇನ್ನಿತರ ಸಾಂಸ್ಕೃತಿಕ ಸಮಾರಂಭಗಳಲ್ಲಿ ಸ್ಥಳೀಯ ಕಲಾವಿದರಿಗೆ ಅವಕಾಶವೇ ಇರುತ್ತಿರಲಿಲ್ಲ. ಎಲ್ಲೋ ಕೆಲವು ಹೆಸರಾಂತ ಕಲಾವಿದರಿಗೆ ಮನ್ನಣೆ ಇತ್ತೇ ಹೊರತು ಬೇರೆ ಕಲಾವಿದರನ್ನು ಕೇಳುವವರೇ ಇರಲಿಲ್ಲ. 'ಹಿತ್ತಲಗಿಡ ಮದ್ದಲ್ಲ' ಎಂಬ ಧೋರಣೆ ಹೊಂದಿದ್ದ ಸಮಾರಂಭಗಳ ವ್ಯವಸ್ಥಾಪಕರು ಕನ್ನಡದ ಸ್ಥಳೀಯ ಕಲಾವಿದರನ್ನು 'ಕ್ಯಾರೇ' ಎನ್ನುತ್ತಿರಲಿಲ್ಲ. ಮದ್ರಾಸಿನಿಂದ ಬಂದರೇ ಅವರು ಕಲಾವಿದರು - ಅವರು ಹೇಳಿದ್ದೇ ಸಂಗೀತ ಎಂಬ ಸ್ಥಿತಿಯಿತ್ತು. ಅರಿಯಾಕ್ಕುಡಿ, ಪಟ್ಟಮ್ಮಾಳ್ ಮುಂತಾದ ತಮಿಳು ಕಲಾವಿದರಿಗೆ ಅಗ್ರ ಮನ್ನಣೆ - ಹೆಚ್ಚಿನ ಸಂಭಾವನೆ. ಅದೇ ಕನ್ನಡ ಕಲಾವಿದರು ಕೆಲಸಕ್ಕೆ ಬಾರದವರು ಎನ್ನುವ ಧೋರಣೆ. ಆ ಸ್ಥಳೀಯ ಕಲಾವಿದರು ವ್ಯವಸ್ಥಾಪಕ ಕೊಟ್ಟಷ್ಟು ಅವಕಾಶ ಹಾಗೂ ಸಂಭಾವನೆಯಲ್ಲಿ ತೃಪ್ತಿ ಪಟ್ಟುಕೊಳ್ಳಬೇಕಾಗಿತ್ತು.

ಕನ್ನಡನಾಡಿನಲ್ಲಿ ಕನ್ನಡ ಕಲಾವಿದರಿಗೆ ಸಂಗೀತಗಾರರಿಗೆ ಇಂತಹ ತಾತ್ಸಾರದ ಅನಾದರಣೆ. ಅದರಲ್ಲೂ ಮೈಸೂರಿನ ರಾಜಾಶ್ರಯ ತಪ್ಪಿದನಂತರವಂತೂ ಕಲಾವಿದರ ಪಾಡು ಶೋಚನೀಯವಾಗಿತ್ತು.

ಇಂತಹ ತಾತ್ಸಾರ ಮನೋಭಾವವನ್ನು ನಿರ್ಮೂಲ ಮಾಡಲು, ಕನ್ನಡದ ಕಲಾವಿದರು ಅವರ ತಾಯ್ನಾಡಿನಲ್ಲಿ, ಎಲ್ಲರೆದುರಿಗೆ ತಲೆಯೆತ್ತಿ ನಿಲ್ಲಲು, ಎಲ್ಲರಂತೆ ಅವಕಾಶ ಪಡೆಯಲು ಕನ್ನಡ ಚಳುವಳಿ ತೆಗೆದು ಕೊಂಡ ನಿರ್ಧಾರ - ರಾಮೋತ್ಸವದಲ್ಲಿ ಕನ್ನಡ ಸಂಗೀತಗಾರರಿಗೆ ಅವಕಾಶ ನೀಡಬೇಕು, ಕಾರ್ಯಕ್ರಮದಲ್ಲಿ ಕನ್ನಡ ಸಂಗೀತಕೃತಿಗಳಿಗೆ ಪ್ರಾಧಾನ್ಯತೆ ಇರಬೇಕು ಎಂಬ ಹೋರಾಟ.

ಇದಕ್ಕೆ ಆರಿಸಿಕೊಂಡ ವೇದಿಕೆ ಚಾಮರಾಜಪೇಟೆ ಶ್ರೀರಾಮ ಸೇವಾ ಮಂಡಲಿ. ಈ ಮಂಡಲಿಯು ರಾಮೋತ್ಸವದ ಸಂದರ್ಭದಲ್ಲಿ ೧೫-೨೦ ದಿನಗಳ ಪರ್ಯಂತ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಿದ್ದು ಈಗಾಗಲೇ ತಿಳಿಸಿದಂತೆ ಹೊರನಾಡಿನ ಕಲಾವಿದರಿಗೇ ಪ್ರಾಧಾನ್ಯತೆ ನೀಡುತ್ತಿತ್ತು. ಅದರಂತೆಯೇ ಬೆಂಗಳೂರಿನ ಶೇಷಾದ್ರಿಪುರದ ರಾಮಸೇವಾ ಸಮಿತಿಯೂ ಮತ್ತೊಂದು.

ಕನ್ನಡ ಯುವಜನಸಭಾದ ಅಧಿವೇಶನದಲ್ಲಿ ತೆಗೆದುಕೊಂಡ ನಿರ್ಣಯದಂತೆ, ಈ ಎರಡೂ ಸಂಸ್ಥೆಗಳಿಗೂ ಪತ್ರ ಬರೆದು ರಾಮೋತ್ಸವದ ಸಂಗೀತ ಕಛೇರಿಗಳಲ್ಲಿ ಸ್ಥಳೀಯ ಕಲಾವಿದರಿಗೂ ಹೊರಗಿನ ಕಲಾವಿದರಿಗೆ ನೀಡುವಷ್ಟೇ ಪ್ರಾಧಾನ್ಯತೆಯನ್ನು ಕೊಡತಕ್ಕದ್ದೆಂದೂ ೫೦:೫೦ರ ಅನುಪಾತದಲ್ಲಿ ಸ್ಥಳೀಯ ಹಾಗೂ ಹೊರ ರಾಜ್ಯದ ಕಲಾವಿದರ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದೂ ಸಲಹೆಮಾಡಲಾಯಿತು.

ಇದಕ್ಕೆ ಶೇಷಾದ್ರಿಪುರದ ರಾಮಸೇವಾ ಸಮಿತಿಯು ಕೂಡಲೆ ಸಕಾರಾತ್ಮಕವಾಗಿ ಸ್ಪಂದಿಸಿ ರಾಜ್ಯದ ಕಲಾವಿದರಿಗೆ ಹೆಚ್ಚಿನ ಅವಕಾಶಗಳನ್ನು ನೀಡಿತಾದರೂ ಚಾಮರಾಜಪೇಟೆಯ ರಾಮಸೇವಾ ಮಂಡಲಿ ತನ್ನ ಪಕ್ಷಪಾತೀ ಧೋರಣೆಯನ್ನೇ ಮುಂದುವರೆಸಿ ರಾಜ್ಯದ ಕಲಾವಿದರನ್ನು ಅನಾದರಿಸಿತು.

ಇದರಿಂದ ಬೇಸತ್ತ ಚಳುವಳಿಯ ನಾಯಕರು ಸಮಿತಿಯ ಈ ಧೋರಣೆಯನ್ನು ಪ್ರತಿಭಟಿಸುವ ತೀರ್ಮಾನವನ್ನು ಕೈಗೊಂಡು ದಿನಾಂಕ ೨೭.೦೪.೧೯೬೨ರಂದು ಪ್ರತಿಭಟನಾ ಮೆರವಣಿಗೆಯನ್ನು ನಡೆಸುವ ತೀರ್ಮಾನವನ್ನು ಕೈಗೊಂಡರು.

ಇಲ್ಲಿಯ ಸ್ವಾರಸ್ಯಕರ ಅಂಶವೆಂದರೆ ಚಾಮರಾಜಪೇಟೆ ರಾಮಸೇವಾ ಮಂಡಲಿಯ ಆಡಳಿತದ ಮುಂಚೂಣಿಯಲ್ಲಿದ್ದವರು - ಅ.ನ. ರಾಮರಾಯರು; ಚಳುವಳಿಯ ಮುಂಚೂಣಿಯಲ್ಲಿದ್ದವರು - ಅ.ನ. ಕೃಷ್ಣರಾಯರು. ಹೀಗಾಗಿ ಸಂಘರ್ಷ ಅಣ್ಣ ತಮ್ಮಂದಿರ ಹೋರಾಟ, ವೈಮನಸ್ಯವೆಂದು ಟೀಕಿಸಿದವರೂ ಇದ್ದರು. ಆದರೆ, ಇದು ಕೇವಲ ಕನ್ನಡ ಕಲಾವಿದರಿಗೆ ಆಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸುವುದೇ ಆಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

೨೭.೪.೧೯೬೨ - ಕನ್ನಡ ಚಳುವಳಿಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದ ದಿನ. ರಾಮಸೇವಾ ಮಂಡಲಿಯಲ್ಲಿ ಸಂಗೀತ ಸಾಮ್ರಾಜ್ಞಿ ಗಾನವಿಶಾರದೆ ಎಂ.ಎಸ್. ಸುಬ್ಬಲಕ್ಷ್ಮಿ ಸಂಗೀತ ನಡೆಯುತ್ತಿದ್ದರೆ, ನಗರದ ಚಿಕ್ಕ ಲಾಲ್ ಬಾಗ್‌ನಿಂದ ಹಲವಾರು ಕನ್ನಡ ಸಂಘಗಳ ಪ್ರತಿನಿಧಿಗಳು, ಕನ್ನಡ ಪ್ರೇಮಿಗಳು ನೂರಾರು ಸಂಖ್ಯೆಯಲ್ಲಿ ಹತ್ತಾರು ಭಿತ್ತಿ ಪತ್ರಗಳೊಂದಿಗೆ, ಕನ್ನಡ ಪರಘೋಷಣೆಗಳನ್ನು ಕೂಗುತ್ತಾ ಶಾಂತಿಯುತವಾಗಿ, ಶಿಸ್ತಿನಿಂದ ಮೆರವಣಿಗೆಯಲ್ಲಿ ಕಾರ್ಯಕ್ರಮದ ಸ್ಥಳಕ್ಕೆ ಸಾಗಿ ಬಂದರು.

ಅ.ನ.ಕೃ. ಹಾಗೂ ಮ. ರಾಮಮೂರ್ತಿಯವರ ಮುಂದಾಳತ್ವದಲ್ಲಿದ್ದ ಈ ಮೆರವಣಿಗೆಯಲ್ಲಿ ನಾಡಿಗೇರ ಕೃಷ್ಣರಾವ್, ಮ. ಶ್ರೀಧರಮೂರ್ತಿ, ಕೋಣಂದೂರು ಲಿಂಗಪ್ಪ, ಎಂ.ವಿ. ಸುಬ್ಬರಾವ್, ಬೆ.ನಿ. ಈಶ್ವರಪ್ಪ, ಸೂರ್ಯನಾರಾಯಣ ಚಡಗ ಮುಂತಾದವರು ಇದ್ದರು.

ಚಿಕ್ಕ ಲಾಲ್‌ಬಾಗ್‌ನಿಂದ ಹೊರಟ ಮೆರವಣಿಗೆ ಅರಳೇಪೇಟೆ, ಸೂಪರ್ ಟಾಕೀಸ್, ಕಣ್ಣಾಸ್ಪತ್ರೆ ಮುಖಾಂತರ ಸಮಾರಂಭ ನಡೆಯುತ್ತಿದ್ದ ಸಿಟಿ ಇನ್‌ಸ್ಟಿಟ್ಯೂಟ್ ಬಳಿಗೆ ಬಂದು ತಲುಪಿತು. ಯಾವುದೇ ಶಿಸ್ತಿನ ಭಂಗವಿಲ್ಲ, ಆಕ್ರೋಶವಿಲ್ಲ, ಶಾಂತಿಯುತ ಮೆರವಣಿಗೆ - ಪ್ರತಿಭಟನೆ.

ಆದರೆ ಕೆಲವು ಕಿಡಿಗೇಡಿಗಳು ಒಂದೆರಡು ಕಲ್ಲು ತೂರಿದರು. ಪೋಲಿಸರು ಮಧ್ಯೆ ಪ್ರವೇಶಿಸಿ ಕೆಲವು ಕಾರ್ಯಕರ್ತರನ್ನು ಥಳಿಸಿದರು. ಕೆಲವರ ಬಂಧನವೂ ಆಯಿತು. ಈ ಸಂಬಂಧದಲ್ಲಿ ಆದ್ಯರಾಮಾಚಾರ್, ಮೈ.ಸು. ಶೇಷಗಿರಿರಾವ್, ಯು.ಸಿ. ರಾಮದಾಸ್ ಅವರ ಮೇಲೆ ಪೋಲೀಸರು ಮೊಕದ್ದಮೆ ಹೂಡಿದರು. ಕನ್ನಡ ಚಳುವಳಿಯ ಇತಿಹಾಸದಲ್ಲಿ ಮೊಟ್ಟ ಮೊದಲ ಅಹಿತಕರ ಘಟನೆ ಇದೇ ಎನ್ನಬಹುದು.

ಇಷ್ಟೆಲ್ಲಾ ಆದರೂ ಚಪ್ಪರದ ಒಳಗೆ ಎಂ.ಎಸ್. ಸುಬ್ಬಲಕ್ಷ್ಮಿಯವರ ಸಂಗೀತ ಕಾರ್ಯಕ್ರಮ ನಿರಾತಂಕವಾಗಿ ನಡೆಯಿತು. ಅಂದರೆ ಚಳುವಳಿಗಾರರ ಪ್ರತಿಭಟನೆಯ ಉದ್ದೇಶ ತಮ್ಮ ಸಮಸ್ಯೆಯನ್ನು ಜನತೆಯ ಮುಂದಿಡುವುದಾಗಿತ್ತೇ ಹೊರತು, ಆ ಮಹಾನ್ ಕಲಾವಿದೆಗೆ ಯಾವುದೇ ರೀತಿಯ ಅಗೌರವ ಸೂಚಿಸುವುದಾಗಿರಲಿಲ್ಲ.

ಆದರೆ ಈ ಪ್ರತಿಭಟನೆ ಮೂಡಿಸಿದ ಕಾವು ಮತ್ತು ಪರಿಣಾಮ ಅನಿರೀಕ್ಷಿತ, ಅದ್ಭುತ ಎನ್ನಬಹುದು.

ನಮ್ಮವರೇ ಆದ ಕೆಲವರು ಇದು ಸಂಗೀತ ಶಾರದೆಗೆ ಮಾಡಿದ ಅವಮಾನ, ಕಲೆಗೆ - ಕಲಾವಿದರಿಗೆ ಭಾಷೆಯ ಗಡಿ ಇರಬಾರದು ಎಂದರು. ಅಣ್ಣತಮ್ಮಂದಿರ ಮನೆ ಜಗಳ ಬೀದಿಗೆ ಬಂತೆಂದರು. ಅಲ್ಲದೆ ಬಿ.ಬಿ.ಸಿ.ಯಲ್ಲೂ ಸಹ ಇದು ವಾರ್ತೆಗಳಲ್ಲಿ ಮೂಡಿ ಬಂದಿತ್ತೆಂದರೆ ಚಳುವಳಿಯ ಕಾವು ಎಷ್ಟಿದ್ದಿರಬಹುದೆಂದು ಊಹಿಸಬಹುದು. (ಬಿ.ಇ.ಎಲ್. ಕಾರ್ಖಾನೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ, ರಾಮೋತ್ಸವದ ಗಲಭೆ ಸಂದರ್ಭದಲ್ಲಿ ಕಾರ್ಯನಿಮಿತ್ತ ವಿದೇಶ ಪ್ರವಾಸದಲ್ಲಿದ್ದ ಬಿ.ಇ.ಎಲ್. ಕನ್ನಡ ಸಾಹಿತ್ಯ ಕೂಟದ ಅಧ್ಯಕ್ಷರೂ ಆಗಿದ್ದ ಶ್ರೀ ಹೆಚ್.ಆರ್. ಬಾಪು ಸೀತಾರಾಂ ಈ ವಿಷಯವನ್ನು ತಿಳಿಸಿದರು.)

ತಮಿಳು ಪತ್ರಿಕೆಗಳಂತೂ ಘಟನೆಯ ಸತ್ಯಾಂಶಗಳನ್ನು ತಿರುಚಿ ವರದಿ ಮಾಡಿದುವು. ಕನ್ನಡಿಗರನ್ನು ಭಾಷಾ ಅಂಧಾಭಿಮಾನಿಗಳೆಂದು ಜರಿದುವು.

ಮದರಾಸಿನಲ್ಲಿ ನೆಲೆಸಿದ್ದ ಇಬ್ಬರು ಕನ್ನಡ ಕಲಾವಿದರಂತೂ ತಾವೂ ಕನ್ನಡಿಗರೇ ಎಂಬುದನ್ನು ಮರೆತು "ಕನ್ನಡಿಗರು ಇಂತಹ ಚಳುವಳಿಯನ್ನು ಮಾಡಬಾರದಿತ್ತು. ಕಲೆಗೆ ಭಾಷೆಯ ಬಣ್ಣ ಬೆರೆಸಬಾರದು. ತಮಿಳುನಾಡಿನಲ್ಲಿ ನೆಲೆಸಿರುವ ನಮ್ಮಂತಹ ಕಲಾವಿದರ ಪಾಡೇನು?" ಎಂದೆಲ್ಲಾ ಪೇಚಾಡಿದರು.

ಇದೇ ಸಂದರ್ಭದಲ್ಲಿ ತಮಿಳುನಾಡಿನ ಪತ್ರಿಕೋದ್ಯಮಿ ಭಾರತೀದಾಸ್ ಒಂದು ವಾರದಲ್ಲಿ ಕನ್ನಡಿಗರು ತಮಿಳರ ಕ್ಷಮಾಪಣೆ ಕೇಳಬೇಕೆಂದೂ ಇಲ್ಲದಿದ್ದಲ್ಲಿ ಮದರಾಸಿನಲ್ಲಿ ಕನ್ನಡಿಗರ ವಿರುದ್ಧ ಪ್ರತಿ ಚಳುವಳಿ ಹೂಡುವುದಾಗಿಯೂ ಕೂಗಾಡಿದರು.ಈ ಅಕ್ಷೇಪಣೆಗಳಿಗೆಲ್ಲ ಬೆಂಗಳೂರಿನ ಸಮಸ್ತ ಕನ್ನಡ ಸಂಘಗಳ ಪ್ರಾತಿನಿಧಿಕ ಸಂಘವಾದ ಕನ್ನಡ ಸಂಯುಕ್ತ ರಂಗದ ಹೆಸರಿನಲ್ಲಿ ಅದರ ಪ್ರಧಾನ ಕಾರ್ಯದರ್ಶಿ ಹಾಗೂ "ಕನ್ನಡ ಯುವಜನ" ಪತ್ರಿಕೆಯ ಸಂಪಾದಕರೂ ಆದ ಮ. ರಾಮಮೂರ್ತಿ ಹಾಗೂ ಸಹ ಕಾರ್ಯದರ್ಶಿಗಳಾದ ಎಂ.ವಿ. ಸುಬ್ಬರಾವ್ ಮತ್ತು ಎಂ.ವಿ. ವರದಯ್ಯನರು ದಿನಾಂಕ ೦೧.೦೬.೧೯೬೨ರಂದು ಇಂಗ್ಲೀಷ್‌ನಲ್ಲಿ ಒಂದು ಸುಧೀರ್ಘವಾದ ವಿವರಣೆಯೊಂದಿಗೆ ಒಂದು ಹೇಳಿಕೆಯನ್ನು ಈ ರೀತಿ ನೀಡಿದರು:

United Front of Kannada Associations in Bangalore

206, Chickanna Gardens, Bangalore - 4

Gen. Secretary	Associate Secretary
M.Ramamurthy	**M.V. Subbarao**
Editor Kannada Yuvajana	**M.V. Varadaiah**

Brother and sister artists, writers and publicists,

We write this to you following information that we are victims of a tirade engineered against us for the past four months by certain Tamil newspapers apparently as a "reply" to the healthy campaign we have sponsored for succoring Kannada artists.

It is a pity that our detractors have given an anti-Tamil colour to this movement of ours. It is a greater pity that some of them have preferred to dub this as an auxillary to the separatist movement launched by the D M K in Madras State. We should like to declare categorically that we are averse to any kind of separatism and are always prepared to fight this

tendency tooth and nail. We have never seen eye to eye with the Dravida Munnetra Kazhagam and we don't propose to gang up with them.

All our movement stands for is to make the life of the average Kannadiga endurable and to create a respectable place for him in his own land. Surely, there is nothing reprehensible in this. We have programmed to prevail upon the State Government to declare Kannada as the State language, adopt Kannada as the language of the courts and also as the medium of instruction in educational institutions and to rename the State as Karnataka.

You will surely agree that this is well within the bounds of rationalism and also that there is no vestige of hatred for any other linguistic group or State discernible anywhere in this programme.

It may well be asked why we have signled out an old institution like the Ramaseva Mandali in Bangalore for our attack on the cultural front. This needs some explanation. Just to give you a background, it was the late Sri Bidaram Krishnappa, doyen of Karnataka Music of the State, who first initiated the habit of inviting musicians from Tamilnad to the State and created platform for them in his glorious institution, Sri Prasanna Sitarama Mandira, Mysore. It was also Sri Krishnappa who took the Vidwans from Tamilnad to the Mysore Palace, then a haven for all cultural giants, and got them palace honours. No less a man than His Highness Sri Krishnaraja Wodeyar, of revered memory, presided over these "vidwathsabhas" and suitably honoured the visiting virtuosi. We are sure that this service done by the late Sri Krishnappa to his brother artistes is too precious to be so easily forgotten.

Another doyen, the late Sri Tiger Varadachariar, spent a good number of years of his fruitful life in Mysore and readily reciprocated Sri Krishnappa's fine gesture and introduced a large number of Mysore musicians to Tamilnad. These, indeed, were days one would fondly cherish in one's memory.

But, to the dismay of everybody interested in healthy interstate cultural relations, after the demise of the late Sri Krishnapa, the Gayana Samaj of Bangalore preferred a step-motherly attitude towards local artists flouting the noble traditions set up by the two doyens. The local artist became a pariah in the Samaja and the subsequent office-bearers of the institution faithfully took up the strings of this unfortunate hate-campaign.

While this happened in Bangalore, it found its echo in the Prasanna Sita Rama Mandira at Mysore also.

These two institutions then found a blind follower in the Ramaseva Mandali of Chamarajpet, Bangalore, a tiny group of people who started conducting music performances during the Ramanavami season in a small way. This institution took upon itself to throw every Kannada artist overboard. Quite naturally, this suicidal policy adopted by this commercial-minded organisation run in the name of art provoked the wrath of the local press and music-lovers alike and strong resentment of this attitude poured into the press in a stream. When, in his presidential address at the 42nd Kannada Sahitya Sammelana in Udipi in December 1960, Sri A.N. Krishna Rao, a famed Kannada writer and a member of our advisory board, made a pointed reference to this organised affront to Kannada art, the press widely hailed him. This show of righteous indignation came to a logical culmination when, at a conference of Bangalore Kannadigas, one of the most successful conferences convened in the city in recent years, a strongly-worded resolution was passed crying halt to the policy persued by the Mandali, which, incidentally, has now grown into a big money-making cultural organisation.

We requested the Mandali and similar institutions not to do away with the services of outside artistes -and we want this to be very clearly understood - but only to invite both local and outside artists on a fifty-fifty basis.

We should thankfully acknowledge here that the Rama Seva Samithi in another area of the city,

Sheshadripuram, which happens to be much more well organised and more sincere institution than the Mandali, has readily responded to our request and is treating both Mysore and outside artistes alike.

But not so our friends from the Mandali. They believe in their dogged obstinacy and have refused to budge from their most unreasonable stand. This being the case, we had no other alternative but to stage a peaceful demonstration against them and this we did on April 27. We should like you to get this clear, that we never resorted to any violence but only led a procession through the main streets of the city with black flags and banners. A public meeting was also held without any untoward incident. There was no reason whatever for our Mandali friends to get panicky, but they did, and imported into the pandal precincts a whole posse of policemen, fully armed and led by senior officers. We were called hooligans and communists, but we never deserved this blame. In fact, nothing whatever hapened from our end and Smt. Subbulakshmi did not have to stop singing even for a single second. Meanwhile, we had successfully lodged our peaceful protest.

This is not a piece of self-aggrandisement, but we can assure you that our organisation is not an offshoot of some disgruntled Kannadigas, as some of those who don't see eye to eye with us have made out. Ours is an organised, concerted movement voicing the concern, indignation and chagrin of Kannadigas in their hour of agony. Our organisation, far from being monoplised by communists and hooligans, is composed of some of the most outstanding men of letters, musicians, journalists, students, factory workers, corporators and members of the State Legislature. There are also office-bearers of over 50 organisations fighting for the legitimate rights and aspirations of the 20 million Kannadigas.

We need hold no apology for the cause we have espoused. But we would like to make one point very clear. While we are not at all opposed to Tamil artists

performing on our soil - in fact, they are most welcome- we are not prepared to tolerate the superior airs they choose to sport. This is most insulting and not even the traditionally tolerant Kannadiga can put up with this. The Tamil artists should bear in mind that it is their duty to share the destiny of their brother artists in Karnataka. They have no right to trample on the sentiments of the Kannada people by associating themselves with blatantly mercenary organisations.

We tell the Tamil artists: Don't have anything to do with such institutions: reciprocate the goodwill of Kannadigas by inviting Kannada artists in large numbers to your State and when you sing in our State, see that 50 percent of your repertoire consists of Kannada songs.

We are sure this lengthy explanation convinces you about the real facts of the case. All we are agitating for is the creation of a "live and let-live" policy. After having said all this, would it be too presumptous on our part to enlist your co-operation in our fight against oppression and low commercialism?

1st June 1962

ವಿಶ್ವೇಶ್ವರಪುರ ಸರ್ಕಲ್‌ನಲ್ಲಿ ದಿನಾಂಕ ೧೦.೬.೧೯೬೨ರಂದು ಸಂಯುಕ್ತರಂಗದ ಆಶ್ರಯದಲ್ಲಿ ಕನ್ನಡ ನಾಡಿನ ಹಿರಿಯ ಸಾಹಿತಿಗಳೂ ಸ್ವಾತಂತ್ರ್ಯ ಹೋರಾಟಗಾರರೂ ಆದ ವೀರಕೇಸರಿ ಸೀತಾರಾಮಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಭಾರೀ ಬಹಿರಂಗ ಸಭೆಯನ್ನು ಏರ್ಪಡಿಸಲಾಯಿತು. ಅದರಲ್ಲಿ ಅಂದಿನ ಘಟನೆಯ ವಿವರವನ್ನು ಮತ್ತು ತದನಂತರ ಆದ ಅದರ ಪರಿಣಾಮಗಳು, ನಮ್ಮವರೇ ಆದ ಕೆಲವರು ವರ್ತಿಸಿದ ರೀತಿ ನೀತಿ ಮತ್ತು ತಮಿಳು ಪತ್ರಿಕೆಗಳು ತಿರುಚಿ ಬರೆದ ವರದಿಗಳ ಬಗ್ಗೆ ಸಂಪೂರ್ಣ ವಿವರವನ್ನು ಅಂದಿನ ಭಾಷಣಕಾರರು ನೀಡಿದರು.

ತಿರುಮಲೆ ತಾತಾಚಾರ್ಯಶರ್ಮ, ನಾಡಿಗೇರ ಕೃಷ್ಣರಾಯರು, ಅ.ನ. ಕೃಷ್ಣರಾಯರು, ಮ. ರಾಮಮೂರ್ತಿ ಅವರೇ ಆದಿಯಾಗಿ ಪ್ರತಿಯೊಬ್ಬರೂ ಚಳುವಳಿಯ ಉದ್ದೇಶವನ್ನು ವಿವರಿಸುತ್ತಾ ಈ ಹೋರಾಟವು ಯಾವುದೇ ಭಾಷೆಯವರ ವಿರುದ್ಧವೂ ಅಲ್ಲವೆಂದೂ ಕೇವಲ ಕನ್ನಡಿಗರ ಉಳಿವಿಗಾಗಿ ವಿಧಿ ಇಲ್ಲದೆ ಈ ಹೋರಾಟಕ್ಕಿಳಿಯಬೇಕಾಯಿತೆಂದೂ ಹೇಳಿದರು.

ವಿರೋಧಾಭಾಸದ ಹೇಳಿಕೆ ನೀಡಿದ ಕೆಲವು ಕನ್ನಡ ನಟನಟಿಯರ ನಿಲುವನ್ನು ಟೀಕಿಸಿದ ಭಾಷಣಕಾರರು ಅದೇ ವೇಳೆಯಲ್ಲಿ ಅಂತಹ ನಟನಟಿಯರು ಪಾತ್ರವಹಿಸಿರುವ ಚಿತ್ರಗಳನ್ನು ಸ್ವಾಭಿಮಾನವುಳ್ಳ ಯಾವ ಕನ್ನಡಿಗನೂ ನೋಡಬಾರದು, ಹಾಗೂ ಆ ನಟನಟಿಯರು ಕ್ಷಮೆಕೋರುವ ತನಕ ಅವರ ಚಿತ್ರಗಳನ್ನು ಬಹಿಷ್ಕರಿಸಬೇಕು ಎಂದು ಕರೆ ನೀಡಿದರು.

ಮದ್ರಾಸಿನಿಂದ ಕನ್ನಡಿಗರನ್ನು ಓಡಿಸುವ ತಮಿಳರ ಬೆದರಿಕೆ ಬಗ್ಗೆ ಪ್ರತಿಕ್ರಿಯಿಸಿದ ತ್ರಿಭಾಷಾ ತಾರೆ ಎಂ.ವಿ. ರಾಜಮ್ಮನವರು ಸೂಕ್ತವಾಗಿ ಉತ್ತರನೀಡಿ, ಅಂತಹ ಸಂದರ್ಭದಲ್ಲಿ ಕನ್ನಡನಾಡಿನಲ್ಲಿ ಲಕ್ಷಾಂತರ ತಮಿಳರ ಸ್ಥಿತಿ ಏನಾದೀತೆಂದು ಯೋಚಿಸಿ, ಎಂದು ತಮಿಳು ಚಳುವಳಿಕಾರರಿಗೆ ಎಚ್ಚರಿಕೆ ನೀಡಿದ ಬಗ್ಗೆ ಅ.ನ.ಕೃ ಅವರು ರಾಜಮ್ಮನವರನ್ನು ಪ್ರಶಂಸಿಸಿ, 'ಇಲ್ಲಿಯ ತಮಿಳರು ಕನ್ನಡಿಗರಾಗಿ ಇಲ್ಲಿಯೇ ಬಾಳಬೇಕೆಂಬುದೇ ಕನ್ನಡಿಗರ ಬಯಕೆ' ಎಂದು ಹೇಳಿದರು.

ಈ ಮಧ್ಯೆ ಎಂ.ಎಸ್. ಸುಬ್ಬಲಕ್ಷ್ಮಿಯವರು, ಅ.ನ.ಕೃ ಮತ್ತು ಇತರೆ ಸಂಘ ಸಂಸ್ಥೆಗಳವರು ನಡೆಸಿದ ಚಳುವಳಿ ಮತ್ತು ಪ್ರದರ್ಶನದಿಂದ ತಮಗೆ ಯಾವುದೇ ಹಾನಿಯಾಗಲಿಲ್ಲವೆಂದು ಸ್ಪಷ್ಟೀಕರಣ ನೀಡಿದರಲ್ಲದೆ ಕನ್ನಡಿಗರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರತಿಭಟನೆ ನಡೆಸಿರುವುದರಲ್ಲಿ ತಪ್ಪೇನಿಲ್ಲ ಎಂದರು.

ರಾಮೋತ್ಸವದ ಪ್ರದರ್ಶನ ಸಂದರ್ಭದಲ್ಲಿ ಚಳುವಳಿಗಾರರ ಮೇಲೆ ಹೂಡಿದ್ದ ಮೊಕದ್ದಮೆಗಳು ಸುಮಾರು ಎರಡು ವರ್ಷಗಳ ಕಾಲ ನಡೆದು ಆಚ್ಯ ರಾಮಾಚಾರ್, ಮೈ.ಸು ಶೇಷಗಿರಿರಾವ್, ಯು.ಸಿ. ರಾಮದಾಸ್‌ರವರುಗಳು ನಿರ್ದೋಷಿಗಳೆಂದು ನ್ಯಾಯಾಧೀಶರು ತೀರ್ಪು ಕೊಟ್ಟರು.

ವಿಚಾರಣೆಯ ಸಂದರ್ಭದಲ್ಲಿ ಅ.ನ.ಕೃಷ್ಣರಾಯರು, ತಿರುಮಲೆ ತಾತಾಚಾರ್ಯಶರ್ಮ ಮುಂತಾದವರು ಸಾಕ್ಷಿ ನೀಡುತ್ತಾ ಎಲ್ಲ ಆಪಾದಿತರೂ ನಿರಪರಾಧಿಗಳೆಂದು ಹೇಳಿದರು. ಬೆಂಗಳೂರಿನ ಮಾಜೀ ಮೆಯರ್ ಹಾಗೂ ಕನ್ನಡದ ಅಭಿಮಾನಿ ಅಲ್ಲದೆ ಸಾಮಾಜಿಕ ಸೇವಾ ಕಾರ್ಯಕರ್ತರೂ ಆಗಿದ್ದ ಆರ್. ಅನಂತರಾಮನ್ ಅವರು ಆಪಾದಿತರ ಪರ ವಕಾಲತ್ತು ವಹಿಸಿದ್ದರು.

ರಾಮೋತ್ಸವದ ಸಂದರ್ಭದಲ್ಲಿ ಆರಂಭವಾದ ಚಳುವಳಿ ಪ್ರಕಾಶಮಾನವಾಗಿ ದೇದೀಪ್ಯಮಾನವಾಗಿ ಎಲ್ಲ ಕಡೆ ಹಬ್ಬ ತೊಡಗಿತು. ಮಾನಸಿಕವಾಗಿ ಮೂಕವೇದನೆ ಅನುಭವಿಸುತ್ತಿದ್ದ ಹಲವರು ಧೈರ್ಯವಾಗಿ ಹೊರಬರತೊಡಗಿದರು. ಚಳುವಳಿಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದವರು ಕೆಲವರಾದರೆ, ನೇಪಥ್ಯದಲ್ಲಿದ್ದು ಬೇಕಾದ ಸಹಾಯ ಸಹಕಾರಗಳನ್ನು ನಾನಾರೂಪದಲ್ಲಿ ನೀಡುತ್ತಿದ್ದವರು ಹಲವರು. ಮತ್ತೆ ಕೆಲವರು

ಪತ್ರಿಕೆಗಳಲ್ಲಿ ತಮ್ಮ ಪ್ರತಿಭಟನೆಯನ್ನು, ವಿರೋಧವನ್ನು, ಅಭಿಪ್ರಾಯವನ್ನು ಪ್ರಕಟಿಸತೊಡಗಿದರು.

ಹಲವಾರು ಸಂಘ ಸಂಸ್ಥೆಗಳು ಹುಟ್ಟಿಕೊಂಡು ಅನೇಕ ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ಜಾಗೃತಿ ಮೂಡಿಸತೊಡಗಿದರು. ಹಲವರು ನಿಯತ ಕಾಲಿಕೆಗಳನ್ನು ಪತ್ರಿಕೆಗಳನ್ನು ಹೊರಡಿಸಿದ್ದೂ ಉಂಟು. ಇದರಲ್ಲಿ ಪ್ರಮುಖವಾದುದು ಕನ್ನಡ ಜಾಗೃತ ಪರಿಷತ್‌ನವರು ಹೊರಡಿಸಿದ 'ಕನ್ನಡ ಜಾಗೃತ ಪತ್ರ' ಎಂಬ ತ್ರೈಮಾಸಿಕ ಹಾಗೂ 'ಧೃವ' ಎಂಬ ಮಾಸಪತ್ರಿಕೆ.

ಈ ಎರಡೂ ಪತ್ರಿಕೆಗಳ ಪ್ರಕಟಣೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡವರು ನಗರದ ದೂರವಾಣಿ ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದ ಎಂ. ನಾಗರಾಜ್ ಅವರು.

ಕನ್ನಡದ ಮೇಲಿನ ಅಭಿಮಾನದಿಂದ ಪತ್ರಿಕೆ ಪ್ರಕಟಿಸಿದ ಸಾಮಾನ್ಯ ಕಾರ್ಮಿಕರಾದ ನಾಗರಾಜ್ ಅವರು ಹಣದ ಮುಗ್ಗಟ್ಟಿನಿಂದ ನರಳುವಂತೆ ಆಗಿ ಕೊನೆಗೆ ಸಾಲ ಕೊಟ್ಟವರ ಹಿಂಸೆಯಿಂದ ಆತ್ಮಹತ್ಯೆಗೊಳಗಾಗಬೇಕಾದ್ದು ನಿಜವಾಗಿಯೂ ದುರಂತ. ಕನ್ನಡಕ್ಕಾಗಿ ದುಡಿದ ಇಂತಹ ನಿಷ್ಠಾವಂತರು ಎಷ್ಟು ಜನವೋ !

❑

ಕರ್ನಾಟಕ ಸಂಯುಕ್ತ ರಂಗದ ಅಧ್ವರ್ಯರು



ಅ.ನ.ಕೃಷ್ಣರಾಯ



ಮ. ರಾಮಮೂರ್ತಿ

ಕರ್ನಾಟಕ ಸಂಯುಕ್ತ ರಂಗದ ಉದಯ

ಕೆಲವು ತಾತ್ವಿಕ ಕಾರಣಗಳಿಂದ ಕೋಣಂದೂರು ಲಿಂಗಪ್ಪ, ಬಂದಗದ್ದೆ ರಮೇಶ್, ಕೆ.ಜಿ. ಮಹೇಶ್ವರಪ್ಪ, ಕಡಿದಾಳ್ ಶಾಮಣ್ಣ ಮುಂತಾದವರು ಚಳುವಳಿಯಿಂದ ದೂರ ಸರಿದರು.

ಆದರೆ ಈ ಹೊತ್ತಿಗೇ ಆರಂಭವಾಗಿದ್ದ ಹಲವಾರು ಕನ್ನಡ ಸಂಘ ಸಂಸ್ಥೆಗಳು ತಮ್ಮದೇ ಆದ ರೀತಿಯಲ್ಲಿ ಹಲವಾರು ಕನ್ನಡ ಚಟುವಟಿಕೆಗಳಿಂದ ಕನ್ನಡ ಹೋರಾಟವನ್ನು ಜೀವಂತವಾಗಿರಿಸಿದ್ದರು.

'ಕನ್ನಡ ಯುವಜನ' ಪತ್ರಿಕೆಯ ಸಂಪಾದಕರಾಗಿದ್ದ ಮ. ರಾಮಮೂರ್ತಿಯವರಾದರೋ ಪ್ರತಿ ಸಂಚಿಕೆಯಲ್ಲೂ ತಮ್ಮ ಹರಿತವಾದ ಲೇಖನಗಳಿಂದ ಚಳುವಳಿಯನ್ನು ಜೀವಂತವಾಗಿರಿಸಿದ್ದರು. ಸಂಪಾದಕ, ಮುದ್ರಕ, ಪ್ರಕಾಶಕರೂ ಆಗಿದ್ದ ಅವರು, ತಾವೇ ಮುದ್ರಿಸಿ ಅದನ್ನು ಬಂಡಲ್ ಕಟ್ಟಿ ಜಟಕಾದಲ್ಲಿ ಅಂಗಡಿಗಳಿಗೆ ತಲುಪಿಸುತ್ತಿದ್ದರು. ಸಂಯುಕ್ತರಂಗದ ಎಲ್ಲಾ ಸಭೆಗಳಲ್ಲಿ ಅದರ ಮಾರಾಟ ಹೆಚ್ಚಿನ ರೀತಿಯಲ್ಲಿ ಆಗುತ್ತಿತ್ತು.

'ಯುವಜನ' ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿಯೂ

- ✧ **ಕನ್ನಡ ಪುಸ್ತಕಗಳನ್ನು, ಪತ್ರಿಕೆಗಳನ್ನು ಕೊಂಡು ಓದಿರಿ**
- ✧ **ಕನ್ನಡದಲ್ಲಿಯೇ ವ್ಯವಹರಿಸಿ**
- ✧ **ಕನ್ನಡ ಸಂಘ ಸಂಸ್ಥೆಗಳ ಸದಸ್ಯರಾಗಿ**
- ✧ **ಕನ್ನಡ ನಾಟಕಗಳನ್ನೇ ನೋಡಿ**
- ✧ **ಕನ್ನಡ ಸಂಗೀತಗಾರರನ್ನು ಪ್ರೋತ್ಸಾಹಿಸಿ**

ಎಂದು ನಿರಂತರವಾಗಿ ಬರೆಯುತ್ತಿದ್ದ ರಾಮಮೂರ್ತಿಯವರು "ಕನ್ನಡಿಗರಿಗೆ ಕನ್ನಡವೇ ದೇವರು, ಶರಣಾಗಲು ಬೇರೆ ದೇವರೇ ಇಲ್ಲ" ಎಂಬ ಘೋಷವಾಕ್ಯವನ್ನು ಮುದ್ರಿಸುತ್ತಿದ್ದರು.

ಚಳುವಳಿಯನ್ನು ಜೀವಂತವಾಗಿಡಲು, ನಿರಂತರವಾಗಿ ನಡೆಸಿಕೊಂಡು ಹೋಗಲು ಸೂಕ್ತವಾದ ವೇದಿಕೆಯೊಂದು ನಿರ್ಮಾಣವಾಗಬೇಕಿತ್ತು. ಹಾಗಾಗಿ

ಹಲವಾರು ಕನ್ನಡ ಸಂಸ್ಥೆಗಳು ಸೇರಿ ಸಂಯುಕ್ತವಾಗಿ ಸಂಘಟನೆಯಾದುದೇ "ಕರ್ನಾಟಕ ಸಂಯುಕ್ತ ರಂಗ." ಕರ್ನಾಟಕ ಸಂಯುಕ್ತ ರಂಗಕ್ಕೆ ಅಂದು ಬೆಂಗಳೂರಿನಲ್ಲಿದ್ದ ಸುಮಾರು ಅರವತ್ತು ಸಂಘಗಳು ಸೇರಿ ಕೊಂಡುವು.

ದಿನಾಂಕ ೧೩.೫.೬೨ರಂದು ವೀರಕೇಸರಿ ಸೀತಾರಾಮಶಾಸ್ತ್ರಿಗಳ ಮನೆಯಲ್ಲಿ ಮೊದಲ ಸಭೆ ನಡೆದು ಈ ಸಭೆಯಲ್ಲಿ "ಕರ್ನಾಟಕ ಸಂಯುಕ್ತ ರಂಗ" ಎಂಬ ಹೆಸರನ್ನು ಸೂಚಿಸಿದವರೂ ವೀರಕೇಸರಿ ಅವರೇ.

ಅಂದಿನ ಸಭೆಯಲ್ಲಿ ಅಧ್ಯಕ್ಷರಾಗಿ ಅ.ನ.ಕೃಷ್ಣರಾಯರೂ, ಪ್ರಧಾನ ಕಾರ್ಯದರ್ಶಿಗಳಾಗಿ ಎಂ.ರಾಮಮೂರ್ತಿ ಅವರೂ, ಕಾರ್ಯದರ್ಶಿಗಳಾಗಿ ಎಂ.ವಿ. ಸುಬ್ಬರಾವ್ ಮತ್ತು ಎಂ.ವಿ. ವರದಯ್ಯ ಅವರುಗಳೂ ಆಯ್ಕೆಯಾದರು.

ಸಲಹಾ ಮಂಡಲಿಯ ಸದಸ್ಯರಾಗಿ ಶ್ರಿಯುತರಾದ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು, ಗಾನ ಸುಧಾಕರ ಎ. ಸುಬ್ಬರಾಯರು, ಡಿ.ಕೆ. ಮೂರ್ತಿ, ಮೈ.ಸು. ನಟರಾಜ, ಮೈ.ಸು. ಶೇಷಗಿರಿರಾವ್, ನಾಡಿಗೇರ ಕೃಷ್ಣರಾವ್, ಭಾರತೀಂದ್ರ ಸ್ವಾಮಿ, ಸೂರ್ಯನಾರಾಯಣ ಚಡಗ, ಮ. ಶ್ರೀಧರಮೂರ್ತಿ ಹಾಗೂ ಗಾನವಿಶಾರದ ಬಿ. ದೇವೇಂದ್ರಪ್ಪನವರು ಆಯ್ಕೆಯಾದರು.

ಸಂಯುಕ್ತ ರಂಗದ ಬಹಿರಂಗ ಸಭೆಗಳು

ಕನ್ನಡದ ಅನೇಕ ಹಿರಿಯ ಸಾಹಿತಿಗಳೂ ಕಲಾವಿದರೂ ಸಂಯುಕ್ತರಂಗದಲ್ಲಿ ಪರಿಣಾಮಕಾರಿಯಾಗಿ ಸೇರಿಕೊಂಡರು. ಅವರಲ್ಲಿ ಅ.ನ.ಕೃ., ಮ. ರಾಮಮೂರ್ತಿ, ನಾಡಿಗೇರ ಕೃಷ್ಣರಾಯ, ತಿರುಮಲೆ ತಾತಾಚಾರ್ಯಶರ್ಮ, ಅ.ನ. ಸುಬ್ಬರಾವ್, ಮೈ.ಸು. ಶೇಷಗಿರಿರಾವ್, ವೀರಕೇಸರಿ ಸೀತಾರಾಮಶಾಸ್ತ್ರಿ, ನಾ.ಕೃ. ಸತ್ಯನಾರಾಯಣ, ಬೆ.ನಿ. ಈಶ್ವರಪ್ಪ, ಮೈ.ಸು. ನಟರಾಜ, ಭಾರತೀಂದ್ರ ಸ್ವಾಮಿ, ಗೋ. ಅ. ನಾರಾಯಣ, ಸ.ಕೃ. ಸಂಪಂಗಿ ಮುಂತಾದವರಿದ್ದರು.

ಅ.ನ.ಕೃ ಹಾಗೂ ರಾಮಮೂರ್ತಿ ಅವರ ಸಲಹೆ ಸಹಕಾರದ ಮಾರ್ಗದರ್ಶನದಲ್ಲಿ ಸಾರ್ವಜನಿಕ ಸಭೆಗಳ ಮೂಲಕ ಕನ್ನಡದ ಜಾಗ್ರತಿಯನ್ನು ಮೂಡಿಸಲಾಗುತ್ತಿತ್ತು. ಈ ಮೇಲೆ ಕಾಣಿಸಿದ ಎಲ್ಲ ಮಹನೀಯರೂ ಸಭೆಗಳಲ್ಲಿ ಸಂದರ್ಭೋಚಿತ ಭಾಷಣ ಮಾಡುತ್ತಿದ್ದರು.

ಈ ಸಭೆಗಳನ್ನು ನಡೆಸಲು ತಕ್ಕ ವ್ಯವಸ್ಥೆಯನ್ನು ಮಾಡಿ ಸಹಕರಿಸುತ್ತಿದ್ದವರು- ಎಂ.ವಿ. ಸುಬ್ಬರಾವ್, ಎಂ.ವಿ. ವರದಯ್ಯ, ಅ.ಸತ್ಯಪಾಲ, ಡಿ.ಕೆ. ಮೂರ್ತಿ, ಮ. ನಾಗರಾಜು ("ಬೆಳಗಾವಿ ಕನ್ನಡಿಗರ ಸತ್ವ ಪರೀಕ್ಷೆ" ಕೃತಿಯ ಲೇಖಕ) ಮನು ಪಾಟೀಲ ಮುಂತಾದ ಗೆಳೆಯರು.

ಅಂದಿನ ದಿನಗಳಲ್ಲಿ ಪ್ರತಿ ದಿನವೂ ಅಥವಾ ವಾರದಲ್ಲಿ ಎರಡು ಮೂರು ದಿನವಾದರೂ ಒಂದಲ್ಲ ಒಂದು ಬಡಾವಣೆಯಲ್ಲಿ ಚಳುವಳಿಯ ಭಾಷಣವೇರ್ಪಡುತ್ತಿತ್ತು. ಪ್ರತಿಯೊಂದು ಸಭೆಯಲ್ಲಿಯೂ ಜನರು ಉತ್ಸಾಹದಿಂದ ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು.

ಈ ಎಲ್ಲ ಸಂದರ್ಭಗಳಲ್ಲಿಯೂ ಮ. ರಾಮಮೂರ್ತಿ ಅವರದು ಮೊದಲ ಭಾಷಣವಾದರೆ, ಅ.ನ.ಕೃ. ಅವರು ಕೊನೆಯಲ್ಲಿ ತಮ್ಮ ವಿದ್ವತ್‌ಪೂರ್ಣ ಭಾಷಣದಿಂದ ಸಭಿಕರನ್ನು ಮಂತ್ರ ಮುಗ್ಧರನ್ನಾಗಿಸುತ್ತಿದ್ದರು.

ಇಂತಹ ಬೃಹತ್ ಸಭೆಯಲ್ಲಿ ನೆರೆದಿದ್ದ ಸಹಸ್ರ ಸಹಸ್ರ ಜನರಿಗೆ ಅಚ್ಚುಕಟ್ಟಾದ ಧ್ವನಿವರ್ಧಕ ವ್ಯವಸ್ಥೆಯನ್ನು ಒದಗಿಸುವುದರಲ್ಲಿ ತಮ್ಮನ್ನು ತಾವೇ ಸಂಪೂರ್ಣವಾಗಿ ತೊಡಗಿಸಿಕೊಂಡವರು ಬಿ.ಇ.ಎಲ್. ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದ ಮು. ಪಾರ್ಥಸಾರಥಿಯವರು. 'ಜನತಾ' ಎಂಬ ಹೆಸರಿನಲ್ಲಿ ಧ್ವನಿವರ್ಧಕ ವ್ಯವಸ್ಥೆಯನ್ನು ಹೊಂದಿದ್ದ ಇವರು ಕೇವಲ ಕನ್ನಡ ಕಾರ್ಯಕ್ರಮಗಳಿಗೆ ಮಾತ್ರ ತಮ್ಮ ವ್ಯವಸ್ಥೆಯನ್ನು ಮುಡಿಪಾಗಿಟ್ಟಿದ್ದರಲ್ಲದೆ, ಬಹಳಷ್ಟು ಸಲ ಉಚಿತ ಸೇವೆಯನ್ನು ನೀಡುತ್ತಿದ್ದರು. ಅಲ್ಲದೆ ಸಮಾರಂಭಕ್ಕೆ ಮುಂಚೆ ಹಾಕುತ್ತಿದ್ದ ಧ್ವನಿವರ್ಧಕ ಮುದ್ರಿಕೆಗಳು ಕೇವಲ ಕನ್ನಡದ ಹಾಡುಗಳು ಮಾತ್ರವೇ ಆಗಿರುತ್ತಿದ್ದವು. ಕನ್ನಡ ಚಳುವಳಿ ಹಾಗೂ ಜನತಾ ಧ್ವನಿವರ್ಧಕ ಅಂದಿನ ದಿನಗಳಲ್ಲಿ ಒಂದಕ್ಕೊಂದು ಹಾಸು ಹೊಕ್ಕಾಗಿದ್ದವು.

ಇವರ ಈ ಕನ್ನಡ ಸೇವೆಯಲ್ಲಿ ಅವರ ಮಾತೃಶ್ರೀ ಸಾಕಮ್ಮನವರ ಪಾತ್ರವೂ ಹಿರಿದಾದುದು. ಅನೇಕ ಕನ್ನಡ ಚಳುವಳಿಗಾರರಿಗೆ ಅವರು ಪ್ರೋತ್ಸಾಹ ಹಾಗೂ ಬೆಂಬಲವನ್ನು ನೀಡಿದ್ದೂ ಉಂಟು. ಅಲ್ಲದೆ ಅವರ ಇನ್ನಿಬ್ಬರು ಮಕ್ಕಳಾದ ಎಂ. ಜಗದೀಶ್ ಹಾಗೂ ಎಂ. ಸದಾಶಿವಯ್ಯನವರೂ ಸಹಕಾರ ನೀಡುತ್ತಿದ್ದರು.

ಪಾರ್ಥಸಾರಥಿಯವರು ವಿವಾಹವಾದ ನಂತರ ಅವರ ಪತ್ನಿ ಶ್ರೀಮತಿ ಜಯಾ ಪಾರ್ಥಸಾರಥಿಯವರೂ ಸಹ ಕನ್ನಡ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದೇ ಅಲ್ಲದೇ ಸ್ವತಃ ಗಾಯಕಿಯಾದ ಅವರು ಕನ್ನಡ ಕೋಗಿಲೆ ಕಾಳಿಂಗರಾಯರ ನೆನಪಿನಲ್ಲಿ "ಕಾಳಿಂಗರಾಯರ ಬಳಗ"ವೆಂಬ ಸಂಸ್ಥೆಯನ್ನೂ ಸ್ಥಾಪಿಸಿ ಇಂದಿಗೂ ಸಹ ಕ್ರಿಯಾಶೀಲರಾಗಿದ್ದಾರೆ. ಒಟ್ಟಾರೆ ಹೇಳುವುದಾದರೆ ಅವರ ಇಡೀ ಕುಟುಂಬವೇ ಚಳುವಳಿಯಲ್ಲಿ ತೊಡಗಿಸಿಕೊಂಡಿತ್ತೆಂದರೆ ಅತಿಶಯೋಕ್ತಿಯಾಗಲಾರದು.

ಅ.ನ.ಕೃ. ಅವರ ಭಾಷಣಗಳಿಗೆ, ಅವರು ಮಂಡಿಸುತ್ತಿದ್ದ ಕನ್ನಡದ ಪರವಾದ ವಿಚಾರಗಳಿಗೆ ಮಾರು ಹೋಗದ ಶ್ರೋತೃಗಳೇ ಇರಲಿಲ್ಲವೆಂದರೆ ತಪ್ಪಾಗಲಾರದು. ತಮ್ಮ ಮನಸ್ಸಿಗೆ ಸರಿಹೋಗದ, ವಸ್ತುನಿಷ್ಠವಾದ ಸಂಗತಿ ಯಾವುದೇ ಇದ್ದರೂ ಅದನ್ನು ಅವರು ದಯಾದಾಕ್ಷಿಣ್ಯವಿಲ್ಲದೆ ಖಂಡಿಸುತ್ತಿದ್ದರು. ಆದರೂ ಸಹ ಅವರ ಸಾಹಿತ್ಯಪೂರ್ಣ, ವಿದ್ವತ್‌ಪೂರ್ಣ ವಿಚಾರಗಳನ್ನು ರಾಜಕೀಯನಾಯಕರೂ ಒಳಗೊಂಡಂತೆ ಎಲ್ಲರೂ ಗೌರವಿಸುತ್ತಿದ್ದರು.

ನಗರದ ಧರ್ಮರಾಯನ ಗುಡಿಯ ಸಮೀಪ ಸಂಯುಕ್ತರಂಗದ ಒಂದು ಸಭೆ. ಆ ಸಭೆಯಲ್ಲಿ ಅಂದಿನ ಸಮಾಜವಾದಿ ನಾಯಕರಾಗಿದ್ದ ಎಸ್. ಗೋಪಾಲ ಗೌಡರೂ ಭಾಗವಹಿಸಿದ್ದರು. ಅದೇ ತಾನೇ ವಿಧಾನಸಭೆಯಲ್ಲಿ ಅಂದಿನ ರಾಜ್ಯಪಾಲರ ಭಾಷಣದ ಪ್ರತಿಯನ್ನು ಕಾಲಿನಿಂದ ತುಳಿದು ಪ್ರತಿಭಟಿಸಿದ್ದ ಗೋಪಾಲ ಗೌಡರು ಎಲ್ಲರ ಗಮನ ಸೆಳೆದಿದ್ದರು. ಅ.ನ.ಕೃ. ಅಂದು ಆ ಬೃಹತ್ ಸಭೆಯಲ್ಲಿ ಮಾತನಾಡುತ್ತಾ ಗೋಪಾಲ ಗೌಡರ ಆ ವರ್ತನೆಯನ್ನು ಟೀಕಿಸಿದರು.

ಸಭೆಯಲ್ಲಿ ನೆರೆದಿದ್ದ ಗೋಪಾಲ ಗೌಡರ ಅಭಿಮಾನಿಗಳಲ್ಲಿ ಕಿರಿ ಕಿರಿ ಉಂಟಾಗಿ ಕೊಂಚಮಟ್ಟಿಗೆ ಗೊಂದಲದ ವಾತಾವರಣ ಉಂಟಾಯಿತು. ಆದರೆ ಗೋಪಾಲ ಗೌಡರು ಮಾತನಾಡಲು ತೊಡಗಿ ಅ.ನ.ಕೃ. ಅವರು ಹಿಂದೆಯೂ ನನ್ನ ಮಾರ್ಗದರ್ಶಕರು, ಅಲ್ಲದೆ ಮುಂದೂ ಸಹ ನನ್ನ ಮಾರ್ಗದರ್ಶಕರೇ. ಅಂದು ಆ ಪರಿಸ್ಥಿತಿಯಲ್ಲಿ ಆವೇಶಭರಿತನಾಗಿ ಅಂತಹ ಕ್ರಮಕ್ಕೆಗೊಳ್ಳಬೇಕಾಯಿತು. ಹಾಗೂ ಅಂತಹ ಆವೇಶಭರಿತ ಸಂದರ್ಭಗಳು ಎಲ್ಲರ ಜೀವನದಲ್ಲಿಯೂ ಒಂದಲ್ಲ ಒಂದು ಬಾರಿ ಬರುತ್ತವೆ ಎಂದು ಗೊಂದಲವಾಗಬಹುದಾದ ಸಭೆಯನ್ನು ಸುಖಾಂತ್ಯಗೊಳಿಸಿದರು.

ಈ ಘಟನೆಯನ್ನು ಅಂದಿನ ಕನ್ನಡ ಚಳುವಳಿ ಸಂದರ್ಭದಲ್ಲಿ ಕ್ರಿಯಾತ್ಮಕ ಪಾತ್ರವಹಿಸಿ, ಇಂದು ಅ.ನ.ಕೃ. ಪ್ರತಿಷ್ಠಾನದ ನಿಕಟ ಸಂಪರ್ಕ ಹೊಂದಿರುವ ಕೆ.ಟಿ. ಚಂದ್ರಶೇಖರ್‌ರವರು ಅವರನ್ನು ಭೇಟಿಮಾಡಿದಾಗ ನೆನಪಿಸಿದರು.

ಇಂತಹುದೇ ಇನ್ನೊಂದು ಸಂದರ್ಭವನ್ನೂ ಸಹ ಚಂದ್ರಶೇಖರ್‌ರವರು ನಿರೂಪಿಸಿದ್ದು ಹೀಗೆ:

ಐ.ಟಿ.ಐ. ಕಾರ್ಖಾನೆಯಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಕನ್ನಡಿಗರು ಉದ್ಯೋಗದಲ್ಲಿದ್ದರು. ಅವರಲ್ಲಿ ಕೆಲವರು ಸೇರಿಕೊಂಡು (ಚಂದ್ರಶೇಖರ್ ಸಹಿತ) ಕೃಷ್ಣರಾಜಪುರದಲ್ಲಿ ಸಂಯುಕ್ತ ರಂಗದ ನಾಯಕರಿಂದ ಭಾಷಣವನ್ನೇರ್ಪಡಿಸಿದ್ದರು.

ಸಹಸ್ರಾರು ಸಂಖ್ಯೆಯಲ್ಲಿ ಐ.ಟಿ.ಐ. ಕಾರ್ಖಾನೆಯ ಕನ್ನಡೇತರರೂ, ಭಾಗವಹಿಸಿದ್ದ ಆ ಸಭೆಯಲ್ಲಿ, ಅ.ನ.ಕೃ. ಅವರು ಕನ್ನಡ ಇತಿಹಾಸ ಮತ್ತು ಕನ್ನಡ ಚಳುವಳಿಯ ಅವಶ್ಯಕತೆಯನ್ನು ವಿವರಿಸಿ, ಕನ್ನಡೇತರರೂ ಕನ್ನಡ ನಾಡಿನಲ್ಲಿ ಕನ್ನಡ ಕಲಿತು ಕನ್ನಡಿಗರೊಂದಿಗೆ ಸಹಬಾಳ್ವೆ ನಡೆಸುವಂತೆ ಎಲ್ಲರ ಮನ ಮಿಡಿಯುವಂತೆ ಭಾಷಣ ಮಾಡಿದರು.

ಮಾರನೆಯ ದಿನ ಐ.ಟಿ.ಐ. ನ ಹಲವಾರು ಕನ್ನಡೇತರ ಕಾರ್ಮಿಕರು ಚಂದ್ರಶೇಖರ್ ಅವರನ್ನು ಭೇಟಿಮಾಡಿ ಇದುವರೆಗೂ ತಾವು ಕನ್ನಡ ಚಳುವಳಿಯನ್ನು ತಪ್ಪಾಗಿ ತಿಳಿದುಕೊಂಡಿದ್ದಾಗಿ ತಿಳಿಸಿದರಲ್ಲದೆ ಅ.ನ.ಕೃ ಅವರ ವಿದ್ವತ್ಪೂರ್ಣ ಭಾಷಣದಿಂದ ತಾವು ಮನಸೋತಿರುವುದಾಗಿಯೂ ತಿಳಿಸಿದರಂತೆ!

❑

ಸಂಯುಕ್ತರಂಗದ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ

ಇಂದು ಕರ್ನಾಟಕದಾದ್ಯಂತ, ಏಕೆ, ಕನ್ನಡಿಗರು ನೆಲೆಸಿರುವ ಬೇರೆ ರಾಜ್ಯಗಳಲ್ಲಿಯೂ ಸಹ, ಕನ್ನಡ ರಾಜ್ಯೋತ್ಸವವು ಅದ್ದೂರಿಯಿಂದ ಆಚರಿಸಲ್ಪಡುತ್ತಿದೆ. ಸರ್ಕಾರ ಕನ್ನಡ ರಾಜ್ಯೋತ್ಸವವನ್ನು ರಜಾ ದಿನವಾಗಿ ಘೋಷಿಸಿದೆ. ಶಾಲಾ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಸಡಗರ ಸಂಭ್ರಮದಿಂದ ರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ.

ಇದೆಲ್ಲದಕ್ಕೂ ನಾಂದಿ ಹಾಡಿದ್ದು ೧೯೬೩ ನವಂಬರ್ ಒಂದರಂದು ನಡೆದ ವಿಶೇಷ ರಾಜ್ಯೋತ್ಸವ.

ಈ ಹಿಂದೆಯೂ ಒಂದೆರಡು ಕಡೆ ಕನ್ನಡ ಹೋರಾಟಗಾರರು ರಾಜ್ಯೋತ್ಸವವನ್ನು ಆಚರಿಸಿದ್ದು ಉಂಟು. ಕೋಣಂದೂರು ಲಿಂಗಪ್ಪ ಮತ್ತು ಸಂಗಡಿಗರು ೧೯೬೧ ನವಂಬರ್ ಒಂದರಂದು ಚಿಕ್ಕ ಲಾಲ್‌ಬಾಗ್‌ನಲ್ಲಿ ಭುವನೇಶ್ವರಿ ಬಾವುಟವನ್ನು ಹಾರಿಸುವುದರೊಂದಿಗೆ ರಾಜ್ಯೋತ್ಸವವನ್ನು ಆಚರಿಸಿದ್ದರು.

೧೯೬೩ರಲ್ಲಿ ನಗರದ ಸುಭಾಷ್‌ನಗರದ ಅಂಗಳದಲ್ಲಿ (ಇಂದಿನ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣ ಇರುವ ಕಡೆ) ನಾನಾ ಕನ್ನಡ ಸಂಘಗಳು ಸಡಗರದಿಂದ ನಡೆಸಿದ ರಾಜ್ಯೋತ್ಸವ ಮುಂದಿನ ರಾಜ್ಯೋತ್ಸವ ಆಚರಣೆಗೆ ನಾಂದಿ ಆಯಿತು.

ಅಂದು ನಗರದಲ್ಲಿ ಹಿಂದೆಂದೂ ಕಂಡರಿಯದ ಉತ್ಸಾಹಪೂರಿತ ವಾತಾವರಣ. ಅದು ಬೆಂಗಳೂರು ನಗರದ ನಾನಾ ಕನ್ನಡ ಸಂಘ ಸಂಸ್ಥೆಗಳು ಒಗ್ಗೂಡಿ ವೈಭವೋಪೇತವಾಗಿ ಆಚರಿಸಿದ ಮೊದಲ ರಾಜ್ಯೋತ್ಸವವೆಂದು ಹೇಳಬಹುದು.

ಭುವನೇಶ್ವರಿಯ ವರ್ಣಚಿತ್ರದೊಡನೆ ನಡೆದ ಮೆರವಣಿಗೆಯ ಅಂತ್ಯದಲ್ಲಿದ್ದ ಪುಲಿಕೇಶಿಯ ಮೂಕಚಿತ್ರ ಮೆರವಣಿಗೆಗೆ ವಿಶೇಷ ಕಳೆಯನ್ನು ನೀಡಿತ್ತು.

ನಗರದ ಲಿಬರ್ಟಿ ಚಿತ್ರಮಂದಿರದ ಮಾಲೀಕರಾಗಿದ್ದ ಶ್ರೀಮತಿ ಅಕ್ತರ್ ಬೇಗಂ ಅವರು ಮೆರವಣಿಗೆ ಹೊರಡುವ ಮುನ್ನ ಧ್ವಜಾರೋಹಣ ಮಾಡಿದ

ನಂತರ ಅವರೇ ನೀಡಿದ್ದ ತೆರೆದ ಕಾರಿನಲ್ಲಿ ಶಾಸಕ ಅಂದಾನಪ್ಪ ದೊಡ್ಡಮೇಟಿ ಹಾಗೂ ಅ.ನ. ಕೃಷ್ಣರಾಯರು ಉಪಸ್ಥಿತರಿದ್ದರು.

ಮೆರವಣಿಗೆಯು ಬನವಾಸಿನಗರ (ಸುಭಾಷ್‌ನಗರ) ದಿಂದ ಬೆಳಿಗ್ಗೆ ೧೦ ಗಂಟೆಗೆ ಆರಂಭವಾಗಿ ನಗರ ಪ್ರದಕ್ಷಿಣೆ ಮಾಡಿಕೊಂಡು ಪುನಃ ಬನವಾಸಿ ನಗರವನ್ನು ತಲುಪಿದಾಗ ಮಧ್ಯಾಹ್ನ ಮೂರು ಘಂಟೆ.

ದಾರಿಯುದ್ದಕ್ಕೂ ಜನರು ಸಾಲುಗಟ್ಟಿ ನಿಂತುಕೊಂಡು ವೈಭವಪೂರ್ಣ ಮೆರವಣಿಗೆಯನ್ನು ವೀಕ್ಷಿಸುತ್ತಿದ್ದರು. ಸಂಘ ಸಂಸ್ಥೆಗಳು ಸಂತಸ-ಸಂಭ್ರಮಗಳಿಂದ ಹಾರ ತುರಾಯಿಗಳನ್ನು ಕೊಟ್ಟು ಗೌರವ ಸಮರ್ಪಿಸುತ್ತಿದ್ದರು.

ಅನೇಕ ಸ್ತಬ್ಧ ಚಿತ್ರಗಳನ್ನು, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಜಯಘೋಷದೊಂದಿಗೆ ಸಾಗಿ ಬರುತ್ತಿದ್ದ ಕನ್ನಡಾಭಿಮಾನಿಗಳನ್ನು ನೋಡುವುದೇ ಕಣ್ಣಿಗೆ ಹಬ್ಬದಂತಿತ್ತು. ಮೆರವಣಿಗೆಯಲ್ಲಿ ಕರಡಿ ಮಜಲು, ಬ್ರಹ್ಮ ಯಮ, ನಾರದ, ಹನುಮಂತ ಮುಂತಾದ ಅನೇಕ ವೇಷಧಾರಿಗಳಿದ್ದರು.

ರಾಜ್ಯಕ್ಕೆ ಏಳು ವರ್ಷ ತುಂಬಿದ ಸಂಕೇತವಾಗಿ ಏಳು ಸಲ ಭಾರೀ ಪಟಾಕಿಗಳನ್ನು ಹಾರಿಸಲಾಯಿತು.

ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಎಂ.ಪಿ.ಎಲ್ ಶಾಸ್ತ್ರಿಗಳು ಕನ್ನಡ ಅಂಕಿಯ ಕ್ಯಾಲೆಂಡರ್ (ಕನ್ನಡ ದಿನಚರಿ)ನ್ನು ಉದ್ಘಾಟಿಸಿದರು.

ಸುಭಾಷ್‌ನಗರದಲ್ಲಿ ಮೂರು ದಿನ ನಡೆದ ಆ ಸಮಾರಂಭ ಸಾಹಿತ್ಯ, ಸಂಗೀತ, ಕಲೆಗಳ ಜಾತ್ರೆಯಂತಿತ್ತು. ವಿದ್ವನ್ಮಣಿಗಳು ಸಂಜೆಯಿಂದ ರಾತ್ರಿಯವರೆಗೆ ವಿದ್ವತ್ಪೂರ್ಣ ಭಾಷಣ ಹಾಗೂ ಮನರಂಜನೆಯ ಮಹಾಪೂರವನ್ನೇ ಹರಿಸಿದರು.

ರಾಜ್ಯೋತ್ಸವದ ಮೂರನೇ ಹಾಗೂ ಕೊನೆಯ ದಿನ ಅಂದರೆ ೩.೧೧.೬೩ ರಂದು ನಡೆದ ಸಮಾವೇಶದಲ್ಲಿ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಸಮಾರಂಭಕ್ಕೆ ಆಗಮಿಸಿ ನೆರೆದಿದ್ದ ಬೃಹತ್ ಜನಸ್ತೋಮಕ್ಕೆ ಅತೀವ ಸಂತೋಷವನ್ನು ಉಂಟುಮಾಡಿದರು. ಸುಮಾರು ಮೂವತ್ತು ನಿಮಿಷಕ್ಕೂ ಮೀರಿ ತಮ್ಮ ಗದ್ಗದ ಕಂಠದಿಂದ ನೆರೆದಿದ್ದ ಜನಸಾಗರಕ್ಕೆ ತಮ್ಮ ಶುಭ ಸಂದೇಶವನ್ನು ನೀಡಿದರು. ಋಷಿ ಸದೃಶರಾದ ಅವರ ದರ್ಶನ ಎಲ್ಲರಲ್ಲಿಯೂ ಧನ್ಯತೆಯನ್ನುಂಟುಮಾಡಿತು.

(ಈ ಸಮಾರಂಭವೇ ಆಲೂರರ ಜೀವಿತದ ಕೊನೆಯ ಸಾರ್ವಜನಿಕ ಸಮಾರಂಭವಾಗಿ ಅವರು ದಿನಾಂಕ ೨೫.೨.೬೪ರಂದು ಧಾರವಾಡದಲ್ಲಿ ನಿಧನರಾದರು.)

ಇತರೆಡೆಗಳಲ್ಲಿ ಸಂಯುಕ್ತರಂಗದ ಪ್ರಭಾವ

ಬೆಂಗಳೂರಿನಲ್ಲಿ ಸಂಯುಕ್ತ ರಂಗದ ಸ್ಥಾಪನೆಯಾದ ಮೇಲೆ ಕನ್ನಡ ಚಟುವಟಿಕೆಗಳು ಎಲ್ಲ ಕಡೆಗೂ ಹಬ್ಬಿ ರಾಜ್ಯಾದ್ಯಂತ ಕನ್ನಡ ಸಂಘಗಳು ಸ್ಥಾಪನೆಯಾದುವು. ಕನ್ನಡದ ಉಳಿವಿಗಾಗಿ ಹೋರಾಟಮಾಡಲು ಆರಂಭಿಸಿದುವು.

ಮೈಸೂರಿನಲ್ಲಿ ಸಾಹಿತಿ ತ.ರಾ.ಸುಬ್ಬರಾಯರ ನಾಯಕತ್ವದಲ್ಲಿ ಅನೇಕ ಕನ್ನಡ ಸಂಘಗಳು ಒಗ್ಗೂಡಿ ಕನ್ನಡ ಜಾಗೃತಿಯ ಕೆಲಸವಾಗತೊಡಗಿತು. ಸಂಯುಕ್ತ ರಂಗದ ನಾಯಕರುಗಳಿಗೆ ಹೊರ ಊರುಗಳಿಂದಲೂ ಭಾಷಣಗಳಿಗೆ ಕರೆ ಬರತೊಡಗಿದುವು.

ಕಾಂಚೀ ತ್ತಲೈವಾನ್ ಚಿತ್ರ ಪ್ರಕರಣ

ಕನ್ನಡ ಚಳುವಳಿಯ ಕಾವು ಎಲ್ಲ ಕಡೆ ಹರಡಿದ್ದ ಕಾಲ. ಕನ್ನಡಿಗರ ಅಭಿಮಾನ, ಸಹನೆಗಳಿಗೆ ಯಾವುದೇ ಸಣ್ಣ ಘಟನೆಯಾದರೂ ಪ್ರಚೋದನೆಯಾಗಿ ಕನ್ನಡಿಗರು ಸಿಡಿದೇಳುತ್ತಿದ್ದ ಸಮಯ.

ಅಂತಹ ಸಂದರ್ಭದಲ್ಲಿ, ಅಂದರೆ ೧೯೬೪ರಲ್ಲಿ, ನಗರದ (ಆಗಿನ) ಗೀತಾ ಚಿತ್ರಮಂದಿರದಲ್ಲಿ ತಮಿಳು ಚಿತ್ರವೊಂದು ಬಿಡುಗಡೆಯಾಯಿತು. ಅದೇ ಕಾಂಚೀ ತ್ತಲೈವಾನ್.

ಬೆಂಗಳೂರಿನಲ್ಲಿ ತಮಿಳು ಚಿತ್ರ ಬಿಡುಗಡೆಯಾಗುವುದು ಯಾವ ಹೊಸ ಸುದ್ದಿಯೂ ಅಲ್ಲ, ಆಶ್ಚರ್ಯವೂ ಅಲ್ಲ. ಆದರೆ, ಕಾಂಚೀತ್ತಲೈವಾನ್ ಚಿತ್ರದಲ್ಲಿ ಕನ್ನಡಿಗರಿಗೆ, ಕನ್ನಡ ಇತಿಹಾಸಕ್ಕೆ ಅವಮಾನ ಉಂಟಾಗುವ ಕೆಲವು ಘಟನೆಗಳನ್ನು ಚಿತ್ರಿಸಿದ್ದು ಕನ್ನಡಿಗರನ್ನು ಕೆರಳಿಸಿತು. ಬಾದಾಮಿಯ ಚಾಲುಕ್ಯರ ದೊರೆ ಇಮ್ಮಡಿ ಪುಲಿಕೇಶಿ ಹಾಗೂ ಕಂಚಿ ಪಲ್ಲವರ ದೊರೆ ಮೊದಲನೆಯ ನರಸಿಂಹವರ್ಮನ ನಡುವೆ ನಡೆದ ಯುದ್ಧದ ಕಥೆಯೇ ಈ ಚಿತ್ರ. ಇದರಲ್ಲಿ ಪುಲಿಕೇಶಿಯನ್ನು ಸೋಲಿಸಿದ ತಮಿಳು ದೊರೆ ಕರ್ನಾಟಕ ಬಾವುಟವನ್ನು ಕಾಲಿನಲ್ಲಿ ತುಳಿಯುವಂತೆ ಚಿತ್ರೀಕರಿಸಲಾಗಿತ್ತು. ಅಲ್ಲದೆ ಇಮ್ಮಡಿ ಪುಲಿಕೇಶಿಯನ್ನು 'ಬಫೂನ್' ನಂತೆ ಚಿತ್ರೀಕರಿಸಲಾಗಿತ್ತು.

ಇದನ್ನು ಉಗ್ರವಾಗಿ ಪ್ರತಿಭಟಿಸಿದ ಕನ್ನಡ ಕಾರ್ಯಕರ್ತರು ಚಿತ್ರ ಪ್ರದರ್ಶಿಸುತ್ತಿದ್ದ ಮಂದಿರದ ಮುಂದೆ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿ ಚಿತ್ರ ನಿಲ್ಲಿಸುವಂತೆ ಆಗ್ರಹಪಡಿಸಹತ್ತಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಂದರ್ಭವೂ ಬಂದಿತು.

ಕನ್ನಡಿಗರ ವಿರೋಧವನ್ನು ಗಮನಿಸಿದ ಚಿತ್ರನಿರ್ಮಾಪಕರು ಆಕ್ಷೇಪಾರ್ಹ ಭಾಗಗಳನ್ನು ತೆಗೆದುಹಾಕಿ, ಮತ್ತೆ ಆ ಚಿತ್ರವನ್ನು ಬಿಡುಗಡೆಗೊಳಿಸುವ ಮುನ್ನ ಕನ್ನಡ ಇತಿಹಾಸಜ್ಞರು, ಚಳುವಳಿ ನಾಯಕರು ಮುಂತಾದವರಿಗಾಗಿ ವಿಶೇಷ ಪ್ರದರ್ಶನವೊಂದನ್ನು ಅದೇ ತಾನೇ ನವೀಕರಣಗೊಂಡಿದ್ದ ಮಿನರ್ವ ಚಿತ್ರಮಂದಿರದಲ್ಲಿ ಏರ್ಪಡಿಸಿದ್ದರು.

ಆ ಸಂದರ್ಭದಲ್ಲಿ ಚಿತ್ರ ವೀಕ್ಷಿಸಿದ ಕನ್ನಡ ಕಾರ್ಯಕರ್ತರಲ್ಲಿ ಹಲವರು ಆಕ್ಷೇಪಾರ್ಹವಾದ ಭಾಗಗಳನ್ನು ಪೂರ್ತಿ ತೆಗೆದು ಹಾಕಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಉದ್ರೇಕಗೊಂಡ ಹಲವರು ಚಿತ್ರಮಂದಿರದ ಆಸನಗಳನ್ನು, ಬ್ಯಾನರ್‌ಗಳನ್ನು ಹರಿದು ಬಿಸಾಡಿದರು. ಈ ಪ್ರತಿಕ್ರಿಯೆಗೆ ಆ ಚಿತ್ರಮಂದಿರದವರು ಅನ್ಯ ಭಾಷೆಯ ಚಿತ್ರಗಳನ್ನೇ ಪ್ರದರ್ಶಿಸುತ್ತಿದುದೂ ಒಂದು ಕಾರಣವಾಗಿತ್ತು.

ಅ.ನ.ಕೃ ಅವರು ಇಂತಹ ಹಿಂಸಾಪ್ರವೃತ್ತಿಯನ್ನು ಖಂಡಿಸಿದರು. ಚಳುವಳಿ ಯಾವಾಗಲೂ ಅಹಿಂಸಾಮಾದರಿಯಲ್ಲಿಯೇ ನಡೆಯಬೇಕು ಎಂಬ ಮನೋಭಾವ ಹೊಂದಿದ್ದ ಅವರು ಚಳುವಳಿಯಿಂದ ದೂರ ಸರಿದರು. ಆದರೆ, ಯುವಕರ ಬಿಸಿರಕ್ತದ ಈ ಘಟನೆಯಿಂದ ಬೇಸತ್ತರೂ ರಾಮಮೂರ್ತಿಯವರು ಯಾವುದೇ ಹೋರಾಟದಲ್ಲಿ ಇಂತಹ ಘಟನೆಗಳು ಅನಿವಾರ್ಯವೆಂದರು. ಬಿರುಸಿನಿಂದ ನಡೆಯುತ್ತಿದ್ದ ಚಳುವಳಿಗೆ ಅ.ನ.ಕೃ ವಿದಾಯ ಹೇಳಿದ್ದು ಚಳುವಳಿಯ ಹಿನ್ನಡೆಗೆ ಭಾರೀ ಕಾರಣವಾಯಿತು.

ಡಿ.ಎಂ.ಕೆ ಬಾವುಟವನ್ನು ಕೆಳಗಿಳಿಸಿದ್ದು

ಬೆಂಗಳೂರು ಹಾಗೂ ಇತರ ಕಡೆಗಳಲ್ಲಿ ಚಳುವಳಿಯ ಕಾವು ಏರತೊಡಗಿದ್ದಂತೆ, ತಮಿಳರು ವಾಸಿಸುತ್ತಿದ್ದ ಪ್ರದೇಶಗಳಲ್ಲಿ ಡಿ.ಎಂ.ಕೆ ಹಾಗೂ ಅವರ ಬಾವುಟದ ಪ್ರದರ್ಶನಗಳು ಹೆಚ್ಚಾದುವು. ಈ ಸ್ಥಿತಿ ಬೆಂಗಳೂರಿನಲ್ಲಿ ಮಾತ್ರವೇ ಅಲ್ಲದೆ ತಮಿಳರು ಹೆಚ್ಚಾಗಿರುವ ಬೇರೆ ಪ್ರದೇಶಗಳಲ್ಲಿಯೂ ಇತ್ತು.

ಅಂತಹುದೊಂದು ಸ್ಥಳ ಚಿತ್ರದುರ್ಗ ಜಿಲ್ಲೆಯ ಹಿರಿಯೂರು. ಹಿರಿಯೂರಿನಲ್ಲಿ ಮಾರಿಕಣಿವೆ (ವೇದಾವತಿ) ಅಣೆಕಟ್ಟಿನ ಕೆಲಸ ಆರಂಭವಾದಾಗ ಕೂಲಿ ಕೆಲಸಕ್ಕೆ ತಮಿಳುನಾಡಿನಿಂದ ಹಿಂಡು ಹಿಂಡಾಗಿ ಜನ ಬಂದರು. ಅಣೆಕಟ್ಟಿನ ಕೆಲಸ ಮುಗಿದರೂ ಪುನಃ ತಮಿಳುನಾಡಿಗೆ ಹಿಂದಿರುಗಲಿಲ್ಲ. ಹಿರಿಯೂರಿನಲ್ಲಿಯೇ ಶಾಶ್ವತವಾಗಿ ತಳ ಊರಿದರು. ಮನೆಮಠ ಜಮೀನು ಮಾಡಿಕೊಂಡು ನೆಮ್ಮದಿಯ ಬಾಳನ್ನು ಬಾಳತೊಡಗಿದರು.

ಕನ್ನಡ ನೆಲದಲ್ಲಿ ಬೇರೂರಿದ ಅವರು ಹಿರಿಯೂರಿನ ಪುರಸಭೆಯಲ್ಲೂ ಸದಸ್ಯರಾಗಿ ಆಡಳಿತ ಪ್ರವೇಶವನ್ನು ಪಡೆದರು. ಆದರೆ ನಿಂತ ನೆಲದ ಸಂಸ್ಕೃತಿಯನ್ನು ಹೊಂದಿಸಿಕೊಳ್ಳಲಿಲ್ಲ. ತಮ್ಮ ತಮಿಳು ಸಂಸ್ಕೃತಿಯನ್ನು ಮರೆಯಲಿಲ್ಲ.

ಹೀಗಾಗಿ ತಮಿಳರ ಪಕ್ಷವಾದ ಡಿ.ಎಂ.ಕೆ ಪಕ್ಷವನ್ನು ಹಿರಿಯೂರಿನಲ್ಲಿಯೂ ಸ್ಥಾಪಿಸಿದರು, ಬೆಳೆಸಿದರು. ಎಲ್ಲೆಲ್ಲೂ ಪಕ್ಷದ ಕೆಂಪು ಮತ್ತು ಕಪ್ಪು ಬಣ್ಣದ ಧ್ವಜಗಳು ಹಾರಾಡುತ್ತಿದ್ದವು. ಊರಿನ ಮಧ್ಯೆ ಇರುವ ಒಂದು ಪ್ರಮುಖ ವೃತ್ತದಲ್ಲಿ ಆ ಪಕ್ಷದ ಧ್ವಜವನ್ನು ಪ್ರಮುಖ ಸ್ಥಳದಲ್ಲಿ ಹಾರಾಡಲು ಕಟ್ಟಿದ್ದರು.

ಆ ಧ್ವಜವನ್ನು ತೆಗೆಸಲು ಕನ್ನಡಿಗರು ಅಂದಿನ ಮುಖ್ಯ ಮಂತ್ರಿ ಚಿತ್ರದುರ್ಗ ಜಿಲ್ಲೆಯವರೇ ಆದ ಸಿದ್ಧವನಹಳ್ಳಿ ನಿಜಲಿಂಗಪ್ಪ ಹಾಗೂ ಅಂದಿನ ಗೃಹಮಂತ್ರಿ ಆರ್.ಎಂ. ಪಾಟೀಲರನ್ನು ಕೇಳಿ ಕೊಂಡಿದ್ದರೂ ಏನೂ ಪ್ರಯೋಜನವಾಗಲಿಲ್ಲ.

ಹಿರಿಯೂರಿನ ತರುಣ ಕನ್ನಡಿಗರು ಸಂಯುಕ್ತ ರಂಗದ ಮ.ರಾಮ ಮೂರ್ತಿಯವರ ಬಳಿ ಬಂದು ಈ ವಿಚಾರ ಪ್ರಸ್ತಾಪಮಾಡಿ ಹಿರಿಯೂರಿಗೆ ಬಂದು ಜನರನ್ನು ಜಾಗೃತಿಗೊಳಿಸುವಂತೆ ಕೇಳಿಕೊಂಡರು.

ಹೀಗಾಗಿ ಅಲ್ಲಿ ಸಂಯುಕ್ತರಂಗದ ಬಹಿರಂಗ ಸಭೆ ಏರ್ಪಾಡಾಗಿ ಅಲ್ಲಿಯ ಸ್ಥಳೀಯ ಕಾಂಗ್ರೆಸ್ ನಾಯಕರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರು.

ರಾಮಮೂರ್ತಿಯವರು ತಮ್ಮ ಎಂದಿನ ಕಂಚಿನ ಕಂಠದಲ್ಲಿ ಮಾತನಾಡುತ್ತ ಕನ್ನಡ ನಾಡಿನಲ್ಲಿ ಪರಪ್ರಾಂತ್ಯದ ಪ್ರಾದೇಶಿಕ ಪಕ್ಷದ ಧ್ವಜವು ಸಾರ್ವಜನಿಕ ಸ್ಥಳದಲ್ಲಿ ಹಾರಾಡುವ ಔಚಿತ್ಯವನ್ನು ಪ್ರಶ್ನಿಸಿ ಅದು ಕೇವಲ ಪಕ್ಷದ ಕಛೇರಿಗೆ ಮಾತ್ರ ಸೀಮಿತಗೊಂಡ ಸ್ಥಳದಲ್ಲಿರಬೇಕೆಂದರು. ಸರ್ಕಲ್‌ನಲ್ಲಿರುವ ಧ್ವಜವನ್ನು ತಕ್ಷಣವೇ ತೆಗೆಯಬೇಕೆಂದು ಸಿಂಹ ಘರ್ಜನೆ ಮಾಡಿದರು. ಸಭೆಯಲ್ಲಿದ್ದ ಜನ ಕರತಾಡನ ಮಾಡಿ ತಮ್ಮ ಸಮ್ಮತಿಯನ್ನು ಸೂಚಿಸಿದರು.

ಆ ಸಭೆಯ ಮಧ್ಯದಿಂದಲೇ ಧ್ವಜ ಸ್ತಂಭದತ್ತ ಧಾವಿಸಿದ ಮ. ರಾಮಮೂರ್ತಿ ಯವರು ಧ್ವಜವನ್ನು ತೆಗೆಯಲು ಮುಂದಾದರು. ಆದರೆ ಅಷ್ಟರಲ್ಲಿ ಗುಂಪಿನಲ್ಲಿದ್ದ ಉತ್ಸಾಹೀ ಯುವಕನೊಬ್ಬ ಧ್ವಜಸ್ತಂಭವನ್ನು ಹತ್ತಿ ಬಾವುಟವನ್ನು ಇಳಿಸಿಯೇ ಬಿಟ್ಟ. ಎಷ್ಟೋ ವರ್ಷಗಳಿಂದ ಹಾರಾಡುತ್ತಿದ್ದ ಡಿ.ಎಂ.ಕೆ. ಧ್ವಜ ಕೆಳಗಿಳಿಯಿತು ಮತ್ತೆ ಹಾರಲಿಲ್ಲ.

ಅಂದಿನಿಂದ ಕನ್ನಡ ಸೇನಾನಿ ಆಗಿದ್ದ ರಾಮಮೂರ್ತಿಯವರು 'ವೀರ ಸೇನಾನಿ' ರಾಮಮೂರ್ತಿಯಾದರು.

ಕಾಂಚೀ ತ್ತಲೈವಾನ್ ಪ್ರಕರಣ, ಹಿರಿಯೂರಿನ ಧ್ವಜ ಪ್ರಕರಣ ಅಂದಿನ ಕನ್ನಡ ಚಳುವಳಿಯ ಪ್ರಮುಖ ಘಟನೆಗಳಾದುವು.

❑

ಚಳುವಳಿಯ ಪರಿಣಾಮ

೧೯೬೦ರ ದಶಕದಲ್ಲಿ ನಡೆದ ಕನ್ನಡ ಚಳುವಳಿಯು ಸಾಕಷ್ಟು ಪರಿಣಾಮಕಾರಿ ಫಲಿತಾಂಶವನ್ನು ನೀಡಿತು.

ಸಂಯುಕ್ತ ರಂಗದ ಸಭೆಗಳಿಂದ ಕನ್ನಡಿಗರಲ್ಲಿ ಕನ್ನಡ ಜಾಗೃತಿ ಮೂಡತೊಡಗಿತು. ಕನ್ನಡದ ವಾತಾವರಣ ಬೆಳೆಯಲು ಅನುಕೂಲವಾಯಿತು.

ಪರಭಾಷೆ ನಾಮ ಫಲಕಗಳು ಕನ್ನಡ ನಾಮಫಲಕಗಳಾಗಿ ಪರಿವರ್ತನೆಗೊಂಡವು. ರಸ್ತೆಗಳಿಗೆ ಕನ್ನಡದ ಹೆಸರುಗಳ ನಾಮಕರಣವಾಯಿತು. ಉದ್ಯಾನವನಗಳಲ್ಲಿ ಕನ್ನಡೇತರ ಹಾಡುಗಳ ಬದಲು ಕನ್ನಡದ ಹಾಡುಗಳು ಇಂಪಾಗಿ ಕೇಳಿಸತೊಡಗಿದುವು. ಕನ್ನಡ ಚಿತ್ರಗಳು ಹೆಚ್ಚಾದುವು. ಕನ್ನಡದ ನಾಟಕಗಳಿಗೆ ಬೇಡಿಕೆ ಹೆಚ್ಚಾಯಿತು. ಬೆಂಗಳೂರು ನಗರಸಭೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಒಪ್ಪಿಕೊಂಡಿತು. ಕನ್ನಡ ಸಂಗೀತಗಾರರಿಗೆ ಕಲಾವಿದರಿಗೆ ಪ್ರೋತ್ಸಾಹ ದೊರಕಲಾರಂಭವಾಯಿತು. ಕನ್ನಡ ಪತ್ರಿಕೆಗಳ ಪ್ರಸಾರ ಅಧಿಕವಾಯಿತು. ಹೊಸ ಹೊಸ ಪತ್ರಿಕೆಗಳು ನಿಯತ ಕಾಲಿಕೆಗಳು ಪ್ರಕಾಶನಗೊಳ್ಳಲಾರಂಭವಾದವು.

ಒಂದು ಕಾಲದಲ್ಲಿ ಕನ್ನಡದಲ್ಲಿ ಮಾತನಾಡಲು ಅಂಜುತ್ತಿದ್ದ ಕನ್ನಡಿಗರು ಧೈರ್ಯವಾಗಿ ಕನ್ನಡದಲ್ಲಿ ಮಾತನಾಡತೊಡಗಿದರು. ಪರಭಾಷಾಮಯವಾಗಿದ್ದ ಕೇಂದ್ರೋದ್ಯಮ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ದೊರಕಲಾರಂಭಿಸಿತು. ಕನ್ನಡ ಚಟುವಟಿಕೆಗಳು ಚುರುಕುಗೊಂಡವು.

ಈ ಸಂದರ್ಭದಲ್ಲಿ ನಗರ ಬಿ.ಇ.ಎಲ್ ಕಾರ್ಖಾನೆಯಲ್ಲಿ ಕನ್ನಡಿಗರಿಗಾಗುತ್ತಿದ್ದ ಅನ್ಯಾಯವನ್ನು ಎಲ್ಲರ ಗಮನಕ್ಕೆ ತರಲೇಬೇಕಾದ ಅನಿವಾರ್ಯತೆ ಇದೆ.

ಈ ಕಾರ್ಖಾನೆಯ ಪರ್ಸನಲ್ ವಿಭಾಗದಲ್ಲಿ ಅಧಿಕಾರಿಗಳಾಗಿದ್ದ ತಮಿಳು ಮತ್ತು ಮಲೆಯಾಳಿ ಹಿರಿಯ ಅಧಿಕಾರಿಗಳು ಕೆಲಸಗಳಿಗಾಗಿ ಜಾಹೀರಾತನ್ನು ನೀಡುವಾಗ ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ನೀಡಿ ಅಲ್ಲಿಯವರಿಂದಲೇ ಅರ್ಜಿಗಳನ್ನು ತರಿಸಿಕೊಂಡು ಅಂತಹವರಿಗೇ ಉದ್ಯೋಗ ನೀಡುತ್ತಿದ್ದರು. ಕನ್ನಡಿಗರಿಗೆ ಉದ್ಯೋಗ ಸಿಗುವುದು ಬಹಳ ವಿರಳವಾಗಿತ್ತು. ಇಂತಹ ಸಂದರ್ಭದಲ್ಲಿ

೧೯೬೫ರಲ್ಲಿ ಬಿ.ಎಸ್. ಹನುಮಾನ್‌ರವರು ಆಡಳಿತಾಧಿಕಾರಿಯಾಗಿ ಬಂದು ಸಂಪೂರ್ಣ ಬದಲಾವಣೆ ತಂದರು. ಸ್ಥಳೀಯ ಪತ್ರಿಕೆಗಳಲ್ಲಿ ಉದ್ಯೋಗ ಜಾಹೀರಾತನ್ನು ನೀಡಿ, ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅಭ್ಯರ್ಥಿಗಳ ಪಟ್ಟಿಯನ್ನು ತರಿಸಿಕೊಂಡು ಕನ್ನಡದ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲು ಅನುವು ಮಾಡಿಕೊಟ್ಟರು. ೧೯೬೯ರವರೆಗೂ ಅಧಿಕಾರ ಸ್ಥಾನದಲ್ಲಿದ್ದ ಹನುಮಾನ್‌ರವರು ಬಿ.ಇ.ಎಲ್. ನಲ್ಲಿ ಕನ್ನಡಿಗ ಉದ್ಯೋಗಾಂಕ್ಷಿಗಳಿಗೆ ತೋರಿದ ಆಸಕ್ತಿಯ ಫಲ ಇಂದು ಆ ಸಂಸ್ಥೆಯಲ್ಲಿ ಕನ್ನಡದ ಪುನರುತ್ಥಾನವಾಗಿದೆ ಎಂದರೆ ತಪ್ಪಲ್ಲ. ಅಂದು ಅವರು ಇಟ್ಟ ದಿಟ್ಟ ಹೆಜ್ಜೆ ಇಂದು ಸ್ಥಳೀಯರ ಮನೆ ಬೆಳಕಾಗಿದೆ.

ಪ್ರಾಯಶಃ ಅಂತಹ ದಿಟ್ಟ ಆಡಳಿತ ಅಧಿಕಾರಿ ಬೆಂಗಳೂರಿನ ಎಲ್ಲ ಕೇಂದ್ರೋದ್ಯಮಗಳಲ್ಲಿ ಒಬ್ಬೊಬ್ಬರಿದ್ದಿದ್ದರೆ, ಎಲ್ಲಾ ಸಂಸ್ಥೆಗಳಲ್ಲೂ ನಿರುದ್ಯೋಗಿ ಕನ್ನಡಿಗರು ಉದ್ಯೋಗ ಕಾಣಬಹುದಿತ್ತು.

ಕನ್ನಡಿಗರಲ್ಲಿ ಅಭಿಮಾನ ಹುಟ್ಟಿಸಿದ ಮತ್ತೊಂದು ಸಂಗತಿ ಎಂದರೆ ವಾಹನಗಳ ಮಾಲೀಕರು ವಾಹನಗಳಲ್ಲಿ ಹಾಕುತ್ತಿದ್ದ ನೋಂದಣಿ ಸಂಖ್ಯೆಯನ್ನು ಇಂಗ್ಲೀಷಿಗೆ ಬದಲಾಗಿ ಕನ್ನಡದಲ್ಲಿ ಹಾಕಲು ಆರಂಭಿಸಿದ್ದು. ಸಾರಿಗೆ ಇಲಾಖೆಯಿಂದ ಆಕ್ಷೇಪಣೆ ಇದ್ದರೂ, ಪೋಲೀಸ್ ಭಯವಿದ್ದರೂ ಕನ್ನಡದ ಅಭಿಮಾನದಿಂದ, ಚಳುವಳಿಯಿಂದ ಪ್ರೇರೇಪಿತರಾದ ಹಲವಾರು ಕನ್ನಡಾಭಿಮಾನಿಗಳು ಸಂಖ್ಯಾಫಲಕದಲ್ಲಿ ಕನ್ನಡದ ಅಂಕಿಗಳನ್ನು ಬರೆಸತೊಡಗಿದರು. ಹೀ.ಚಿ. ಶಾಂತವೀರಯ್ಯ, ಮು.ಪಾರ್ಥಸಾರಥಿ ಹಾಗೂ ಚಳುವಳಿಯ ನಾಯಕರಾದ ವಾಟಾಳ್ ನಾಗರಾಜ್ ಮುಂತಾದವರು ಈ ದಿಶೆಯಲ್ಲಿ ಮೊದಲಿಗರೆಂದು ಕೆಲವರ ಅಭಿಪ್ರಾಯ.

ಈಚೆಗೆ ಕನ್ನಡ ಅನುಷ್ಠಾನ ಮಂಡಲಿಯೂ ಈ ದಿಶೆಯಲ್ಲಿ ಆಗಾಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ವಾಹನಗಳಲ್ಲಿ ಕನ್ನಡದ ಅಂಕಿಗಳನ್ನು ಬಳಸುವ ಕ್ರಮವನ್ನು ಪ್ರಚಾರ ಹಾಗೂ ಬಳಕೆಗೆ ತರುತ್ತಿದೆ.

ಹಾಗೆಯೇ ಕೈಗಡಿಯಾರಗಳಲ್ಲಿ ಹಾಗೂ ಗೋಡೆ ಗಡಿಯಾರಗಳಲ್ಲಿಯೂ ಇಂಗ್ಲೀಷ್ ಅಂಕಿಗಳಿಗೆ ಬದಲಾಗಿ ಕನ್ನಡ ಅಂಕಿಗಳನ್ನು ಬಳಸುವ ಪದ್ಧತಿಯೂ ಆರಂಭವಾಗಿದೆ.

ಕನ್ನಡ ಚಳುವಳಿಯ ಕಾವು ಪರಾಕಾಷ್ಠೆಯನ್ನು ಮುಟ್ಟಿದ್ದ ಸಮಯದಲ್ಲಿಯೇ ಜನವರಿ ೧೯೬೮ರಲ್ಲಿ ನಡೆದ ಹಿಂದೀ ವಿರುದ್ಧ ವಿದ್ಯಾರ್ಥಿ ಸಮುದಾಯ ನಡೆಸಿದ ಚಳುವಳಿಯೂ ಗಮನಾರ್ಹವಾದ ಸಂಗತಿ.

ಬಹುಶಃ ಹಿಂದೆಂತಿಗಿಂತಲೂ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ತೋರಿದ ವಿದ್ಯಾರ್ಥಿ ಸಮುದಾಯ ನಡೆಸಿದ ಚಳುವಳಿ ಇದೆಂದು ಹೇಳಬಹುದು.

ಕೇಂದ್ರ ಸರ್ಕಾರದ ಹಿಂದೀ ಹೇರಿಕೆಯ ನೀತಿಯ ವಿರುದ್ಧ ವಿದ್ಯಾರ್ಥಿಗಳು ಸಿಡಿದೆದ್ದರು. ಆ ಚಳುವಳಿ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗದೇ ಇಡೀ ರಾಜ್ಯವ್ಯಾಪಿ ಹರಡಿ ಎಲ್ಲ ಕಡೆ ಕೇಂದ್ರದ ಭಾಷಾನೀತಿಗೆ ವ್ಯಾಪಕ ವಿರೋಧ ವ್ಯಕ್ತವಾಯಿತು.

ಬೆಂಗಳೂರಿನ ಮಧ್ಯಭಾಗದ ಸುಬೇದಾರ್ ಛತ್ರ ರಸ್ತೆಯಲ್ಲಿ ಭಾರತದಲ್ಲಿಯೇ ಪ್ರಪ್ರಥಮವೆನಿಸಿದ 'ಕಪಾಲಿ' ಚಿತ್ರ ಮಂದಿರವನ್ನು ಉದ್ಘಾಟಿಸಲು ಆಗಮಿಸಿದ್ದ ಉಪಪ್ರಧಾನಿ ಮುರಾಜಿ ದೇಸಾಯಿ ಅವರು ತಮ್ಮ ಕಾರ್ಯಕ್ರಮವನ್ನೇ ರದ್ದುಗೊಳಿಸಬೇಕಾಯಿತು.

ಹೀಗಾಗಿ ಕನ್ನಡ ಚಳುವಳಿಯ ಪ್ರಭಾವ ಸಮಾಜದ ಎಲ್ಲ ಸ್ತರಗಳಲ್ಲಿ ತನ್ನ ಪ್ರಭಾವವನ್ನು ಬೀರತೊಡಗಿತು.

ನಾಡುನುಡಿಯ ಹಿತಾಸಕ್ತಿಗೆ ಮಾರಕ ಸನ್ನಿವೇಶ ಬಂದಾಗ ಅದಕ್ಕೆ ತೀವ್ರ ಪ್ರತಿಭಟನೆ ತೋರುವ ದಾಷ್ಟೀಕತನವನ್ನು ತೋರಿಸುವಲ್ಲಿ ಸಫಲವಾಯಿತು.

❑

ಚಳುವಳಿ ಹಾಗೂ ಚಿತ್ರರಂಗ

ಕನ್ನಡ ಚಿತ್ರರಂಗದ ಮೇಲೆ ಕನ್ನಡ ಚಳುವಳಿಯಿಂದ ಆದ ಪ್ರಭಾವವಂತೂ ಅಪಾರ. ಬಹುಶಃ ಯಾವುದೇ ಕ್ಷೇತ್ರದ ಮೇಲೆ ಆದ ಪ್ರಭಾವಕ್ಕಿಂತ ಚಿತ್ರರಂಗದ ಮೇಲೆ ಆದ ಪ್ರಭಾವ ಅತ್ಯಧಿಕ ಹಾಗೂ ಅನನ್ಯ.

ಚಳುವಳಿಯು ಆರಂಭಕ್ಕೆ ಮುಂಚೆ ಕನ್ನಡ ಚಿತ್ರಗಳ ಸಂಖ್ಯೆ ಗಣನೀಯವಾಗಿರಲಿಲ್ಲ. ಒಂದು ಮಾಹಿತಿಯ ಪ್ರಕಾರ ೧೯೫೪ರಲ್ಲಿ ಏಳು ಚಿತ್ರಗಳು ತಯಾರಾದರೆ, ೧೯೫೫ರಲ್ಲಿ ಆರು ಚಿತ್ರಗಳು ಮಾತ್ರ ತಯಾರಾದುವು. ಈ ವೇಳೆಗೆ ಇಪ್ಪತ್ತೈದು ವರ್ಷಗಳನ್ನು ಕಂಡಿದ್ದ ಕನ್ನಡ ಚಿತ್ರರಂಗದಲ್ಲಿ ಕಲಾವಿದರು ನಿರುದ್ಯೋಗಿಗಳಾಗುವ ಸಂದರ್ಭ ಬಂದಿತ್ತು.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಚಿತ್ರರಂಗದ ಕಲಾವಿದರೆಲ್ಲರೂ ಸೇರಿ, ಕನ್ನಡ ಕಲಾವಿದರು ಎಂಬ ಸಂಸ್ಥೆಯ ಹೆಸರಿನಲ್ಲಿ ರಾಜ್ಯದಾದ್ಯಂತ ಕನ್ನಡ ನಾಟಕಗಳನ್ನು ಆಡತೊಡಗಿದರು. ಅಲ್ಲದೆ ಸಹಕಾರ ತತ್ವದಡಿಯಲ್ಲಿ 'ರಣಧೀರ ಕಂಠೀರವ' ಎಂಬ ಐತಿಹಾಸಿಕ ಚಿತ್ರವನ್ನು ನಿರ್ಮಿಸಿದರು. ರಾಜಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ ಮತ್ತು ನರಸಿಂಹರಾಜು ಅವರುಗಳೇ ಈ ಚಿತ್ರದ ನಿರ್ಮಾಪಕರು. ಇದು ಕನ್ನಡದ ೧೦೦ನೇ ವಾಕ್ಚಿತ್ರವೇ ಅಲ್ಲದೆ, ಕನ್ನಡದ ಮೊದಲ ಐತಿಹಾಸಿಕ ಚಿತ್ರವೂ ಆಗಿತ್ತು.

ಅಂದು ಬೆಂಗಳೂರಿನಲ್ಲಿ ಕನ್ನಡ ಚಿತ್ರಗಳಿಗೆ ಯಾವ ಪರಿಸ್ಥಿತಿಯಿತ್ತೆಂದರೆ, ಚಿತ್ರಮಂದಿರಗಳು ಸಿಗುವುದೇ ದುರ್ಲಭವಾಗಿತ್ತು. ಚಿತ್ರಮಂದಿರಗಳು ಸಾಲು ಸಾಲಾಗಿದ್ದ ಕೆಂಪೇಗೌಡ ರಸ್ತೆಯಲ್ಲಿ ಕನ್ನಡಕ್ಕೆ ಆದ್ಯತೆಯಿರಲಿಲ್ಲ. ಪ್ರತಿಷ್ಠಿತ ಚಿತ್ರಮಂದಿರಗಳು ಹಿಂದಿ ಚಿತ್ರಗಳಿಗೆ ಮೀಸಲಾಗಿದ್ದರೆ, ಉಳಿದವು ಕನ್ನಡವನ್ನು ಹೊರತು ಪಡಿಸಿದ ಅನ್ಯಚಿತ್ರಗಳಿಗೆ.

'ರಣಧೀರ ಕಂಠೀರವ' ಚಿತ್ರವು ಬಿಡುಗಡೆಯಾದಾಗ ಅದಕ್ಕೆ ಸೂಕ್ತವಾದ ಚಿತ್ರಮಂದಿರವೇ ದೊರಕದೆ, ಕೊನೆಗೆ ಹಿಮಾಲಯ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಬೇಕಾಯಿತು.

ಆದರೆ, ಚಳುವಳಿಯು ಆರಂಭವಾದ ಮೇಲೆ, ಇತಿಹಾಸವೇ ಬದಲಾಯಿತು. ಕೆಂಪೇಗೌಡ ರಸ್ತೆಯ ಚಿತ್ರಮಂದಿರಗಳ ಮೇಲೆ ಪ್ರೇಕ್ಷಕರ ಒತ್ತಡ ಹೆಚ್ಚಾಯಿತು.

ಚಳುವಳಿಗಾರರ ಆಕ್ರೋಶಕ್ಕೆ ಚಿತ್ರಮಂದಿರಗಳ ಮಾಲೀಕರು ಮಣಿಯಲೇ ಬೇಕಾಯಿತು. ಹಿಂದಿ ಚಿತ್ರಗಳಿಗೇ ಮೀಸಲಾಗಿದ್ದ ಪ್ರತಿಷ್ಠಿತ ಚಿತ್ರಮಂದಿರ 'ಅಲಂಕಾರ್'ನಲ್ಲಿ ಪ್ರಸಿದ್ಧ ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರ ದೇವರ ಕೂಸು ಕಾದಂಬರಿ ಆಧಾರಿತ ಚಿತ್ರ 'ಬಂಗಾರಿ' ಮೊಟ್ಟಮೊದಲಿಗೆ ಬಿಡುಗಡೆಯಾದರೆ, ಪ್ರಭಾತ್‌ನಲ್ಲಿ 'ಗೌರಿ', ಸ್ಟೇಟ್ಸ್‌ನಲ್ಲಿ 'ಕನ್ಯಾರತ್ನ' ಪ್ರದರ್ಶಿತವಾಯಿತು. ಅಲ್ಲಿಂದ ಮುಂದೆ ನಿರಂತರ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಪರಿಪಾಟವನ್ನು ಚಿತ್ರಮಂದಿರದ ಮಾಲೀಕರು ಮುಂದುವರೆಸಿದರು.

ಆ ಸಂದರ್ಭದಲ್ಲಿ ಚಳುವಳಿಗಾರರು, ಬಹು ಉತ್ಸಾಹದಿಂದ ಚಿತ್ರಮಂದಿರಗಳಿಗೆ, ತೋರಣ, ಬೆಲೂನ್ ಕಟ್ಟಿ, ಬೂದುಗುಂಬಳ ಕಾಯಿ, ತೆಂಗಿನ ಕಾಯಿ ಒಡೆದು ಕರ್ಪೂರದ ಆರತಿಯನ್ನು ಮಾಡಿ ತಮ್ಮ ಹರ್ಷವನ್ನು ವ್ಯಕ್ತ ಪಡಿಸುತ್ತಿದ್ದರು. ಚಿತ್ರಮಂದಿರಗಳ ಮುಂದೆ ಸ್ಟಾರ್‌ಗಳನ್ನು (ಬಿದಿರು ನಕ್ಷತ್ರಗಳನ್ನು) ತೂಗು ಹಾಕುವ ಸಂಪ್ರದಾಯ ಆರಂಭವಾದದ್ದು ಆಗಲೇ. ನಗರದ ಜಯಚಾಮರಾಜೇಂದ್ರ ರಸ್ತೆಯಲ್ಲಿದ್ದು ಈಗ ವಾಣಿಜ್ಯ ಕೇಂದ್ರವಾಗಿ ರೂಪುಗೊಂಡಿರುವ ಭಾರತ್ ಚಿತ್ರಮಂದಿರವಂತೂ ಸಂಪೂರ್ಣ ಕನ್ನಡ ಚಿತ್ರಗಳಿಗೇ ತನ್ನ ಮಂದಿರವನ್ನು ಮೀಸಲಾಗಿರಿಸಿತು.

ಹೀಗಾಗಿ ಇಲ್ಲಿಂದ ಆರಂಭವಾದ ಕನ್ನಡ ಚಿತ್ರಗಳ ಪ್ರದರ್ಶನ ಎಡೆ ತಡೆಯಿಲ್ಲದೆ, ಬೆಂಗಳೂರಿನಲ್ಲಷ್ಟೇ ಅಲ್ಲದೆ ಇಡೀ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿಯೂ, ನಾವು ಯಾರಿಗೇನು ಕಡಿಮೆ ಎಂಬ ಸವಾಲಿನೊಂದಿಗೆ ನಡೆಯತೊಡಗಿತು. ಯಾವುದೇ ಹೊಸ ಚಿತ್ರಮಂದಿರ ಪ್ರಾರಂಭವಾದರೂ ಅದು ಕನ್ನಡ ಚಿತ್ರ ಪ್ರದರ್ಶನದೊಂದಿಗೇ ಆರಂಭವಾಗುವ ಅಘೋಷಿತ ಸಂಪ್ರದಾಯವೂ ಜಾರಿಗೆ ಬಂದಿತು.

ಕನ್ನಡ ಚಳುವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿದ್ದರಿಂದ, ಕನ್ನಡ ಚಿತ್ರಗಳ ಸಂಪಾದನೆ, ಹಿಂದಿಗಿಂತ ಉತ್ತಮಗೊಂಡು, ಹೆಚ್ಚು ಹೆಚ್ಚು ಚಿತ್ರಗಳ ನಿರ್ಮಾಣಕ್ಕೆ ಅನುವಾಯಿತು.

ಈ ಸಂದರ್ಭದಲ್ಲಿ ನಿರ್ಮಾಪಕರ ಒಲವು ಕನ್ನಡ ಕಾದಂಬರಿಗಳತ್ತ ಹರಿದು, ಕಾದಂಬರಿ ಆಧಾರಿತ ಚಿತ್ರಗಳು ನಿರ್ಮಾಣವಾಗತೊಡಗಿದುವು. ಚಿತ್ರಗಳಲ್ಲಿ

ಕನ್ನಡತನ ಕಾಣಲಾರಂಭಿಸಿತು. ಕೃಷ್ಣಮೂರ್ತಿ ಪುರಾಣಿಕರ ಜನಪ್ರಿಯ ಕಾದಂಬರಿ "ಕರುಣೆಯೇ ಕುಟುಂಬದ ಕಣ್ಣು" ರಜತಪರದೆಯ ಮೇಲೆ ಬಂದ ಪ್ರಥಮ ಕನ್ನಡ ಕಾದಂಬರಿ ಆಧಾರಿತ ಚಿತ್ರವಾಯಿತು. ನಂತರದಲ್ಲಿ ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರ ಜನಪ್ರಿಯ ಕೃತಿಗಳು ಚಲನಚಿತ್ರಗಳಾಗಿ ನಿರ್ಮಿತವಾದುವು, ಯಶಸ್ವಿಯಾದುವು.

ಇದರಲ್ಲಿ ಬಹು ಮುಖ್ಯವಾಗಿ ಹೆಸರಿಸಬಹುದಾದರೆ, ಕಾದಂಬರಿಕಾರ ಟಿ.ಕೆ. ರಾಮರಾವ್ ಅವರ ಕಾದಂಬರಿ ಆಧಾರಿತ ಸಿದ್ಧಲಿಂಗಯ್ಯ ಅವರು ನಿರ್ದೇಶಿಸಿ, ರಾಜಕುಮಾರ್, ಭಾರತಿ ಅಭಿನಯಿಸಿದ 'ಬಂಗಾರದ ಮನುಷ್ಯ'. ಇದು ಕನ್ನಡ ಚಿತ್ರರಂಗದಲ್ಲಿ ಇತಿಹಾಸವನ್ನೇ ಸೃಷ್ಟಿಸಿತು. ೧೦೪ ವಾರಗಳು ಪ್ರದರ್ಶನಗೊಂಡು ಹಿಂದಿನ ಎಲ್ಲ ಚಿತ್ರಗಳ ವಿಕ್ರಮ (ರೆಕಾರ್ಡ್) ವನ್ನು ಮೀರಿಸಿತು.

ಇವೆಲ್ಲ ಸಾಧ್ಯವಾಗಿದ್ದು ಕನ್ನಡ ಚಳುವಳಿಯಿಂದ ಮಾತ್ರ ಎಂದು ಧಾರಾಳವಾಗಿ ಹೇಳಬಹುದು. ಚಳುವಳಿಯಿಂದ ಪ್ರೇರಿತರಾದ ಅನೇಕ ಚಿತ್ರ ಸಾಹಿತಿಗಳು ಚಿತ್ರಗಳಲ್ಲಿ ಕನ್ನಡಾಭಿಮಾನ ಕುರಿತಂತೆ ಸಾಹಿತ್ಯವನ್ನು ರಚಿಸತೊಡಗಿದರು. ಸಾಧ್ಯವಿದ್ದ ಸಂದರ್ಭಗಳಲ್ಲೆಲ್ಲ ಚೇತೋಹಾರಿಯಾದ ಕನ್ನಡಪರ ಸಂಭಾಷಣೆಗಳನ್ನು ರಚಿಸಿ, ಪ್ರೇಕ್ಷಕರ ಕನ್ನಡ ಪ್ರಜ್ಞೆಯನ್ನು ಎಚ್ಚರಿಸತೊಡಗಿದರು.

ಕು.ರಾ. ಸೀತಾರಾಮಶಾಸ್ತ್ರಿ, ಎಸ್. ಕೆ. ಕರೀಂ ಖಾನ್, ಹುಣಸೂರು ಕೃಷ್ಣಮೂರ್ತಿ, ಕಣಗಾಲ್ ಪ್ರಭಾಕರ ಶಾಸ್ತ್ರಿ, ಸಿ.ವಿ. ಶಿವಶಂಕರ್, ಆರ್.ಎನ್. ಜಯಗೋಪಾಲ್ ಜಿ.ವಿ. ಅಯ್ಯರ್, ಚಿ. ಸದಾಶಿವಯ್ಯ, ಚಿ. ಉದಯಶಂಕರ್ ಮುಂತಾದ ಗೀತ ರಚನಕಾರರು ಕನ್ನಡ ಅಭಿಮಾನವನ್ನು ಪ್ರೇರೇಪಿಸುವ ಗೀತೆಗಳನ್ನು ರಚಿಸಿ ಔಚಿತ್ಯಪೂರ್ಣವಾಗಿ ಚಿತ್ರದಲ್ಲಿ ಸೇರಿಸತೊಡಗಿದರು. ಕನ್ನಡ ಕವಿಗಳ ಕವನಗಳನ್ನು ಕನ್ನಡ ಚಿತ್ರಗಳಲ್ಲಿ ಅಳವಡಿಸುವ ಕಾರ್ಯ ಆರಂಭ ಮಾಡಿದ್ದು ಈ ಸಂದರ್ಭದಲ್ಲಿಯೇ.

೧೯೬೩ರಲ್ಲಿ ಬಿಡುಗಡೆಯಾದ "ಗೌರಿ" ಚಿತ್ರದಲ್ಲಿ ಸುಪ್ರಸಿದ್ಧ ಸಂಗೀತ ನಿರ್ದೇಶಕರಾದ ಜಿ.ಕೆ. ವೆಂಕಟೇಶ್ ಅವರು, ರಾಷ್ಟ್ರಕವಿ, ರಸಋಷಿ ಕು.ವೆಂ.ಪು. ಅವರ ರಚನೆಯಾದ "ಯಾವ ಜನ್ಮದ ಮೈತ್ರಿ ಈ ಜನ್ಮದಲ್ಲಿ ಬಂದು" ಎಂಬ ಗೀತೆಯನ್ನು ಚಿತ್ರದಲ್ಲಿ ಅಳವಡಿಸುವ ಮೂಲಕ ಕನ್ನಡ ಕವಿಗಳ ಗೀತೆಗಳನ್ನು ಕನ್ನಡಿಗರಿಗೆ ಪರಿಚಯಿಸುವ ಸತ್ಸಂಪ್ರದಾಯವನ್ನು ಅನುಸರಿಸಿದರು. ಖ್ಯಾತ ಹಿನ್ನೆಲೆ ಗಾಯಕಿ ಎಸ್. ಜಾನಕಿ ಹಾಡಿದ ಈ ಗೀತೆ ಇಂದಿಗೂ ಸಹ ಜನಪ್ರಿಯವಾಗಿದೆ.

ಅಲ್ಲಿಂದೀಚೆಗೆ ಅನೇಕ ಕವಿಗಳ ಗೀತೆಗಳು ಅಳವಡಿಸಲ್ಪಟ್ಟು ಕು.ವೆಂ.ಪು. ಅವರೊಬ್ಬರವೇ ಸುಮಾರು ಮೂವತ್ತು ಗೀತೆಗಳಿಗೂ ಮೀರಿ ಚಿತ್ರ ಗೀತೆಗಳಾಗಿವೆ.

ಕನ್ನಡ ಚಿತ್ರರಂಗದ ಚಳುವಳಿಗೆ ಬಲತಂದ ಮತ್ತೊಂದು ಚಿತ್ರ "ಕಣ್ತೆರೆದು ನೋಡು". ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಹಾಡಿದ "ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ನಾವು ಕೀಳ್ ಎಂಬುವರ ಬಾಯ್ ಮುಚ್ಚ ಬನ್ನಿ" ಎಂಬ ಗೀತೆ ಅತ್ಯಂತ ಜನಪ್ರಿಯವಾಗಿ ಚಳುವಳಿ ಸಭೆಗಳ ಆರಂಭಕ್ಕೆ ಮೊದಲು ಹಾಡಲಾಗುತ್ತಿತ್ತು.

ಕಣಗಾಲ್ ಪ್ರಭಾಕರಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ, ಸಿ.ವಿ. ಶಿವಶಂಕರ್ ಇವರೇ ಮುಂತಾದ ಕನ್ನಡ ಚಿತ್ರರಂಗದ ಹಲವಾರು ಸಾಹಿತಿಗಳು, ಸಂಯುಕ್ತ ರಂಗದ ಸಭೆಗಳಲ್ಲಿ ಭಾಷಣ ಮಾಡುತ್ತಿದ್ದರು. ನಟ ಉದಯಕುಮಾರ್ ಅವರಂತೂ, ತಮ್ಮ ಸಿಂಹ ಘರ್ಜನೆಯಿಂದ ಸಭೆಗಳಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡುತ್ತಿದ್ದರು.

ನಟ ಕಲ್ಯಾಣ್ ಕುಮಾರ್ ಅವರು ಮ. ರಾಮಮೂರ್ತಿಯವರ ನಿಧನಾನಂತರ, ತಮ್ಮ ಚಿತ್ರಗಳ ಪ್ರದರ್ಶನವನ್ನೇರ್ಪಡಿಸಿ ಸಂಗ್ರಹವಾದ ಹಣವನ್ನು ಶ್ರೀಮತಿ ಕಮಲಮ್ಮ ರಾಮಮೂರ್ತಿಯವರಿಗೆ ನೀಡಿ ಸೌಜನ್ಯವನ್ನು ತೋರಿಸಿದರು.

ಡಬ್ಬಿಂಗ್ ಚಿತ್ರಗಳಿಗೆ ವಿರೋಧ

ಕನ್ನಡ ಚಿತ್ರಗಳ ಪ್ರಗತಿಯಾಗುತ್ತಿದ್ದಂತೆ ಚಲನಚಿತ್ರಕ್ಕೆ ಸಂಬಂಧಪಟ್ಟ ಪತ್ರಿಕೆಗಳು - ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳು ಪ್ರಕಟಗೊಳ್ಳಲಾರಂಭಿಸಿದುವು.

ಕನ್ನಡ ಚಿತ್ರಪ್ರೇಮಿಗಳು ಸೇರಿಕೊಂಡು "ಕನ್ನಡ ಚಿತ್ರಪ್ರೇಮಿಗಳ ಸಂಘ" ಎಂಬ ಸಂಸ್ಥೆಯನ್ನು ಸ್ಥಾಪನೆಮಾಡಿ ವರ್ಷದ ಅತ್ಯುತ್ತಮ ಚಿತ್ರ, ಶ್ರೇಷ್ಠನಟ, ಶ್ರೇಷ್ಠನಟಿ, ದಿಗ್ದರ್ಶಕ ಮುಂತಾದ ಅನೇಕ ಪ್ರಶಸ್ತಿಗಳನ್ನು ನೀಡುವ ಪರಿಪಾಟವನ್ನು ಆರಂಭಿಸಿದರು.

ಬಿ.ಎ. ಅರಸುಕುಮಾರ್ ಅವರು ಅಧ್ಯಕ್ಷರಾಗಿ ಸಂಘದ ಚಾಲನಾ ಶಕ್ತಿಯಾಗಿದ್ದರು. ಅವರು ಮುಂದೆ ಕನ್ನಡ ಚಿತ್ರ ನಿರ್ಮಾಪಕರೂ ಆಗಿ ನಿರ್ಮಿಸಿದ 'ಬಂಗಾರದ ಹೂ' ಚಿತ್ರ ರಾಷ್ಟ್ರ ಪ್ರಶಸ್ತಿಯನ್ನು ಗಳಿಸಿತು.

ಅರವತ್ತರ ದಶಕದಲ್ಲಿ ಬೇರೆ ಭಾಷೆಯಲ್ಲಿ ತಯಾರಾದ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವ, ಅಪ್ರತ್ಯಕ್ಷವಾಗಿ ಕನ್ನಡದ ಕತ್ತು ಹಿಚುಕುವ ಕೆಲಸ ಅವ್ಯಾಹತವಾಗಿ ನಡೆದಿತ್ತು. ಸುಮಾರು ೧೯೬೨ರ ವೇಳೆಗೆ ಈ ಪಿಡುಗು ತೆಲುಗಿನ ಜನಪ್ರಿಯ ಚಿತ್ರಗಳಾದ ಮಾಯಾಬಜಾರ್, ಪಾತಾಳ ಭೈರವಿ ಮುಂತಾದ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವುದರಿಂದ ಆರಂಭವಾಯಿತು. ಕನ್ನಡದ ಕೆಲವು ಚಿತ್ರ ಸಾಹಿತಿಗಳು,

ಚಿತ್ರಕ್ಕೆ ತಕ್ಕುದಾದ ಸಾಹಿತ್ಯ ರಚಿಸಿದರೆ, ಕಂಠದಾನ ಮಾಡುವ ಕೆಲವು ಕಲಾವಿದರು ಮೂಲಚಿತ್ರದ ನಟರ ತುಟಿಚಲನೆಗೆ ಹೊಂದುವಂತೆ ಕಂಠದಾನ ಮಾಡುತ್ತಿದ್ದರು.

ಕೇವಲ ಈ ಎರಡು ವರ್ಗಕ್ಕೆ ಮಾತ್ರ ಡಬ್ಬಿಂಗ್ ಚಿತ್ರಗಳಿಂದ ಪ್ರಯೋಜನವಾಗುತ್ತಿತ್ತು. ಆದರೆ ಕನ್ನಡ ಕಲಾವಿದರಿಗೆ, ತಂತ್ರಜ್ಞರಿಗೆ ಯಾವುದೇ ರೀತಿಯ ಪ್ರಯೋಜನವೂ ಆಗುತ್ತಿರಲಿಲ್ಲ. ಕನ್ನಡದ ಪ್ರತಿಭೆ ಬೆಳಕಿಗೆ ಬರದೆ ಸೊರಗುವಂತಾಗಿತ್ತು.

ಈ ಪರಿಸ್ಥಿತಿಯಲ್ಲಿ ಕನ್ನಡ ಚಳುವಳಿಯ ಮತ್ತೊಂದು ರೂಪವಾಗಿ ಡಬ್ಬಿಂಗ್ ವಿರೋಧೀ ಚಳುವಳಿಯು ಆರಂಭವಾಯಿತು.

ಬಿ.ಎ. ಅರಸುಕುಮಾರ್ ಮತ್ತು ಅವರ ಸಂಗಡಿಗರು ಈ ಬಗ್ಗೆ ತೀವ್ರ ಹೋರಾಟವನ್ನು ನಡೆಸಿ, ಕನ್ನಡ ಕಲಾವಿದರಿಗೆ, ತಂತ್ರಜ್ಞರಿಗೆ ಮಾರಕವಾದ, ಕನ್ನಡ ಪ್ರತಿಭೆಯನ್ನು ಕತ್ತು ಹಿಸುಕಿ ಸಾಯಿಸುವ ಈ ಡಬ್ಬಿಂಗ್ ಹಾವಳಿಯ ವಿರುದ್ಧ ತೀವ್ರವಾದ ಹೋರಾಟವನ್ನೇ ಆರಂಭಿಸಿದರು.

ಮೊದಲಿಂದಲೂ ಕನ್ನಡ ಚಿತ್ರರಂಗ, ಕನ್ನಡ ಕಲಾವಿದರ ಏಳಿಗೆ ಬಗ್ಗೆ ಕಾಳಜಿವಹಿಸಿದ್ದ ಹಾಗೂ ಡಬ್ಬಿಂಗ್ ವಿರುದ್ಧದ ನಿರ್ಣಯಗಳನ್ನು ಕೈಗೊಂಡಿದ್ದ ಚಳುವಳಿಯ ಮುಂಚೂಣಿಯಲ್ಲಿದ್ದ ಎಲ್ಲ ನಾಯಕರೂ ಈ ಹೋರಾಟಕ್ಕೆ ಬೆಂಬಲವಿತ್ತರು. ಎಲ್ಲೋ ಕೆಲವು ಬೆರಳೆಣಿಕೆಯಲ್ಲಿದ್ದ ಡಬ್ಬಿಂಗ್ ಚಿತ್ರ ಸಾಹಿತ್ಯ ರಚಿಸುತ್ತಿದ್ದ ಚಿತ್ರಸಾಹಿತಿಗಳು ಹಾಗೂ ಕಂಠದಾನ ಕಲಾವಿದರು ಮಾತ್ರ ಡಬ್ಬಿಂಗ್ ಪರವಾಗಿದ್ದರು.

ಡಬ್ಬಿಂಗ್ ವಿರೋಧೀ ಅಲೆ ತೀವ್ರವಾಗಿ, ಡಬ್ಬಿಂಗ್ ಚಿತ್ರಗಳು ಸಂಪೂರ್ಣವಾಗಿ ನೆಲ ಕಚ್ಚುವುದರೊಂದಿಗೆ ಕನ್ನಡ ಚಿತ್ರಪ್ರಗತಿಗೆ ಮಾರಕವಾಗಿದ್ದ ಅನಿಷ್ಟ ಪದ್ಧತಿ ಹಾಗೆಯೇ ಕಮರಿ ಹೋಯಿತು.

ಅ.ನ.ಕೃ ನಿರ್ಗಮನದ ನಂತರ

ಈಗಾಗಲೇ ತಿಳಿಸಿದಂತೆ 'ಕಾಂಚೀ ತ್ತಲೈವಾನ್' ಚಿತ್ರ ಪ್ರಕರಣದಿಂದ ನೊಂದ ಅ.ನ.ಕೃ ಅವರು ಸಂಯುಕ್ತ ರಂಗಕ್ಕೆ ರಾಜೀನಾಮೆಯಿತ್ತು ಹೊರಬಂದರು.

ಕನ್ನಡ ಚಳುವಳಿಯನ್ನು ಎಲ್ಲ ರೀತಿಯಿಂದಲೂ ಮುಂದುವರೆಸುವ ಸಾಮರ್ಥ್ಯ ಹೊಂದಿದ್ದ ಮ.ರಾಮಮೂರ್ತಿಯವರು ಬೆ.ನಿ. ಈಶ್ವರಪ್ಪ, ಗೋವಿಂದ ರಾಜು, ಸಂಪಂಗಿ ರಾಮಯ್ಯ, ನಾ.ಕೃ. ಸತ್ಯನಾರಾಯಣ, ರಾಮದಾಸ್, ಎಂ. ರಾಮನ್,

ಕರ್ಲಮಂಗಲ ಶಂಕರಪ್ಪ ಮುಂತಾದವರೊಂದಿಗೆ ಸೇರಿ ತಮ್ಮ ಕಾರ್ಯವನ್ನು ಮುಂದುವರೆಸಿದರು.

ಕನ್ನಡದ ಸಮಸ್ಯೆಗಳು ಎಲ್ಲೇ ಇದ್ದರೂ ತಕ್ಷಣವೇ ಧಾವಿಸುತ್ತಿದ್ದ ರಾಮಮೂರ್ತಿಯವರು ಯುವ ಚಳುವಳಿಗಾರರಲ್ಲಿ ಸ್ಫೂರ್ತಿಯನ್ನು, ಆತ್ಮ ವಿಶ್ವಾಸವನ್ನು ತುಂಬುತ್ತಿದ್ದರು.

ಕನ್ನಡೇತರ ನಾಮಫಲಕಗಳಿಗೆ ಬಣ್ಣಬಳಿಯುವುದು ಮುಂತಾದ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದ ಯುವಕರ ಮೇಲೆ ಪೋಲೀಸರು ಕ್ರಮ ಕೈಗೊಳ್ಳುತ್ತಿದ್ದಾಗ, ಜಾಮೀನು ಕೊಟ್ಟು ಅವರನ್ನು ಬಿಡಿಸಿ ತರುತ್ತಿದ್ದವರೇ ರಾಮಮೂರ್ತಿಯವರು.

ಈ ಸಂದರ್ಭದಲ್ಲಿ ನಗರದ ಮೈಕೋ ಕಾರ್ಖಾನೆಯಲ್ಲಿ ಕನ್ನಡ ಉದ್ಯೋಗಿಗಳಿಗಿಂತ ತಮಿಳು ಕಾರ್ಮಿಕರೇ ಹೆಚ್ಚಾಗಿ ಕನ್ನಡಿಗರು ಎಷ್ಟೋ ಬಾರಿ ತಮಿಳರಿಂದ ಹಲ್ಲೆಗೊಳಗಾಗಿದ್ದರು. ಕನ್ನಡಿಗರ-ತಮಿಳರ ಸಂಘರ್ಷ ಜೋರಾಗಿ, ತಮಿಳು ಉದ್ಯೋಗಿಗಳು ಕೆಲವು ಕನ್ನಡ ಕಾರ್ಮಿಕರ ಮೇಲೆ ಪೋಲೀಸ್ ದೂರನ್ನಿತ್ತರು. ಪೋಲಿಸರು ಅವರನ್ನು ಬಂಧಿಸಿ ಕರೆದೊಯ್ದಾಗ, ಮಧ್ಯೆ ಪ್ರವೇಶಿಸಿದ ರಾಮಮೂರ್ತಿಯವರು, ಅಂದಿನ ಪೋಲೀಸ್ ಕಮೀಷನರ್ ಅವರ ಮಧ್ಯಸ್ಥಿಕೆಯಿಂದ ಜಾಮೀನು ಕೊಟ್ಟು ಬಿಡಿಸಿದ್ದರು.

❑

ವಾಟಾಳ್ ನಾಗರಾಜ್‌ರ ನಾಯಕತ್ವದ ಕನ್ನಡ ಚಳುವಳಿ

'ಸಂ'ಯುಕ್ತರಂಗ'ದ ಕನ್ನಡ ಚಳುವಳಿಯು ರಭಸದಲ್ಲಿ ಮುನ್ನಡೆಯುತ್ತಿದ್ದಾಗಲೇ, ವಾಟಾಳ್ ನಾಗರಾಜ್ ಅವರ ಪ್ರವೇಶವೂ ಆಯಿತು.

ಸಂಘಟನಾಚತುರರಾದ ಹಾಗೂ ತಮ್ಮ ಮಾತಿನ ಮೋಡಿಯಿಂದ ಜನ ಸಾಮಾನ್ಯರನ್ನು ಸಹ ಮರುಳುಮಾಡುವ ಶಕ್ತಿಯಿದ್ದ ವಾಟಾಳರು ಪ್ರಾರಂಭದಲ್ಲಿ ಅ.ನ.ಕೃ. ಮತ್ತು ರಾಮಮೂರ್ತಿಯವರೊಂದಿಗೆ ಸೇರಿ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. ನಂತರ ತಮ್ಮದೇ ಆದ ನಾಯಕತ್ವದಲ್ಲಿ ಗುಂಪು ಕಟ್ಟಿಕೊಂಡು ಜನಸಾಮಾನ್ಯರ ಸಂಘಟನೆ ಮಾಡತೊಡಗಿದರು.

ಚಿಕ್ಕಪೇಟೆ, ಚಾಮರಾಜಪೇಟೆ ಮುಂತಾದ ಪ್ರದೇಶಗಳ ಓಣಿಓಣಿಗಳಲ್ಲಿ ಸಂದಿಗೊಂದಿಗಳಲ್ಲಿ ಭಾಷಣಗಳನ್ನು ಮಾಡಿ ಜನರನ್ನು ಹುರಿದುಂಬಿಸಿದರು. ಹೋಟಲ್ ಕಾರ್ಮಿಕರು, ಆಟೋ ರಿಕ್ಷಾ ಚಾಲಕರು, ಉತ್ಸಾಹಿ ತರುಣರನ್ನು ಸಂಘಟಿಸಿದರು. ಅ. ಸಂಜೀವಪ್ಪ, ಜಿ. ನಾರಾಯಣ ಕುಮಾರ್, ಸ.ಕೃ. ಸಂಪಂಗಿ, ಸೋಸಲೆ ಜವರಯ್ಯ ಮುಂತಾದವರು ಇವರ ಜೊತೆಗಿದ್ದರು.

ಕೇವಲ ಕನ್ನಡ ಚಳುವಳಿಗೇ ಇವರ ಹೋರಾಟ ಮೀಸಲಾಗದೆ, ಅಂದಿನ ದಿನಗಳಲ್ಲಿ ದನಕರುಗಳಿಗೆ ದುರ್ಲಭವಾಗಿದ್ದ ಪಶು ಆಹಾರ (ಬೂಸಾ)ಕ್ಕಾಗಿ ಹೋರಾಟ, ನೀರಿನ ಸಮಸ್ಯೆಗೆ ಹೋರಾಟ ಮುಂತಾದ ಸಾಮಾನ್ಯ ಜನಪರ ಹೋರಾಟಗಳಲ್ಲಿಯೂ ತೊಡಗಿ, ಚಿಕ್ಕಪೇಟೆ ಕ್ಷೇತ್ರದ ಜನ ಸಾಮಾನ್ಯರಿಗೆಲ್ಲಾ, ಪರಿಚಿತರಾದರು.

ಅಲಂಕಾರ್ ಚಿತ್ರಮಂದಿರದ ಮುಂದೆ, ಕನ್ನಡ ಚಿತ್ರಪ್ರದರ್ಶನಕ್ಕಾಗಿ ಒತ್ತಾಯಿಸಲು ದಿನಾಂಕ ೭.೯.೬೨ರಂದು ಚಳುವಳಿ ನಿರತರಾಗಿದ್ದ ವಾಟಾಳ್‌ನಾಗರಾಜ್ ಅವರನ್ನು ಪೋಲೀಸರು ಬೂಟುಗಾಲಿನಿಂದ ಒದ್ದು, ತೀವ್ರವಾಗಿ ಥಳಿಸಿದರು. ಇದು ಅವರ ಹೋರಾಟದ ಪ್ರಥಮ ಹೆಜ್ಜೆಯೆನ್ನಬಹುದು.

ವಾಟಾಳ್ ನಾಗರಾಜರ ಕನ್ನಡ ಪರ ಹೋರಾಟಗಳ ಆರಂಭದಲ್ಲಿ ಬೆಂಗಳೂರಿನ ನಗರಸಭೆಯ ಮುಂದಿದ್ದ ಬ್ರಿಟಿಷರ ಸ್ಮಾರಕ ರಣಸ್ತಂಭವನ್ನು (ಸೆನೊಟಾಫ್) ತೆಗೆದು ಹಾಕಬೇಕೆಂಬ ಹೋರಾಟ ನಡೆಸಿದ್ದು ಒಂದು ಪ್ರಮುಖ ಮೈಲಿಗಲ್ಲೆಂದು ಹೇಳಬಹುದು.

೧೭೯೧ರಲ್ಲಿ ಬೆಂಗಳೂರಿನ ಕದನದಲ್ಲಿ ಮೈಸೂರಿನ ಸೈನ್ಯಕ್ಕೆ ಉಂಟಾದ ಪರಾಭವದ ಸಂಕೇತವಾಗಿ, ಚಾರಿತ್ರಿಕ ಸ್ಮಾರಕವಾಗಿ ೪೦ ಅಡಿ ಉದ್ದದ ಆ ರಣಸ್ತಂಭ ನಗರದ ಮಧ್ಯಭಾಗದಲ್ಲಿ, ನಗರಸಭೆಯ ಮುಂದೆಯೇ ನಿಂತಿತ್ತು.

ಬ್ರಿಟಿಷ್ ಸ್ಮಾರಕಗಳನ್ನು ತೆಗೆದುಹಾಕಬೇಕೆಂಬ ಹೋರಾಟ ತೀವ್ರವಾಗಿದ್ದ ಆ ದಿನಗಳಲ್ಲಿ ವಾಟಾಳ್ ನಾಗರಾಜ್ ಈ ಸಮಸ್ಯೆಯನ್ನು ಕೈಗೆತ್ತಿಕೊಂಡು ದಿನಾಂಕ ೨೦.೯.೧೯೬೪ರ ಮಧ್ಯಾಹ್ನ ನೂರಾರು ಯುವಕರ ಸಮೇತ ಮೆರವಣಿಗೆಯಲ್ಲಿ ನಡೆದರು. ಆದರೆ ಸ್ಮಾರಕಕ್ಕೆ ಸ್ವಲ್ಪ ದೂರದಲ್ಲಿಯೇ ಮೆರವಣಿಗೆಗಾರರನ್ನು ತಡೆದ ಪೋಲೀಸರು ಲಾಠೀ ಪ್ರಹಾರ ಮಾಡಿ ಪ್ರದರ್ಶನದಲ್ಲಿದ್ದ ವಾಟಾಳ್ ನಾಗರಾಜ್, ಅ.ಸಂಜೀವಪ್ಪ, ಸೋಸಲೆ ಜವರಯ್ಯ ಮುಂತಾದವರನ್ನು ಬಂಧಿಸಿದರು.

ಅದಾದ ಕೆಲವೇ ದಿನಗಳಲ್ಲಿ ಅಂದರೆ ೧.೧೧.೧೯೬೪ರ ರಾಜ್ಯೋತ್ಸವದಂದು ಪ್ರಜಾವಾಣಿಯ ಮುಖಪುಟದಲ್ಲಿ "ಎದ್ದು ನಿಂತ ಯಲಹಂಕ ಭೂಪಾಲ; ಬಿದ್ದು ಹೋದ ಬ್ರಿಟಿಷ್ ಸ್ಮಾರಕ" ಎಂಬ ಶೀರ್ಷಿಕೆಯ ಅಡಿಯಲ್ಲಿ ರಣಸ್ತಂಭ ಮಣ್ಣುಪಾಲಾದ ವಿಷಯ ಪ್ರಕಟವಾಯಿತು.

ಅದಕ್ಕೆ ಕೊಟ್ಟ ಕಾರಣ: ಅದೇ ದಿನ ಅಂದರೆ ೧.೧೧.೧೯೬೪ರಂದು ನಗರ ಸಭೆಯ ಮುಂದಿನ ಉದ್ಯಾನವನದಲ್ಲಿ ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಪ್ರತಿಮೆಯನ್ನು ಆಗಿನ ಮದ್ರಾಸ್ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಅನಾವರಣ ಮಾಡಿದ್ದು ಮತ್ತು ರಣಸ್ತಂಭವು ಪ್ರತಿಮೆಯ ನೇರ ನೋಟಕ್ಕೆ ಅಡ್ಡವಾಗಿತ್ತು ಎಂಬುದು.

ಕಾರಣ ಏನೇ ಇರಲಿ, ಬ್ರಿಟಿಷ್ ಸ್ಮಾರಕ ನೆಲಕ್ಕುರುಳಿತು. ಕೆಂಪೇಗೌಡರ ಪ್ರತಿಮೆ ತಲೆಯೆತ್ತಿತ್ತು.

ಅಂದಿನ ಸಮಾರಂಭದಲ್ಲಿ ಮೇಯರ್ ಆಗಿದ್ದ ಜಿ. ನಾರಾಯಣ ಅವರು ಮಾತನಾಡುತ್ತ, ನಗರದ ಮಧ್ಯದಲ್ಲಿದ್ದ ಸೆನೊಟಾಫ್ ಸ್ಮಾರಕ ಸ್ತಂಭವನ್ನು ಕಂಡಾಗಲೆಲ್ಲ ಬೆಂಗಳೂರಿನ ನಾಗರಿಕರು ಅವಮಾನದಿಂದ ತಲೆ ತಗ್ಗಿಸುವಂತಹ ಒಂದು ಪರಿಸ್ಥಿತಿ ಹೋಗಿ, ಅದಕ್ಕೆ ಬದಲು, ಅದೇ ಸ್ಥಳದಲ್ಲಿ ಇಂದು ನಮಗೆ

ಸ್ಫೂರ್ತಿ ನೀಡುವಂತಹ ಕೆಂಪೇಗೌಡರ ಪ್ರತಿಮೆಯನ್ನು ನೋಡಿ ಆನಂದಿಸುವ ಪರಿಸ್ಥಿತಿ ಬಂದಿರುವುದು ತುಂಬಾ ಸಂತೋಷದ ಸಂಗತಿ ಎಂದರು.

ವಾಟಾಳರ ಚಳುವಳಿ ಹಿಂದಿನ ಚಳುವಳಿಗಳಿಗಿಂತ ಸ್ವಲ್ಪ ಭಿನ್ನರೂಪ ತಳೆಯಿತು. ಕನ್ನಡ ಸಮಸ್ಯೆಗಳ ಜೊತೆ ಜೊತೆಗೆ ಜನರ ದೈನಂದಿನ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡತೊಡಗಿದ ವಾಟಾಳರು ಜನ ಸಾಮಾನ್ಯರ ದೃಷ್ಟಿಯಲ್ಲಿ "ಹೀರೊ" ಆದರು.

ರಸ್ತೆಗಳಲ್ಲಿ ಮಲಗಿ ವಾಹನ ಸಂಚಾರವನ್ನು ತಡೆಯುವುದು, ರೈಲುಕಂಬಿಗಳ ಮೇಲೆ ಮಲಗಿ ರೈಲು ತಡೆಯುವುದು, ಪಂಜಿನ ಮೆರವಣಿಗೆ ನಡೆಸುವುದು, ಇತ್ಯಾದಿ ಪ್ರತಿಭಟನೆ, ಪ್ರದರ್ಶನಗಳಿಂದ ಜನರನ್ನು ಆಕರ್ಷಿಸುವಲ್ಲಿ ಸಫಲವಾದರು.

ಈ ಚಳುವಳಿಗಳೊಂದಿಗೆ ಕನ್ನಡ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡಹತ್ತಿದರು. ಕನ್ನಡ ಚಿತ್ರ ಪ್ರದರ್ಶನಗಳಿಗಾಗಿ ಹೋರಾಟ, ಕನ್ನಡದ ನಾಮಫಲಕಗಳಿಗಾಗಿ ಹೋರಾಟ, ಗಡಿ ಸಮಸ್ಯೆ, ವಿಜಯನಗರದ ಉಕ್ಕು ಕಾರ್ಖಾನೆಗಾಗಿ ಪ್ರದರ್ಶನ, ಅಧಿಕ ರೈಲ್ವೆ ಸೌಲಭ್ಯಗಳಿಗಾಗಿ ಆಗ್ರಹ - ಹೀಗೆ ಒಂದೇ ಎರಡೇ - ಅವರ ಹೋರಾಟಗಳಿಗೆ ಕಾರಣಗಳು?

ಈ ಹೋರಾಟಗಳಲ್ಲಿ ಎಲ್ಲ ತರದ ಜನರನ್ನು ತಮ್ಮ ತೆಕ್ಕೆಗೆ ಸೇರಿಸಿಕೊಂಡ ವಾಟಾಳರು, ಸುಮಾರು ೧೯೬೫ರಲ್ಲಿ ಮ. ರಾಮಮೂರ್ತಿ ಮತ್ತಿತರರು ಮುಂದುವರೆಸಿಕೊಂಡು ಬಂದಿದ್ದ ಸಂಯುಕ್ತರಂಗದಿಂದ ಸಂಪೂರ್ಣವಾಗಿ ಪ್ರತ್ಯೇಕವಾದರು. ಕನ್ನಡಿಗರ ಸಂಘಟನೆಗೆ ಐಕ್ಯಮತ್ಯವೇ ಬುನಾದಿ, ಚಳುವಳಿ ಒಡೆಯಬಾರದೆಂದು ಕೆಲವರ, ಅದರಲ್ಲೂ ಮ. ರಾಮಮೂರ್ತಿ ಮುಂತಾದವರ, ಅಭಿಪ್ರಾಯಗಳಿಗೆ ಓಗೊಡಲಿಲ್ಲ. ತಮ್ಮ ಹಿಂಬಾಲಕರೊಂದಿಗೆ ಭಿನ್ನವಾದ ಅಸ್ತಿತ್ವವನ್ನು ಸಾರಿದರು.

ಹಿಂದಿನ ಚಳುವಳಿಗಿಂತಲೂ ಹೊರತಾದ ಹಾಗೂ ವ್ಯಾಪಕವಾದ ಹೋರಾಟವನ್ನು ಹೂಡುವುದಾಗಿ ಹೊರಟರು. ವಾಟಾಳರು ತಮ್ಮ ಮಾತುಗಾರಿಕೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಚಳುವಳಿಗಾರರ ಬೆಂಬಲ ಪಡೆದಿದ್ದರು. ಅ. ಸಂಜೀವಪ್ಪ, ಸ.ಕೃ. ಸಂಪಂಗಿ, ಜಿ. ನಾರಾಯಣ ಕುಮಾರ್ ಮುಂತಾದವರ ಬೆಂಬಲದೊಂದಿಗೆ ಮುಂದಿನ ಕಾರ್ಯಕ್ರಮಗಳತ್ತ ಸಾಗಿದರು.

ಆ ಮೊದಲು ಎರಡು ವರ್ಷಗಳಿಂದ ಒಂದೇ ಕಡೆ ಭವ್ಯವಾಗಿ ನಡೆಯುತ್ತಿದ್ದ ರಾಜ್ಯೋತ್ಸವ ೧೯೬೫ರ ನವೆಂಬರ್ ಒಂದರಿಂದ ಎರಡು ಕಡೆ ಅಂದರೆ ಸಂಯುಕ್ತ ರಂಗದ ರಾಜ್ಯೋತ್ಸವ (ಮೂರನೆಯದು) ಸುಭಾಷ್‌ನಗರದಲ್ಲೂ, ವಾಟಾಳರ ರಾಜ್ಯೋತ್ಸವ ಮೈಸೂರು ಬ್ಯಾಂಕಿನ ಬಳಿಯಲ್ಲಿಯೂ ನಡೆಯಲು ಆರಂಭವಾಯಿತು.

೧೯೬೭ರ ಹೊತ್ತಿಗೆ ಚಳುವಳಿಯನ್ನು ಒಂದು ಪಕ್ಷವಾಗಿ ಮಾರ್ಪಡಿಸಿದರೆ ರಾಜಕೀಯದಲ್ಲಿ ಮುನ್ನಡೆಯಲು ಸಹಕಾರಿಯಾಗುತ್ತದೆಂದು ಎರಡೂ ಬಣಗಳವರೂ ಅಂದರೆ ಮ. ರಾಮಮೂರ್ತಿ ಮತ್ತು ಸಂಗಡಿಗರು ಹಾಗೂ ವಾಟಾಳ್ ಸಂಗಡಿಗರು ಯೋಚನೆ ಮಾಡಲಾರಂಭಿಸಿದರು. ಇದಕ್ಕೆ ಮುಖ್ಯ ಕಾರಣ ತಮಿಳುನಾಡಿನಲ್ಲಿ ಡಿ.ಎಂ.ಕೆ. ಪಕ್ಷ ನಡೆಸುತ್ತಿದ್ದ ಹೋರಾಟ ಮತ್ತು ಅದು ಕಾಣುತ್ತಿದ್ದ ಪ್ರಗತಿ. ಅದರಿಂದ ಪ್ರಭಾವಿತರಾದ ಚಳುವಳಿ ನಾಯಕರೂ ಸಹ ಅದೇ ತಂತ್ರವನ್ನು ಅನುಸರಿಸಿದರೆ ಮಾತ್ರ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಅಲ್ಲದೆ, ಕನ್ನಡ ಹೋರಾಟಕ್ಕೆ ಬಲವಾದ ಶಕ್ತಿ ಬರುತ್ತದೆಂಬ ಭಾವನೆಯನ್ನು ಹೊಂದಿದ್ದರು.

ಈಗಾಗಲೇ ತಮ್ಮ ಪ್ರತ್ಯೇಕತೆಯನ್ನು ಸಾರಿದ್ದ ಎರಡೂ ಬಣಗಳವರೂ ಒಟ್ಟಾಗಿ ಒಂದು ಪಕ್ಷವಾಗುವುದಕ್ಕೆ ಆಸಕ್ತಿ ತೋರಿಸದೆ, ಎರಡು ಬೇರೆ ಪಕ್ಷಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಲು ನಿರ್ಧರಿಸಿದರು. ಈ ಪ್ರತ್ಯೇಕತೆಗೆ ಕೆಲವು ರಾಜಕೀಯ ಶಕ್ತಿಗಳೂ ತಮ್ಮ ಪ್ರಭಾವವನ್ನು ಬೀರಿದ್ದರು.

ಕನ್ನಡ ಪಕ್ಷ ಸ್ಥಾಪನೆ

ಕನ್ನಡದ ಅಸ್ತಿತ್ವಕ್ಕಾಗಿ ಕನ್ನಡಿಗರ ಹಿತರಕ್ಷಣೆಗಾಗಿ, ರಾಜಕೀಯ ಪಕ್ಷಗಳನ್ನು ನಂಬಿಕೊಂಡಿರುವುದು ಆಗದ ಕೆಲಸ ಎಂದು ಬಹುತೇಕ ಕನ್ನಡ ಚಳುವಳಿಗಾರರಲ್ಲಿ ಅಭಿಪ್ರಾಯವಾಗಿತ್ತು. ಒಂದು ರಾಜಕೀಯ ಪಕ್ಷ ಸ್ಥಾಪಿಸಿ, ತನ್ಮೂಲಕ, ಅಧಿಕಾರವನ್ನು ಹಿಡಿದರೇ ತಮ್ಮ ಗುರಿಸಾಧನೆಗೆ ದಾರಿ ಎಂದು ಅಭಿಪ್ರಾಯಪಟ್ಟು ರಾಮಮೂರ್ತಿ ಮತ್ತು ಸಂಗಡಿಗರು, ೧೯೬೭ರಲ್ಲಿ "ಕನ್ನಡ ಪಕ್ಷ"ವೆಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ವಾಟಾಳರು "ಕನ್ನಡ ಚಳುವಳಿ ಪಕ್ಷ"ವನ್ನು ಸ್ಥಾಪಿಸಿದರು. ಆ ಪಕ್ಷಗಳ ಮುಖಾಂತರ ಬೆಂಗಳೂರು ನಗರಸಭೆಯ ಚುನಾವಣೆಗೂ ನಿಂತರು.

ಚುನಾವಣೆಯಲ್ಲಿ ಪ್ರಚಾರ ಮುಖ್ಯ. ಪ್ರಚಾರಕ್ಕೆ ಹಣ ಮುಖ್ಯ. ಆದರೆ, ಹಣದ ಕೊರತೆಯಿದ್ದ ರಾಮಮೂರ್ತಿಯವರು, ತಮ್ಮದೇ ಆದ ಸಂಯುಕ್ತರಂಗದ ಕಾರ್ಯಕರ್ತರು ಹಾಗೂ ಕನ್ನಡ ಕಾರ್ಮಿಕರಿಂದ ಪ್ರಚಾರವನ್ನು ಕೈಗೊಂಡರೂ ಸಹ ಚುನಾವಣೆಯಲ್ಲಿ ಗೆಲ್ಲಲಾಗಲಿಲ್ಲ. ಇದು ಅವರ ಮನಸ್ಸಿಗೆ ಬಹಳವಾದ ಆಘಾತವನ್ನೇ ಉಂಟುಮಾಡಿತ್ತು.

ಆದರೂ ಎದೆಗುಂದದ ಅವರು ತಮ್ಮ ಚಟುವಟಿಕೆಯನ್ನು ಮುಂದುವರೆಸಿ ಕೊಂಡೇ ಹೋದರು.

ವಾಟಾಳ್ ನಾಗರಾಜ್ ಅವರು ಚಿಕ್ಕಪೇಟೆ ಕ್ಷೇತ್ರದಿಂದ ಕನ್ನಡ ಚಳುವಳಿ ಪಕ್ಷದ ನಗರಸಭೆ ಸದಸ್ಯರಾಗಿ ಗೆದ್ದು ಬಂದರು. ಹೀಗಾಗಿ ಪ್ರಥಮ ಪ್ರಯತ್ನದಲ್ಲಿಯೇ

ಗೆಲುವು ಸಾಧಿಸಿದ ಈ ಪಕ್ಷವು ಮುಂದಿನ ಹೋರಾಟಗಳಲ್ಲಿ ಮತ್ತಷ್ಟು ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಯಿತು.

ರಾಮಮೂರ್ತಿಯವರ ದುರಂತ ಮರಣ

ಜೀವನ ನಿರ್ವಹಣೆಗೆ ಏನಾದರೂ ಕಾರ್ಯದಲ್ಲಿ ತೊಡಗಬೇಕೆಂಬ ಉದ್ದೇಶದಿಂದ ರಾಮಮೂರ್ತಿಯವರು ನಗರದ ಹೊರವಲಯದ ತಲಘಟ್ಟಪುರದಲ್ಲಿ ತಮ್ಮ ತೋಟದ ಬಾವಿಯನ್ನು ತೋಡಿಸುತ್ತಿದ್ದರು. ೧೯೬೦ರ ಡಿಸೆಂಬರ್, ಕ್ರಿಸ್‌ಮಸ್ ಹಬ್ಬದ ದಿನ ಶಾಲೆಗೆ ರಜೆ ಇದ್ದ ತಮ್ಮ ಇಬ್ಬರು ಮಕ್ಕಳಾದ ದಿನಕರ ಮತ್ತು ಮಂಜು ಅವರೊಂದಿಗೆ ಬಾವಿಯ ಕೆಲಸ ನಡೆಯುತ್ತಿರುವುದನ್ನು ನೋಡಲು ಹೋದರು. ಬಾವಿಯ ಬಳಿ ಹೋಗಿ ನೀರು ಬರುವುದನ್ನು ನೋಡುತ್ತಿದ್ದ ರಾಮಮೂರ್ತಿಯವರು ನಿಂತಿದ್ದ ಭೂಮಿಯ ಭಾಗ ಕುಸಿದು ಅವರು ಭೂಸಮಾಧಿಯಾದರು. ಅವರೊಂದಿಗಿದ್ದ ಅವರ ವಂಶದ ಕುಡಿಗಳಾದ ದಿನಕರ ಮತ್ತು ಮಂಜು ಹಾಗೂ ಕೆಲಸದಾಳುಗಳೂ ಸಹ ಭೂಸಮಾಧಿಯಾದರು. ಹೀಗಾಗಿ ಕನ್ನಡಕ್ಕಾಗಿ ಅಹರ್ನಿಶಿ ದುಡಿದ ಜೀವವೊಂದು ಇನ್ನೂ ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿದ್ದ ಸಂದರ್ಭದಲ್ಲಿ ದೈವಾಧೀನರಾದುದು ಕನ್ನಡ ಚಳುವಳಿಯ ಚರಿತ್ರೆಯ ದುರಂತ ಅಧ್ಯಾಯಗಳಲ್ಲಿ ಒಂದೆಂದು ಹೇಳಬಹುದು.

ರಾಮಮೂರ್ತಿಯವರ ನಿಧನಾನಂತರ ಪ್ರಸಿದ್ಧ ಕಾದಂಬರಿಕಾರರಾದ ತ.ರಾ.ಸುಬ್ಬರಾಯರು (ತ.ರಾ.ಸು) ಕನ್ನಡ ಪಕ್ಷದ ಅಧ್ಯಕ್ಷರಾದರು.

ಬಾ.ಸು. ಕೃಷ್ಣಮೂರ್ತಿ, ಮೈ.ಸು. ಶೇಷಗಿರಿರಾವ್, ಮೈ.ಸು. ನಟರಾಜ, ವೀರಕೇಸರಿ ಲಕ್ಷ್ಮೀನಾರಾಯಣ, ರಾಮದಾಸ್, ಈಶ್ವರಪ್ಪ, ಶ್ರೀನಿವಾಸ ಮುಂತಾದವರು ತ.ರಾ.ಸು. ರವರ ನಾಯಕತ್ವದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕರ್ಲಮಂಗಲ ಶಂಕರಪ್ಪ, ಕ.ಮು.ಸಂಪಂಗಿರಾಮಯ್ಯ ಹಾಗೂ ಇನ್ನಿತರರು ಸಹ ಕನ್ನಡ ಪಕ್ಷ ಕಟ್ಟುವ ಕೆಲಸದಲ್ಲಿ ಕೈ ಜೋಡಿಸಿದರು.

ಆದರೆ ಜನತೆಯಿಂದ ನಿರೀಕ್ಷಿತ ಬೆಂಬಲ ಸಹಕಾರಗಳು ಪಕ್ಷಕ್ಕೆ ಅಷ್ಟಾಗಿ ಸಿಗಲಿಲ್ಲವಾದುದರಿಂದ ಆ ಪಕ್ಷದ ಚಟುವಟಿಕೆಗಳು ಹಾಗೆಯೇ ಕರಗಿಹೋದುದು ಕನ್ನಡ ಚಳವಳಿಯ ಮತ್ತೊಂದು ದುರಂತ.

ವಾಟಾಳರ ಮುಂದುವರಿದ ಹೋರಾಟಗಳು

ಬೆಂಗಳೂರು ನಗರ ಸಭೆಯ ಸದಸ್ಯರಾಗಿ ೧೯೬೦ರಲ್ಲಿ ಆಯ್ಕೆಯಾದ ವಾಟಾಳ್‌ನಾಗರಾಜರು ಮುಂದೆ ತುಂಬಾ ತೀವ್ರ ತರವಾಗಿ ಹೋರಾಟದಲ್ಲಿ ಮಿಂಚ ತೊಡಗಿದರು.

ಕನ್ನಡದ ಸಮಸ್ಯೆ, ಗಡಿ ಸಮಸ್ಯೆ, ಜನಸಾಮಾನ್ಯರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಯಾವುದಾದರೂ ಹೋರಾಟದಲ್ಲಿ ಭಾಗವಹಿಸಿ ನಿತ್ಯ ಸುದ್ದಿಯಾಗ ತೊಡಗಿದರು.

ಈಗಾಗಲೇ ತಿಳಿಸಿದಂತೆ, ರಸ್ತೆ ತಡೆ, ರೈಲು ತಡೆ, ಪಂಜಿನ ಮೆರವಣಿಗೆಗಳು ಇವರ ಹೋರಾಟದ ದಾರಿಯಾದುವು. ನಾಯಿಗಳ ಮೆರವಣಿಗೆ ಒಂದೆಡೆಯಾದರೆ, ಇನ್ನೊಂದೆಡೆ ಖಾಲಿ ಬಿಂದಿಗೆಗಳ ಪ್ರದರ್ಶನ, ಮತ್ತೊಂದೆಡೆ ಪೊರಕೆಗಳ ಮೆರವಣಿಗೆ, ಬೆಂಗಳೂರು ಬಂದ್‌ಗೆ ಕರೆ ಕೊಡುವುದು - ಇವರ ಸಾಮಾನ್ಯ ಕಾರ್ಯಕ್ರಮಗಳಾದವು.

ಬಂದ್‌ಗೆ ಕರೆಕೊಟ್ಟಾಗ ಪೋಲೀಸರಿಂದ ಆಗಬಹುದಾದ ಬಂಧನವನ್ನು ತಪ್ಪಿಸಿಕೊಳ್ಳಲು ಬುರ್ಕಾ ಹಾಕಿದ ಮುಸ್ಲಿಂ ಮಹಿಳೆ, ಬೈರಾಗಿ ವೇಷ, ಇತ್ಯಾದಿ ವೇಷಗಳನ್ನು ಧರಿಸಿ ಪೋಲೀಸರಿಗೆ ಚಳ್ಳೆ ಹಣ್ಣು ತಿನ್ನಿಸುವ ಪ್ರಯತ್ನ ಮಾಡುತ್ತಿದ್ದರು.

ಹೀಗಾಗಿ ಜನ ಸಮಾನ್ಯರ ಮನಸ್ಸಿನಲ್ಲಿ ಸದಾ ಮೂಡಿರಲು ಪ್ರಯತ್ನ ಪಡುತ್ತಿದ್ದ ವಾಟಾಳರು ೧೯೬೭ರಲ್ಲಿ ಪ್ರಥಮ ಬಾರಿಗೆ ರಾಜ್ಯ ವಿಧಾನ ಸಭೆಗೆ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಿಂದ ಅಭ್ಯರ್ಥಿಯಾಗಿ ನಿಂತರು. ಇವರಿಗೆ ವಿರುದ್ಧವಾಗಿ ಸ್ಪರ್ಧಿಸಿದ್ದವರು ನಗರದ ಮಾಜೀ ಮೇಯರ್ ಆಗಿದ್ದ ಕಾಂಗ್ರೆಸ್‌ನ ಶ್ರೀ ವೈ. ರಾಮಚಂದ್ರ ಅವರು.

ಚಿಕ್ಕಪೇಟೆ ಕ್ಷೇತ್ರದಲ್ಲಿ ಮನೆ ಮಾತಾಗಿದ್ದ ವಾಟಾಳರು ಅತಿ ಆಕರ್ಷಕ ರೀತಿಯಲ್ಲಿ ಪ್ರಚಾರವನ್ನು ಕೈಗೊಂಡರು. ಜನ ಸಾಮಾನ್ಯರ ಅಭ್ಯರ್ಥಿಯಾಗಿ ರೂಪುಗೊಂಡ ಅವರು ಹೆಚ್ಚಾಗಿ ಮಹಿಳೆಯರು ಹಾಗೂ ತರುಣರ ಮತಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಯಶಸ್ವಿಯಾದರು. ಕ್ಷೇತ್ರದ ಸಂದಿಗೊಂದಿಗಳಲ್ಲಿ ಅತಿ ಉತ್ಸಾಹದಿಂದ ಎಳೆಯರು, ತರುಣರು, ಇವರನ್ನು ಸ್ವಾಗತಿಸಿ ಇವರ ಪರ ಪ್ರಚಾರ ಕೈಗೊಂಡರು. ಹಲವು ಕಡೆಗಳಲ್ಲಿ ಜನ ತಾವೇ ಸ್ವತಃ ಕೈಯಿಂದ ಹಣ ಖರ್ಚುಮಾಡಿದರು. ನೋಟುಗಳ ಹಾರವನ್ನು ಹಾಕಿದರು. ಇವರ ಚುನಾವಣಾ ಚಿಹ್ನೆಯಾಗಿದ್ದ 'ತಕ್ಕಡಿ' ಗುರ್ತನ್ನು ಮನೆಮನೆಗೆ ಪ್ರಚಾರ ಮಾಡಿ ವಾಟಾಳರ ಗೆಲುವನ್ನು ಸುಲಭಗೊಳಿಸಿದರು.

ಹೀಗಾಗಿ ರಾಷ್ಟ್ರೀಯ ಪಕ್ಷವೊಂದರ ಅಭ್ಯರ್ಥಿ ವೈ. ರಾಮಚಂದ್ರ ಅವರನ್ನು ಆಗತಾನೇ ಹುಟ್ಟಿದ್ದ ಕನ್ನಡ ಚಳುವಳಿ ಪಕ್ಷದ ಅಭ್ಯರ್ಥಿ ವಾಟಾಳ್‌ನಾಗರಾಜ್ ಸೋಲಿಸಿದ್ದು ಅಂದಿಗೆ ಒಂದು ಮಹತ್ತರ ವಿಷಯವಾಗಿತ್ತು.

ವಿಧಾನ ಸಭಾ ಸದಸ್ಯರಾದ ನಂತರ ವಾಟಾಳರ ಆತ್ಮಸ್ಥೈರ್ಯ ಹೆಚ್ಚಾಯಿತು. ವಿಧಾನ ಸಭೆಯಲ್ಲಿ ಮೊಟ್ಟ ಮೊದಲಿಗೆ ಕನ್ನಡದ ಧ್ವನಿ ಎಲ್ಲರಿಗೆ ಕೇಳುವಂತೆ ಮಾಡಿದವರಲ್ಲಿ ಮೊದಲಿಗರು ವಾಟಾಳ್ ಎಂದು ಹೇಳಬಹುದು. ಕರ್ಣಾಟಕ ಮಹಾರಾಷ್ಟ್ರ ಗಡಿವಿವಾದದಲ್ಲಿ ಮಹಾಜನ ವರದಿಯನ್ನು ಒಪ್ಪಿ ಜಾರಿಗೆ ತರಲೇ ಬೇಕೆಂದು ದೆಹಲಿಯ ಸಂಸತ್ ಭವನದ ಮುಂದೆ ಬಂಗಾರಪ್ಪನವರ ಜೊತೆ ಸೇರಿ ಪ್ರದರ್ಶನ ನಡೆಸಿದರು.

ಅಂತೆಯೇ ಮಹಾಜನ್ ವರದಿಯಲ್ಲಿ ಸೇರಿರದ ತಮಿಳುನಾಡಿನಲ್ಲಿ ಸೇರಿದ್ದ ತಾಳವಾಡಿ ಹೊಸೂರುಗಳನ್ನು ಕರ್ಣಾಟಕಕ್ಕೆ ಸೇರಿಸಬೇಕೆಂದು ಚಳುವಳಿ ಮಾಡಿದ ವಾಟಾಳರು ತಾಳವಾಡಿ ಮುತ್ತಿಗೆ ಕಾರ್ಯಕ್ರಮ ಹಮ್ಮಿಕ್ರೊಂಡು ತಾಳವಾಡಿಗೆ ಹೋದರು. ಅಲ್ಲಿ ಅವರ ಬಂಧನವಾಯಿತು. ತಮಿಳುನಾಡಿನಲ್ಲಿ ಅಂದಿನ ಮುಖ್ಯಮಂತ್ರಿ ಎಂ. ಕರುಣಾನಿಧಿ. ವಾಟಾಳರ ಬಂಧನಕ್ಕೆ ತಕ್ಷಣವೇ ತೀವ್ರವಾಗಿ ಪ್ರತಿಭಟಿಸಿದ ಕನ್ನಡಿಗರು ಬೆಂಗಳೂರಿನಲ್ಲಿ ವಿರೋಧ ಪ್ರದರ್ಶನಗಳನ್ನೇರ್ಪಡಿಸಿದರು. ಕನ್ನಡಿಗರ ಹಾಗೂ ತಮಿಳರ ಮಧ್ಯೆ ಹೋರಾಟವೇ ನಡೆಯಿತೆನ್ನಬಹುದು. ನಗರದ ಗಾಂಧೀನಗರ, ಮೆಜೆಸ್ಟಿಕ್ ಪ್ರದೇಶಗಳಲ್ಲಿ ಹೆಚ್ಚಿನ ಪರಿಣಾಮ ಬೀರಿತು. ಅಲ್ಲಲ್ಲಿ ಸಭೆ ಪ್ರದರ್ಶನಗಳು ನಡೆದುವು. ಕನ್ನಡದ ಜನಪ್ರಿಯ ನಟರಾಗಿದ್ದ ಕಲಾಕೇಸರಿ ಉದಯಕುಮಾರ್ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ತಮಿಳರ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸಿದರು. ಚಳುವಳಿ ಪರಾಕಾಷ್ಠೆಯನ್ನು ತಲುಪುವ ಹಂತವನ್ನು ಗಮನಿಸಿದ ತಮಿಳುನಾಡು ಸರ್ಕಾರ ವಾಟಾಳರನ್ನು ಬಿಡುಗಡೆ ಮಾಡಿತು. ಚಳುವಳಿ ನಿಂತಿತು.

ಈ ಸಂದರ್ಭದಲ್ಲಿ ವಿವಿಧ ಪಕ್ಷಗಳಲ್ಲಿದ್ದ ಕನ್ನಡದ ರಾಜಕೀಯ ನಾಯಕರು ಕನ್ನಡಿಗರ ಪರ ನಿಲ್ಲಲಿಲ್ಲ. ತಮಿಳರ ವಿರುದ್ಧ ಚಕಾರವೆತ್ತಲಿಲ್ಲ. ಅವರ ದೃಷ್ಟಿಯೆಲ್ಲ ಮುಂದೆ ಬರಲಿದ್ದ ನಗರಸಭೆಯ ಚುನಾವಣೆಗಳ ಮೇಲಿತ್ತು.

ಬೆಂಗಳೂರು ನಗರ ಸಭೆಗೆ ಕನ್ನಡ ಹೋರಾಟಗಾರರ ಆಯ್ಕೆ

೧೯೭೦ರ ಡಿಸಂಬರ್‌ನಲ್ಲಿ ಬೆಂಗಳೂರು ನಗರಸಭೆಗೆ ಚುನಾವಣೆಗಳ ಬಗ್ಗೆ ಪ್ರಕಟಣೆ ಹೊರ ಬೀಳುತ್ತಿದ್ದಂತೆಯೇ ಕನ್ನಡ ಸಂಘಟನೆಗಳು ನೇರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ತೀರ್ಮಾನಿಸಿದುವು.

ಈಗಾಗಲೇ ಎರಡು ಬಣಗಳಾಗಿದ್ದ ವಾಟಾಳರ ಕನ್ನಡ ಚಳುವಳಿ ಪಕ್ಷ ಹಾಗೂ ದಿ॥ ರಾಮಮೂರ್ತಿಯವರು ಸ್ಥಾಪಿಸಿದ್ದ ಕನ್ನಡ ಪಕ್ಷಗಳು ಪ್ರತ್ಯೇಕವಾಗಿ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿದ್ದವು.

ಕನ್ನಡ ಪಕ್ಷದ ಅಭ್ಯರ್ಥಿಯಾಗಿದ್ದ ಮು. ಗೋವಿಂದರಾಜುರವರು ಚುನಾವಣೆಗೆ ಹಿಂದಿನ ಭಾನುವಾರವೇ, ರೈಲು ತಡೆ ಚಳುವಳಿಯಲ್ಲಿ ಮರಣಹೊಂದಿ ಆ ಕ್ಷೇತ್ರದ ಚುನಾವಣೆ ಮುಂದೂಡಲ್ಪಟ್ಟಿತು.

ಉಳಿದ ಕ್ಷೇತ್ರಗಳಲ್ಲಿ ಚುನಾವಣೆ ನಡೆದು, ವಾಟಾಳ್ ನಾಗರಾಜ್ (ಚಿಕ್ಕಪೇಟೆ) ಜಿ. ನಾರಾಯಣ ಕುಮಾರ್ (ಅರಳೇ ಪೇಟೆ) ರಾಮದಾಸ್ (ನಾಗಪ್ಪ ಬ್ಲಾಕ್) ರಾಮಕೃಷ್ಣ (ಶ್ರೀರಾಮಪುರ) ಕೆ. ಪ್ರಭಾಕರರೆಡ್ಡಿ (ಚಾಮರಾಜಪೇಟೆ) ಲಕ್ಕಣ್ಣ (ಗಾಯತ್ರಿನಗರ) ಇವರುಗಳು ಆಯ್ಕೆಯಾದರು.

ಗಣನೀಯ ಸಂಖ್ಯೆಯಲ್ಲಿ ಹೋರಾಟಗಾರರು ಮೊಟ್ಟ ಮೊದಲ ಬಾರಿಗೆ ನಗರ ಸಭೆಗೆ ಆಯ್ಕೆಯಾದರು. ನಗರ ಸಭೆಯಲ್ಲಿ ಸ್ವಲ್ಪಮಟ್ಟಿನ ಕನ್ನಡದ ವಾತಾವರಣ ಉಂಟಾಯಿತು.

೧೯೬೭ರಲ್ಲಿ ಮೊಟ್ಟ ಮೊದಲಿಗೆ ವಿಧಾನ ಸಭೆಗೆ ಕನ್ನಡದ ಅಭ್ಯರ್ಥಿಯಾಗಿ ಜಯಿಸಿದ ವಾಟಾಳರು, ನಂತರ ೧೯೭೦ರಲ್ಲಿ, ನಗರ ಸಭೆಗೆ ಕನ್ನಡದ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದು ಚಳುವಳಿಗೆ ಸ್ಫೂರ್ತಿ ತಂದುಕೊಟ್ಟಿತಾದರೂ ಮುಂದೆ ನಡೆದ ವಿದ್ಯಮಾನಗಳು ಅಷ್ಟೊಂದು ಆಶಾದಾಯಕವಾಗಿರಲಿಲ್ಲ.

೧೯೭೨ರಲ್ಲಿನ ಸಾರ್ವತ್ರಿಕ ಚುನಾವಣೆಯಲ್ಲಿ ವಾಟಾಳರು ಚಾಮರಾಜಪೇಟೆ ಕ್ಷೇತ್ರದಿಂದ ಅಭ್ಯರ್ಥಿಯಾಗಿ ನಿಂತು ಜಯಶಾಲಿಯಾದರು. ಅವರ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸಿನ ದಯಾನಂದ ಸಾಗರ್ ಪರಾಭವ ಹೊಂದಿದರು. ಆದರೆ ಸಾಗರ್ ಅವರು ತಮ್ಮ ಸೋಲನ್ನು ಸುಲಭವಾಗಿ ಒಪ್ಪಿಕೊಳ್ಳದೆ, ವಾಟಾಳರ ಆಯ್ಕೆಯನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದರು.

ವಾಟಾಳರ ದುರಾದೃಷ್ಟ, ಅವರ ನಿಕಟವರ್ತಿಯಾಗಿ ಕೆಲಸ ಮಾಡುತ್ತಿದ್ದ ಸ.ಕೃ. ಸಂಪಂಗಿಯವರು ದಯಾನಂದಸಾಗರ್ ಅವರ ರಿಟ್ ಅರ್ಜಿಗೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಪುರಾವೆಗಳನ್ನು ಒದಗಿಸಿಕೊಟ್ಟರು.

ಕೂಲಂಕುಷ ವಿಚಾರಣೆ ನಡೆಸಿದ ಹೈಕೋರ್ಟ್ ವಾಟಾಳರ ಆಯ್ಕೆಯನ್ನು ಅನೂರ್ಜಿತಗೊಳಿಸಿ, ಆರು ವರ್ಷಗಳ ಕಾಲ ಅವರು ಚುನಾವಣೆಯಲ್ಲಿ ನಿಲ್ಲಕೂಡದೆಂದು ತೀರ್ಪುನೀಡಿತು. ದಯಾನಂದ ಸಾಗರ್ ಅವರು ಆಯ್ಕೆಯಾಗಿದ್ದಾರೆಂದು ಹೈಕೋರ್ಟ್ ಘೋಷಿಸಿತು.

ಆದರೆ ವಾಟಾಳರು ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಅರ್ಜಿಸಲ್ಲಿಸಿದರು. ಅಲ್ಲಿ ವಾಟಾಳ್‌ರಿಗೆ ಸಂಬಂಧಿಸಿದ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿಯಲಾಯಿತು. ಆದರೆ ದಯಾನಂದ ಸಾಗರ್ ಅವರು ಆಯ್ಕೆಯಾದರೆಂದು

ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಪಡಿಸಿದ ಸುಪ್ರೀಂ ಕೋರ್ಟ್ ಚಾಮರಾಜಪೇಟೆ ಕ್ಷೇತ್ರದಿಂದ ಮರು ಚುನಾವಣೆ ನಡೆಸಲು ಆದೇಶ ನೀಡಿತು.

ಹೀಗಾಗಿ ಮುಂದಿನ ಆರು ವರ್ಷಗಳು ವಾಟಾಳರು ಚುನಾವಣೆಗೆ ನಿಲ್ಲುವ ಅವಕಾಶವನ್ನು ಕಳೆದುಕೊಂಡರು.

ಚಾಮರಾಜಪೇಟೆ ಕ್ಷೇತ್ರದ ಮರು ಚುನಾವಣೆ - ಪ್ರಭಾಕರ ರೆಡ್ಡಿ ಆಯ್ಕೆ

ಸುಪ್ರೀಂಕೋರ್ಟ್‌ನ ಆದೇಶದಂತೆ ೧೯೭೭ರಲ್ಲಿ ಚಾಮರಾಜಪೇಟೆ ಕ್ಷೇತ್ರದಿಂದ ಮರುಚುನಾವಣೆಗೆ ಪ್ರಕಟಣೆಯಾದಾಗ ವಾಟಾಳರು ಕೆ. ಪ್ರಭಾಕರರೆಡ್ಡಿಯವರನ್ನು ಅಭ್ಯರ್ಥಿಯಾಗಿ ನಿಲ್ಲಿಸಿದರು.

ಚಾಮರಾಜಪೇಟೆ ನಗರ ಸಭಾಕ್ಷೇತ್ರದಿಂದ ನಗರ ಸಭೆಗೆ ಆಯ್ಕೆಯಾಗಿದ್ದ ಕೆ. ಪ್ರಭಾಕರ ರೆಡ್ಡಿ ಈ ಉಪಚುನಾವಣೆಯಲ್ಲಿ ಜಯಶಾಲಿಯಾದರು.

ಆದರೆ ಕೆಲವೇ ದಿನಗಳಲ್ಲಿ ವಾಟಾಳ್ ಹಾಗೂ ಪ್ರಭಾಕರ ರೆಡ್ಡಿಯವರ ಬಾಂಧವ್ಯಕ್ಕೆ ಧಕ್ಕೆಯೊದಗಿ ಇಬ್ಬರೂ ಬೇರೆಯಾದರು. ಪ್ರಭಾಕರ ರೆಡ್ಡಿಯವರು ತಮ್ಮದೇ ಆದ ಚಳುವಳಿಗಾರರ ಗುಂಪನ್ನು ಕಟ್ಟಿದರು. ಹಾಗೂ ೧೯೭೮ರಲ್ಲಿ ವಿಧಾನಸಭೆಗೆ ಜನತಾ ಪಕ್ಷದ ಸಹಕಾರದೊಂದಿಗೆ ಅಭ್ಯರ್ಥಿಯಾದರು. ಆದರೆ ವಿಜಯಿಯಾಗಲಿಲ್ಲ. ಮರುಚುನಾವಣೆ ನಡೆದಾಗ ವಾಟಾಳರು ತಮ್ಮನ್ನು ಚಾಮರಾಜಪೇಟೆ ಕ್ಷೇತ್ರದಿಂದ ಅಭ್ಯರ್ಥಿಯಾಗಿ ನಿಲ್ಲಿಸಬಹುದೆಂಬ ನಿರೀಕ್ಷೆಯನ್ನಿಟ್ಟುಗೊಂಡಿದ್ದ ಜಿ.ನಾರಾಯಣ ಕುಮಾರ್ ಅವರು, ತಮಗೆ ಸೀಟು ಸಿಗದಾದಾಗ ಬೇಸರಗೊಂಡು ವಾಟಾಳರಿಂದ ಪ್ರತ್ಯೇಕಗೊಂಡರು. ಹಾಗೂ ತಮ್ಮದೇ ಆದ ಗುಂಪನ್ನು ಕಟ್ಟಿದರು. ತಮ್ಮ ನಾಯಕತ್ವದಲ್ಲಿ ಚಳುವಳಿಯನ್ನು ಮುಂದುವರೆಸಿದರು. ಅಲ್ಲದೆ ಅಂದಿನಿಂದ ಕನ್ನಡ ರಾಜ್ಯೋತ್ಸವವನ್ನು ಮೈಸೂರು ಬ್ಯಾಂಕ್ ಬಳಿಯ ಸೆಂಟ್ರಲ್ ಹೈಸ್ಕೂಲಿನ ಮುಂಭಾಗದ ಆವರಣದಲ್ಲಿ, "ಪುಲಿಕೇಶಿ ಮಂಟಪ"ದಲ್ಲಿ ಪ್ರತ್ಯೇಕವಾಗಿ ಆಚರಿಸಲಾರಂಭಿಸಿದರು.

ಹೀಗೆ ಪ್ರಭಾಕರ ರೆಡ್ಡಿ ಮತ್ತು ಜಿ. ನಾರಾಯಣಕುಮಾರ್ ಇವರುಗಳೂ ವಾಟಾಳ್‌ರಿಂದ ದೂರವಾಗಿ ಪ್ರತ್ಯೇಕ ಗುಂಪುಗಳಾದರು.

ಇದು ಕನ್ನಡ ಚಳುವಳಿಯ ಹಿನ್ನಡೆಗೆ ಕಾರಣವಾಯಿತು. ಕನ್ನಡಿಗರಿಗೆ ಯಾವ ಶಾಪವೋ ತಿಳಿಯದು. ಕನ್ನಡಿಗರ ಅಭ್ಯುದಯಕ್ಕೆ, ಕನ್ನಡಿಗರ ಹೋರಾಟಕ್ಕೆ ಆಶಾಕಿರಣವಾಗಿದ್ದ ಪರಿಸ್ಥಿತಿ ನಿರ್ಮಾಣವಾಗಿದ್ದ ಸಂಧಿಕಾಲದಲ್ಲಿ, ಪ್ರಬಲವಾಗಿ ಬೆಳೆದಿದ್ದ ಚಳುವಳಿ, ಹಲವಾರು ಕಾರಣಗಳಿಂದ ಛಿದ್ರ ಛಿದ್ರವಾಗಿದ್ದು ಘೋರ ದುರಂತವೆಂದೇ ಹೇಳಬಹುದು.

ಛಲ ಬಿಡದ ತ್ರಿವಿಕ್ರಮನಂತೆ ಸದಾ ಯಾವುದಾದರೂ ಹೋರಾಟವನ್ನು ಹಮ್ಮಿಕೊಳ್ಳುವುದರಲ್ಲಿ ನಿಸ್ಸೀಮರಾದ ವಾಟಾಳರು ಬೆಂಗಳೂರಿನಿಂದ ತಮ್ಮ ಕಾರ್ಯಕ್ಷೇತ್ರವನ್ನು ಚಾಮರಾಜನಗರಕ್ಕೆ ವಿಸ್ತರಿಸಿಕೊಂಡು ಅಲ್ಲಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು. ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡರು. ವಿಧಾನ ಸಭೆಯಲ್ಲಿ ಕನ್ನಡದ ಪ್ರಶ್ನೆ ಬಂದಾಗ ಬೇರೆ ಎಲ್ಲ ಸದಸ್ಯರಿಗಿಂತ ಭಿನ್ನವಾದ ರೀತಿಯಲ್ಲಿ ಕನ್ನಡದ ಹಿತವನ್ನು ಕಾಪಾಡುವುದರಲ್ಲಿ ವಾಟಾಳ್ ಅವರು ಸೈ ಎನಿಸಿದ್ದಾರೆ.

೧೯೬೦ರ ದಶಕದ (೧೯೬೦ ರಿಂದ ೧೯೭೦ ರ ವರೆಗಿನ ಹೋರಾಟ) ಚಳುವಳಿಯಲ್ಲಿ ಸಾಕಷ್ಟು ಏಳು ಬೀಳುಗಳಾಗಿದ್ದರೂ, ಕನ್ನಡದ ಪ್ರಜ್ಞೆಯನ್ನು ಜಾಗೃತಗೊಳಿಸುವ ಕೆಲಸವಂತೂ ನಡೆಯಿತು. ಚಳುವಳಿಯ ನಾಯಕರು ಒಂದಿಲ್ಲೊಂದು ಕಾರಣದಿಂದ ಪ್ರತ್ಯೇಕಗೊಂಡರೂ, ರಾಜಕೀಯಕ್ಕೆ ಹೊರಳಿದರೂ, ಜನಸಾಮಾನ್ಯರಲ್ಲಿ ಕನ್ನಡದ ಎಚ್ಚರ, ಆಸಕ್ತಿ, ಅಭಿಮಾನ ಮೂಡಿಸುವಲ್ಲಿ ಅವರೆಲ್ಲರೂ ನೆರವಾಗಿದ್ದಾರೆ. ಕನ್ನಡದ ಪ್ರಜ್ಞೆ ಜಾಗೃತಿಗೊಳಿಸುವ ಕಾರ್ಯದಲ್ಲಿ ಅನೇಕ ನಿಷ್ಠಾವಂತ ಕಾರ್ಯಕರ್ತರು ತಮ್ಮ ತನು ಮನ ಧನಗಳನ್ನರ್ಪಿಸಿ ಸ್ವಾರ್ಥವನ್ನು ಬದಿಗೊತ್ತಿ ಕನ್ನಡ ಕಾಯಕದಲ್ಲಿ ತೊಡಗಿದ್ದಾರೆ.

❑

ಕನ್ನಡದ ಬಾವುಟ

ಅರವತ್ತರ ದಶಕದಲ್ಲಿ ಅ.ನ.ಕೃ., ರಾಮಮೂರ್ತಿಯವರ ನಾಯಕತ್ವದಲ್ಲಿ ಸಂಘಟನೆಯಾಗಿದ್ದ ಕನ್ನಡ ಚಳುವಳಿಯ ಸಂಯುಕ್ತರಂಗದ ಬಹಿರಂಗ ಸಭೆಗಳಲ್ಲಿ ಸಾಮಾನ್ಯವಾಗಿ ಕೇಳಿ ಬರುತ್ತಿದ್ದ ಹಾಡು "ಏರಿಸಿ ಹಾರಿಸಿ ಕನ್ನಡದ ಬಾವುಟ". ಆದರೆ ಬಾವುಟವೇ ಹಾರದೆ ಕೇಳುತ್ತಿದ್ದ ಪಿ. ಕಾಳಿಂಗರಾಯರ ಮಧುರ ಕಂಠದ ಈ ಗೀತೆಯನ್ನು ರಚಿಸಿದ ಕೀರ್ತಿ ಕನ್ನಡ ಚಳುವಳಿಯ ಆದ್ಯ ಪ್ರವರ್ತಕರೆನ್ನ ಬಹುದಾದ ಬಿ.ಎಂ.ಶ್ರೀಕಂಠಯ್ಯನವರದು.

ಕನ್ನಡದ ಕಣ್ವರೆನಿಸಿದ್ದ ಶ್ರೀ ಬಿ.ಎಂ.ಶ್ರೀಕಂಠಯ್ಯನವರು ೧೯೩೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಸಂದರ್ಭ. ಆಗ ಅವರಿಂದ "ಕನ್ನಡ ಬಾವುಟ" ಎಂಬ ಕಾವ್ಯ ಸಾಹಿತ್ಯದ ಕೆಲವು ಉತ್ಕೃಷ್ಟ ರಚನೆಗಳನ್ನು ಸೇರಿಸಿದ ಒಂದು ಸಂಕಲನವನ್ನು ಪ್ರಕಟಿಸಲಾಯಿತು. ಶಾಸನಗಳು, ಪೂರ್ವ ಸಾಹಿತ್ಯ, ನಾಡಪದಗಳು ಮತ್ತು ಇಂದಿನ ಹೊಸ ಕವಿತೆ ಎಂಬ ನಾಲ್ಕು ಭಾಗಗಳನ್ನು ಹೊಂದಿದ್ದ ಈ ಸಂಕಲನದಂತಹ ಪ್ರಕಟಣೆ ಆದುವರೆಗೆ ಬಂದಿರಲಿಲ್ಲ.

ತಮ್ಮ ಗೀತೆಯಲ್ಲಿ ಶ್ರೀಯವರು ಕನ್ನಡದ ಬಾವುಟ ಕನ್ನಡಿಗರ ಕೆಚ್ಚೆದೆಯ ಬಾವುಟವಾಗಿರಬೇಕೆಂಬುದನ್ನು "ಏರಿಸಿ ಹಾರಿಸಿ ಕನ್ನಡದ ಬಾವುಟ ! ಹಾರಿಸಿ, ತೋರಿಸಿ ಕೆಚ್ಚೆದೆಯ ಬಾವುಟ" ಎಂದು ವರ್ಣಿಸಿದ್ದಾರೆ.

ದಿನಾಂಕ ೪.೨.೧೯೬೨ರಂದು ನಗರದ ವಾಣಿಜ್ಯ ಭವನದಲ್ಲಿ ನಡೆದ ಕನ್ನಡಿಗರ ಸಮ್ಮೇಳನ ಕನ್ನಡದ ಬಾವುಟವನ್ನು ಹಾರಿಸುವುದರೊಂದಿಗೆ ಆರಂಭವಾಯಿತು. ಬಹುಶಃ ಅದೇ ಬಾವುಟವು ಮೊಟ್ಟ ಮೊದಲನೆಯ ಬಾವುಟ (ಅಂದರೆ ಚಳುವಳಿಯ ಉದ್ದೇಶಕ್ಕೆ ಪೂರಕವಾದ ಬಾವುಟ) ವೆಂದು ಒಂದು ಅನಿಸಿಕೆ.

ಕನ್ನಡ ಚಳುವಳಿಯ ನಾಯಕರಾದ ವಾಟಾಳ್ ನಾಗರಾಜ್ ಅವರು ತಮ್ಮ ಚಳುವಳಿಯಲ್ಲಿ ಬಳಸುತ್ತಿದ್ದ ಬಾವುಟ ಹಳದಿ ಬಣ್ಣದ ಹಿನ್ನೆಲೆಯಲ್ಲಿದ್ದು ಕೆಂಪು ಬಣ್ಣದ ಕರ್ನಾಟಕ ನಕ್ಷೆಯನ್ನು ಹೊಂದಿತ್ತು. ನಕ್ಷೆಯ ನಡುವೆ ಏಳು ಕವಲೊಡೆದ ಹಸಿರುತೆನೆ ಇತ್ತು.

ಹಳದಿ ಹಾಗೂ ಕೆಂಪು ಬಣ್ಣಗಳು ಸ್ನೇಹ ಹಾಗೂ ಸಂಘರ್ಷವನ್ನೂ, ಹಸಿರು ತೆನೆಯ ಏಳು ಕವಲುಗಳು ಕನ್ನಡಿಗರು ಸಪ್ತ ಸಾಮ್ರಾಜ್ಯಗಳನ್ನು ಗೆದ್ದ ದ್ಯೋತಕವಾಗಿತ್ತು.

ನಂತರ ಬಂದಿತು ಕೆಂಪು ಹಳದಿ ಬಣ್ಣದ ಬಾವುಟ. ಈಗ ಕನ್ನಡದ ಯಾವುದೇ ಹೋರಾಟವಾದರೂ ಅಲ್ಲಿ ಈ ಬಾವುಟ ಇರಲೇಬೇಕು. ಕನ್ನಡ ಶಕ್ತಿಯ ದ್ಯೋತಕ ಕನ್ನಡ ಭಕ್ತಿಯ ದ್ಯೋತಕ - ಈ ಹಳದಿ ಕೆಂಪು ಬಣ್ಣದ ಬಾವುಟ.

ಈ ದ್ವಿವರ್ಣದ ಬಾವುಟ ಬಂದದ್ದಾದರೂ ಹೇಗೆ?

ಅ.ನ.ಕೃ. ರವರು ಕೆಲವು ತಾತ್ವಿಕ ಕಾರಣಗಳಿಂದ ಕನ್ನಡ ಚಳುವಳಿಯಿಂದ ದೂರ ಸರಿದ ಮೇಲೆ ಕನ್ನಡದ ಸೇನಾನಿ ಮ. ರಾಮಮೂರ್ತಿಯವರು ತಮ್ಮ ಹಲವಾರು ಬೆಂಬಲಿಗರೊಂದಿಗೆ ಚಳುವಳಿಯನ್ನು ಮುಂದುವರೆಸಿಕೊಂಡು ಬಂದುದು ತಿಳಿದೇ ಇದೆ.

ಕನ್ನಡದ ಅಸ್ತಿತ್ವಕ್ಕಾಗಿ ಕನ್ನಡಿಗರ ಹಿತರಕ್ಷಣೆಗಾಗಿ ರಾಜಕೀಯ ಪಕ್ಷಗಳನ್ನು ನಂಬಿಕೊಂಡಿರುವುದು ಆಗದ ಕೆಲಸ. ಕನ್ನಡದ - ಕನ್ನಡಿಗರ ಉದ್ಧಾರಕ್ಕಾಗಿ ಒಂದು ರಾಜಕೀಯ ಪಕ್ಷವನ್ನೇ ಸ್ಥಾಪಿಸಬೇಕೆನ್ನುವುದು ರಾಮಮೂರ್ತಿ ಹಾಗೂ ಅವರ ಸಂಗಡಿಗರ ಪ್ರಬಲ ನಂಬಿಕೆಯಾಗಿತ್ತು.

ಹಾಗಾಗಿ ರಾಮಮೂರ್ತಿಗಳ ನಾಯಕತ್ವದಲ್ಲಿ ೧೯೬೬ರಲ್ಲಿ ಕನ್ನಡ ಪಕ್ಷವು ಉದಯವಾಯಿತು. ಆ ಪಕ್ಷದ ವತಿಯಿಂದ ಬೆಂಗಳೂರು ನಗರ ಸಭೆಗೆ ರಾಮಮೂರ್ತಿ ಹಾಗೂ ಅವರ ಕೆಲ ಸಂಗಡಿಗರು ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತರು.

ಆಗ ಪಕ್ಷಕ್ಕೆ ಒಂದು ಬಾವುಟವನ್ನು ರೂಪಿಸುವುದು ಅನಿವಾರ್ಯವಾಯಿತು. ಸರಳವಾದ ಸುಲಭವಾದ, ಹಾಗೂ ಆಕರ್ಷಕವಾದ ಮತ್ತು ಎಲ್ಲರೂ ಉಪಯೋಗಿಸಬಹುದಾದ ಬಾವುಟವಾಗಿರಬೇಕೆಂಬುದು ಯೋಚಿಸಿ ಹಳದಿ ಮತ್ತು ಕೆಂಪು ಬಣ್ಣವಿರುವ ದ್ವಿವರ್ಣದ ಬಾವುಟವನ್ನು ರೂಪಿಸಲಾಯಿತು.

ಈ ಬಾವುಟ ರಚನೆಯಲ್ಲಿ ತೊಡಗಿಸಿಕೊಂಡವರಲ್ಲಿ ರಾಮಮೂರ್ತಿಗಳ ಒಡನಾಡಿಗಳಾಗಿದ್ದ ಹಾಗೂ ಅಂದಿನ 'ರೂಪಲೇಖಾ' ಚಿತ್ರಪತ್ರಿಕೆಯ ಸಂಪಾದಕರಾಗಿದ್ದ ರಾಮನ್ ಅವರು. ಅಲ್ಲದೇ ಬೆ.ನಿ. ಈಶ್ವರಪ್ಪ, ಸಂಪಂಗಿ ರಾಮಯ್ಯ, ಯಶವಂತ ನಾಗರಾಜ್, ವೆ.ಶ್ರೀನಿವಾಸ್ ಮುಂತಾದವರು ಈ ದಿಸೆಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದರು.

ನಂತರ ವಾಟಾಳ್ ನಾಗರಾಜರೂ ಸೇರಿದಂತೆ ಕನ್ನಡದ ಚಟುವಟಿಕೆಯಲ್ಲಿ ತೊಡಗಿಕೊಂಡವರೆಲ್ಲ, ಚಳುವಳಿಯಲ್ಲಿ ಭಾಗವಹಿಸಿದವರೆಲ್ಲ ಅದೇ ಬಾವುಟಕ್ಕೆ ಮನ ಸೋತರು; ಅದೇ ಬಾವುಟವನ್ನು ಬಳಸತೊಡಗಿದರು. ಕಾರಣ ಅದು ಸರಳವಾಗಿದ್ದೇ ಅಲ್ಲದೆ ಆಕರ್ಷಕವಾಗಿಯೂ ಇತ್ತು. ಹೀಗಾಗಿ ಎಲ್ಲರ ಮನ ಸೆಳೆದ ಆ ಬಾವುಟವನ್ನು ವ್ಯಾಪಕವಾಗಿ ಉಪಯೋಗಿಸಲು ಆರಂಭಿಸಲಾಯಿತು. ಗೋಕಾಕ್ ಚಳುವಳಿಯ ನಂತರ ಕನ್ನಡ ಪ್ರಜ್ಞೆ ಜಾಗೃತಗೊಂಡು ರಾಜ್ಯದಾದ್ಯಂತ ಕನ್ನಡ ಸಂಘ ಸಂಸ್ಥೆಗಳು ಹೆಚ್ಚಾಗಿ ಆರಂಭಗೊಂಡಿದ್ದಲ್ಲದೆ ಧ್ವಜಸ್ತಂಭಗಳು ಸ್ಥಾಪಿಸಲ್ಪಟ್ಟು ಕನ್ನಡ ಧ್ವಜವು ಹಾರಾಡತೊಡಗಿತು.

ಇಂದು ಕನ್ನಡ ಧ್ವಜವು ಕನ್ನಡದ ಪ್ರೇರಣಶಕ್ತಿಯಾಗಿ ವ್ಯಾಪಕವಾಗಿ ಬಳಸಲ್ಪಡುತ್ತಿದೆ.

ಬಿ.ಎಂ.ಶ್ರೀ. ಅವರಿಂದ ರಚಿತವಾದ "ಕನ್ನಡದ ಬಾವುಟ" ಗೀತೆ

ಏರಿಸಿ..... ಹಾರಿಸಿ......... !

ಏರಿಸಿ ಹಾರಿಸಿ ಕನ್ನಡದ ಬಾವುಟ.
ಓಹೋ, ಕನ್ನಡನಾಡು
ಆಹಾ, ಕನ್ನಡ ನುಡಿ
ಹಾರಿಸಿ ತೋರಿಸಿ ಕೆಚ್ಚದೆಯ ಬಾವುಟ.
ಏರಿಸಿ ಹಾರಿಸಿ ಕನ್ನಡದ ಬಾವುಟ
ಹಾರಿಸಿ ತೋರಿಸಿ ಕೆಚ್ಚೆದೆಯ ಬಾವುಟ.
ಬಾಳ್ ಕನ್ನಡ ತಾಯ್, ಏಳ್ ಕನ್ನಡ ತಾಯ್,
ಆಳ್ ಕನ್ನಡ ತಾಯ್,
ಕನ್ನಡಿಗರೊಡತಿ ಓ ರಾಜೇಶ್ವರೀ !

ಕನ್ನಡದ ಬಾವುಟವ ಹಿಡಿಯದವರಾರು?
ಕನ್ನಡದ ಬಾವುಟಕೆ ಮುಡಿಯದವರಾರು?
ನಮ್ಮ ಈ ಬಾವುಟಕೆ ಮಿಡಿಯದವರಾರು?
ಹೇಳಿರೋ, ಹೆಸರೊಂದು ನೆನಪಿನಲಿ ಸುಳಿದರೆ,
ಹುಡುಕಿರೋ, ಹೇಡಿ ತಾನೊಬ್ಬ ಮನೆಗುಳಿದರೆ
ಬಾಳ್ ಕನ್ನಡ ತಾಯ್ !

ಕನ್ನಡದ ನಾಡಲಾ, ಕನ್ನಡದ ನುಡಿಯಲಾ,
ಕನ್ನಡಿಗನೆದೆ ಕಡೆದ ತೆನೆಯಲಾ ಕೆನೆಯಲಾ.

ಬೆಳಕು ಹರಿಯಿತು ಏಳಿ ಇರುಳು
ಸರಿಯಿತು ಏಳಿ ತಾಯ ಕರೆ ಕೇಳಿ.....
ಏಳಿರೋ ಏಳಿರೋ ಬಾಳ ಬಲಿ ಬೇಳಿರೋ
ಎಲ್ಲೊಲುಮೆಯೂ ಕೂಡಿದೊಂದೊಲುಮೆ ತಾಳಿರೋ
ಬಾಳ್ ಕನ್ನಡ ತಾಯ್ !

ಇಂದಿನದೆ ಹೇಳಿರೋ ಈ ನಮ್ಮ ಬಾವುಟ
ಕುಂದಿದುದೆ ನೋಡಿರೋ ಈ ನಮ್ಮ ಬಾವುಟ.
ಕಂಡದಿದೆ ಇಂದಿಗೂ ಕನ್ನಡದ ಬಾವುಟ
ಹಾರಿಸಿ ತೋರಿಸಿ ಕೆಚ್ಚಿದೆಯ ಬಾವುಟ
ಬಾಳ್ ಕನ್ನಡ ತಾಯ್ !

ಏನೇನ ಕಂಡುದೋ ಬಾನಾಡಿ ಬಾವುಟ
ಆವುದನು ಕಾಣದೋ ಜೀವಕಳೆ ಬಾವುಟ
ಕನ್ನಡದ ಬಾವುಟಗಳೊಂದಾದ ಬಾವುಟ

ಹಾರಿಸಿ ತೋರಿಸಿ ಕೆಚ್ಚಿದೆಯ ಬಾವುಟ
ಬಾಳ್ ಕನ್ನಡ ತಾಯ್, ಏಳ್ ಕನ್ನಡ ತಾಯ್,
ಆಳ್ ಕನ್ನಡ ತಾಯ್, ಕನ್ನಡಿಗರೊಡತಿ ಓ ರಾಜೇಶ್ವರೀ...!

❑

ಕನ್ನಡ ಚಳುವಳಿಯಲ್ಲಿ ಪತ್ರಿಕೆಗಳ ಪಾತ್ರ

ಕನ್ನಡ ಚಳುವಳಿಯಲ್ಲಿ ಕನ್ನಡ ಪತ್ರಿಕೆಗಳು ಬಹುಮುಖ್ಯವಾದ ಪಾತ್ರ ವಹಿಸಿವೆ. ಕನ್ನಡಿಗರ ನೋವು, ಸಂಕಟ, ಸಮಸ್ಯೆಗಳನ್ನು ಕಾಲ ಕಾಲಕ್ಕೆ, ಆಯಾ ಪರಿಸ್ಥಿತಿಗೆ, ಸಂದರ್ಭಕ್ಕೆ ತಕ್ಕಂತೆ ಪತ್ರಿಕೆಗಳಲ್ಲಿ ಪ್ರಕಟಿಸಿ ಸಂಬಂಧಪಟ್ಟವರ ಗಮನಕ್ಕೆ ತಂದಿವೆ. ವಾಚಕರ ವಾಣಿಯಲ್ಲಿ ಓದುಗರು ಕಳಿಸಿದ ಪತ್ರಗಳನ್ನು ಪ್ರಕಟಿಸುವುದೇ ಅಲ್ಲದೆ ಅಗತ್ಯಬಿದ್ದಾಗ ಅಗ್ರ ಲೇಖನಗಳನ್ನು ಪ್ರಕಟಿಸಿ, ಚಳುವಳಿ ಬೆಳೆಯಲು ಸಹಕಾರಿಯಾಗಿವೆ.

ಆದರೂ ಕೆಲವು ಸಲ ತಮ್ಮ ಪರಿಮಿತಿಯೊಳಗೆ, ಕೆಲಸಮಾಡಬೇಕಾಗಿ ಬಂದಾಗ, ಸುದ್ದಿ ಪ್ರಕಟಣೆಗೆ ಕಡಿವಾಣ ಹಾಕಿರುವ ಸಂದರ್ಭಗಳೂ ಉಂಟು. ಹಾಗಾಗಿ ಕನ್ನಡ ಚಳುವಳಿಗೆ ಸಂಬಂಧಪಟ್ಟಂತೆಯೇ ಕೆಲವು ಪತ್ರಿಕೆಗಳು ಪ್ರಕಾಶನಗೊಂಡವೆಂದು ಹೇಳಬಹುದು.

ದಿನಾಂಕ ೪.೨.೧೯೬೨ರಂದು ನಡೆದ ಬೆಂಗಳೂರು ಕನ್ನಡಿಗರ ಸಮಾವೇಶದಲ್ಲಿ ಪ್ರಥಮವಾಗಿ "ಕನ್ನಡ ಯುವಜನ" ವಾರಪತ್ರಿಕೆಯನ್ನು ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷ ಖಾದ್ರಿ ಶಾಮಣ್ಣನವರು ಉದ್ಘಾಟಿಸಿದ ಬಗ್ಗೆ ಹಿಂದೆ ಪ್ರಸ್ತಾಪಿಸಿದೆ.

ಆ ಸಂದರ್ಭದಲ್ಲಿ ಚಳುವಳಿಯ ನೇತಾರರಾದ ಅ.ನ. ಕೃಷ್ಣರಾಯರು ಮಾತನಾಡುತ್ತ "ಕನ್ನಡದ ಚಟುವಟಿಕೆಗಳಿಗೆ ಈಗಿನ ದಿನ ಪತ್ರಿಕೆಗಳು ನೀಡುತ್ತಿರುವ ಸಹಕಾರಕ್ಕೆ ಕೃತಜ್ಞತೆ" ಎಂದು ಹೇಳಿ "ಈ ಪತ್ರಿಕೆಗಳು ಹೇಳಲು ಸಾಧ್ಯವಾಗದ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಅದಕ್ಕಾಗಿ ಈ ವಾರಪತ್ರಿಕೆ" ಎಂದು 'ಕನ್ನಡ ಯುವಜನ'ದ ಅಗತ್ಯತೆಯನ್ನು ತಿಳಿಸಿದರು. ಸಂಪಾದಕರಾಗಿ ಮ. ರಾಮಮೂರ್ತಿಯವರು ಚಳುವಳಿಯ ಮುಖವಾಣಿಯಾಗಿ ಪತ್ರಿಕೆಯನ್ನು ನಡೆಸುತ್ತಿದ್ದರು.

ಕನ್ನಡ ಚಳುವಳಿ ಉಗ್ರವಾಗಿದ್ದ ಕಾಲದಲ್ಲಿ ಕನ್ನಡ ಜಾಗೃತ ಪರಿಷತ್ ಸಂಘದವರು ಹೊರಡಿಸುತ್ತಿದ್ದ ತ್ರೈಮಾಸಿಕ ಪತ್ರಿಕೆ "ಕನ್ನಡ ಜಾಗೃತ ಪತ್ರ"ವು ಮಹತ್ವದ್ದು. ಹಾಗೇಯೇ "ಧ್ರುವ" ಎಂಬ ಮಾಸಿಕ ಪತ್ರಿಕೆಯೂ ಕೆಲವು ದಿನಗಳ

ನಂತರ ಪ್ರಕಟವಾಯಿತು. ಇವೆರಡೂ ಪತ್ರಿಕೆಗಳ ಪ್ರಕಟಣೆಗೆ ಇಂಬುಕೊಟ್ಟು ದುಡಿದವರು. ಎಂ. ನಾಗರಾಜ್ ಎಂಬ ದೂರವಾಣಿ ಕಾರ್ಖಾನೆಯ ಕಾರ್ಮಿಕ ಬಂಧು.

ಗೋಕಾಕ್ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ ಸಾಹಿತಿ ಕಲಾವಿದರ ಬಳಗವು ನಂತರವೂ ಕನ್ನಡ ಪರ ಚಟುವಟಿಕೆಗಳಲ್ಲಿ ಪ್ರಧಾನ ಪಾತ್ರವನ್ನು ವಹಿಸಿತು. ತನ್ನ ಸೃಜನಶೀಲ ಚಟುವಟಿಕೆಯ ಬಗ್ಗೆ ಪ್ರಸಾರ ಮಾಡಲು "ಕನ್ನಡ ಕಲಿ" ಎಂಬ ತಿಂಗಳ ವಾರ್ತಾ ಪತ್ರವನ್ನು ಸದಸ್ಯರ ಖಾಸಗಿ ಪ್ರಸಾರಕ್ಕಾಗಿ ಪ್ರಕಟಿಸಲು ಪ್ರಾರಂಭಿಸಿತು.

ಈ ಸಂಚಿಕೆಯ ಮೊದಲ ಪ್ರತಿ ಬಿಡುಗಡೆಯಾದದ್ದು ಜನವರಿ ೧೯೮೭ರಲ್ಲಿ. ತನ್ನ ಮೊದಲ ಸಂಪಾದಕೀಯದಲ್ಲಿ ಸಂಪಾದಕರಾದ ಡಾ|| ಪಿ.ವಿ. ನಾರಾಯಣ ಅವರು, "ಕನ್ನಡ - ಕನ್ನಡಿಗ - ಕರ್ನಾಟಕ" ಈ ವಿಚಾರಗಳ ಔನ್ನತ್ಯ ಸಾಧನೆಯೇ ಬಳಗದ ಗುರಿ. ಈ ಮೂರು ವಿಷಯಗಳ ಬಗ್ಗೆ ನಡೆಯುವ ಅನ್ಯಾಯಗಳ ವಿರುದ್ಧ ಪ್ರತಿಭಟನೆ, ಇವುಗಳ ಅಭಿವೃದ್ಧಿಗೆ ಸೃಜನ ಶೀಲ ಚಟುವಟಿಕೆ, ನಮ್ಮ ನಾಡವರಲ್ಲಿ ಈ ಬಗೆಗಿನ ತಿಳುವಳಿಕೆಯ ಪ್ರಸಾರಕ್ಕಾಗಿ ಪ್ರಯತ್ನ - ಬಳಗದ ಕಾರ್ಯ ಚಟುವಟಿಕೆಗಳ ಮಾರ್ಗ" ಎಂದು ವಾರ್ತಾಪತ್ರದ ಪ್ರಕಟಣೆಯ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ.

೧೯೭೪ರ ಸುಮಾರಿನಲ್ಲಿ ಮೈಸೂರು ನಗರದಲ್ಲಿ ಎ.ಸಿ. ಬಸಪ್ಪನವರ ಸಂಪಾದಕತ್ವದಲ್ಲಿ 'ಕನ್ನಡಪ್ರಿಯ' ಎಂಬ ಪತ್ರಿಕೆಯು ಚಳುವಳಿಯ ಅಂಗವಾಗಿ ಪ್ರಕಟಗೊಳ್ಳುತ್ತಿತ್ತು.

ಆದರೆ ವಿಷಾದದ ಸಂಗತಿಯೆಂದರೆ ಈ ಮೇಲಿನ ಯಾವುದೇ ಪತ್ರಿಕೆಗಳೂ ಹೆಚ್ಚು ಕಾಲ ಪ್ರಕಟಣೆಯನ್ನು ನಡೆಸಲಾಗದೇ ಹಾಗೆಯೇ ಕಮರಿ ಹೋದದ್ದು. ಇದಕ್ಕೆ ಜನತೆಯಿಂದ ಸಾಕಷ್ಟು ಪ್ರೋತ್ಸಾಹ ದೊರಕದಿದ್ದುದು ಮತ್ತು ಆರ್ಥಿಕ ಸಂಕಷ್ಟಗಳೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ.

ಅದರಲ್ಲಿಯೂ 'ಕನ್ನಡ ಜಾಗೃತ' 'ಧ್ರುವ' ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದ ಎಂ. ನಾಗರಾಜ್ ತೀವ್ರ ಆರ್ಥಿಕ ತೊಂದರೆಗೊಳಗಾಗಿ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಬಂದುದು ಒಂದು ದೊಡ್ಡ ದುರಂತ.

❑

ರಾಜಾಜಿ ಹೇಳಿಕೆ – ಕನ್ನಡಿಗರ ಪ್ರತಿಭಟನೆ

೧೯೬೮ರ ಜನವರಿ ೧೩ನೇ ತಾರೀಕಿನಂದು 'ಸ್ವರಾಜ್ಯ' ಪತ್ರಿಕೆಯಲ್ಲಿ ರಾಜಾಜಿಯವರು ಒಂದು ಲೇಖನವನ್ನು ಬರೆದರು. ಅದರಲ್ಲಿ "ಕನ್ನಡವು ಕ್ರೈಸ್ತ ಪಾದ್ರಿಗಳು ತಿದ್ದಿದ ತೆಲುಗು ಲಿಪಿಯಲ್ಲಿ ಬರೆಯಲಾಗುತ್ತಿರುವ ಭಾಷೆ" ಎಂದರು. (Kannada as spoken is almost written in Telugu Script as reshaped by early Christian missionaries)

ಈ ಲೇಖನ ಕನ್ನಡಿಗರಲ್ಲಿ ಆಕ್ರೋಶವನ್ನುಂಟುಮಾಡಿತು. ಚಳುವಳಿಯ ಕಾವಿನಲ್ಲಿದ್ದ ತರುಣರು ಹಾಗೂ ಹಿರಿಯ ಸಾಹಿತಿಗಳಲ್ಲಿ ಕೆಲವರು ರಾಜಾಜಿಯವರ ಈ ಹೇಳಿಕೆಯನ್ನು ತೀವ್ರವಾಗಿ ಪ್ರತಿಭಟಿಸಿದರು. ನಾಡಿನಾದ್ಯಂತ ಸಂಘ ಸಂಸ್ಥೆಗಳವರು ರಾಜಾಜಿಯವರ ವಿರುದ್ಧ ಪ್ರತಿಭಟನಾ ಪ್ರದರ್ಶನಗಳನ್ನು ಏರ್ಪಡಿಸಿದರು.

ರಾಜಾಜಿಯವರ ಈ ಹೇಳಿಕೆಯನ್ನು ಕನ್ನಡ ಸಾಹಿತ್ಯಪರಿಷತ್‌ನ ಮಾಜಿ ಅಧ್ಯಕ್ಷರಾದ ಬಿ.ಶಿವಮೂರ್ತಿಶಾಸ್ತ್ರಿ, ಹಿರಿಯ ಸಾಹಿತಿಗಳಾದ ಬಿ. ಪುಟ್ಟಸ್ವಾಮಯ್ಯ ಏಕೀಕರಣ ಧುರೀಣರಾದ ಮಂಗಳವೇಡೆ ಶ್ರೀನಿವಾಸರಾವ್, ಜಿ.ವಿ. ಹಳ್ಳಿಕೇರಿ, ಹಿರಿಯ ಸಾಹಿತಿಗಳೂ, ಸಂಶೋಧಕರೂ ಆದ ಡಾ. ಶಂ.ಬಾ. ಜೋಷಿ, ಡಾ. ದೇ. ಜವರೇಗೌಡ, ಡಾ. ಹಾ.ಮಾ.ನಾಯಕ, ಡಾ.ಹೆಚ್. ತಿಪ್ಪೇರುದ್ರಸ್ವಾಮಿ, ಸುಜನಾ, ಹಂಪ ನಾಗರಾಜಯ್ಯ, ಶಿಕ್ಷಣ ತಜ್ಞರಾದ ಡಾ. ವಿ.ಕೆ. ಜವಳಿ, ಅಂದಾನಪ್ಪ ದೊಡ್ಡಮೇಟಿ ಮುಂತಾದವರು ತೀವ್ರವಾಗಿ ಪ್ರತಿಭಟಿಸಿದರು.

ಆದರೆ ಕೆಲವು ಸಾಹಿತಿಗಳ ಅಂದಿನ ವರ್ತನೆ ನಿಜಕ್ಕೂ ಕನ್ನಡಿಗರಿಗೆ ಬೇಸರ ತರುವಂತಹದ್ದಾಗಿತ್ತು. ರಾಜಾಜಿಯವರ ಆಪ್ತರಾಗಿದ್ದ ಡಿ.ವಿ.ಗುಂಡಪ್ಪನವರು, ಸಿದ್ದವನಹಳ್ಳಿ ಕೃಷ್ಣಶರ್ಮರು, ಜಿ.ಪಿ. ರಾಜರತ್ನಂ ಮುಂತಾದ ಹಲವರು ರಾಜಾಜಿಯವರ ಹೇಳಿಕೆಗೆ ಸಹಮತ ಕೂಡಿಸಿದ್ದು ಆಶ್ಚರ್ಯವನ್ನೂ ನೋವನ್ನೂ ಉಂಟುಮಾಡಿದ ಸಂಗತಿಯಾಗಿತ್ತು.

ಆ ವೇಳೆಗೆ ಕನ್ನಡ ಚಳುವಳಿಯಿಂದ ದೂರವಿದ್ದು ನಿರ್ಲಿಪ್ತರಾಗಿದ್ದರೂ. ಕನ್ನಡದ ಕಟ್ಟಾಳು ಅ.ನ.ಕೃ ಅವರು ರಾಜಾಜಿಯವರನ್ನು ಹಾಗೂ ಅವರನ್ನು ಬೆಂಬಲಿಸಿದವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಹಿರಿಯ ಸಾಹಿತಿಗಳು ಸಾತ್ವಿಕರೀತಿಯಲ್ಲಿ ಪ್ರತಿಭಟಿಸಿದರೆ, ಚಳುವಳಿಗಾರರು ಹಾಗೂ ತರುಣರು ತೀವ್ರವಾದ ಪ್ರತಿಭಟನೆಯನ್ನೇ ನಡೆಸಿದರು. ಚಳುವಳಿಯ

ಮುಂಚೂಣಿಯಲ್ಲಿದ್ದ ಕನ್ನಡ ಸಂಘಗಳಲ್ಲಿ ಪ್ರಮುಖವಾಗಿದ್ದ ಕನ್ನಡ ಕುಲದೈವ ಕುಟೀರ, ಕನ್ನಡ ಮಾತೃಸೇವಾ ಸಂಘ, ಕನ್ನಡ ಅಭಿಮಾನಿ ಸಂಘ, ಮುಂತಾದ ಸಂಘಗಳು ಪ್ರತಿಭಟನಾ ಸಭೆ ಮತ್ತು ಮೆರವಣಿಗೆಗಳನ್ನು ನಡೆಸಿದುವು.

ಈ ಕಾರ್ಯಕ್ರಮಗಳಲ್ಲಿ ಶಿವಮೂರ್ತಿಶಾಸ್ತ್ರಿ, ಮಂಗಳವೇಡೆ ಶ್ರೀನಿವಾಸರಾವ್, ಶಾಸಕರಾಗಿದ್ದ ಮಹದೇವ ಬಣಕಾರ್, ಅಂದಾನಪ್ಪ ದೊಡ್ಡಮೇಟಿ, ಇದಿನಬ್ಬ, ನಗರದ ಮಾಜಿ ಮೇಯರ್ ಆಗಿದ್ದ ಆರ್. ಅನಂತರಾಮನ್ ಮುಂತಾದವರು ಪಾಲ್ಗೊಳ್ಳುತ್ತಿದ್ದರು.

ರಾಜಾಜಿ ಹೆಸರನ್ನು ಹೊಂದಿದ್ದ ರಾಜಾಜಿನಗರ ಬಡಾವಣೆಯನ್ನು ತಕ್ಷಣವೇ ಬದಲಿಸಿ ವಿಜಯನಗರ ಎಂದು ಪುನರ್ನಾಮಕರಣ ಮಾಡಬೇಕೆಂದು ಆಗ್ರಹಿಸಿ ಕೆ.ಜಿ. ಮಹೇಶ್ವರಪ್ಪ ನೇತೃತ್ವದ ಉತ್ತರ ಬಡಾವಣೆ ರಾಜ್ಯೋತ್ಸವ ಸಮಿತಿ, ಹಿಂದ್ ವಿದ್ಯಾರ್ಥಿ ಯುವಕ ಸಂಘವೇ ಮೊದಲಾದ ಸಂಸ್ಥೆಗಳು ಕರಪತ್ರ ಚಳವಳಿಯನ್ನು ನಡೆಸಿದುವು. ಕನ್ನಡಪರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಕೋ.ಹು. ರಾಮಣ್ಣಗೌಡ, ಜೀರಿಗೆ ಲೋಕೇಶ್, ಕನ್ನಡ ದಳ ಸಂಘಟನೆಯ ನೇತಾರರಾಗಿದ್ದ ಯಶವಂತ ನಾಗರಾಜ, ಲಕ್ಷ್ಮಯ್ಯ, ಚಂದ್ರಶೇಖರ್ ಇವರೇ ಮುಂತಾದವರು ರಾಜಾಜಿಯವರ ಹೇಳಿಕೆ ವಿರುದ್ಧ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕನ್ನಡಿಗರ ಈ ಪ್ರತಿಭಟನೆಗೆ ಮಣಿದ ರಾಜಾಜಿಯವರು ಕನ್ನಡಿಗರ ಕ್ಷಮೆ ಕೇಳುವಂತಾಯಿತು.

(ರಾಜಾಜಿಯವರಿಗೂ ಕನ್ನಡ ಭಾಷೆ ಹಾಗೂ ಬೆಂಗಳೂರಿಗೆ ಸಂಬಂಧವಿದೆ. ರಾಜಾಜಿಯುವರ ಪೂರ್ತಿ ಹೆಸರು ಚಕ್ರವರ್ತಿ ರಾಜಗೋಪಾಲಾಚಾರ್. ಬೆಂಗಳೂರಿಗೆ ಹತ್ತಿರದ ಸೇಲಂ ಜಿಲ್ಲೆಯ ಹೊಸೂರು ತಾಲ್ಲೂಕಿನ ತೋರಪಳ್ಳಿಯಲ್ಲಿ ಹುಟ್ಟಿದವರು. ಅವರ ಕಾಲೇಜು ವಿದ್ಯಾಭ್ಯಾಸ ನಡೆದಿದ್ದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ.

ರಾಜಾಜಿಯವರು ಕನ್ನಡ ಭಾಷೆಯನ್ನು ಸಾಕಷ್ಟು ತಿಳಿದುಕೊಂಡಿದ್ದರು. ಬೆಂಗಳೂರು ಸುಭಾಷ್‌ನಗರದಲ್ಲಿ (ಪ್ರಸ್ತುತ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡ್) ನಡೆದ ಸಾರ್ವಜನಿಕ ಸಭೆಯಲ್ಲಿ ರಾಜಾಜಿಯವರು ಮಾಡುತ್ತಿದ್ದ ಇಂಗ್ಲೀಷ್ ಭಾಷಣವನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದವರು ಕನ್ನಡದ ಶ್ರೇಷ್ಠರಾದ ಡಿ.ವಿ.ಜಿ.ಯವರು. ಆ ಸಂದರ್ಭದಲ್ಲಿ ರಾಜಾಜಿಯವರ ಭಾಷಣದಲ್ಲಿನ ಇಂಗ್ಲೀಷಿನ ಶಬ್ದವೊಂದಕ್ಕೆ ಸೂಕ್ತ ಸಮಾನಾಂತರ ಪದವನ್ನು ಬಳಸದ ಡಿ.ವಿ.ಜಿ. ಯವರಿಗೆ ಹಾಗಲ್ಲ ಹೀಗೆ ಹೇಳಬೇಕು ಎಂದು ರಾಜಾಜಿಯವರು ತಿದ್ದಿ ಸರಿಯಾದ ಕನ್ನಡ ಪದವನ್ನು ಉಪಯೋಗಿಸಿದಾಗ ಸಭೆಯಲ್ಲಿ ಧೀರ್ಘ ಕರತಾಡನವಾಯಿತು.)

❑

ಹೆಸರಾಯಿತು 'ಕರ್ನಾಟಕ'

ಬಹುದಿನಗಳ ಬೇಡಿಕೆಯಾಗಿದ್ದ ಕನ್ನಡಿಗರೆಲ್ಲ ಒಂದೇ ರಾಜ್ಯದಲ್ಲಿ ಒಗ್ಗೂಡಬೇಕೆಂಬ ಆಸೆ ೧.೧೧.೫೬ರಂದು ನೆರವೇರಿತು.

ರಾಜ್ಯಗಳ ಮರುವಿಂಗಡಣೆಯ ಫಲಿತಾಂಶವಾಗಿ ಮುಂಬೈ, ಮದ್ರಾಸ್, ಹೈದರಾಬಾದ್, ಕೊಡಗು ಹಾಗು ಮೈಸೂರು ಹೀಗೆ ಐದು ಭಾಗವಾಗಿ ಹರಿದು ಹಂಚಿಹೋಗಿದ್ದ ಕನ್ನಡ ನೆಲ ಒಂದಾಗಿ ಅಧಿಕೃತವಾಗಿ 'ವಿಶಾಲ ಮೈಸೂರು' ರಾಜ್ಯ ಎನಿಸಿಕೊಂಡಿತು.

ಕನ್ನಡಿಗರು ಹೋರಾಡಿದ್ದು "ಕರ್ನಾಟಕ"ಕ್ಕಾಗಿ, ಕರ್ನಾಟಕವೆಂಬ ಹೆಸರು ಪ್ರಾಚೀನವಾದದ್ದು. ಒಂದು ಭವ್ಯ ಪರಂಪರೆಯನ್ನು ಸೂಚಿಸುವಂತಹುದು. ಮಹಾಕಾವ್ಯಗಳಾದ ರಾಮಾಯಣ ಭಾರತಗಳ ಕಾಲದಿಂದಲೂ 'ಕರ್ನಾಟಕ'ದ ಪ್ರಸ್ತಾಪವುಂಟು.

ಆದರೆ ಮೈಸೂರಿನ ಹೆಸರಿನೊಂದಿಗೆ ಭಾವನಾತ್ಮಕ ಸಂಬಂಧವಿರಿಸಿಕೊಂಡಿದ್ದ ಹಳೆಯ ಮೈಸೂರು ಭಾಗದ ಕೆಲವು ನಾಯಕರು ಮೈಸೂರು ಹೆಸರನ್ನು ಬಿಟ್ಟುಕೊಡಲು ತಯಾರಿರಲಿಲ್ಲ. ಹಾಗಾಗಿ 'ಮೊದಲು ಕನ್ನಡದ ಎಲ್ಲ ಜನ ಒಂದಾಗಲಿ. ನಂತರ ಹೆಸರಿನ ಬಗ್ಗೆ ನಿಧಾನವಾಗಿ ಎಲ್ಲರ ಮನ ಒಲಿಸಿ ಹೆಸರು ಬದಲಿಸೋಣ' ಎಂಬ ರಾಜೀ ಸೂತ್ರದ ಮೇರೆಗೆ ಒಂದುಗೂಡಿದ ಕನ್ನಡನಾಡು 'ಕರ್ನಾಟಕ'ವಾಗದೆ ವಿಶಾಲ ಮೈಸೂರಾಯಿತು.

ನಮ್ಮ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಕರೆಯಬೇಕೆನ್ನುವ ನಿರ್ಣಯವನ್ನು ಪ್ರಪ್ರಥಮವಾಗಿ ೧೯೫೭ರ ಸೆಪ್ಟೆಂಬರ್ ೨೦ರಂದು ವಿಧಾನ ಸಭೆಯಲ್ಲಿ ಮಂಡಿಸಿ ಕರ್ನಾಟಕ ನಾಮಕರಣಕ್ಕೆ ನಾಂದಿ ಹಾಡಿದವರು ಅಂದಾನಪ್ಪ ದೊಡ್ಡ ಮೇಟಿಯವರು.

ಅಂದು ಆ ನಿರ್ಣಯವನ್ನು ಬೆಂಬಲಿಸಿ ಮಾತನಾಡಿದವರಲ್ಲಿ ಶಾಂತವೇರಿ ಗೋಪಾಲಗೌಡರು ಹಾಗೂ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಎಸ್. ಶಿವಪ್ಪನವರು ಪ್ರಮುಖರು.

೧೯೬೭ ರಿಂದ ಶಾಸಕರಾದ ವಾಟಾಳ್‌ನಾಗರಾಜ್ ಹಾಗೂ ಬಂಗಾರಪ್ಪನವರು ವಿಧಾನಸಭೆಯಲ್ಲಿ ಈ ಪ್ರಶ್ನೆಯನ್ನು ಜೀವಂತವಾಗಿರಿಸಿದ್ದರು. ಆದರೆ ಹಳೆ ಮೈಸೂರಿನ ಕೆಲವು ಸದಸ್ಯರು ಕರ್ನಾಟಕ ಹೆಸರಿಗೆ ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಿದ್ದರು. ಈ ಸಂದರ್ಭದಲ್ಲಿ ಕೆಲವರು ರಾಜೀ ಸೂತ್ರವನ್ನು ಮಂಡಿಸಿ 'ಕನ್ನಡನಾಡು' ಎಂದು ಕರೆಯುವ ಸಲಹೆಯನ್ನು ಸೂಚಿಸಿದ್ದೂ ಉಂಟು. ಆದರೆ ಇದು ಬಹು ಮತ ಅಭಿಪ್ರಾಯ ಹೊಂದಿರಲಿಲ್ಲ.

ಹೆಸರಿನ ವಿಳಂಬವಾಗುತ್ತಿದ್ದಂತೆ ಜನತೆಯ ಸಹನೆ ಮೀರುತ್ತ ಬಂದಿತ್ತು. ಕವಿಗಳ, ಸಾಹಿತಿಗಳ, ಪತ್ರಕರ್ತರ ಒತ್ತಡವೂ ಏರುತ್ತ ಇತ್ತು. ರಾಷ್ಟ್ರಕವಿ ಕು.ವೆಂ.ಪು ಅವರು "ಕರ್ನಾಟಕ ಎಂಬುದು ಬರಿಯ ಹೆಸರಲ್ಲ, ಮಂತ್ರಕಣಾ, ಶಕ್ತಿಕಣಾ, ತಾಯಿಕಣಾ, ದೇವಿಕಣಾ" ಎಂದಿದ್ದರು.

ಕನ್ನಡ ಚಳುವಳಿಯ ನೇತಾರರಾಗಿದ್ದ ಅ.ನ.ಕೃ., ರಾಮಮೂರ್ತಿ ಮುಂತಾದವರು ಪ್ರತಿ ಬಹಿರಂಗ ಸಭೆಗಳಲ್ಲಿಯೂ ಈ ಬಗೆಗೆ ಜನ ಜಾಗೃತಿ ಉಂಟು ಮಾಡುತ್ತಿದ್ದರು. ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಿಯೂ 'ಕರ್ನಾಟಕ'ವಾಗ ಬೇಕೆಂದು ನಿರ್ಣಯಗಳನ್ನು ಕೈಗೊಳ್ಳುತ್ತಾ ಬಂದರು. ಪತ್ರಿಕೋದ್ಯಮಿಗಳು ಪತ್ರಿಕೆಗಳಲ್ಲಿ ಸಂಪಾದಕೀಯಗಳನ್ನು ನಿರಂತರವಾಗಿ ಬರೆಯಲಾರಂಭಿಸಿದರು.

ಪಾಟೀಲ ಪುಟ್ಟಪ್ಪನವರಂತೂ ತಮ್ಮ ದಿನ ಪತ್ರಿಕೆಯ ಮುಖಪುಟದಲ್ಲಿ ರಾಜ್ಯದ ಹೆಸರು 'ಕರ್ನಾಟಕ' ಎಂದು ಪ್ರತಿದಿನವೂ ಮುದ್ರಿಸುತ್ತ ಬಂದರು.

೧೯೫೬ರ ನಂತರ ನಿಜಲಿಂಗಪ್ಪ, ಜತ್ತಿ, ಕಂಠಿ, ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾದರು. ನಂತರ ರಾಜ್ಯಪಾಲರ ಆಳ್ವಿಕೆಯು ಬಂದಿತು. ಆದರೂ ರಾಜ್ಯದ ಹೆಸರು 'ಕರ್ನಾಟಕ'ವಾಗಲಿಲ್ಲ. ವಿಧಾನ ಸಭೆಯ ಅಧಿವೇಶನಗಳಲ್ಲಿ ಆಗಾಗ್ಗೆ ನಾಮ ಬದಲಾವಣೆಯ ಬಗ್ಗೆ ನಿರ್ಣಯಗಳು ಮಂಡನೆಯಾದರೂ ಅಂತಿಮ ರೂಪ ಕಾಣಲಿಲ್ಲ.

ದೇವರಾಜ ಅರಸರು ಮುಖ್ಯ ಮಂತ್ರಿಗಳಾದ ಮೇಲೆ 'ಕರ್ನಾಟಕ' ನಾಮಕರಣದ ಪ್ರಸ್ತಾಪ ಪುನರ್ಜನ್ಮಗೊಂಡಿತು. ೨೫.೭.೧೯೭೨ ರಂದು ವಿಧಾನ ಸಭೆಯಲ್ಲಿ ದೇವರಾಜ ಅರಸುರವರು ಕನ್ನಡ ಜನತೆಯ ಆಶಯದಂತೆ, ರಾಜ್ಯದ ಹೆಸರನ್ನು 'ಕರ್ನಾಟಕ'ವೆಂದು ಬದಲಾಯಿಸುವ ಗೊತ್ತುವಳಿಯನ್ನು ಮಂಡಿಸಿ ಚರ್ಚೆ ಆರಂಭಿಸಿದರು.

ಆ ವೇಳೆಗೆ ಇಡೀ ರಾಜ್ಯದ ಜನತೆಯ ಒಲವು ಕರ್ನಾಟಕದ ಕಡೆ ವಾಲಿದೆ ಎಂದು ಮನಗಂಡಿದ್ದ ವಿಧಾನ ಸಭೆ ಸದಸ್ಯರು ಯಾವುದೇ ಆಕ್ಷೇಪಣೆಯನ್ನೆತ್ತುವ ಗೋಜಿಗೆ ಹೋಗದೆ ಸರ್ವಸಮ್ಮತ ನಿರ್ಣಯದ ಮೂಲಕ ಒಪ್ಪಿಗೆ ಕೊಟ್ಟರು.

ದಿನಾಂಕ ೨೭.೭.೧೯೭೨ ರಂದು ನಿರ್ಣಯವು ವಿಧಾನಸಭೆಯಲ್ಲಿ ಅವಿರೋಧವಾಗಿ ಸ್ವೀಕೃತವಾಯಿತು. ನಂತರ ವಿಧಾನ ಪರಿಷತ್ತಿನಲ್ಲೂ ಅವಿರೋಧವಾಗಿ ಅಂಗೀಕಾರವಾಗಿ, ನಡೆಯ ಬೇಕಾದ ವಿಧಿ ವಿಧಾನಗಳನ್ನು ಪೂರೈಸಿ ನವಂಬರ್ ೧, ೧೯೭೩ ರಂದು ಅಂದರೆ ಏಕೀಕರಣವಾದ ೧೭ ವರ್ಷಗಳ ನಂತರ 'ಕರ್ನಾಟಕ'ವಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ರೊದ್ದ ಶ್ರೀನಿವಾಸರಾಯರು, ಮಂಗಳವೇಡೆಯವರು ಮುಂತಾದ ಹಿರಿಯ ಜೀವಿಗಳ ಸ್ಮರಣೆ, ತ್ಯಾಗ ಬಲಿದಾನಗಳನ್ನು ನೆನೆಯಬೇಕು.

ಕರ್ನಾಟಕ ಪುನರ್ನಾಮಕರಣ - ವೈಭವಯುತ ಆಚರಣೆ

ಕರ್ನಾಟಕ ನಾಮಕರಣದ ದಿನ ಅಂದರೆ ೧.೧೧.೧೯೭೩ ಕನ್ನಡಿಗರ ಬಹು ದಿನಗಳ ಆಸೆ ಈಡೇರಿದ ದಿನ. ಅದನ್ನು ಸಡಗರ ಸಂಭ್ರಮ ಉತ್ಸಾಹಗಳಿಂದ ಜನತೆ ಸ್ವಾಗತಿಸಿದರು.

ಹಂಪೆಯಲ್ಲಿ 'ಕರ್ನಾಟಕರತ್ನಸಿಂಹಾಸನಾಧೀಶ್ವರ' ಬಿರುದಾಂಕಿತರಾದ ಶ್ರೀ ಜಯಚಾಮರಾಜಒಡೆಯರ್‌ರವರು 'ಕರ್ನಾಟಕ ಜ್ಯೋತಿ'ಯನ್ನು ಹೊತ್ತಿಸಿದರು. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ 'ಕರ್ನಾಟಕ' ಶಿಲಾಫಲಕವನ್ನು ಮುಖ್ಯಮಂತ್ರಿ ದೇವರಾಜಅರಸು ಅವರು ಅನಾವರಣ ಮಾಡಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು "ಕರ್ನಾಟಕ" ನಾಮಕರಣ ಸಮಾರಂಭದ ಸವಿನೆನಪಿಗಾಗಿ ನೆನಪಿನ ನಾಣ್ಯವೊಂದನ್ನು ಹೊರತಂದಿದ್ದು ಅದನ್ನು ಮುಖ್ಯಮಂತ್ರಿ ದೇವರಾಜಅರಸು ಅವರು ಬಿಡುಗಡೆ ಮಾಡಿದರು.

ನಾಣ್ಯದ ಒಂದು ಭಾಗದಲ್ಲಿ ಕರ್ನಾಟಕದ ನಕ್ಷೆ ಇನ್ನೊಂದು ಭಾಗದಲ್ಲಿ ವಿಧಾನ ಸೌಧ. "ಕರ್ನಾಟಕಕ್ಕೆ ಶುಭವಾಗಲಿ, ಕನ್ನಡಿಗರಿಗೆ ಶುಭವಾಗಲಿ" ಎಂದು ನಾಣ್ಯದಲ್ಲಿ ಬರೆಯಲಾಗಿದೆ.

ಇಡೀ ರಾಜ್ಯದ ಜನತೆ ಹರ್ಷೋಲ್ಲಾಸದಿಂದ ಸಮಾರಂಭವನ್ನು ಆಚರಿಸಿತು. ಬೆಂಗಳೂರು ನಗರ ಒಂದರಲ್ಲೇ ಇನ್ನೂರಕ್ಕೂ ಹೆಚ್ಚು ಕಡೆ ರಾಜ್ಯೋತ್ಸವವನ್ನು ಆಚರಿಸಿದರೆಂಬ ಒಂದು ಅಂದಾಜಿದೆ.

"ಕರ್ನಾಟಕ"ದ ಮಹತ್ವದ ದಿನಾಂಕಗಳು

- **೧.೧೧.೧೯೫೬ :** ಕನ್ನಡಿಗರ ಏಕೀಕೃತ ರಾಜ್ಯದ ನಿರ್ಮಾಣ. ಕರ್ನಾಟಕ ಕುಲಪುರೋಹಿತ ಶ್ರೀ ಆಲೂರು ವೆಂಕಟರಾಯರು ತಪ್ಪಾಗಿ ಹೆಸರಿಡಲ್ಪಟ್ಟಿರುವ 'ಮೈಸೂರು ರಾಜ್ಯ'ವು 'ಕರ್ನಾಟಕ'ವಾಗಲಿ ಎಂದು ಆಶೀರ್ವದಿಸಿದ್ದು. ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಉದಯಿಸಿದ ಹೊಸ ಮೈಸೂರು ರಾಜ್ಯವನ್ನು 'ಕರ್ನಾಟಕ'ವೆಂದೇ ತಮ್ಮ ಸಂದೇಶದಲ್ಲಿ ಸಂಬೋಧಿಸಿದ್ದು.
- **೨೦.೯.೧೯೫೭ :** ನಮ್ಮ ರಾಜ್ಯದ ಹೆಸರು 'ಕರ್ನಾಟಕ' ವಾಗಬೇಕೆಂದು ವಿಧಾನಸಭಾ ಸದಸ್ಯ ದೊಡ್ಡಮೇಟಿ ಅನ್ನದಾನಪ್ಪನವರು ಮೊದಲನೆಯ ಬಾರಿಗೆ ವಿಧಾನಸಭೆಯಲ್ಲಿ ಖಾಸಗಿ ಗೊತ್ತುವಳಿಯನ್ನು ಮಂಡಿಸಿ ಚರ್ಚೆಯನ್ನು ಪ್ರಾರಂಭಿಸಿದ್ದು.
- **೨೧.೭.೧೯೭೨ :** ವಿಧಾನ ಮಂಡಲದಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರು ಬಹುಮತದ ಅಭಿಪ್ರಾಯದಂತೆ ರಾಜ್ಯದ ಹೆಸರನ್ನು 'ಕರ್ನಾಟಕ' ವೆಂದು ಬದಲಾಯಿಸಲು ನಿರ್ಧಾರ ಕೈಗೊಂಡದ್ದು.
- **೨೫.೭.೧೯೭೨ :** ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ದೇವರಾಜ ಅರಸರು ರಾಜ್ಯದ ಹೆಸರನ್ನು 'ಕರ್ನಾಟಕ'ವೆಂದು ಬದಲಾಯಿಸುವ ಗೊತ್ತುವಳಿಯನ್ನು ಮಂಡಿಸಿ ಚರ್ಚೆಯನ್ನು ಪ್ರಾರಂಭಿಸಿದ್ದು.
- **೨೭.೭.೧೯೭೨ :** ವಿಧಾನ ಸಭೆಯಲ್ಲಿ 'ಕರ್ನಾಟಕ' ಗೊತ್ತುವಳಿಯು ಅವಿರೋಧವಾಗಿ ಸ್ವೀಕಾರವಾದದ್ದು.
- **೫.೮.೧೯೭೨ :** ವಿಧಾನ ಪರಿಷತ್ತಿನಲ್ಲಿ 'ಕರ್ನಾಟಕ' ಗೊತ್ತುವಳಿಯು ಕೃಷಿ ಸಚಿವ ಕೆ. ಹೆಚ್. ಪಾಟೀಲರಿಂದ ಮಂಡನೆಯಾಗಿ, ಅವಿರೋಧವಾಗಿ ಸ್ವೀಕಾರವಾದದ್ದು.

- **೨೭.೭.೧೯೭೩ :** ಲೋಕ ಸಭೆಯಲ್ಲಿ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸುವ ವಿಧೇಯಕವನ್ನು ಕೇಂದ್ರ ಗೃಹಖಾತೆಯ ಸ್ಟೇಟ್ ಸಚಿವರಾದ ಕೆ.ಸಿ. ಪಂತ್ ಅವರು ಮಂಡಿಸಿ ಚರ್ಚೆಯನ್ನು ಪ್ರಾರಂಭಿಸಿದ್ದು.

- **೩೦.೭.೧೯೭೩ :** ಸರ್ವಾನುಮತದಿಂದ ಲೋಕಸಭೆಯಲ್ಲಿ 'ಕರ್ನಾಟಕ'ದ ಅಂಗೀಕಾರ.

- **೮.೮.೧೯೭೩ :** ಕೆ.ಸಿ. ಪಂತ್ ಅವರಿಂದ ರಾಜ್ಯಸಭೆಯಲ್ಲಿ 'ಕರ್ನಾಟಕ' ವಿಧೇಯಕದ ಮಂಡನೆ, ಚರ್ಚೆ ಹಾಗೂ ಅವಿರೋಧವಾಗಿ ರಾಜ್ಯ ಸಭೆಯ ಒಪ್ಪಿಗೆ.

- **೮.೧೦.೧೯೭೩ :** ನವಂಬರ್ ೧, ೧೯೭೩ ರಿಂದ ನಮ್ಮ ರಾಜ್ಯದ ಹೆಸರು 'ಕರ್ನಾಟಕ'ವೆಂದು ರಾಷ್ಟ್ರಪತಿಗಳ ಅಧಿಕೃತ ಆಜ್ಞೆ ಹೊರಟಿದ್ದು.

- **೧.೧೧.೧೯೭೩ :** 'ಕರ್ನಾಟಕ' ರಾಜ್ಯೋತ್ಸವ.

ಮಹಾಜನ್ ವರದಿ

೧೯೬೫ರಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿಯು ತನ್ನ ಕಾರ್ಯಕಾರೀ ಸಮಿತಿ ಸಭೆಯಲ್ಲಿ ಮೈಸೂರು-ಮಹಾರಾಷ್ಟ್ರ ಮತ್ತು ಮೈಸೂರು - ಕೇರಳಗಳ ಗಡಿ ಸಮಸ್ಯೆಯನ್ನು ಬಗೆಹರಿಸಲು ಏಕ ವ್ಯಕ್ತಿಯ ಸಮಿತಿಯನ್ನು ಆರಂಭಿಸಬೇಕೆಂದು ಕೈಗೊಂಡ ತೀರ್ಮಾನದಂತೆ ೨೫.೧೦.೧೯೬೬ರಂದು ನ್ಯಾಯಮೂರ್ತಿಗಳಾದ ಮೆಹರ್ಚಂದ್ ಮಹಾಜನ್ ಆಯೋಗವನ್ನು ರಚಿಸಿತು.

ಮೊದಲಿಗೆ ಈ ಆಯೋಗದ ರಚನೆಯನ್ನು ಹೃದಯಪೂರ್ವಕವಾಗಿ ಮಹಾರಾಷ್ಟ್ರ ಸರ್ಕಾರವು ಸ್ವಾಗತಿಸಿತು. ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದ ವಿ.ಪಿ. ನಾಯಕ್ ಮತ್ತು ಕೇಂದ್ರದಲ್ಲಿ ಗೃಹ ಸಚಿವರಾಗಿದ್ದ ವೈ.ಬಿ. ಚವಾಣರು ತಮ್ಮ ಒಪ್ಪಿಗೆಯನ್ನು ನೀಡಿದರು.

ಆದರೆ ಆಯೋಗದ ವಿರುದ್ಧ ಕರ್ನಾಟಕದ ಜನತೆ ತೀವ್ರ ವಿರೋಧವನ್ನು ವ್ಯಕ್ತ ಪಡಿಸಿದತು. ಮಹಾಜನ್ ಸಮಿತಿಯವರು ವಿಚಾರಣೆಗೆ ಬಂದಾಗ ಕರ್ನಾಟಕದ ಎಲ್ಲ ಕಡೆ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಯಿತು.

ಈ ಎಲ್ಲ ಪರ-ವಿರೋಧದ ನಡುವೆ ಸಮಿತಿಯವರು ತಮ್ಮ ಸಂಚಾರವನ್ನು ಪೂರ್ಣಗೊಳಿಸಿ ತಮ್ಮ ವರದಿಯನ್ನು ಸಲ್ಲಿಸಿದರು.

ಮಹಾಜನ್ ಸಮಿತಿಯ ವರದಿ:

> ಕೇರಳದಲ್ಲಿರುವ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು, ಮಹಾರಾಷ್ಟ್ರದಲ್ಲಿರುವ ಜತ್, ಅಕ್ಕಲಕೋಟೆಗಳು ಕರ್ನಾಟಕಕ್ಕೆ ಸೇರಬೇಕು. ನಿಪ್ಪಾಣಿ, ಖಾನಾಪುರ, ಹಳಿಯಾಳ ಇವು ಮಹಾರಾಷ್ಟ್ರಕ್ಕೆ ಸೇರಬೇಕು. ಬೆಳಗಾಂ ಕನ್ನಡದ ಪ್ರದೇಶವೇ ಆದ್ದರಿಂದ ಕರ್ನಾಟಕದಲ್ಲಿಯೇ ಉಳಿಯಬೇಕು.

ಆರಂಭದಲ್ಲಿ ಮಹಾಜನ ವರದಿಯನ್ನು ಸ್ವಾಗತಿಸಿದ್ದ ಮಹಾರಾಷ್ಟ್ರೀಯರು ಸಮಿತಿಯ ವರದಿ ತಮಗೆ ವಿರುದ್ಧವಾಗಿ ಬಂದಿದ್ದರಿಂದ ವರದಿಯನ್ನು ವಿರೋಧಿಸಿದರು.

ಆದರೆ, ಆರಂಭದಲ್ಲಿ ಸಮಿತಿಯನ್ನು ವಿರೋಧಿಸಿದ್ದ ಕರ್ನಾಟಕದ ಜನತೆ ವರದಿಯನ್ನು ಸ್ವಾಗತಿಸಿತು. ವಿಷಾದದ ಸಂಗತಿಯೆಂದರೆ, ಬಲಶಾಲಿ ರಾಜಕೀಯ ಪ್ರಭಾವಕ್ಕೆ ಒಳಗಾಗಿ, ಈ ದಿನದವರೆಗೂ ಈ ಬಗ್ಗೆ ಕೇಂದ್ರ ಸರ್ಕಾರ ತಾನೇ ರಚಿಸಿದ ಸಮಿತಿಯ ತೀರ್ಮಾನವನ್ನು ಜಾರಿಗೊಳಿಸದೆ ತಟಸ್ಥವಾಗಿರುವುದು.

ವರದಿಯನ್ನು ಜಾರಿಗೊಳಿಸದ ಕೇಂದ್ರ ಸರ್ಕಾರದ ವಿರುದ್ಧ ಕನ್ನಡ ನಾಡಿನಾದ್ಯಂತ ಚಳುವಳಿಗಳು, ರಸ್ತೆ ತಡೆ, ರೈಲು ತಡೆ, ಸಭೆ ಮೆರವಣಿಗೆ ಆರಂಭಗೊಂಡವು. ಈ ಸಂಬಂಧ ನಡೆದ ಹೋರಾಟಗಳಲ್ಲಿ ಬಹುಮುಖ್ಯವಾದದ್ದು ಹಾಗೂ ಕನ್ನಡ ಚಳುವಳಿಯ ಇತಿಹಾಸದಲ್ಲಿ ಎಂದೆಂದೂ ಮರೆಯಲಾಗದ ದಿನ ೧೩.೧೨.೧೯೭೦. ಅಂದು ಕೇಂದ್ರ ಸರ್ಕಾರದ ವಿರುದ್ಧ ಕನ್ನಡಪಕ್ಷದ ಕಾರ್ಯಕರ್ತರು ರೈಲುತಡೆ ಯೋಜನೆಯನ್ನು ಹಾಕಿಕೊಂಡು ಪ್ರತಿಭಟಿಸಲು ನಿರ್ಧಾರ ಕೈಗೊಂಡಿದ್ದರು. ಇದಕ್ಕಾಗಿ ಸಾಕಷ್ಟು ಬಿರುಸಿನ ಪ್ರಚಾರವೂ ನಡೆದಿತ್ತು. ಅಂದು ಭಾನುವಾರ ಬೆಳಿಗ್ಗೆ ೧೦ ಗಂಟೆ. ಸಾಮಾನ್ಯವಾಗಿ ಬೆಂಗಳೂರು ರೈಲು ನಿಲ್ದಾಣದ ಬಳಿ ರೈಲು ಹೊರಡುವಾಗ ಮುಂಚೆ ಪ್ರತಿಭಟನೆಯನ್ನು ಕೈಗೊಂಡು ಘೋಷಣೆಗಳನ್ನು ಕೂಗಿ ಸ್ವಲ್ಪ ಹೊತ್ತು ರೈಲು ನಿಲ್ಲಿಸುವ ಹೋರಾಟ ಹಿಂದಿನ ದಿನಗಳಲ್ಲಾಗಿತ್ತು. ಆದರೆ ಈ ಬಾರಿ ಪ್ರತಿಭಟನೆ ವಿಭಿನ್ನವಾಗಿರಬೇಕೆಂದು ನಿಶ್ಚಯಿಸಿದ ಕಾರ್ಯಕರ್ತರು, ಜಾಗವನ್ನು ಬದಲಾಯಿಸಿ, ಶ್ರೀರಾಮಪುರದ ಸ್ವತಂತ್ರ ಪಾಳ್ಯದ ಬಳಿಯ ಸೇತುವೆಯ ಹತ್ತಿರ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ತಡೆಯಲು ನಿಶ್ಚಯಿಸಿದರು.

ಈ ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಕರ್ಲಮಂಗಲ ಶಂಕರಪ್ಪ, ಮು. ಗೋವಿಂದರಾಜು, ಕ.ಮು. ಸಂಪಂಗಿ ರಾಮಯ್ಯ ಜಗದೀಶರೆಡ್ಡಿ, ಬೆ.ತಿ. ರಾಜಣ್ಣ ಪ್ರಮುಖವಾಗಿ ಪಾಲ್ಗೊಳ್ಳಬೇಕೆಂದು ನಿಶ್ಚಯಿಸಲಾಗಿತ್ತು.

ಈ ಐದು ಜನರು ಕನ್ನಡದ ಬಾವುಟಗಳೊಂದಿಗೆ, ಘೋಷಣೆಗಳನ್ನು ಕೂಗುತ್ತಾ ಬರುತ್ತಿದ್ದ ರೈಲಿಗೆ ಅಡ್ಡ ನಿಂತರು. ದೂರದಿಂದ ಇದನ್ನು ಗಮನಿಸಿದ ರೈಲಿನ ಚಾಲಕ ಬ್ರೇಕ್ ಹಾಕಿದಾಗ, ಆರಂಭದಲ್ಲಿ ಮಲಗಿದ್ದ ಕ.ಮು. ಸಂಪಂಗಿ ರಾಮಯ್ಯ ಮತ್ತು ಕರ್ಲಮಂಗಲ ಶಂಕರಪ್ಪ ಅವರನ್ನು ಇಂಜಿನ್ನಿನ ಬಂಪರ್ ಪಕ್ಕಕ್ಕೆ ಸರಿಸಿತು. ಆದರೆ, ನಂತರ ಉದ್ದುದ್ದವಾಗಿ ಮಲಗಿದ್ದ ಮು.ಗೋವಿಂದ ರಾಜು ಅವರ ಮೇಲೆ ರೈಲು ಹರಿಯಿತು. ಗೋವಿಂದರಾಜು ಅವರು ತಮ್ಮ ದೇಹವನ್ನು ನಾಡಿಗಾಗಿ ಬಲಿದಾನ ಮಾಡಿದರು.

ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟದಲ್ಲಿ ಮಡಿದ ಏಕೈಕ ಕನ್ನಡಿಗ ಶ್ರೀ ರಂಜಾನ್ ಸಾಬ್. ಆದರೆ, ಅರವತ್ತರ ದಶಕದಲ್ಲಿ ಆರಂಭಗೊಂಡ ಕನ್ನಡ ಚಳುವಳಿಯಲ್ಲಿ ಮೊದಲ ಬಲಿಯಾದದ್ದು ಪ್ರಾಯಶಃ ಮು.ಗೋವಿಂದರಾಜು ಎಂದು ಹೇಳಬಹುದು.

ಡಿಸೆಂಬರ್ ೧೩ರಂದು ಪ್ರಾಣಾರ್ಪಣೆ ಮಾಡಿದ ಗೋವಿಂದರಾಜು ಮುಂದಿನ ಭಾನುವಾರ ನಡೆಯಲಿದ್ದ ನಗರ ಸಭೆಯ ಚುನಾವಣೆಯಲ್ಲಿ ರಾಮಚಂದ್ರಪುರ ಕ್ಷೇತ್ರದಿಂದ ಕನ್ನಡ ಪಕ್ಷದ ಅಭ್ಯರ್ಥಿಯಾಗಿದ್ದರು. ಗೋವಿಂದರಾಜು ಹುತಾತ್ಮರಾದ ದಿನ ಚುನಾವಣಾ ಪ್ರಚಾರವೆಲ್ಲ ಸ್ಥಗಿತಗೊಂಡು, ಇಡೀ ನಗರದ ಜನತೆ ಅವರಿಗೆ ಅಶ್ರುತರ್ಪಣವಿತ್ತಿತು.

ವಿಜಯಿಯಾಗಿ ಕೊರಳಿಗೆ ಜಯಮಾಲೆಯನ್ನು ಹಾಕಿಕೊಳ್ಳಬೇಕಿದ್ದ ಅವರು ಸಾವಿನ ಮಾಲೆಗೆ ಕೊರಳನ್ನಿತ್ತಿದ್ದು ವಿಧಿಯ ವೈಚಿತ್ರ್ಯವೇ ಸರಿ. ಕನ್ನಡದ ಹೋರಾಟಗಳಲ್ಲಿ ಈ ಘಟನೆಯು ಒಂದು ದುಃಖದ ಅಧ್ಯಾಯವೂ ಆಗಿ ಕಪ್ಪು ಚುಕ್ಕೆಯಾಗಿ ಉಳಿದಿದೆ.

❑

ಗೋಕಾಕ್ ವರದಿ ಚಳುವಳಿ

೧.೧೧.೧೯೭೩ ರಂದು 'ಕರ್ನಾಟಕ'ದ ನಾಮಕರಣ ನಡೆದ ಮೇಲೆ ಆ ದಶಕದಲ್ಲಿ ಕನ್ನಡ ಚಳುವಳಿಯು ಹೇಳಿಕೊಳ್ಳುವಂತಹ ಯಾವುದೇ ಹೋರಾಟದಲ್ಲಿ ತೊಡಗಲಿಲ್ಲ. ಚಳುವಳಿಯಲ್ಲಿದ್ದ ಉತ್ಸಾಹ, ಬಿರುಸು ಕ್ರಮೇಣ ತಣ್ಣಗಾಗತೊಡಗಿತು.

ನವೆಂಬರ್ ತಿಂಗಳಿನಲ್ಲಿ ರಾಜ್ಯೋತ್ಸವ ಆಚರಣೆಯಂತಹ ಮಾಮೂಲು ಸಾಂಪ್ರದಾಯಿಕ ಚಟುವಟಿಕೆಗಳಲ್ಲಿ ಸಂಘ ಸಂಸ್ಥೆಗಳು ತೊಡಗಿಕೊಂಡಿದ್ದವು.

ಆದರೆ ಜಡತೆಯಿಂದ ಮಲಗಿದ್ದ ಜನಶಕ್ತಿಯನ್ನು ಪ್ರಚಂಡ ಚಳುವಳಿಯೆಡೆಗೆ ತಿರುಗಿಸಲು ಒಂದು ಕಾರಣಬೇಕಿತ್ತು. ಅದು ಗೋಕಾಕ್ ಚಳುವಳಿಯ ರೂಪದಲ್ಲಿ ಇಡೀ ರಾಜ್ಯದಲ್ಲಿ ವಿದ್ಯುತ್ ಸಂಚಾರದೊಂದಿಗೆ ಆರಂಭವಾಯಿತು. ನಾಡಿನ ಪ್ರತಿಯೊಬ್ಬನೂ, ವಿದ್ಯಾರ್ಥಿ, ಶಿಕ್ಷಕ, ಸಾಹಿತಿ, ಕಲಾವಿದ, ನಟ, ನಟಿಯರು ಕಾರ್ಮಿಕವರ್ಗ, ವೈದ್ಯರು, ವಕೀಲರು ಹೀಗೆ ಸಮಾಜದ ಎಲ್ಲ ಸ್ತರದ ಜನರೂ ತನು ಮನ ಧನ ಪೂರಕವಾಗಿ ಚಳುವಳಿಯಲ್ಲಿ ಭಾಗವಹಿಸಿದ್ದು ಚರಿತ್ರಾರ್ಹ ಸಂಗತಿಯಾಗಿದೆ.

ಬಹುಶಃ ಅಷ್ಟು ದೊಡ್ಡ ಪ್ರಮಾಣದಲ್ಲಿ ನಡೆದ ಆ ಹೋರಾಟ, ಇಡೀ ಕರ್ನಾಟಕದಲ್ಲಿ, ಏಕೀಕರಣಕ್ಕಾಗಿ ನಡೆದ ಹೋರಾಟಕ್ಕೆ ಸಮ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಖಂಡ ಕರ್ನಾಟಕದ ಎಲ್ಲ ವರ್ಗದ ಜನರ ಬೆಂಬಲ ಆ ಹೋರಾಟಕ್ಕೆ ದಕ್ಕಿದಷ್ಟು ಪ್ರಮಾಣದಲ್ಲಿ ಇನ್ನಾವ ಹೋರಾಟದಲ್ಲೂ ದಕ್ಕಿರಲಿಲ್ಲ. ಹಳ್ಳಿಯಿಂದ ಹಿಡಿದು ನಗರಗಳವರೆಗೂ ಏಕ ಪ್ರಕಾರವಾಗಿ ವ್ಯಾಪಿಸಿದ ಹೆಗ್ಗಳಿಕೆಯ ಹೋರಾಟವಿದು.

ಗೋಕಾಕ್ ವರದಿಯ ಹೋರಾಟದ ಹಿನ್ನೆಲೆ

ಪ್ರೌಢಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು, ಸರ್ಕಾರದ ಶಿಕ್ಷಣ ನೀತಿಯ ಪ್ರಕಾರ, ಕನ್ನಡ, ಇಂಗ್ಲೀಷ್, ತೆಲುಗು, ತಮಿಳು ಮೊದಲಾದ ಭಾಷೆಗಳ ಜೊತೆಗೆ ಸಂಸ್ಕೃತವನ್ನು ಸಹ ಪ್ರಥಮ ಭಾಷೆಯ ಸ್ಥಾನದಲ್ಲಿ ಕಲಿಯಬಹುದಾಗಿತ್ತು. ಅಂದರೆ ಸಂಸ್ಕೃತ ಭಾಷೆಯನ್ನು ಮಾತೃಭಾಷೆಗೆ ಸರಿಸಮವೆಂದು ಪರಿಗಣಿಸಲಾಗಿತ್ತು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಪರೀಕ್ಷೆಗಳಲ್ಲಿ ತನ್ನದೇ ಆದ ಮಾತೃಭಾಷೆಯಲ್ಲಿ ಓದಿದ ವಿದ್ಯಾರ್ಥಿಯೊಬ್ಬ ಪ್ರೌಢಶಾಲೆಯಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಓದಲು ಅವಕಾಶ ಕಲ್ಪಿಸಲಾಗಿತ್ತು.

ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗೆ, ಕನ್ನಡವನ್ನು ಪ್ರಥಮ ಭಾಷೆಯಾಗಿ ಆಯ್ಕೆಮಾಡಿಕೊಂಡ ವಿದ್ಯಾರ್ಥಿಗಿಂತ ಹೆಚ್ಚಿನ ಅಂಕಗಳು ದೊರೆಯುವ ಸಾಧ್ಯತೆ ಹೆಚ್ಚಾಗಿತ್ತು. ಕಾರಣ - ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕಗಳನ್ನು ಕೊಡುವ ಪದ್ಧತಿ ಇತ್ತು. ಅಲ್ಲದೆ ಸಂಸ್ಕೃತ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಬರೆಯುವಾಗ ಕನ್ನಡ ಅಥವಾ ಇಂಗ್ಲೀಷ್ ಭಾಷೆಯಲ್ಲಿ ಉತ್ತರಿಸುವ ಅವಕಾಶವಿತ್ತು. ಹೀಗಾಗಿ ಸಂಸ್ಕೃತದಲ್ಲಿ, ಕನ್ನಡಕ್ಕಿಂತ ಹೆಚ್ಚಿನ ಅಂಕಗಳು ಬರುವ ಸಾಧ್ಯತೆಯಿಂದ ಬಹುತೇಕ ವಿದ್ಯಾರ್ಥಿಗಳು, ರ್‍ಯಾಂಕ್ ಪಟ್ಟ ಗಿಟ್ಟಿಸುವುದಕ್ಕೋಸ್ಕರ ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ಪಡೆಯಲು ಹಾತೊರೆಯುತ್ತಿದ್ದರು.

ಸಂಸ್ಕೃತದ ಪಠ್ಯವಸ್ತು ಅತ್ಯಂತ ಸುಲಭವಾಗಿರುವುದರಿಂದಲೂ ಮತ್ತು ಆ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆಯಲು ಅವಕಾಶವಿರುವುದರಿಂದಲೂ ಕನ್ನಡ ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳೂ ಸಹ ಕನ್ನಡವನ್ನು ಪ್ರಥಮ ಭಾಷೆಯಾಗಿ ಆಯ್ಕೆ ಮಾಡುವುದನ್ನು ಬಿಟ್ಟು ಅಧಿಕ ಸಂಖ್ಯೆಯಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಆಯ್ಕೆ ಮಾಡುವುದರಿಂದ ಕನ್ನಡಕ್ಕೆ ಧಕ್ಕೆ ಬರುವುದೆಂಬ ಭೀತಿಯನ್ನು ಹಲವು ಪೋಷಕರು ವ್ಯಕ್ತಪಡಿಸಿದರು. ಅಲ್ಲದೆ ಎಸ್.ಎಸ್.ಎಲ್.ಸಿ. ಯಲ್ಲಿ ರ್‍ಯಾಂಕ್‌ಗಳಿಸಿದವರಲ್ಲಿ ಹೆಚ್ಚು ಜನರು ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ಪರೀಕ್ಷೆಗೆ ಕುಳಿತವರೇ ಆಗಿದ್ದರು. ಕನ್ನಡ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಕೃತದ ಕಡೆಗೆ ಆಕರ್ಷಿತರಾಗಲು ಇದು ಒಂದು ಕಾರಣವೆಂದು ಭಾವಿಸಿದ್ದರು. ಅಲ್ಲಲ್ಲಿ ಇದರ ಟೀಕೆ ಟಿಪ್ಪಣಿಗಳು ಪ್ರಾರಂಭವಾಗಿ ೧೯೭೬ರ ಶಿವಮೊಗ್ಗದ ೪೯ನೆಯ ಸಾಹಿತ್ಯ ಸಮ್ಮೇಳನದಲ್ಲಿ ಈ ವಿಷಯ ಚರ್ಚೆಗೆ ಬಂದಿತು. ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ಕೈಬಿಡಬೇಕೆಂದೂ ಕನ್ನಡ ಭಾಷೆಯನ್ನು ಕನ್ನಡೇತರರ ಮಕ್ಕಳಿಗೆ ಕಡ್ಡಾಯ ಮಾಡಬೇಕೆಂದೂ ಠರಾವು ಮಂಡಿಸಿ ಆ ಠರಾವು ಅಂಗೀಕೃತವಾಯಿತು ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಆ ಠರಾವನ್ನು ಸರ್ಕಾರಕ್ಕೆ ಕಳುಹಿಸಿತು.

ಈ ಠರಾವನ್ನು ಸರ್ಕಾರ ಪರಿಶೀಲಿಸಿ ೧೯೭೯ರ ಅಕ್ಟೋಬರ್ ನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿತು. ಆ ಆಜ್ಞೆಯಂತೆ ಸಂಸ್ಕೃತ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡು ತೃತೀಯ ಭಾಷೆಯ ಸ್ಥಾನವನ್ನು ಪಡೆಯಿತು.

ಈ ಮೇಲಿನ ಸರ್ಕಾರಿ ಆಜ್ಞೆ ಸಾರ್ವಜನಿಕ ಕ್ಷೇತ್ರದಲ್ಲಿ ವಾದ ವಿವಾದಗಳಿಗೆ ಅವಕಾಶ ಮಾಡಿಕೊಟ್ಟು ಸಂಸ್ಕೃತ ಪರವಾದಿಗಳು ಮತ್ತು ಕನ್ನಡ ಪರವಾದಿಗಳು ಒಬ್ಬರಿಗೊಬ್ಬರು ವಿರುದ್ಧವಾಗಿ ನಿಲ್ಲುವಂತಾಯಿತು. ಸರ್ಕಾರ ಪೇಚಿಗೆ ಸಿಲುಕಿತು. ಸಂಸ್ಕೃತಾಭಿಮಾನಿಗಳು ನ್ಯಾಯಾಲಯಕ್ಕೆ ಮೊರೆ ಹೋದರು. ಎರಡೂ ಶಾಸನ ಸಭೆಗಳಲ್ಲಿ ವಿಷಯ ಚರ್ಚೆಯಾಗಿ, ಸರ್ಕಾರ ಈ ಸಮಸ್ಯೆಯನ್ನು ತಜ್ಞರ ಸಮಿತಿಗೆ ವಹಿಸಿ ಸಮಿತಿಯ ಸಲಹೆಯಂತೆ ನಿರ್ಣಯ ಕೈಗೊಳ್ಳಲು ನಿರ್ಧರಿಸಲಾಯಿತು. ಆದರಂತೆ ಸರ್ಕಾರಿ ಆಜ್ಞೆಯು ಹೊರಟು ಸಮಿತಿಯೊಂದರ ರಚನೆಯಾಯಿತು.

ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು

ಸರ್ಕಾರಿ ಆದೇಶ ಕ್ರಮಾಂಕ ಇಡಿ - ೧೧೩ ಎಸ್.ಒ.ಹೆಚ್-೭೯ ದಿನಾಂಕ ೫ನೇ ಜುಲೈ ೧೯೮೦ರಂತೆ ಈ ಕೆಳಗೊಂಡವರ ಸಮಿತಿಯ ರಚನೆಯಾಯಿತು.

೧. **ಡಾ. ವಿ.ಕೃ. ಗೋಕಾಕ್** ... ಅಧ್ಯಕ್ಷರು

೨. **ಶ್ರೀ ಜಿ. ನಾರಾಯಣ** ... ಸದಸ್ಯರು
ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್

೩. **ಪ್ರೊ. ಎಸ್.ಕೆ. ರಾಮಚಂದ್ರರಾವ್**... ಸದಸ್ಯರು
ನಿವೃತ್ತ ಪ್ರಾಧ್ಯಾಪಕರು

೪. **ಪ್ರೊ. ತ.ಸು. ಶಾಮರಾಯ** ... ಸದಸ್ಯರು
ನಿವೃತ್ತ ಕನ್ನಡ ಅಧ್ಯಾಪಕರು

೫. **ಡಾ. ಕೆ. ಕೃಷ್ಣಮೂರ್ತಿ** ... ಸದಸ್ಯರು
ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. **ಡಾ. ಹೆಚ್.ಪಿ. ಮಲ್ಲೇದೇವರು** ... ಸದಸ್ಯರು
ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ
ಮೈಸೂರು ವಿಶ್ವವಿದ್ಯಾಲಯ, ಮೈಸೂರು

೭. **ಶ್ರೀ ಸಾ. ಮಂಚಯ್ಯ** ... ಸದಸ್ಯ ಕಾರ್ಯದರ್ಶಿ
ಅಪರ ಕಾರ್ಯದರ್ಶಿ
ಶಿಕ್ಷಣ ಮತ್ತು ಯುವಜನ ಸೇವಾ ಇಲಾಖೆ
ಕರ್ನಾಟಕ ಸರ್ಕಾರ.

ಸಮಿತಿಗೆ ಪರಿಶೀಲನೆಗಾಗಿ ವಹಿಸಿದ ವಿಷಯಗಳು

೧. ಶಾಲಾ ಪಠ್ಯವಸ್ತುವಿನಲ್ಲಿ ಸಂಸ್ಕೃತ ಅಭ್ಯಾಸದ ವಿಷಯವಾಗಿ ಉಳಿಯಬೇಕೆ?

೨. ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ?

೩. ತ್ರಿಭಾಷಾ ಸೂತ್ರದಂತೆ ಕನ್ನಡ ಕಡ್ಡಾಯ ಮಾಡಿ ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೇ?

ಸಮಿತಿಯು ವರದಿ ಸಲ್ಲಿಸಲು ನೀಡಿದ ಕಾಲಾವಕಾಶ ಮೂರು ತಿಂಗಳು.

ಸಮಿತಿಯು ತನ್ನ ಕಾರ್ಯವನ್ನು ಆರಂಭ ಮಾಡುವುದಕ್ಕೆ ಮುಂಚೆಯೇ ಅದು ಕನ್ನಡ ಪರವಾದಿಗಳಿಂದ ಸಂದೇಹಕ್ಕೊಳಗಾಗುವಂತಾಯಿತು. ಕಾರಣ ಸಮಿತಿಯಲ್ಲಿ ಸಂಸ್ಕೃತವಾದಿಗಳೇ ಹೆಚ್ಚಾಗಿರುವರೆಂದೂ ಅನೇಕ ಕನ್ನಡ ಪರವಾದಿಗಳ ಅನಿಸಿಕೆಯಾಗಿತ್ತು. ಕಾಕತಾಳೀಯ ನ್ಯಾಯವೋ ಎಂಬಂತೆ ಸಮಿತಿಯ ಸದಸ್ಯರಲ್ಲಿ ಬಹು ಪಾಲು ಬ್ರಾಹ್ಮಣರಾಗಿದ್ದು ಅವರೆಲ್ಲರೂ ಸಂಸ್ಕೃತ ಭಾಷೆಯ ಬಗ್ಗೆ ಒಲವು ಹೊಂದಿರುವ ಮನೋಭಾವದವರಾಗಿರುವರೆಂಬ ಸಂದೇಹವು ಕನ್ನಡ ಪರವಾದಿಗಳಲ್ಲಿ ಮೂಡಿತು. ಹಾಗಾಗಿ ಸಮಿತಿಯು ಬೆಂಗಳೂರಿನಲ್ಲಿಯೇ ಮೊದಲ ವಿರುದ್ಧದ ಧ್ವನಿ ಕೇಳಬೇಕಾಯಿತು.

ಸಮಿತಿಯು ಸಾರ್ವಜನಿಕರ ಅಭಿಪ್ರಾಯ, ಮನವಿಗಳನ್ನು ಸಂಗ್ರಹಿಸಲು ಮೊಟ್ಟಮೊದಲಿಗೆ ಧಾರವಾಡಕ್ಕೆ ಭೇಟಿ ನೀಡುವ ಕಾರ್ಯಕ್ರಮವನ್ನು ಹಾಕಿಕೊಂಡಿತು.

ದಿನಾಂಕ ೨೩.೧೦.೧೯೮೦ ರಂದು ಗೋಕಾಕ್ ಸಮಿತಿ ಧಾರವಾಡಕ್ಕೆ ಭೇಟಿ ನೀಡಿದಾಗ ಚಂದ್ರಶೇಖರ ಪಾಟೀಲ, ಬಸವರಾಜ ಕಟ್ಟೀಮನಿ, ಎಂ.ಎಂ. ಕಲಬುರ್ಗಿ, ಚನ್ನವೀರ ಕಣವಿ ಮುಂತಾದವರಿಂದ ಪ್ರತಿಭಟನಾ ಪ್ರದರ್ಶನ ನಡೆಯಿತು. 'ಗೋಕಾಕ್, ಗೋ ಬ್ಯಾಕ್' ಎಂಬ ಘೋಷಣೆಗಳಾಯಿತು. ಮುಂದೆ ಸಮಿತಿಯು ಭೇಟಿ ಕೊಟ್ಟ ಬಹುತೇಕ ಎಲ್ಲಾ ಸ್ಥಳಗಳಲ್ಲಿಯೂ ಅಂದರೆ, ಬೆಳಗಾಂ, ಬಿಜಾಪುರ ಮುಂತಾದ ಕಡೆಗಳಲ್ಲಿಯೂ ಸಹ ವಿರೋಧ ಪ್ರದರ್ಶನಗಳು ನಡೆದುವು.

ಆದರೆ ಸಮಿತಿಯು, "ಯಾವ ಪೂರ್ವಗ್ರಹಗಳಿಲ್ಲದೆ ತನ್ನ ಕಾರ್ಯಕಲಾಪಗಳನ್ನು ಪ್ರಾರಂಭಿಸಿ, ಕನ್ನಡ ಜನತೆಯ ಕಲ್ಯಾಣವೂ ಭಾಷಾಶಿಕ್ಷಣದ ಮೂಲತತ್ವಗಳೂ ತನ್ನ ಅಡಿಗಲ್ಲೆಂದು ಸ್ವೀಕರಿಸಿ" ತನ್ನ ವರದಿಯನ್ನು ಸಲ್ಲಿಸಿತು.

ಈ ಭಾಷಾ ವರದಿಯೇ 'ಗೋಕಾಕ್ ವರದಿ'. ಅದರ ಅನುಷ್ಠಾನಕ್ಕಾಗಿಯೇ ರಾಜ್ಯ ಹಿಂದೆಂದೂ ಕಂಡಿರದ, ಕೇಳಿರದ ಹೋರಾಟಕ್ಕೆ ಅಣಿಯಾಗಿದ್ದು.

ಗೋಕಾಕ್ ವರದಿಯಲ್ಲಿ ಏನಿತ್ತು?

ಅಕ್ಟೋಬರ್ ೧೯೮೦ ರಲ್ಲಿ ರಚಿತವಾದ ಗೋಕಾಕ್ ಸಮಿತಿಯು ಜನವರಿ ೧೯೮೧ರಲ್ಲಿ ತನ್ನ ವರದಿಯನ್ನು ನೀಡಿತು. ಸಂಸ್ಕೃತವಾದಿಗಳೇ ಹೆಚ್ಚಿರುವ ಗೋಕಾಕ್ ಸಮಿತಿಯಿಂದ ಕನ್ನಡಕ್ಕೆ ಧಕ್ಕೆಯಾಗುವ ಪ್ರಸಂಗವೇ ಹೆಚ್ಚಾಗಿರಬಹುದೆಂಬ ಶಂಕೆಯಿಂದಿದ್ದ ಕನ್ನಡಪರ ವಾದಿಗಳಿಗೆ, ಅವರ ಅನುಮಾನವನ್ನು ಬುಡಮೇಲು ಮಾಡಿ ಕನ್ನಡಕ್ಕೆ ಸಿಗಬೇಕಾದ ಪ್ರಾಶಸ್ತ್ಯವನ್ನು ಸಮಿತಿಯು ಪ್ರಕಟಿಸಿದಾಗ ಅತೀವ ಆಶ್ಚರ್ಯದೊಂದಿಗೆ ಸಮಾಧಾನ ಹಾಗೂ ಹರ್ಷವನ್ನು ನೀಡಿತು. ಹಿಂದೆ ಪ್ರತಿಭಟಿಸಿದವರು ಈಗ ವರದಿಯನ್ನು ಒಪ್ಪಲು ಸಿದ್ಧವೆಂದರು. ಅದರ ಜಾರಿಗಾಗಿ ಆಗ್ರಹಿಸಿದರು, ಹೋರಾಟ ಮಾಡಿದರು, ಇತಿಹಾಸ ನಿರ್ಮಾಣ ಮಾಡಿದರು.

ಸಮಿತಿಯ ಶಿಫಾರಸುಗಳು

ಗೋಕಾಕ್ ಸಮಿತಿಯ ರಚನೆಗೆ ಮುನ್ನ	ಗೋಕಾಕ್ ವರದಿಯಂತೆ
೧. ಶಿಕ್ಷಣದ ಯಾವ ಹಂತದಲ್ಲಿಯೂ ಕನ್ನಡ ಕಲಿಕೆ ಕಡ್ಡಾಯವಾಗಿರಲಿಲ್ಲ. ಭಾಷಾ ಅಲ್ಪ ಸಂಖ್ಯಾತರ ಮಕ್ಕಳು ಒಂದನೆಯ ತರಗತಿಯಿಂದ ಕಡೆಯುವರೆಗೂ ಕನ್ನಡವನ್ನು ಓದದೆಯೇ ಪದವಿಯನ್ನು ಪಡೆಯಬಹುದಾಗಿತ್ತು.	ಪ್ರಾಥಮಿಕ ಶಾಲೆಯ ಮೂರನೆಯ ತರಗತಿಯಿಂದ ರಾಜ್ಯದ ಎಲ್ಲ ಶಾಲೆಗಳಲ್ಲಿಯೂ ಕನ್ನಡ ಕಲಿಕೆ ಕಡ್ಡಾಯ. ಪ್ರೌಢಶಾಲೆಯ ಎಂಟು, ಒಂಭತ್ತು ಮತ್ತು ಹತ್ತನೆಯ ತರಗತಿಗಳಲ್ಲಿ ಎಲ್ಲ ವಿದ್ಯಾರ್ಥಿಗಳೂ ೧೫೦ ಅಂಕಗಳ ಏಕೈಕ ಪ್ರಥಮ ಭಾಷೆಯನ್ನಾಗಿ ಕನ್ನಡವನ್ನು ಓದಲೇ ಬೇಕು. ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳಿಗೆ ಈ ಏಕೈಕ ಪ್ರಥಮ ಭಾಷಾ ವ್ಯವಸ್ಥೆ ೧೯೮೧-೮೨ ರಿಂದಲೇ ಜಾರಿಗೊಳ್ಳಬೇಕು.

೨. ೧೯೭೮-೭೯ನೆಯ ಶೈಕ್ಷಣಿಕ ವರ್ಷದಲ್ಲಿ ಪರಿಷ್ಕೃತ ಪಠ್ಯವಸ್ತು ಅನುಷ್ಠಾನಕ್ಕೆ ಬಂದಾಗ ಕನ್ನಡೇತರ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡವನ್ನು ತೃತೀಯ ಭಾಷೆಯನ್ನಾಗಿ ಅಭ್ಯಾಸ ಮಾಡಲು ಅವಕಾಶ ಮಾಡಿಕೊಡಲಾಯಿತು. ಆದರೆ ಈ ಅಭ್ಯಾಸ ಕಡ್ಡಾಯವಾಗಿರಲಿಲ್ಲ. ಸ್ವಇಚ್ಛೆಯಿಂದ ಅಭ್ಯಸಿಸಬಹುದಿತ್ತು.	ಕನ್ನಡೇತರ ಮಕ್ಕಳಿಗೆ ೧೯೮೧-೮೨ರಿಂದ ೧೫೦ ಅಂಕಗಳ ಕನ್ನಡ ಕಡ್ಡಾಯ ಕಲಿಕೆ ಜಾರಿ ಮಾಡಿದರೆ ಕಲಿಕೆ ಕಷ್ಟವಾಗುತ್ತದೆ. ಆದ ಕಾರಣ ಅವರು ೧೯೮೧-೮೨ರಿಂದ ಮೂರನೆಯ ತರಗತಿಯಿಂದ ಕಡ್ಡಾಯ ಕನ್ನಡ ಕಲಿಕೆಯನ್ನು ಆರಂಭಿಸಲಿ. ೧೯೮೬-೮೭ ನೆಯ ಶೈಕ್ಷಣಿಕ ವರ್ಷದಿಂದ ಎಂಟನೆಯ ತರಗತಿಯಲ್ಲಿ ೧೫೦ ಅಂಕಗಳ ಕನ್ನಡ ಕಲಿಯುವ ಚೈತನ್ಯವನ್ನು ಅವರು ಗಳಿಸಿಕೊಳ್ಳುತ್ತಾರೆ.

ಹೀಗೆ ೧೯೮೧ರ ಜನವರಿಯಲ್ಲಿ ಸಮಿತಿ ನೀಡಿದ ವರದಿ ಮುಂದಿನ ಶೈಕ್ಷಣಿಕ ವರ್ಷದಿಂದ ಅಂದರೆ ೧೯೮೧-೮೨ರಿಂದ ಜಾರಿಗೊಳ್ಳಬೇಕಾಗಿತ್ತು. ಆದರೆ ಅದು ಆ ವರ್ಷದಲ್ಲಿ ಜಾರಿಯಾಗುವ ಲಕ್ಷಣಗಳೇ ಕಾಣಬರಲಿಲ್ಲ.

ಹೋಗಲಿ, ಅದರ ಮರುವರ್ಷ ಅಂದರೆ ೧೯೮೨-೮೩ರ ಶೈಕ್ಷಣಿಕ ವರ್ಷದಿಂದ ಜಾರಿಗೊಳಗಾಗಬಹುದೆಂಬ ನಿರೀಕ್ಷೆಯಿದ್ದಿತಾದರೂ ಅದರ ಸುಳಿವೂ ಕಾಣಲಿಲ್ಲ. ೧೯೮೨ರ ಮಾರ್ಚ್ ತಿಂಗಳು ಕಳೆದರೂ ಸರ್ಕಾರದ ಯಾವುದೇ ಆದೇಶಗಳು ಪ್ರಕಟಗೊಳಲಿಲ್ಲ.

ಇದರಿಂದ ಬೇಸತ್ತ ಹಲವಾರು ಸಂಘ ಸಂಸ್ಥೆಗಳು ಸರ್ಕಾರದ ಮೇಲೆ ವರದಿಯ ಅನುಷ್ಠಾನಕ್ಕಾಗಿ ಒತ್ತಡ ತರಲಾರಂಭಿಸಿದರು. ಬಂಡಾಯ ಸಾಹಿತ್ಯ ಸಂಘಟನೆ, ಕನ್ನಡ ಉಳಿಸಿ ಸಮಿತಿಗಳು ಮನವಿಗಳನ್ನು ಅರ್ಪಿಸಿದುವು.

ವರದಿಯ ಅನುಷ್ಠಾನಕ್ಕೆ ಒತ್ತಾಯಿಸಿ ಬೆಂಗಳೂರಿನಲ್ಲಿ, ಬಂಡಾಯ ಸಾಹಿತ್ಯ ಸಂಘಟನೆಯು ಗೋಕಾಕ್ ಸಮಿತಿಯ ಅಧ್ಯಕ್ಷರಾದ ಗೋಕಾಕ್ ಅವರ ಅಧ್ಯಕ್ಷತೆಯಲ್ಲಿಯೇ ಒಂದು ಸಭೆ ಏರ್ಪಡಿಸಿತು. ಆ ಸಭೆಯಲ್ಲಿ ಪಾಟೀಲ ಪುಟ್ಟಪ್ಪನವರೂ ಪಾಲ್ಗೊಂಡಿದ್ದರು. ಈ ಸಂದರ್ಭದ ಮತ್ತೊಂದು ಬೆಳವಣಿಗೆಯೆಂದರೆ, ಒಂದು ಸಾರ್ವಜನಿಕ ಸಭೆಯಲ್ಲಿ, ಸಮಿತಿ ನೇಮಕ ಮಾಡಿದ್ದ ಮುಖ್ಯಮಂತ್ರಿ ಆರ್. ಗುಂಡುರಾಯರು ಗೋಕಾಕ್ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಭರವಸೆಯನ್ನು ನೀಡಿದ್ದು.

ಆದರೆ ಇದಕ್ಕೆ ತಕ್ಷಣವೇ ಬಂದ ಪ್ರತಿಕ್ರಿಯೆ ಸಂಸತ್ ಸದಸ್ಯರಾಗಿದ್ದ, ಅಷ್ಟೇ ಅಲ್ಲ, ಗುಂಡೂರಾಯರ ಆತ್ಮೀಯರೂ ಆಗಿದ್ದ ಎಫ್.ಎಂ. ಖಾನ್ ಅವರು ವ್ಯಕ್ತ ಪಡಿಸಿದ ಆಕ್ಷೇಪಣೆ ಹಾಗೂ ಪ್ರತಿಭಟನಾ ಪ್ರದರ್ಶನ. ವರದಿಯನ್ನು ಜಾರಿಗೊಳಿಸುವುದನ್ನು ಪ್ರತಿಭಟಿಸಿ ನೂರಾರು ಲಾರಿಗಳಲ್ಲಿ ಜನಗಳನ್ನು ಕರೆದು ಕೊಂಡು ಬಂದು ಭಾರೀ ಪ್ರತಿಭಟನಾ ಪ್ರದರ್ಶನವನ್ನು ಆಯೋಜಿಸಿದರು. ಸದಾ ಅಲ್ಪ ಸಂಖ್ಯಾತರನ್ನು ಓಲೈಸಿ ಮತಬ್ಯಾಂಕ್‌ಗಳಾಗಿ ಮಾಡಿಕೊಂಡಿದ್ದ ಆಡಳಿತ ನಾಯಕರು, ವರದಿಯನ್ನು ಅನುಷ್ಠಾನಗೊಳಿಸುವುದರ ಬಗ್ಗೆ ಮತ್ತೆ ಮೌನ ವಹಿಸಿದರು. ವಿಧಿ ಇಲ್ಲದೆ, ಕನ್ನಡಿಗರು ಹೋರಾಟದ ಹಾದಿಗೆ ಧುಮುಕದೆ ಬೇರೆ ಗತ್ಯಂತರವೇ ಇಲ್ಲದ ಪರಿಸ್ಥಿತಿ ಉಂಟಾಯಿತು. ಚಳುವಳಿಯನ್ನು ಹೂಡಲೇಬೇಕಾದ ಅನಿವಾರ್ಯತೆ ಉಂಟಾಯಿತು.

ಗೋಕಾಕ್ ಚಳುವಳಿ

ಹುಬ್ಬಳ್ಳಿಯಲ್ಲಿ ದಿನಾಂಕ ೮.೩.೧೯೮೨ರಂದು ಕನ್ನಡಿಗರ ಕ್ರಿಯಾ ಸಮಿತಿಯ ಸಭೆಯು ಮೂರು ಸಾವಿರ ಮಠದ ಆವರಣದಲ್ಲಿ ಸುಪ್ರಸಿದ್ದ ಕನ್ನಡ ಸಾಹಿತಿ ಶಂ.ಬಾ. ಜೋಷಿಯವರ ಅಧ್ಯಕ್ಷತೆಯಲ್ಲಿ ನಡೆದು ಮುಂದಿನ ಜೂನ್ ತಿಂಗಳಿನಿಂದ ಕನ್ನಡ ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸದೆ ಹೋದರೆ ಚಳುವಳಿ ಆರಂಭಿಸಬೇಕು ಎಂದು ನಿರ್ಧರಿಸಿತು.

ಈ ಸಭೆಯಲ್ಲಿ ಮಾಜಿ ಉಪಕುಲಪತಿ ಡಾ. ಆರ್.ಸಿ. ಹಿರೇಮಠ, ಸಾಹಿತಿ ಬಸವರಾಜ ಕಟ್ಟೀಮನಿ, ಖ್ಯಾತ ಪತ್ರಕರ್ತ ಪಾ.ವೆಂ. ಆಚಾರ್ಯ, ಪ್ರೊ. ಚಂದ್ರಶೇಖರ ಪಾಟೀಲ ಮುಂತಾದವರು ಮಾತನಾಡಿದರು.

ದಿನಾಂಕ ೧೬.೩.೮೨ರಂದು ಪ್ರಥಮ ಹೆಜ್ಜೆಯಾಗಿ ಕನ್ನಡ ಪಕ್ಷವು ವಿಧಾನ ಸೌಧದ ಎದುರು ಆಮರಣ ಉಪವಾಸದ ಪ್ರತಿಭಟನೆಯನ್ನು ಆರಂಭಿಸಿ ಹೋರಾಟಕ್ಕೆ ಚಾಲನೆಯನ್ನು ನೀಡಿತು. ಈ ಕಾರ್ಯಕ್ರಮದಲ್ಲಿ ರೆಹಮಾನ್ ಖಾನ್, ಗೋವಿಂದಳ್ಳಿ ದೇವೇಗೌಡ, ಜಿ.ಎಸ್. ರೇಣುಕಪ್ಪ, ಸುಧಾಮ, ಮಾಜಿ ಶಾಸಕರಾದ ಕೆ. ಪ್ರಭಾಕರ ರೆಡ್ಡಿ ಹಾಗೂ ಪಕ್ಷದ ಅಧ್ಯಕ್ಷರಾದ ಶಿವಪ್ರಸಾದ್, ಸತ್ಯನಾರಾಯಣ ಮಾನೆ ಮುಂತಾದವರಿದ್ದರು.

ಉಪವಾಸದ ಮೂರನೆ ದಿನ ರಹಮಾನ್ ಖಾನರ ಸ್ಥಿತಿ ಚಿಂತಾಜನಕವಾಯಿತು. ಅಂದು ನಡೆಯುತ್ತಿದ್ದ ವಿಧಾನ ಸಭೆಯಲ್ಲಿ ಜೆ.ಎಚ್. ಪಟೇಲ್, ಎಸ್.ಆರ್. ಬೊಮ್ಮಾಯಿ, ಪಿ.ರಾಮದೇವ್ ಮುಂತಾದವರು ವಿಷಯವನ್ನು ಸರಕಾರದ ಗಮನಕ್ಕೆ ತಂದರು. ಮುಖ್ಯ ಮಂತ್ರಿಗಳಾದ ಗುಂಡುರಾಯರು ಗೋಕಾಕ್ ವರದಿ ಪರಿಶೀಲನೆಗೆ ಇನ್ನೊಂದು ಸಮಿತಿಯನ್ನು

ನೇಮಿಸುವುದಾಗಿ ಹೇಳಿ, ಆ ಸಮಿತಿಯ ವರದಿ ಬಂದ ನಂತರ ಅದರ ಆಧಾರದ ಮೇಲೆ ಅನುಷ್ಠಾನಗೊಳಿಸುವುದಾಗಿ ಹೇಳಿದರು.

ದೇವರಾಜ ಅರಸು, ಸಿದ್ಧಯ್ಯ ಪುರಾಣಿಕ ಮುಂತಾದ ಹಿರಿಯರು ಸರಕಾರದ ಈ ಭರವಸೆಯನ್ನು ರೆಹಮಾನ್ ಖಾನರ ಗಮನಕ್ಕೆ ತಂದು ಖಾನರ ಉಪವಾಸವನ್ನು ನಿಲ್ಲಿಸಲು ಅವರ ಮನವೊಲಿಸಿದರು.

ಆದರೆ ಬೆಂಗಳೂರಿನಲ್ಲಿ ಆರಂಭವಾದ ಪ್ರತಿಭಟನೆ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿಯೂ ಹಬ್ಬತೊಡಗಿತು. ಮೈಸೂರಿನಲ್ಲಿಯೂ ಸಹ ಅನೇಕ ಸಂಘ ಸಂಸ್ಥೆಗಳು ಧರಣಿ, ಪ್ರತಿಭಟನೆ ಕಾರ್ಯಕ್ರಮವನ್ನು ಹಮ್ಮಿಕೊಂಡವು.

ಪ್ರೊ. ಯು.ಆರ್. ಅನಂತಮೂರ್ತಿ, ಎಚ್ಚೆಸ್ಕೆ, ಪ್ರೊ. ಎನ್. ಬೋರಲಿಂಗಯ್ಯ ಮುಂತಾದವರಲ್ಲದೆ, ಮೈಸೂರು ವಿದ್ಯಾರ್ಥಿ ಕ್ರಿಯಾ ಸಮಿತಿ, ನಂಜನಗೂಡಿನ ಜಯಕರ್ನಾಟಕಸಂಘ, ಅಣ್ಣಾ ಡಿ.ಎಂ.ಕೆ. ಪಕ್ಷ, ಕರ್ನಾಟಕ ಯುವಜನ ಹೋರಾಟ ಸಮಿತಿ, ಬಸವೇಶ್ವರ ಯುವಕ ಸಂಘ, ಜೈ ಜ್ಯೋತಿ ಕನ್ನಡ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ ಮೊದಲಾದ ಸಂಘ ಸಂಸ್ಥೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು. ಇದೇ ಸಂದರ್ಭದಲ್ಲಿ ಗೋಕಾಕ್ ವರದಿಯನ್ನು ಜಾರಿಗೊಳಿಸದಿದ್ದರೆ ಮುಂದೆ ಮೈಸೂರಿನಲ್ಲಿ ನಡೆಯಲಿರುವ ವಿಶ್ವ ಕನ್ನಡ ಮೇಳವನ್ನು ಬಹಿಷ್ಕರಿಸಬೇಕಾಗುತ್ತದೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು.

ಬಿಜಾಪುರದಲ್ಲಿಯೂ ಸಹ ಗಂಗಾಧರ ಕೊರಳ್ಳಿ ಅವರು ಉಪವಾಸ ಸತ್ಯಾಗ್ರಹ ಆರಂಭಿಸಿ, ಚಳುವಳಿಯ ಇತಿಹಾಸದಲ್ಲಿಯೇ, ದಾಖಲೆಯಾದ, ೪೯ ದಿನಗಳಷ್ಟು ಸುಧೀರ್ಘ ಅವಧಿಯ ಉಪವಾಸ ಸತ್ಯಾಗ್ರಹವನ್ನು ಮಾಡಿದರು.

ಚಳುವಳಿಯ ಮುಂದಿನ ಹಂತವಾಗಿ ದಿನಾಂಕ ೨೬.೩.೮೨ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನಗರದ ನಾನಾ ಕನ್ನಡ ಸಂಘಟನೆಗಳು ಹಾಗೂ ಅದರ ಪ್ರತಿನಿಧಿಗಳು ಸಭೆ ಸೇರಿ, "ಕನ್ನಡ ಸಂರಕ್ಷಣಾ" ಸಮಿತಿ ಎಂಬ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೆಂದು ನಿರ್ಧರಿಸಿದವು. ಅಂದಿನ ಸಭೆಯ ಉದ್ಘಾಟನೆಯನ್ನು ಸಿದ್ಧಯ್ಯ ಪುರಾಣಿಕರು ನೆರವೇರಿಸಿದರು. ಅಧ್ಯಕ್ಷತೆಯನ್ನು ಕೋ. ಚನ್ನಬಸಪ್ಪನವರು ವಹಿಸಿದ್ದರು.

ಈ ಸಭೆಯನ್ನು ಆಯೋಜಿಸಿದ್ದವರು **"ಬಿ.ಇ.ಎಲ್., ಕರ್ನಾಟಕ ಕಾರ್ಮಿಕ ಹಿತರಕ್ಷಕ ಸಮಿತಿ**"ಯವರು.

ಕನ್ನಡ ಸಂರಕ್ಷಣಾ ಸಮಿತಿಯ ಆಶ್ರಯದಲ್ಲಿ ೩೧.೩.೮೨ರಂದು ಮೈಸೂರು ಬ್ಯಾಂಕ್ ವೃತ್ತದಿಂದ ವಿಧಾನ ಸೌಧಕ್ಕೆ ಮೆರವಣಿಗೆಯಲ್ಲಿ ಸಾವಿರಾರು ಮಂದಿ

ಸಾಗಿ ಬಂದರು. ಕನ್ನಡ ಪರವಾದ ಘೋಷಣೆಗಳನ್ನು ಕೂಗುತ್ತಾ, ಕನ್ನಡ ವಿರೋಧಿಗಳಿಗೆ ಧಿಕ್ಕಾರ ಹಾಕುತ್ತಾ ಸಾಗಿದ್ದ ಈ ಮೆರವಣಿಗೆಗಾರರು ಮುಖ್ಯಮಂತ್ರಿಗಳಿಗೆ ಮನವಿಯನ್ನು ಅರ್ಪಿಸಿದರು.

ಧಾರವಾಡದಲ್ಲಿ ಕನ್ನಡ ಕ್ರಿಯಾ ಸಮಿತಿಯ ಚಟುವಟಿಕೆ

ಧಾರವಾಡದಲ್ಲಿ ಆರಂಭಗೊಂಡ ಕನ್ನಡ ಕ್ರಿಯಾ ಸಮಿತಿಯು ಹಿರಿಯ ಸಂಶೋಧಕರಾದ ಶಂ.ಬಾ. ಜೋಷಿಯವರನ್ನು ಅಧ್ಯಕ್ಷರಾಗಿ ಎಂ.ಎಂ. ಕಲಬುರ್ಗಿ ಹಾಗೂ ಚಂದ್ರಶೇಖರ ಪಾಟೀಲರನ್ನು ಕಾರ್ಯದರ್ಶಿಗಳಾಗಿ ಗುಂಜೆಟ್ಟಿ ಅವರನ್ನು ಕೋಶಾಧಿಕಾರಿಗಳನ್ನಾಗಿ ಹೊಂದಿದ್ದು ಚಳುವಳಿಯ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು. ಹಾಗೂ ತನ್ನ ಕಾರ್ಯ ಚಟುವಟಿಕೆಗಳನ್ನು ವಿದ್ಯಾವರ್ಧಕ ಸಂಘದ ಆವರಣದಿಂದ ನಡೆಸುತ್ತಿತ್ತು.

ಈ ಸಂಘಟನೆಗೆ ಬಸವರಾಜ ಕಟ್ಟೀಮನಿ, ರಾ.ಯ. ಧಾರವಾಡಕರ, ಚನ್ನವೀರ ಕಣವಿ, ಆರ್.ಸಿ. ಹಿರೇಮಠ, ಮಾಳವಾಡ, ಪಾಟೀಲ ಪುಟ್ಟಪ್ಪ, ರಾಮಜಾಧವ ಮುಂತಾದವರು ಪ್ರೋತ್ಸಾಹದಾಯಕರಾಗಿದ್ದರು. ಕ್ರಿಯಾ ಸಮಿತಿಯು ಅಲ್ಲಿನ ಎಲ್ಲ ಶಿಕ್ಷಕರು, ಕಲಾವಿದರು, ಸಾಹಿತಿಗಳು ವಿದ್ಯಾರ್ಥಿಗಳನ್ನು ಚಳುವಳಿಗೆ ಪ್ರೇರೇಪಿಸಿ ಚಳುವಳಿಯನ್ನು ತೀವ್ರಗೊಳಿಸಿತು.

ಉಪವಾಸ ಸತ್ಯಾಗ್ರಹದ ಆರಂಭ

ದಿನಾಂಕ ೨.೪.೮೨ರಂದು ಧಾರವಾಡದಲ್ಲಿ ಕನ್ನಡಕ್ಕಾಗಿ ಉಪವಾಸ ಸತ್ಯಾಗ್ರಹ ಆರಂಭವಾಯಿತು.

ಮೊದಲಿಗೆ ನಾಡಿನ ಹಿರಿಯ ಜೀವಿಗಳಾದ ಡಾ. ಶಂ.ಬಾ. ಜೋಷಿ, ಬಸವರಾಜ ಕಟ್ಟೀಮನಿ, ಡಾ. ಆರ್.ಸಿ. ಹಿರೇಮಠ, ಹಾಗೂ ಪಾಟೀಲಪುಟ್ಟಪ್ಪ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ವಿಚಿತ್ರವೆಂದರೆ, ೧೯೮೧ರಲ್ಲಿ ಮಡಿಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ವಯೋವೃದ್ಧ ಶಂ.ಬಾ. ಜೋಷಿಯವರು ಅಧ್ಯಕ್ಷತೆ ವಹಿಸಿದ ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯದ ಮುಖ್ಯಮಂತ್ರಿಯಾದ ಆರ್. ಗುಂಡೂರಾಯರೇ ಗೋಕಾಕ್ ವರದಿಯನ್ನು ಸರ್ಕಾರ ಅಂಗೀಕರಿಸುವುದಾಗಿ ಘೋಷಣೆ ಮಾಡಿದ್ದರು.

ಉಪವಾಸ ಆರಂಭಕ್ಕೆ ಮೊದಲು ಮಾತನಾಡಿದ ಜೋಷಿಯವರು "ಕನ್ನಡ ನನ್ನ ಜೀವಾಳದ ಉಸಿರು. ಈ ಕನ್ನಡ ಅಸ್ತಿತ್ವವನ್ನೇ ಸಂದಿಗ್ಧ ಸ್ಥಿತಿಗೆ ತಳ್ಳುವ

ಹೊಂಚು ಕಾಣುತ್ತಿದೆ. ಆದ ಕಾರಣ, ಈ ಒಳಸಂಚನ್ನು ವಿರೋಧಿಸಲು ನನಗೆ ಅಪ್ರಶಸ್ತವೆಂದು ಎನಿಸುತ್ತಿದ್ದರೂ ಈ ಉಪವಾಸದ ಸರತಿಯ ಅನಿವಾರ್ಯ ಕರ್ತವ್ಯಕ್ಕೆ ಒಪ್ಪಿದ್ದೇನೆ" ಎಂದರು. ಗುರುಪಾದ ಮರೇಗುದ್ದಿ, ಅರುಣ ಕುಮಾರ ಕಾಂಬಳೆ, ವೀರಬಸವ ಬೂದಿಹಾಳ ಅವರು ಸತ್ಯಾಗ್ರದಲ್ಲಿ ಪಾಲ್ಗೊಂಡರು.

೬.೪.೧೯೮೨ರಂದು ಅಖಿಲ ಕರ್ನಾಟಕ ಕನ್ನಡ ಕ್ರಿಯಾ ಸಮಿತಿಯ ಉಪವಾಸ ಸತ್ಯಾಗ್ರಹಕ್ಕೆ ಬೆಂಬಲಿಸಿ, ಕನ್ನಡ ಪಕ್ಷದ ನಾಯಕ ಹಾಗೂ ಶಾಸಕ ಪ್ರಭಾಕರ ರೆಡ್ಡಿ ಹಾಗೂ ಕನ್ನಡ ಪಕ್ಷದ ಅಧ್ಯಕ್ಷ ಶಿವಪ್ರಸಾದ್ ಅವರು ತಾವೂ ಸಹ ನಾಳಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವುದಾಗಿ ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರಿನ ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಉಪಾಧ್ಯಕ್ಷ ಸಿದ್ದಯ್ಯ, ಪ್ರಧಾನ ಕಾರ್ಯದರ್ಶಿ ಹನುಮಂತಯ್ಯ, ವಿದ್ಯಾರ್ಥಿನಾಯಕ ಸತ್ಯ ಹಾಗೂ ಹೆಚ್.ಎನ್. ವಿಜಯಕುಮಾರ್‌ರವರುಗಳು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಬೆಂಗಳೂರಿನಲ್ಲಿ ಕನ್ನಡ ಜಾಗೃತಿ ಸಮಾವೇಶ

ದಿನಾಂಕ ೬.೪.೮೨ರಂದು ಬೆಂಗಳೂರಿನಲ್ಲಿ ಕನ್ನಡ ಜಾಗೃತಿ ಸಮಾವೇಶವನ್ನು ಜಿ. ನಾರಾಯಣರು ಆಯೋಜಿಸಿದರು. ಇದರಲ್ಲಿ ಎಂ.ಚಿದಾನಂದ ಮೂರ್ತಿ, ಕ.ನಂ.ನಾಗರಾಜ, ಪಿ.ವಿ. ನಾರಾಯಣ ಮುಂತಾದವರು ಭಾಗವಹಿಸಿ ಚಳುವಳಿಯು ಮುಂದೆ ಸಾಗಬೇಕಾದ ಹಾದಿಯನ್ನು ಚರ್ಚಿಸಿದರು. ೧೩.೪.೮೨ರಂದು ಬೆಂಗಳೂರಿನಲ್ಲಿ ಸಾಹಿತಿ ಕಲಾವಿದರೇ ಹೆಚ್ಚಾಗಿದ್ದು, ಅಭೂತಪೂರ್ವ ರೀತಿಯಲ್ಲಿ, ಮೌನವಾಗಿ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟನೆಯನ್ನು ಪ್ರದರ್ಶಿಸಿದರು.

ಪ್ರಾರಂಭದಲ್ಲಿ ವಯೋವೃದ್ಧರೂ ಹಿರಿಯ ಸಾಹಿತಿಗಳೂ ಪತ್ರಕರ್ತರೂ ಆದ ಬಿ. ಪುಟ್ಟಸ್ವಾಮಯ್ಯನವರು ಸಾಂಕೇತಿಕವಾಗಿ ಭಾಗವಹಿಸಿ ಗೋಕಾಕ್ ವರದಿಯ ಜಾರಿಗೆ ಒತ್ತಾಯಪಡಿಸಿದರು.

ಸೆಂಟ್ರಲ್ ಕಾಲೇಜಿನಿಂದ ಆರಂಭಗೊಂಡ ಮೆರವಣಿಗೆಯಲ್ಲಿ ಡಾ. ಸಿದ್ಧಯ್ಯ ಪುರಾಣಿಕ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಂ.ಶ್ರೀ. ಮುಗಳಿ, ಜಿ.ಎಸ್. ಶಿವರುದ್ರಪ್ಪ, ಪಿ. ಲಂಕೇಶ್, ಎಂ. ಚಿದಾನಂದ ಮೂರ್ತಿ, ಕೋ. ಚೆನ್ನಬಸಪ್ಪ, ಕೆ.ಎಸ್. ನಿಸಾರ್ ಅಹ್ಮದ್, ಎಸ್.ಆರ್. ಮಳಗಿ,

ಮಾವಿನಕೆರೆ ರಂಗನಾಥನ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಬರಗೂರು ರಾಮಚಂದ್ರಪ್ಪ, ಕೆ.ವಿ. ನಾರಾಯಣ, ಪಿ.ವಿ. ನಾರಾಯಣ, ಚಿ. ಶ್ರೀನಿವಾಸ ರಾಜು, ಎಚ್. ದೇವೀರಪ್ಪ ಮುಂತಾದವರೇ ಅಲ್ಲದೆ ಕನ್ನಡ ಚಳುವಳಿಗಾರರು, ವಿದ್ಯಾರ್ಥಿಗಳು, ಅಕೌಂಟೆಂಟ್ ಜನರಲ್ ಕಛೇರಿಯ ಕನ್ನಡ ಕ್ರಿಯಾಸಮಿತಿಯವರು ಭಾಗವಹಿಸಿದ್ದರು.

ಮೌನ ಮೆರವಣಿಗೆಯನ್ನು ಬೆಂಬಲಿಸಿ ಸೂರ್ಯ ನಾರಾಯಣ ಚಡಗ ಅವರ ನೇತೃತ್ವದಲ್ಲಿ ರಾಜಾಜಿನಗರದಿಂದ ಹೊರಟ ಯುವಕರ ಮೆರವಣಿಗೆ ಮಧ್ಯಾಹ್ನ ಕಬ್ಬನ್ ಪಾರ್ಕ್‌ಗೆ ಬಂದು ತಲುಪಿತು. ಮೆರವಣಿಗೆಯಲ್ಲಿ ವಯೋವೃದ್ಧರೂ ಹಿರಿಯಸಾಹಿತಿಗಳೂ ಆದ ಬಿ. ಪುಟ್ಟ ಸ್ವಾಮಯ್ಯ ಹಾಗೂ ಎಂ.ವಿ. ಸೀತಾರಾಮಯ್ಯ ಅವರಂತಹವರೂ ಇದ್ದುದು ಕಿರಿಯರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿತು. ಈ ಮೆರವಣಿಗೆಯ ಮತ್ತೊಂದು ವಿಶೇಷವೆಂದರೆ ಕನ್ನಡ ಚಳುವಳಿಯ ಮುಖಂಡರಾಗಿದ್ದ ಜಿ. ನಾರಾಯಣಕುಮಾರ್ ಅವರೂ ಇದರಲ್ಲಿ ಭಾಗವಹಿಸಿದ್ದು.

ಕನ್ನಡಪರ ಘೋಷಣೆಗಳ ಭಿತ್ತಿ ಫಲಕಗಳನ್ನು ಹೊಂದಿದ್ದ ಈ ಅಭೂತ ಪೂರ್ವ ಮೌನ ಮೆರವಣಿಗೆ ವಿಧಾನ ಸೌಧದ ಬಳಿ ಬಂದಾಗ ಪೋಲೀಸರು ಸರ್ಕಾರಿ ಮುದ್ರಣಾಲಯದ ಬಳಿ ತಡೆದರು. ಹಾಗೂ ಮುಂದುವರೆದ ಮೆರವಣಿಗಾರರು ಗೋಪಾಲಗೌಡ ವೃತ್ತದ ಬಳಿ ಸಭೆ ಸೇರಿ ಗೋಕಾಕ್ ವರದಿಯ ಜಾರಿಗೆ ಒತ್ತಾಯಿಸಿ ಭಾಷಣ ಮಾಡಿ ಸರದಿ ಉಪವಾಸ ಮುಷ್ಕರ ಆರಂಭಿಸಿದರು.

ಮೊದಲ ದಿನದಂದು ಶ್ರೀಯುತರಾದ ರಂ.ಶ್ರೀ. ಮುಗಳಿ, ಎಂ.ವಿ. ಸೀತಾರಾಮಯ್ಯ, ಸಿದ್ಧಯ್ಯ ಪುರಾಣಿಕ, ಹೆಚ್. ದೇವೀರಪ್ಪ, ಜಿ.ಎಸ್. ಶಿವರುದ್ರಪ್ಪ, ಹೆಚ್.ಎಸ್. ಪಾರ್ವತಿ, ಜಿ.ವೈ. ಹುಬ್ಳೀಕರ್, ಎಸ್.ಆರ್. ಮಳಗಿ, ಜಿ.ವಿ. ಶಿವಸ್ವಾಮಿ, ತ್ರಿವಿಕ್ರಮ ಮುಂತಾದವರು ಪಾಲ್ಗೊಂಡಿದ್ದರು. ರಂಗಭೂಮಿ ಕ್ರಿಯಾ ಸಮಿತಿ, ಚಲನಚಿತ್ರ ಮಂಡಲಿಗಳು ಚಳುವಳಿಗೆ ಧುಮುಕಿದುವು.

ದಿನಾಂಕ ೧೫.೪.೮೨ರಂದು ವರನಟ ಡಾ. ರಾಜಕುಮಾರ್ ಅವರು ಒಂದು ಹೇಳಿಕೆಯನ್ನು ನೀಡಿ ಗೋಕಾಕ್ ವರದಿಯ ಜಾರಿಯ ಬಗ್ಗೆ ಯಾರೇ ಚಕಾರವೆತ್ತಿದರೂ ಅಂಥವರು ಕನ್ನಡ ನಾಡು ನುಡಿಗೆ ದ್ರೋಹ ಬಗೆದಂತೆ ಎಂದು ಹೇಳಿ ಚಳುವಳಿಗೆ ತಮ್ಮ ಎಲ್ಲ ರೀತಿಯ ಬೆಂಬಲ ಸೂಚಿಸಿದರು. ಅವರ ಈ ಹೇಳಿಕೆ ಇತರ ನಟರೂ ಸಹ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಕವಾಯಿತು.

ಸತ್ಯಾಗ್ರಹ ಶಿಬಿರಕ್ಕೆ ರಾಜ್ ಭೇಟಿ

೧೭.೪.೮೨ ರಂದು ಉಪವಾಸ ನಿರತವಾಗಿದ್ದ ಸಾಹಿತಿ ಕಲಾವಿದರ ಶಿಬಿರಕ್ಕೆ ಬಂದ ರಾಜಕುಮಾರ್ ಅವರು ಸತ್ಯಾಗ್ರಹನಿರತರಿಗೆ ತಮ್ಮ ಬೆಂಬಲವನ್ನು ಸೂಚಿಸಿ, ಗೋಕಾಕ್ ವರದಿಯನ್ನು ಸರ್ಕಾರವು ಒಪ್ಪಿಕೊಂಡು ಜಾರಿ ಮಾಡಬೇಕು ಎಂದು ಆಗ್ರಹಪಡಿಸಿದರು. "ಹೆತ್ತ ತಾಯಿ ಎಷ್ಟು ಮುಖ್ಯವೋ ನಾಡಿಗೆ ಭಾಷೆಯೂ ಅಷ್ಟೇ ಮುಖ್ಯ. ತಾಯಿನಾಡು ಬೇರೆ ಅಲ್ಲ, ಕನ್ನಡ ಬೇರೆ ಅಲ್ಲ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆ ಆಗಬೇಕು" ಎಂದು ಅವರು ಹೇಳಿದರು. "ಎಂಭತ್ತು ವರ್ಷದ ಹಿರಿಯ ಸಾಹಿತಿಗಳೂ, ಕವಿಗಳೂ, ಅನ್ನನೀರು ಬಿಟ್ಟು ಉಪವಾಸ ಇದ್ದಾರೆ ಎಂದ ಮೇಲೆ ರಾಜಕುಮಾರನೂ ಅದೇ ಸ್ಥಾನದಲ್ಲಿರುತ್ತಾನೆ" ಎಂದು ಅವರು ಹೇಳಿದಾಗ ಜನ ಉತ್ಸಾಹದಿಂದ ಚಪ್ಪಾಳೆ ತಟ್ಟಿದರು. ಅಲ್ಲದೆ "ಕನ್ನಡಕ್ಕಾಗಿ ಎಲ್ಲ ಪದವಿ ಮತ್ತು ಪ್ರಶಸ್ತಿಗಳ ತ್ಯಾಗಕ್ಕೆ ಸಿದ್ಧನಾಗಿದ್ದೇನೆ" ಎಂದು ಘೋಷಿಸಿದರು.

ಚಿತ್ರನಟರಾದ ಶಿವರಾಂ, ದಿನೇಶ್, ಅಶೋಕ್, ಲೋಕೇಶ್, ಶಂಕರನಾಗ್, ಅನಂತನಾಗ್, ಅಂಬರೀಶ್, ಮುಸುರಿ ಕೃಷ್ಣಮೂರ್ತಿ, ಜೈ ಜಗದೀಶ್, ಚಂದ್ರಶೇಖರ್, ಹಾಗೂ ಕನ್ನಡ ಚಳುವಳಿಯ ನಾಯಕ ಜಿ. ನಾರಾಯಣ ಕುಮಾರ್ ಮತ್ತು ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಮೇಗೌಡ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಆ ಸಮಯದಲ್ಲಿ ಜನ ಜಂಗುಳಿ ಜಾಸ್ತಿಯಾಗಿ ರಾಜಕುಮಾರ್ ಅವರ ರಕ್ಷಣೆಗೆ ಬಂದ ಪೋಲೀಸರು ಅವರನ್ನು ಬಂಧಿಸಿದ್ದಾರೆಂಬ ಸುದ್ದಿ ಹರಡಿ, ಜನ ರೊಚ್ಚಿಗೆದ್ದರು. ಪೋಲಿಸರು ಅಶ್ರುವಾಯು ಸಿಡಿಸಿ ಬೆತ್ತ ಪ್ರಹಾರ ಮಾಡಿದರು.

ಉದ್ರಿಕ್ತ ಜನರಿಂದ ಸರ್ಕಾರೀ ವಾಹನಗಳು, ಬಿ.ಟಿ.ಎಸ್. ಬಸ್‌ಗಳು ಹಾನಿಗೊಳಗಾದವು. ಚಿತ್ರ ನಿರ್ಮಾಪಕರಾದ ಮಾವಿನಕೆರೆ ರಂಗನಾಥ ಮತ್ತು ಟಿ.ಜಿ.ಆರ್. ಆರಾಧ್ಯ ಅವರುಗಳ ಕಾರುಗಳೂ ಸಹ ಹಾನಿಗೀಡಾದುವು.

ಮೈಸೂರಿನಲ್ಲಿ ಚಳುವಳಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ದಿನಾಂಕ ೧೧.೪.೮೨ರಂದು ಗೋಕಾಕ್ ವರದಿಯನ್ನು ಜಾರಿಗೆ ತರುವಂತೆ ಆಗ್ರಹಿಸಲು ಸರದಿ ಉಪವಾಸ ಸತ್ಯಾಗ್ರಹವನ್ನು ತಾತಯ್ಯನವರ ಪ್ರತಿಮೆ ಬಳಿ (ಲ್ಯಾನ್ಸ್ ಡೌನ್ ಬಿಲ್ಡಿಂಗ್ ಎದುರು) ಉದ್ಘಾಟಿಸಲಾಯಿತು.

ಉದ್ಘಾಟನಾಭಾಷಣವನ್ನು ಮಾಡಿದ ರಾಷ್ಟ್ರಕವಿ ಕುವೆಂಪು ಅವರು "ಕನ್ನಡದ ಪ್ರಥಮ ಸ್ಥಾನವನ್ನು ಒಪ್ಪದವರು, ಕನ್ನಡ ಕಲಿಯಲೊಲ್ಲದವರು ಕರ್ನಾಟಕವನ್ನು ಬಿಟ್ಟು ಹೋಗಬೇಕೆಂದು" ಹೇಳಿದರು. "ಕನ್ನಡವನ್ನು ಇನ್ನು ಮೇಲೆ ಪ್ರಥಮ ಭಾಷೆ ಅಂತ ಕರೀಬೇಡಿ, ಅದನ್ನು ರಾಜ್ಯ ಭಾಷೆ ಎಂದು ಕರೆಯಿರಿ." ಎಂದೂ ಹೇಳಿದರು. ಗೋಕಾಕ್ ವರದಿಯು ಕರ್ನಾಟಕಕ್ಕೆ ಮಾತ್ರವಲ್ಲ, ಇತರ ಎಲ್ಲಾ ರಾಜ್ಯಗಳಿಗೂ, ಕೇಂದ್ರ ಸರ್ಕಾರಕ್ಕೂ ಆದರ್ಶಪ್ರಾಯವಾದುದು ಎಂದು ಹೇಳಿದ ಅವರು ಇದೇ ಸೂತ್ರವನ್ನು ಅನುಸರಿಸುವಂತೆ ಕೇಂದ್ರ ಹಾಗೂ ಎಲ್ಲ ರಾಜ್ಯ ಸರ್ಕಾರಗಳಿಗೂ ಕರೆಯಿತ್ತರು.

ಸಮಾರಂಭದಲ್ಲಿ, ಧಾರವಾಡದಲ್ಲಿ ನಡೆದ ೨೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ವ್ಯಾಕರಣತೀರ್ಥ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಉಪಸ್ಥಿತರಿದ್ದುದು ಒಂದು ವೈಶಿಷ್ಟ್ಯವಾಗಿತ್ತು.

ಸತ್ಯಾಗ್ರಹ ಪ್ರಾರಂಭಿಸಿದ ಪ್ರಥಮ ತಂಡದಲ್ಲಿ ಡಾ. ಎಸ್.ಎಲ್. ಭೈರಪ್ಪ, ಬಿ.ಎಸ್. ಅನಂತರಂಗಾಚಾರ್, ದೇವಯ್ಯ ಹರವೆ, ಶ್ರೀಮತಿ ವಿಜಯಾಶಂಕರ್, ಕುಮಾರಿ ಕೀರ್ತಿ ಶ್ರೀ ನಾಯಕ, ಹಾಗೂ ಪುಟಾಣಿಗಳಾದ ಅಭಯ, ಪೃಥ್ವಿ, ಹಾಗೂ ತೇಜಸ್ವಿಯವರು ಭಾಗವಹಿಸಿದ್ದರು.

ಪ. ಮಲ್ಲೇಶ್ ಅಧ್ಯಕ್ಷರಾಗಿದ್ದ ಕನ್ನಡ ಕ್ರಿಯಾ ಸಮಿತಿಯಲ್ಲಿ ಶ್ರೀಮತಿ ಡಿ. ವಿಜಯು, ಕೆ. ರಾಮದಾಸ್, ಎಂ.ಪಿ. ವಸಂತಕುಮಾರ್, ಹೆಚ್.ಎಸ್. ರಾಮಚಂದ್ರಗೌಡ, ಡಾ. ಕೆ. ರಾಮಲಿಂಗಂ, ರಮೇಶ್ ಚಂದ್ರ, ವೈ. ಮಹೇಶ್, ಶಿವರಾಮ ಕಾಡನ ಕುಪ್ಪೆ, ಎನ್. ಈಶ್ವರ್ ಮುಂತಾದವರು ಮೈಸೂರಿನಲ್ಲಿ ಚಳುವಳಿಯನ್ನು ಮುಂದುವರೆಸಿದರು.

ಮಾನಸ ಗಂಗೋತ್ರಿಯಲ್ಲಿ ಮುಖ್ಯಮಂತ್ರಿ ಸಭೆಗೆ ಅಡ್ಡಿ

೧೩.೪.೮೨ರಂದು ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿ ಮುಖ್ಯಮಂತ್ರಿ ಆರ್. ಗುಂಡುರಾವ್ ಅವರು ಪ್ರಾಣಿಶಾಸ್ತ್ರ ಇಲಾಖೆಯ ರೇಷ್ಮೆ ವಿಭಾಗವನ್ನು ಉದ್ಘಾಟಿಸಲು ಬಂದಾಗ ಅವರ ವಿರುದ್ಧ ತಿರುಗಿ ಬಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠೀ ಪ್ರಹಾರ ನಡೆಸುವುದರೊಂದಿಗೆ ಗೋಕಾಕ್ ವರದಿ ಚಳುವಳಿ ಹೊಸ ತಿರುವನ್ನು ಪಡೆಯಿತು.

ಲಾಠೀ ಪ್ರಹಾರದಲ್ಲಿ ಇಬ್ಬರು ವಿದ್ಯಾರ್ಥಿಗಳೂ ಹಾಗೂ ಮೈಸೂರಿನ "ಆಂದೋಲನ" ದಿನ ಪತ್ರಿಕೆಯ ಸಂಪಾದಕ ರಾಜಶೇಖರ ಕೋಠಿಯವರೂ ಗಾಯಗೊಂಡರು.

ಸುಮಾರು ೨೦೦೦ಕ್ಕೂ ಮೀರಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದ ಗುಂಪು ಮುಖ್ಯಮಂತ್ರಿಯವರು ಕಾರಿನಿಂದಿಳಿಯುತ್ತಲೇ, ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ "ಗುಂಡೂರಾವ್‌ಗೆ ಧಿಕ್ಕಾರ" ಎಂದು ಕೂಗುತ್ತ ಮುಂದೆ ಬಂದರು. ಈ ಹಂತದಲ್ಲಿ ಪೋಲೀಸರು ಪ್ರವೇಶಿಸಿ ಪಿ. ಮಲ್ಲೇಶ್, ಸ.ರ. ಸುದರ್ಶನ, ಕೆ. ರಾಮದಾಸ್, ಮಳಲಿ ವಸಂತ ಕುಮಾರ್ ಅವರನ್ನು ಎಳೆದಾಡತೊಡಗಿದರು. ೨೪ ಜನ ಮಹಿಳೆಯರೂ ಸೇರಿದಂತೆ ಸುಮಾರು ೭೫ ಜನ ಪ್ರದರ್ಶಕರನ್ನು ೩ ವ್ಯಾನುಗಳಲ್ಲಿ ತುಂಬಿಕೊಂಡು ಹೋದರು. ನಂತರ ವಿದ್ಯಾರ್ಥಿ ಪ್ರದರ್ಶಕರ ಒತ್ತಾಯಕ್ಕೆ ಮಣಿದು ಅವರೆಲ್ಲರನ್ನೂ ಮಧ್ಯಾಹ್ನ ಬಿಡುಗಡೆ ಮಾಡಲಾಯಿತು.

ಇದಕ್ಕೆ ಪ್ರತಿಯಾಗಿ ದಿನಾಂಕ ೧೫.೪.೧೯೮೨ ರಂದು ಪೋಲೀಸರ ದೌರ್ಜನ್ಯದ ವಿರುದ್ಧ ತರಗತಿಗಳನ್ನು ಬಹಿಷ್ಕರಿಸಿ ಪ್ರದರ್ಶನ ನಡೆಸಿದ ವಿದ್ಯಾರ್ಥಿಗಳು, ಪೋಲೀಸರು ತಮ್ಮ ಮೇಲೆ ನಡೆಸಿದ ದೌರ್ಜನ್ಯಕ್ಕೆ ಮೂಕ ಪ್ರೇಕ್ಷಕರಾಗಿದ್ದಕ್ಕೆ ಹಾಗೂ ಇಂಗ್ಲೀಷಿನಲ್ಲಿ ಮಾತನಾಡಿದ್ದಕ್ಕೆ ಉಪಕುಲಪತಿಗಳು ವಿದ್ಯಾರ್ಥಿಗಳ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

"ತಪ್ಪಿದ್ದರೆ ಕ್ಷಮೆ ಕೇಳಲು" ಹಿಂಜರಿಯುವುದಿಲ್ಲ ಎಂದು ತಿಳಿಸಿದ ಉಪಕುಲಪತಿ ಪ್ರೊ. ಹೆಗಡೆಯವರು ಗೋಕಾಕ್ ವರದಿಯನ್ನು ಬೆಂಬಲಿಸಿ ತಾವೂ ಪತ್ರಿಕಾ ಹೇಳಿಕೆ ನೀಡುವುದಾಗಿ ತಿಳಿಸಿದರು.

೧೮.೪.೮೨ರಂದು ಮೈಸೂರಿನ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದ ನಟ ವಿಷ್ಣುವರ್ಧನ್ ಅವರು ಅಭಿಮಾನಿಗಳೊಂದಿಗೆ ಮೆರವಣಿಗೆಯಲ್ಲಿ ಉಪವಾಸ ಸತ್ಯಾಗ್ರಹ ನಡೆಯುತ್ತಿದ್ದ ಸ್ಥಳಕ್ಕೆ ಕನ್ನಡಪರ ಘೋಷಣೆಗಳೊಂದಿಗೆ ಆಗಮಿಸಿದರು. ನಟ ಧೀರೇಂದ್ರ ಗೋಪಾಲ್, ಎಂ.ಪಿ. ಶಂಕರ್ ಅವರುಗಳು ಮಾತನಾಡಿ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದರು. ದ್ವಾರಕೀಶ್, ಸುಧೀರ್, ಚೇತನ್ ರಾಮರಾವ್ ಅವರುಗಳು ಸಹ ತಮ್ಮ ಬೆಂಬಲವನ್ನು ಘೋಷಿಸಿದರು. ಶ್ರೀ ಶಂಕರ್ ಅವರ ಪತ್ನಿ ಹಾಗೂ ಮಕ್ಕಳೂ ಸಹ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

ಹಿರಿಯ ಸಾಹಿತಿಗಳಾದ ತ.ರಾ.ಸು. ಅವರು ಮೈಸೂರಿನ ಪುರಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನ್ನಾಡುತ್ತಾ, "ನನಗೆ ಹೆಚ್ಚು ದಿನ ಬದುಕುವ ಆಸೆ ಇಲ್ಲ, ಕನ್ನಡವನ್ನು ಬದುಕಿಸುತ್ತೇವೆಂಬ ವಚನವನ್ನು ಕೊಡಿ" ಎಂದು ಕಣ್ಣೀರು ತುಂಬಿಕೊಂಡು ಕೇಳಿದರು.

ಕೆ.ವಿ. ಶಂಕರಗೌಡರ ಬೆಂಬಲ

ಮಂಡ್ಯದ ಸತ್ಯಾಗ್ರಹ ಶಿಬಿರಕ್ಕೆ ೧೮.೪.೧೯೮೨ ರಂದು ಭೇಟಿ ನೀಡಿದ ಮಾಜಿ ಸಚಿವ ಶಂಕರಗೌಡರು ಚಳುವಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ಮಂಡ್ಯದ ಮುಸ್ಲಿಂ ಸಂಘದ ಅಧ್ಯಕ್ಷ ಅಬ್ದುಲ್ ಸಲಾಂ, ಕೋಶಾಧ್ಯಕ್ಷ ರಫೀಜ್ ಹಾಗೂ ಸದಸ್ಯ ಹಬೀದ್ ಅವರು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದೇ ಅಲ್ಲದೆ "ಗೋಕಾಕ್ ವರದಿಯಿಂದ ಉರ್ದುವಿಗೆ ಎಳ್ಳಷ್ಟೂ ಹಾನಿಯಿಲ್ಲ. ಕನ್ನಡದ ನೆಲದ ಅನ್ನ ಉಣ್ಣುವ ಮುಸ್ಲಿಮರು ಕನ್ನಡಕ್ಕೆ ಏಕೆ ವಿರೋಧ ತೋರಬೇಕು? ಉರ್ದುವಿಗೇ ಏಕೆ ಜೋತು ಬೀಳಬೇಕು?" ಎಂದು ಪ್ರಶ್ನಿಸಿದ ಅವರು "ನೆಲದ ಋಣ ತೀರಿಸಲು ರಾಜ್ಯದ ಮುಸ್ಲಿಮರು ಕನ್ನಡ ಕಲಿಯಬೇಕು. ಸಾಹಿತಿಗಳಾಗಿ ಅಚ್ಚ ಕನ್ನಡಿಗರನ್ನು ಮೀರಿಸಬೇಕು" ಎಂದು ತಮ್ಮ ಬಾಂಧವರಿಗೆ ಕರೆ ನೀಡಿದರು.

ಚಿತ್ರದುರ್ಗದಲ್ಲಿ ಬಂದ್ ಆಚರಣೆ-ಗೋಲಿಬಾರ್

೧೭.೪.೧೯೮೨ರಂದು ಗೋಕಾಕ್ ವರದಿಯ ಜಾರಿಗೆ ಒತ್ತಾಯಿಸಿ ಚಿತ್ರದುರ್ಗದಲ್ಲಿ ನಡೆದ ಬಂದ್ ಆಚರಣೆಯ ಸಂದರ್ಭ ಗೋಕಾಕ್ ವರದಿಯ ಪರ-ವಿರೋಧ ಪ್ರದರ್ಶನದಲ್ಲಿ ಎರಡು ಗುಂಪುಗಳ ಮಧ್ಯೆ ತೀವ್ರ ಸಂಘರ್ಷಕ್ಕೆ ಒಳಗಾಯಿತು. ಗಲಭೆ ನಿಯಂತ್ರಿಸಲು ಪೋಲೀಸರು ಗೋಲಿಬಾರ್ ಮಾಡಲೇಬೇಕಾದ ಅನಿವಾರ್ಯತೆ ಉಂಟಾಗಿ ಇಬ್ಬರು ತಮ್ಮ ಪ್ರಾಣವನ್ನು ಬಲಿಕೊಡಬೇಕಾಯಿತು.

ಜಮಖಂಡಿಯಲ್ಲಿ ಗೋಕಾಕ್ ವರದಿ ಜಾರಿ ಪರ ಹಾಗೂ ವಿರೋಧೀ ಗುಂಪುಗಳ ಮಧ್ಯೆ ವಾಗ್ವಾದಗಳು ಆರಂಭವಾಗಿ ದೊಡ್ಡ ಅನಾಹುತವೇ ನಡೆಯಬೇಕಾಗಿದ್ದು ಪೋಲೀಸರು ಸಕಾಲದಲ್ಲಿ ಮಧ್ಯೆ ಪ್ರವೇಶಿಸಿ ಘರ್ಷಣೆಯನ್ನು ತಪ್ಪಿಸಿದರು.

೧೮.೪.೧೯೮೨ರಂದು ಬೆಂಗಳೂರಿನಲ್ಲಿ ನಿಷೇಧಾಜ್ಞೆ ಜಾರಿಯಿದ್ದರೂ ಸಹ ಅದನ್ನು ಉಲ್ಲಂಘಿಸಿ ಪ್ರದರ್ಶನ ನಡೆಸಲು ಯತ್ನಿಸಿದ ಚಳುವಳಿಗಾರರನ್ನು ಪೋಲೀಸರು ಬಂಧಿಸಿದರು.

ಹಿರಿಯ ಸಾಹಿತಿಗಳಾದ ಶ್ರೀರಂಗ, ಜಿ.ಎಸ್. ಶಿವರುದ್ರಪ್ಪ, ಸಿದ್ಧಯ್ಯ ಪುರಾಣಿಕ, ಡಾ. ಎಂ. ಚಿದಾನಂದ ಮೂರ್ತಿ ಮುಂತಾದವರೇ ಅಲ್ಲದೆ ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ಬಿ.ವಿ. ವೈಕುಂಠ ರಾಜು, ಸಿದ್ದಲಿಂಗಯ್ಯ, ಸುಮತೀಂದ್ರ ನಾಡಿಗ, ಪಿ.ವಿ. ನಾರಾಯಣ, ಜಿ.ಕೆ. ಸತ್ಯ,

ಮಾವಿನಕೆರೆ ರಂಗನಾಥ, ಬೋರಲಿಂಗಯ್ಯ, ಕೋಡಿ ಹೊಸಹಳ್ಳಿ ರಾಮಣ್ಣ, ಲಕ್ಷ್ಮಣ ಕೊಡಸೆ ಮೊದಲಾದವರು ಬಂಧನಕ್ಕೆ ಒಳಗಾದರು. ಕನ್ನಡ ಚಳುವಳಿ ಕೇಂದ್ರದ ಸಮಿತಿಯ ಅಧ್ಯಕ್ಷ ಜಿ. ನಾರಾಯಣ ಕುಮಾರ್ ಅವರು ತಮ್ಮ ಬೆಂಬಲಿಗರೊಂದಿಗೆ ಬಂಧಿತರಾದರು. ವಿಜಯಾ, ಎಂ.ಎಸ್. ವ್ಯಾಸರಾವ್, ಹೆಚ್.ಎಸ್. ವೆಂಕಟೇಶ ಮೂರ್ತಿಯವರೂ ಬಂಧಿತರಾದರು.

ಸರ್ಕಾರದ ಹೊಸ ಭಾಷಾಸೂತ್ರ

ದಿನಾಂಕ ೧೯.೪.೧೯೮೨ರಂದು ರಾಜ್ಯ ಸರ್ಕಾರವು ಸಚಿವ ಸಂಪುಟದ ಸಭೆಯಲ್ಲಿ ನಿರ್ಧಾರವನ್ನು ಕೈಗೊಂಡು ಭಾಷಾಸೂತ್ರವನ್ನು ಪ್ರಕಟಿಸಿತು.

ಅದರಂತೆ "ಕನ್ನಡ ಮಾತೃ ಭಾಷೆ" ಆಗಿರುವ ಮಕ್ಕಳಿಗೆ ಮಾತ್ರ ಕನ್ನಡ ೧೫೦ ಅಂಕಗಳ ಕಡ್ಡಾಯ ಪ್ರಥಮ ಭಾಷೆ. ಪ್ರೌಢಶಾಲೆ ಮಟ್ಟದಲ್ಲಿ ಎಲ್ಲರೂ ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇ ಬೇಕು.

ಕನ್ನಡೇತರ ಮಕ್ಕಳು ತಮ್ಮ ಮಾತೃಭಾಷೆಯನ್ನು ೧೫೦ ಅಂಕಗಳ ಪ್ರಥಮ ಭಾಷೆಯಾಗಿ ಅಭ್ಯಸಿಸಲು ಅವಕಾಶ.

ಯಾವ ಮಕ್ಕಳು ಕನ್ನಡವನ್ನು ಮೊದಲ ಭಾಷೆಯಾಗಿ ಅಬ್ಯಾಸ ಮಾಡುವುದಿಲ್ಲವೋ ಅಂತಹವರು ನೂರು ಅಂಕಗಳಷ್ಟು ಕನ್ನಡಭಾಷೆಯನ್ನು ಕಡ್ಡಾಯವಾಗಿ ಕಲಿಯಲೇಬೇಕು. ಜೊತೆಗೆ ಎಲ್ಲರೂ ಮೂರನೆಯ ಒಂದು ಭಾಷೆಯನ್ನು ನೂರು ಅಂಕಗಳಷ್ಟು ಕಲಿಯಲೇಬೇಕು."

ಆದರೆ ಕ್ರಿಯಾ ಸಮಿತಿಗೆ ಇದು ಸಮ್ಮತವಾಗಲಿಲ್ಲ. ಈ ಭಾಷಾ ಸೂತ್ರವನ್ನು ತಿರಸ್ಕರಿಸಿ ಅಖಿಲ ಕರ್ನಾಟಕ ಕನ್ನಡ ಕ್ರಿಯಾ ಸಮಿತಿ ೨೧.೪.೧೯೮೨ ಕ್ಕೆ ರಾಜ್ಯದಾದ್ಯಂತ ಬಂದ್‌ಗೆ ಕರೆ ನೀಡಿತು.

ಬಂದ್ ಕರೆಯು ಪರಿಮಿತ ಕಾಲಾವಧಿಯಲ್ಲಿಯೇ ಆದರೂ ಸಾಕಷ್ಟು ಪರಿಣಾಮಕಾರಿಯಾಗಿ ನಡೆಯಿತು. ಚಾಮರಾಜನಗರ, ದೊಡ್ಡಬಳ್ಳಾಪುರದಂತಹ ಊರುಗಳಲ್ಲಿಯೂ ಸಹ ಬಂದ್ ಯಶಸ್ವಿಯಾಗಿ ನಡೆಯಿತು. ಹಲವರ ಬಂಧನವೂ ಆಯಿತು.

ಸರ್ಕಾರದ ಸೂತ್ರದ ಬಗ್ಗೆ ನಿಜಲಿಂಗಪ್ಪನವರೂ ಸಮ್ಮತಿಸಲಿಲ್ಲ. ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಏ.ಕೆ. ಸುಬ್ಬಯ್ಯನವರು ಸೂತ್ರದ ಬಗ್ಗೆ ತಮ್ಮ ಕಟು ಟೀಕೆಯನ್ನು ವ್ಯಕ್ತಪಡಿಸಿದರು.

ದಿನಾಂಕ ೨೯.೪.೮೨ರಂದು ಧಾರವಾಡದ ಕೇಂದ್ರ ಕನ್ನಡ ಕ್ರಿಯಾಸಮಿತಿಯ ಆಶ್ರಯದಲ್ಲಿ ದಾವಣಗೆರೆಯಲ್ಲಿ ಕನ್ನಡ ಹೋರಾಟಗಾರರ ಸಮ್ಮೇಳನವು ನಡೆದು ಸರ್ಕಾರದ ಭಾಷಾಸೂತ್ರವನ್ನು ತಿರಸ್ಕರಿಸಿ ಗುರಿ ಸಾಧನೆಯಾಗುವವರೆಗೆ ಬಿರುಸಿನ ಹೋರಾಟ ಮುಂದುವರೆಸಲು ನಿರ್ಧರಿಸಿತು.

ಹೋರಾಟಕ್ಕಿಳಿದ ಡಾ. ರಾಜ್ ಮತ್ತು ಕನ್ನಡ ಚಿತ್ರರಂಗ

ಧಾರವಾಡದ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ೧೬.೫.೧೯೮೨ರಿಂದ ಜನಜಾಗೃತಿಗಾಗಿ ರಾಜ್ಯಾದ್ಯಂತ ಜಾಥಾ ಏರ್ಪಡಿಸಿತು. ಚಿತ್ರರಂಗದ ತಂಡವೂ ಭಾಗವಹಿಸಿದರೆ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿರುತ್ತದೆಂದು ಭಾವಿಸಿ, ಆ ಜಾಥಾದಲ್ಲಿ ಪಾಲ್ಗೊಳ್ಳಬೇಕೆಂದು ಕನ್ನಡದ ಮೇರುನಟ ರಾಜಕುಮಾರ್ ಅವರನ್ನು ಕೇಳಿಕೊಂಡಿತು. ಈ ಕೋರಿಕೆಗೆ ತಕ್ಷಣವೇ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಡಾ. ರಾಜ್ ಅವರು ತಮ್ಮ ಪತ್ನಿ ಪಾರ್ವತಮ್ಮನವರೊಂದಿಗೆ ಚಿತ್ರರಂಗದ ಇತರೇ ನಟರಾದ ವಿಷ್ಣುವರ್ಧನ್, ಅನಂತನಾಗ್, ಲೋಕೇಶ್, ಅಶೋಕ್, ಧೀರೇಂದ್ರ ಗೋಪಾಲ್, ಜೂ. ನರಸಿಂಹರಾಜು, ಮುಸುರಿ ಕೃಷ್ಣಮೂರ್ತಿ, ನಿರ್ದೇಶಕ ಭಗವಾನ್, ನಿರ್ಮಾಪಕರಾದ ಅಬ್ಬಯ್ಯನಾಯಿಡು, ಜಗನ್ನಾಥ್, ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಮೇಗೌಡ, ವಿತರಕ ನಾಗರಾಜ್ ಮುಂತಾದವರನ್ನು ಒಳಗೊಂಡು ಜಾಥಾದಲ್ಲಿ ಭಾಗವಹಿಸಿದರು.

ಕೇಂದ್ರ ಕ್ರಿಯಾ ಸಮಿತಿಯ ಬಸವರಾಜ ಕಟ್ಟೀಮನಿ, ಪಾಟೀಲ ಪುಟ್ಟಪ್ಪ, ಡಾ. ಆರ್.ಸಿ. ಹಿರೇಮಠ, ಡಾ. ಧಾರವಾಡ್‌ಕರ್, ಡಾ. ಷಡಾಕ್ಷರಪ್ಪ ಶೆಟ್ಟರ್, ಗಂಗಾಧರ ಪಡಕಿ, ಚಂದ್ರಶೇಖರ ಪಾಟೀಲ ಮುಂತಾದವರು ಈ ಜಾಥಾದಲ್ಲಿ ಪಾಲ್ಗೊಂಡರು.

ಬೆಳಗಾವಿಯಿಂದ ಹೊರಟ ಜಾಥಾ ಧಾರವಾಡ, ಹುಬ್ಬಳ್ಳಿ, ಗದಗ್, ಬಳ್ಳಾರಿ, ಹರಿಹರ, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ಸಂಚರಿಸಿ ಚನ್ನಪಟ್ಟಣದಲ್ಲಿ ಕೊನೆಗೊಂಡಿತು.

ಚೆನ್ನವೀರ ಕಣವಿಯರು ಧಾರವಾಡದಲ್ಲಿ "ಸತ್ಯಾಗ್ರಹ ನಮ್ಮ ಸತ್ಯಾಗ್ರಹ" ಎಂಬ ಗೀತೆಯನ್ನು ಹಾಡಿದರು. ಇದೇ ಕವನವನ್ನು ನಿರ್ದೇಶಕ ಭಗವಾನ್ ಅವರು ಮುಂದೆ ಎಲ್ಲಾ ಊರುಗಳಲ್ಲಿಯೂ ಹಾಡತೊಡಗಿದರು. ಜೊತೆಗೆ ಚಂಪಾರವರ "ಜೈ ಜೈ ಕನ್ನಡ ತಾಯಿಗೆ ನಾವು ಹೊರಟೆವು ಜೈಲಿಗೆ" ಎಂಬ ಕವನವನ್ನೂ ಸಹ ಹಾಡುತ್ತಿದ್ದರು.

"ನಾವು ಕೇವಲ ಕಲಾವಿದರಾಗಿ ಬಂದಿಲ್ಲ, ಕನ್ನಡದ ಭಾಷೆ ಕೇಳಲು ಬಂದಿದ್ದೇವೆ. ನಮ್ಮನ್ನು ಸಲಹಿದ ತಾಯಿಯನ್ನು ನಾವು ರಕ್ಷಿಸಬೇಡವೆ? ಕನ್ನಡಕ್ಕಾಗಿ, ಕರ್ನಾಟಕಕ್ಕಾಗಿ ಯಾವುದೇ ತ್ಯಾಗಕ್ಕೂ ನಾನು ಸಿದ್ಧ" ಎಂದು ಭಾಷಣದಲ್ಲಿ ಎಲ್ಲ ಕಡೆ ಹೇಳುತ್ತಿದ್ದರು - ರಾಜಕುಮಾರ್. ಚಳುವಳಿಯ ತೀವ್ರತೆ ಹೆಚ್ಚುತ್ತಿದ್ದಂತೆ ವಿದ್ಯಾರ್ಥಿಗಳು ಕಾಲೇಜುಗಳಿಗೆ ಬಹಿಷ್ಕಾರ ಹಾಕಿದರು; ಜನಪ್ರತಿನಿಧಿಗಳ ಮೇಲೆ ಒತ್ತಡ ಹೆಚ್ಚಾಗತೊಡಗಿತು.

೨೭.೫.೧೯೮೨ರಂದು ಬೆಂಗಳೂರಿನ ಪುರಭವನದ ಮುಂದೆ "ಜೈಲು ತುಂಬಿ" ಚಳುವಳಿ ನಡೆದು ನೂರಾರು ಮಂದಿ ಬಂಧನಕ್ಕೊಳಗಾದರು. ಎನ್.ಜಿ.ಇ.ಎಫ್., ಹಾಗೂ ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಸದಸ್ಯರು ಚಳುವಳಿಯಲ್ಲಿ ಭಾಗವಹಿಸಿ ಬಂಧಿತರಾದರು. ಮೈಸೂರು ರಸ್ತೆ, ಮಾಗಡಿ ರಸ್ತೆ, ಕೃಷ್ಣರಾಜಪುರ, ಚಾಮರಾಜಪೇಟೆ ಮುಂತಾದ ಪ್ರದೇಶಗಳ ಕನ್ನಡ ಕ್ರಿಯಾ ಸಮಿತಿಯ ಸದಸ್ಯರು ಪ್ರದರ್ಶನದಲ್ಲಿ ಭಾಗವಹಿಸಿದರು.

ಪಿ. ಲಂಕೇಶ್, ಎಂ. ಚಿದಾನಂದಮೂರ್ತಿ, ಜಿ.ವೈ. ಹುಬ್ಳೀಕರ್, ಕೆ.ಎಂ. ಶಂಕರಪ್ಪ, ರವೀಂದ್ರ ರೇಷ್ಮೆ ಹ.ನಂ. ವಿಜಯಕುಮಾರ್ ಮುಂತಾದವರು ಬಂಧಿತರಲ್ಲಿ ಪ್ರಮುಖರು.

ಗೋಕಾಕ್ ಚಳುವಳಿಯ ಹೋರಾಟದಲ್ಲಿ ನಗರದ ಅನೇಕ ಕಾರ್ಖಾನೆಗಳ ಕಾರ್ಮಿಕರು ಸಕ್ರಿಯವಾಗಿ ಭಾಗವಹಿಸಿದ್ದು ಒಂದು ವಿಶೇಷ ಅಂಶ.

ಬಿ.ಇ.ಎಲ್., ಹೆಚ್.ಎ.ಎಲ್, ಬಿ.ಇ.ಎಂ.ಎಲ್, ಹೆಚ್.ಎಂ.ಟಿ., ಐ.ಟಿ.ಐ, ಬಿ.ಹೆಚ್.ಇ.ಎಲ್, ರಿಸರ್ವ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಬಿ.ಟಿ.ಎಸ್., ಸರ್ಕಾರೀ ಕಛೇರಿಗಳಲ್ಲಿನ ಕನ್ನಡ ಸಂಘಸಂಸ್ಥೆಗಳವರೆಲ್ಲರೂ, ಸಭೆ, ಪ್ರದರ್ಶನ, ಮೆರವಣಿಗೆಯಲ್ಲಿ ಭಾಗವಹಿಸಿ ತಮ್ಮ ಬೆಂಬಲವನ್ನು ಸೂಚಿಸುತ್ತಿದ್ದರು.

ಪ್ರಚಂಡ ರೀತಿಯಲ್ಲಿ ಸಾಗುತ್ತಿದ್ದ ಚಳುವಳಿಯನ್ನು ಶಮನಗೊಳಿಸಲು ಚಳುವಳಿಯ ನಾಯಕರನ್ನು ಮಾತುಕತೆಗಾಗಿ ಸರ್ಕಾರವು ಜೂನ್ ೮ನೇ ತಾರೀಕಿನಂದು ಆಹ್ವಾನಿಸಿತು.

"ಮಾತುಕತೆ ಸಣ್ಣ ಪುಟ್ಟ ಹೊಂದಾಣಿಕೆಗೆ ಮಾತ್ರ, ರಾಜ್ಯದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರೆಯಲೇ ಬೇಕು. ಕನ್ನಡ ಶಿಕ್ಷಣ ಕಡ್ಡಾಯವಾಗಲೇ ಬೇಕು. ಈ ಬಗ್ಗೆ ರಾಜಿಗೆ ಅವಕಾಶವೇ ಇಲ್ಲ" ಎಂಬ ನಿಲುವಿಗೆ ಕ್ರಿಯಾ ಸಮಿತಿಯ ಪ್ರತಿನಿಧಿಗಳು ಬದ್ಧರಾಗಿದ್ದರು.

ಈ ಬಗ್ಗೆ ಸರ್ಕಾರಕ್ಕೆ ಒತ್ತಡ ಹೇರಲು, ಹಾಗೂ ಮುಂದಿನ ಚಳುವಳಿಯು ತೀವ್ರ ಸ್ವರೂಪದ್ದಾಗಿರುವಂತೆ ಸರ್ಕಾರಕ್ಕೆ ತಿಳಿಸಲೂ ಜೂನ್ ೩ರಂದು ಸಾಹಿತಿ ಕಲಾವಿದರ ಬಳಗ ಸಾಮೂಹಿಕ ಧರಣಿ ಕಾರ್ಯಕ್ರಮವನ್ನು ಯೋಜಿಸಿತು.

ಪುರಭವನದ ಮುಂದೆ ಧರಣಿ ಮುಷ್ಕರ ಹಾಗೂ ಜೈಲು ತುಂಬಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ೧೨ ಜನ ಮಹಿಳೆಯರೂ ಸೇರಿದಂತೆ ೨೪೧ ಜನರನ್ನು ಪೋಲೀಸರು ಬಂಧಿಸಿದರು.

ಸಾಹಿತಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಸುಮತೀಂದ್ರ ನಾಡಿಗ, ಡಾ. ಹೆಚ್.ಎಂ. ಮರುಳ ಸಿದ್ದಯ್ಯ, ಡಾ. ಸಾ.ಶಿ. ಮರುಳಯ್ಯ, ಚಿತ್ರ ಕಲಾವಿದರಾದ ಜಿ.ವೈ. ಹುಬ್ಲೀಕರ್, ಜಿ.ಕೆ. ಸತ್ಯ, ವಾಮನ್, ಚಲನಚಿತ್ರ ನಟರಾದ ಲೋಕೇಶ್, ಗಿರಿಜಾ ಲೋಕೇಶ್, ಅಶೋಕ್, ಚಂದ್ರಶೇಖರ್, ನೀಗ್ರೊರಜಾನಿ, ವಕೀಲರಾದ ಕೆ.ಜಿ. ಮಹೇಶ್ವರಪ್ಪ, ಜಿ.ಇ. ಕೊಟ್ರೆ, ಬೆ.ಕ. ಮೂರ್ತೀಶ್ವರಯ್ಯ, ಶಾಸಕರಾದ ಜೆ.ಹೆಚ್. ಪಟೇಲ್, ಜೀವರಾಜ್ ಆಳ್ವ, ಎಸ್. ಪ್ರಮೀಳ, ಮಹಿಳಾ ಸಾಹಿತಿಗಳಾದ ವೇದವತಿ, ಉಷಾದೇವಿ, ವೈದೇಹಿ ಬಂಧಿತರಲ್ಲಿ ಪ್ರಮುಖರು.

ಈ ಪ್ರತಿಭಟನೆಯಲ್ಲಿ ೨೪ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರತಿಭಟನೆಯ ಆರಂಭದಲ್ಲಿ ಈ ಕೆಳಕಂಡ ಚಳುವಳಿಗಳನ್ನು ಸಾಂಕೇತಿಕವಾಗಿ ಉದ್ಘಾಟಿಸಲಾಯಿತು.

1. "ಕನ್ನಡದಲ್ಲಿ ವ್ಯವಹರಿಸಿ, ಕನ್ನಡದಲ್ಲಿ ಮಾತನ್ನಾಡಿ, ಇಂಗ್ಲೀಷ್ ಶಾಲೆಗಳು ರದ್ದಾಗಲಿ"	ಜಿ.ಎಸ್. ಶಿವರುದ್ರಪ್ಪ
2. "ಕನ್ನಡದಲ್ಲಿ ಮಾತ್ರ ನಾಮ ಫಲಕಗಳು"	ಚಿತ್ರನಟ ಲೋಕೇಶ್
3. "ಆಡಳಿತಭಾಷೆಯಾಗಿ ಕನ್ನಡ"	ಶಾಸಕ ಜೆ.ಹೆಚ್. ಪಟೇಲ್
4. "ಕರ್ನಾಟಕಕ್ಕೆ ದೂರದರ್ಶನ ಮರು ಪ್ರಸಾರ ಕೇಂದ್ರಬೇಡ"	ಗೋಪಾಲಕೃಷ್ಣ ಅಡಿಗ
5. "ಕನ್ನಡಿಗರಿಗೇ ಉದ್ಯೋಗ"	ಬೆ.ರಾ. ನಾಗರಾಜ್

ಆಡುಗೋಡಿಯ ಬಯಲು ಬಂದೀಖಾನೆಯಲ್ಲಿಯೇ, ಬಂಧಿತರಾದ ಸತ್ಯಾಗ್ರಹಿಗಳು ಸಭೆ ಸೇರಿ ೪ನೇ ದಿನಾಂಕದ ಸರ್ಕಾರದ ಜೊತೆಯ ಮಾತುಕತೆಯಲ್ಲಿ ಸೂಕ್ತ ಫಲಿತಾಂಶ ಬರದಿದ್ದಲ್ಲಿ ಚಳುವಳಿ ತೀವ್ರಗೊಳ್ಳುತ್ತದೆ ಎಂದು ಹೇಳಿದರು.

ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು 'ಗೋಕಾಕ್ ವರದಿ ಸಂಪೂರ್ಣ ಜಾರಿಗೆ ಬರಲಿ' ಎಂಬ ಘೋಷಣೆಯ ಬ್ಯಾಡ್ಜ್‌ಗಳನ್ನು ಧರಿಸಿ ಸಾಂಕೇತಿಕ ಮುಷ್ಕರ ನಡೆಸಿದರು. ಭಾರತ್ ಎಲೆಕ್ಟ್ರಾನಿಕ್ಸ್ ಕನ್ನಡ ಸಾಹಿತ್ಯ ಕೂಟದ ಸದಸ್ಯರು ಜೈಲು ತುಂಬಿ ಕಾರ್ಯಕ್ರಮದಲ್ಲಿ ಭಾಗವಹಿಸಿ ೪೦ ಮಂದಿ ಬಂಧಿತರಾದರು.

೪.೬.೧೯೮೨ ರಂದು ಸರ್ಕಾರ ಕರೆದಿದ್ದ ಸಭೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಶ್ರೀರಂಗ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ.ವಿ. ಶಂಕರೇ ಗೌಡ, ರಾಜಕುಮಾರ್ ಸೇರಿದಂತೆ ೪೦ಕ್ಕೂ ಹೆಚ್ಚಿನ ಗಣ್ಯರು ಭಾಗವಹಿಸಿದ್ದರು.

ಇಡೀ ದಿನ ನಡೆದ ಈ ಸಭೆಯಲ್ಲಿ ಪರಿಷ್ಕೃತ ಗೋಕಾಕ್ ವರದಿಯ ಆದೇಶವನ್ನು ಹೊರಡಿಸುವ ಹಾಗೂ ಬಂಧಿತರಾಗಿರುವ ಚಳುವಳಿಕಾರರನ್ನು ಬಿಡುಗಡೆಗೊಳಿಸುವ ತೀರ್ಮಾನವನ್ನು ಪ್ರಕಟಿಸಲಾಯಿತು.

ಸರ್ಕಾರದ ಪ್ರಕಟಣೆಯನ್ನು ಸ್ವಾಗತಿಸಿದ ಕ್ರಿಯಾಸಮಿತಿಯವರು ಹಾಗೂ ಸಾಹಿತಿ ಕಲಾವಿದರ ಬಳಗದವರು ಸದ್ಯಕ್ಕೆ ಚಳುವಳಿಯನ್ನು ಸ್ಥಗಿತಗೊಳಿಸುವ ತೀರ್ಮಾನ ಕೈಗೊಂಡು ಸರ್ಕಾರದ ಪ್ರಕಟಣೆಗಾಗಿ ಕಾದು ಕುಳಿತರು.

ನಾಲ್ಕನೇ ತಾರೀಖಿನ ತೀರ್ಮಾನವು ಎರಡು ವಾರಕ್ಕೆ ಮೀರಿದರೂ ಸರಕಾರವು ಪ್ರಕಟಣೆಯನ್ನು ಹೊರಡಿಸದಿದ್ದಾಗ ಸಹಜವಾಗಿಯೇ ಚಳುವಳಿಯ ನೇತಾರರಿಗೆ ಬೇಸರವಾಯಿತು. ಪ್ರತಿಭಟನೆ, ಪ್ರದರ್ಶನ ಮೌನ ಮೆರವಣಿಗೆಗಳ ಪುನರಾವರ್ತನೆಯಾಯಿತು.

ಜೂನ್ ೨೧ರಂದು ಹುಬ್ಬಳ್ಳಿಯಲ್ಲಿ ಪಾಟೀಲ್ ಪುಟ್ಟಪ್ಪ, ಧಾರವಾಡದಲ್ಲಿ ಚಂಪಾ, ಎಂ.ಎಂ. ಕಲಬುರ್ಗಿಯವರ ನೇತೃತ್ವದಲ್ಲಿ ನೂರಾರು ಜನ ಕಪ್ಪು ಬಟ್ಟೆ ಕಟ್ಟಿಕೊಂಡು ಮೆರವಣಿಗೆ ಹೊರಟರೆ, ಬೆಂಗಳೂರಿನಲ್ಲಿ ಸಾಹಿತಿ ಕಲಾವಿದರ ಬಳಗದ ಆಶ್ರಯದಲ್ಲಿ ಮೌನ ಮೆರವಣಿಗೆ ನಡೆಯಿತು. ಎಂ.ವಿ. ಸೀತಾರಾಮಯ್ಯ ಜಿ.ಎಸ್. ಶಿವರುದ್ರಪ್ಪ, ಪಿ. ಲಂಕೇಶ್, ಎಂ. ಚಿದಾನಂದಮೂರ್ತಿ, ಬರಗೂರು ರಾಮಚಂದ್ರಪ್ಪ, ಸುಮತೀಂದ್ರ ನಾಡಿಗ್, ಎಂ.ಆರ್. ಲಕ್ಷ್ಮಮ್ಮ ಮುಂತಾದವರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಇಷ್ಟೆಲ್ಲ ರಾದ್ಧಾಂತವಾದ ಮೇಲೆ ಸರ್ಕಾರವು ಸರ್ವಸಮ್ಮತ ಭಾಷಾ ಸೂತ್ರವನ್ನು ಪ್ರಕಟಿಸಿತು. ವಿಧಾನ ಮಂಡಲದಲ್ಲಿ ೨೪.೬.೮೨ ರಂದು ಒಪ್ಪಿಗೆ ಪಡೆದ ಈ ಸೂತ್ರದ ಪ್ರಕಟಣೆಯಿಂದ ನಾಲ್ಕು ತಿಂಗಳುಗಳ ಕಾಲ ನಡೆದ ಇಡೀ ಕರ್ನಾಟಕದಲ್ಲಿಯೇ ಅಭೂತಪೂರ್ವವಾದ ಹೋರಾಟವು ಅಂತ್ಯಗೊಂಡಿತೆನ್ನಬಹುದು.

ವಿಜಯೋತ್ಸವದ ಮೆರವಣಿಗೆ

ಈ ಅಭೂತಪೂರ್ವ ಹೋರಾಟದ ಗೆಲುವು ರಾಜ್ಯದ ಎಲ್ಲ ಕಡೆಗಳಲ್ಲೂ ಹರ್ಷವನ್ನು ತಂದಿತು. ಸಹಜವಾಗಿಯೇ ಉಲ್ಲಸಿತರಾದ ಜನತೆ ಹಾಗೂ ಕನ್ನಡ ಸಂಘ ಸಂಸ್ಥೆಗಳು ವಿಜಯೋತ್ಸವವನ್ನು ಆಚರಿಸಿದುವು. ಹೋರಾಟದ ಪ್ರಮುಖ ಕೇಂದ್ರವಾಗಿದ್ದ ರಾಜಧಾನಿ ಬೆಂಗಳೂರಿನಲ್ಲೂ ವೈಭವಯುತವಾಗಿ ಆಚರಿಸಲು ೧.೬.೧೯೮೨ರಂದು ನ್ಯಾಷನಲ್ ಕಾಲೇಜು ಮೈದಾನದಲ್ಲಿ ಭಾರೀ ಸಭೆಯನ್ನು ಏರ್ಪಡಿಸಲು ವ್ಯವಸ್ಥೆ ಮಾಡಿದರು. ಬೆಂಗಳೂರಿನ ಎಲ್ಲಾ ಬಡಾವಣೆಗಳಲ್ಲೂ ಮೆರವಣಿಗೆಗಳು ಏರ್ಪಾಡಾದುವು.

ಡಾ. ರಾಜಕುಮಾರ್ ಅವರೂ ಸಹ ಸ್ವಯಂಸ್ಫೂರ್ತಿಯಿಂದ ಭಾಗವಹಿಸಿದ ಈ ಬೃಹತ್ ಮೆರವಣಿಗೆ ಉತ್ಸಾಹಿಗಳ ಗೆಲುವಿನ ಘೋಷದೊಂದಿಗೆ ನಗರದ ಬೀದಿಗಳಲ್ಲಿ ಹೊರಟಿತ್ತು. ಆದರೆ ದುರದೃಷ್ಟವೆಂದರೆ ಕೆಲವೇ ಕಿಡಿಗೇಡಿಗಳಿಂದ ಹಾಗೂ ಸಮಯಸಾಧಕರಿಂದ ಮೆರವಣಿಗೆ ದಾರಿ ತಪ್ಪಿ ಶಿಸ್ತು ಸಂಯಮ ಕಳೆದುಕೊಂಡಿತು. ಪೋಲೀಸರಿಂದ ಲಾಠೀ ಪ್ರಹಾರ, ಗೋಲೀಬಾರ್ ನಡೆಸಬೇಕಾದ ವಿಷಾದಕರ ಘಟನೆ ಸಂಭವಿಸಿತು.

ಶಂಕರಪುರದ ಬಳಿ ನಡೆದ ಆ ಗೋಲಿಬಾರಿನಲ್ಲಿ ಮರ ಹತ್ತಿ ಮೆರವಣಿಗೆ ನೋಡುತ್ತಿದ್ದ ಒಬ್ಬ ಅಮಾಯಕ ಕಾರ್ಮಿಕ ಅರಸಪ್ಪ ಹತನಾದ. ನ್ಯಾಷನಲ್ ಕಾಲೇಜು ಮೈದಾನದಲ್ಲಿಯೂ ಸಹ ಕೆಲವು ಕಿಡಿಗೇಡಿಗಳು ನಡೆಸಿದ ದುಷ್ಕೃತ್ಯದಿಂದ ಕಲ್ಲು ತೂರಾಟ ಮುಂತಾದ ಹಿಂಸಾಕೃತ್ಯಗಳು ನಡೆದು ಅಲ್ಲಿಯೂ ಪೋಲೀಸರು ಬೆತ್ತದ ಪ್ರಹಾರ ಮಾಡಬೇಕಾಗಿ ಬಂತು. ಕಾರ್ಯಕ್ರಮದ ರೂವಾರಿಯಾಗಿದ್ದು, ಹೋರಾಟದ ನೇತಾರರಾಗಿದ್ದ, ಚಿದಾನಂದಮೂರ್ತಿಯವರಿಗೇ ಅಲ್ಲದೆ ಇತರ ವ್ಯವಸ್ಥಾಪಕರೂ ಈ ಬೆತ್ತ ಪ್ರಹಾರ ಅನುಭವಿಸಬೇಕಾಗಿ ಬಂತು.

ಸಂಜೆ ಮತ್ತೆ ಅದೇ ಸ್ಥಳದಲ್ಲಿ ಸಭೆ ಸೇರಿದಾಗ ಬೆಳಿಗ್ಗೆ ನಡೆದ ವಿಷಾದಕರ ಘಟನೆಗಳಿಂದ ಮನನೊಂದಿದ್ದ ಡಾ. ರಾಜಕುಮಾರ್, ಚಿದಾನಂದಮೂರ್ತಿ, ಜಿ.ಕೆ. ಸತ್ಯ ಮುಂತಾದವರು ತಮ್ಮ ಹೃದಯಾಂತರಾಳದಿಂದ ಮಾತನಾಡಿ

ವಿಜಯೋತ್ಸವದ ಮೆರವಣಿಗೆ ಹೀಗೆ ಅರಸಪ್ಪನ ಬಲಿದಾನದಿಂದ ಕೊನೆಗೊಳ್ಳುವಂತಾದುದಕ್ಕೆ ತಮ್ಮ ಸಂಕಟವನ್ನು ವ್ಯಕ್ತಪಡಿಸಿದರು.

ಗೋಕಾಕ್ ಚಳುವಳಿಗೆ ವಿರೋಧ ವ್ಯಕ್ತಪಡಿಸಿದವರು

ಕನ್ನಡಿಗರ ಬೃಹದಾಕಾರದ ಈ ಚಳುವಳಿಗೆ ರಾಜ್ಯದ ಎಲ್ಲಾ ಕಡೆಯಿಂದಲೂ ಸಾರ್ವತ್ರಿಕವಾಗಿ ಬೆಂಬಲ, ಪ್ರೋತ್ಸಾಹ ದೊರಕಿದ್ದು ಒಂದು ಸಂಗತಿಯಾದರೆ, ಕೆಲವು ವ್ಯಕ್ತಿಗಳು ಹಾಗೂ ಪಕ್ಷಗಳು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ ಸಂದರ್ಭಗಳು ಇಲ್ಲದಿರಲಿಲ್ಲ.

ರಾಜ್ಯ ಸರ್ಕಾರವು ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಮಾಡಿ ಆಜ್ಞೆ ಹೊರಡಿಸಿದ್ದು ಅಲ್ಪ ಸಂಖ್ಯಾತರ ಮೇಲೆ ಮಾಡಿದ ಮಹಾ ಅನ್ಯಾಯ ಎಂದು ಅಖಿಲಭಾರತ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ಘಟಕ ಅಭಿಪ್ರಾಯಪಟ್ಟಿತು. ಇದನ್ನು ವಿರೋಧಿಸಿ ಭಾಷಾ ಅಲ್ಪಸಂಖ್ಯಾತರೆಲ್ಲ ಸೇರಿ ಪ್ರಚಂಡ ಚಳುವಳಿ ಹೂಡಬೇಕಾಗುತ್ತದೆಂದು ಎಚ್ಚರಿಸಿತು.

ಕನ್ನಡ ವರನಟ ಡಾ. ರಾಜ್‌ರ ಕನ್ನಡಪರ ಹೋರಾಟವನ್ನು ಪ್ರತಿಭಟಿಸಿ ತಮಿಳು ನಾಡಿನ NSUI ರಾಜಕುಮಾರ್ ಮನೆ ಮುಂದೆ ಧರಣಿ ನಡೆಸುವ ಬೆದರಿಕೆ ಹಾಕಿದಾಗ, ಹಾಗೇನಾದರೂ ಆದಲ್ಲಿ ಕನ್ನಡಿಗರು ತಮಿಳು ಚಿತ್ರಗಳಿಗೆ ಬಹಿಷ್ಕಾರ ಹಾಕುವ ಎಚ್ಚರಿಕೆಯನ್ನು ಚಳುವಳಿಯ ನಾಯಕರು ನೀಡಿದರು.

ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮೇ ೧೯ರಂದು ಕನ್ನಡಿಗರನ್ನು ಉದ್ದೇಶಿಸಿ ಭಾಷಣ ಮಾಡಿದ ಡಾ. ರಾಜ್‌ರವರನ್ನು ಮುಂಬೈನ ಟ್ರೇಡ್‌ಗೈಡ್ ಎಂಬ ಪತ್ರಿಕೆ "ಮಿನಿ ಹಿಟ್ಲರ್" ಎಂದು ಕರೆಯಿತು. ಇದನ್ನು ಕನ್ನಡ ಜನತೆ ತೀವ್ರವಾಗಿ ಪ್ರತಿಭಟಿಸಿತು.

ಮಹಾರಾಷ್ಟ್ರ ಏಕೀಕರಣ ಸಮಿತಿಯು ಗೋಕಾಕ್ ವರದಿಯನ್ನು ವಿರೋಧಿಸಿ ಜೂನ್ ೧೫ರಂದು ಬೆಳಿಗ್ಗೆ ಬಂದ್‌ಗೆ ಕರೆ ನೀಡಿತ್ತು. ಆದರೆ ಆ ಬಂದ್ ಸಂಪೂರ್ಣ ವಿಫಲವಾಯಿತು.

ಸಂಸ್ಕೃತಪರವಾಗಿದ್ದ ಕೆಲವು ಮಠಾಧಿಪತಿಗಳು ಈ ವರದಿಗೆ ವಿರೋಧವಾಗಿದ್ದರು. ಆದರೆ ಕನ್ನಡವನ್ನು ಎಲ್ಲ ಹಂತದಲ್ಲಿಯೂ ಪ್ರತಿಪಾದಿಸುತ್ತಿದ್ದ ವಾಟಾಳ್ ನಾಗರಾಜ್, ಹಂಪ ನಾಗರಾಜಯ್ಯ ಹಾಗೂ ಹಾ.ಮಾ. ನಾಯಕರು ಚಳುವಳಿಯನ್ನು ಬೆಂಬಲಿಸದೆ ದೂರವಿದ್ದುದು ಅತೀವ ಆಶ್ಚರ್ಯವನ್ನುಂಟು ಮಾಡಿತು.

ಹಾಗೆಯೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಮೂವರು (ಡಾಕ್ಟರೇಟ್ ಪಡೆದ) ಕನ್ನಡ ಪ್ರಾಧ್ಯಾಪಕರುಗಳು ಸಹ ತಮ್ಮ ವರ್ತನೆಯಿಂದ 'ಕನ್ನಡ ದ್ರೋಹಿ' ಗಳೆಂದು ಕರೆಸಿಕೊಂಡರು.

ಸರ್ವಸಮ್ಮತ ಭಾಷಾಸೂತ್ರಕ್ಕೆ ಮತ್ತೆ ಅಡ್ಡಗಾಲು

ಸರ್ವಸಮ್ಮತ ಭಾಷಾಸೂತ್ರವನ್ನು ಸರ್ಕಾರವು ಪ್ರಕಟಿಸಿದರೂ ಅದು ಜಾರಿಯಾಗದಂತೆ ವಿಘ್ನಗಳು ಎದುರಾದವು.

ಅಲ್ಪಸಂಖ್ಯಾತರ ನಾಯಕರೆನಿಸಿದ ಅಜೀಜ್ ಸೇಠ್ ಹಾಗೂ ಕೆಲವು ಸಂಸ್ಕೃತ ಪರವಾದಿಗಳು ಆ ಮೇಲ್ಕಂಡ ಭಾಷಾ ಸೂತ್ರದ ವಿರುದ್ಧ ನ್ಯಾಯಾಲಯಕ್ಕೆ ಮೊರೆ ಹೋಗಿ ತಡೆಯಾಜ್ಞೆ ತಂದರು. ನ್ಯಾಯಾಲಯದಲ್ಲಿ ರಿಟ್ ಪೂರಾ ತೆರುವಾಗುವವರೆಗೂ ಗೋಕಾಕ್ ಭಾಷಾಸೂತ್ರವನ್ನು ಜಾರಿಮಾಡಲು ಸರ್ಕಾರ ಒಪ್ಪಲಿಲ್ಲ. ಹೀಗಾಗಿ ವಿಜಯೋತ್ಸವ ಆಚರಿಸಿ ಸ್ಥಗಿತಗೊಂಡಿದ್ದ ಚಳುವಳಿ ಮತ್ತೆ ಪುನರಾರಂಭಗೊಳ್ಳಲೇ ಬೇಕಾಯಿತು.

ಚುರುಕಾದ ಚಳುವಳಿ

೧.೧೧.೧೯೮೨ರ ರಾಜ್ಯೋತ್ಸವದಂದು ಸಾಹಿತಿ ಕಲಾವಿದರ ಬಳಗವು ಸಾಂಕೇತಿಕ ಧರಣಿಯೊಂದಿಗೆ ಚಳುವಳಿಯನ್ನು ಪುನರಾರಂಭಿಸಿತು. ಎಂ.ವಿ. ಸೀತಾರಾಮಯ್ಯ ಎಲ್.ಎಸ್. ಶೇಷಗಿರಿರಾವ್, ಪಿ. ಲಂಕೇಶ್, ಬರಗೂರು ರಾಮಚಂದ್ರಪ್ಪ, ಪಿ.ವಿ. ನಾರಾಯಣ, ಜಿ.ಕೆ. ಸತ್ಯ, ಮಾವಿನ ಕೆರೆ ರಂಗನಾಥನ್ ಸೇರಿದಂತೆ ೫೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಗೋಕಾಕ್ ಚಳುವಳಿಯಲ್ಲಿ ಆರಂಭದ ದಿನಗಳಿಂದಲೂ ಕ್ರಿಯಾತ್ಮಕವಾಗಿ ತೊಡಗಿಕೊಂಡಿದ್ದ ಕನ್ನಡ ಸಂಘರ್ಷ ಸಮಿತಿಯು ರಾಜ್ಯೋತ್ಸವವನ್ನು ಕರಾಳ ದಿನವೆಂದು ಘೋಷಿಸಿತ್ತು.

ಅಂದು ಸಂಜೆ ರವೀಂದ್ರ ಕಲಾಕ್ಷೇತ್ರದ ಸರ್ಕಾರಿ ಕಾರ್ಯಕ್ರಮದಲ್ಲಿ ಮುಖ್ಯ ಮಂತ್ರಿ ಗುಂಡೂರಾಯರು ರಾಜ್ಯೋತ್ಸವ ಪ್ರಶಸ್ತಿ ಕೊಡುತ್ತಿದ್ದಾಗ ರೆಹಮಾನ್ ಖಾನ್, ಯುವ ಜನತಾದ ಕೆ.ವಿ. ನಾಗರಾಜಮೂರ್ತಿ ಮತ್ತು ಇತರರು ಧಿಕ್ಕಾರ ಕೂಗುತ್ತಾ ಪ್ರಶಸ್ತಿಗಳನ್ನು ಹಿಂದಿರುಗಿಸಿ ಎಂದು ಕೂಗಿ ಕಪ್ಪು ಬಟ್ಟೆಗಳನ್ನು ಉಂಡೆಗಳನ್ನಾಗಿ ಮಾಡಿ ಎಸೆದರು. ಪೋಲೀಸರು ಇವರನ್ನು ಬಂಧಿಸಿ ತೀವ್ರವಾಗಿ ಹೊಡೆದರು.

ನ್ಯಾಯಾಲಯದ ತಡೆಯಾಜ್ಞೆಯ ಕಾರಣವನ್ನು ಮುಂದಿಟ್ಟುಕೊಂಡ ಸರ್ಕಾರ ತಾನೇ ರೂಪಿಸಿದ ಸರ್ವಸಮ್ಮತ ಭಾಷಾಸೂತ್ರವನ್ನು ಜಾರಿಗೊಳಿಸಲೇ ಇಲ್ಲ.

ಈ ಮಧ್ಯೆ ೧೯೭೩ರಲ್ಲಿ ರಾಜ್ಯ ವಿಧಾನ ಸಭೆಗೆ ಚುನಾವಣೆಗಳು ನಡೆದುವು. ಗೋಕಾಕ್ ಚಳುವಳಿ, ರೈತಚಳುವಳಿಗಳ ಭಾರೀ ಹೊಡೆತದಿಂದ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತು. ಜನತಾ ಸರ್ಕಾರ ಆಡಳಿತದ ಗದ್ದುಗೆಯನ್ನೇರಿತು.

ಆದರೇನಂತೆ, ಜನತಾ ಸರ್ಕಾರವೂ ಸಹ ಗೋಕಾಕ್ ವರದಿಯನ್ನು ಜಾರಿಗೊಳಿಸುವಲ್ಲಿ ಹಿಂದಿನ ಸರ್ಕಾರದ ಹಾದಿಯನ್ನೇ ಹಿಡಿಯಿತು.

ಸರ್ಕಾರದ ವಿಳಂಬ ನೀತಿಯ ವಿರುದ್ಧ ಪ್ರತಿಭಟನೆ

ಸರ್ಕಾರದ ಸರ್ವಸಮ್ಮತ ಭಾಷಾಸೂತ್ರದ ಸಂವಿಧಾನಾತ್ಮಕತೆಯನ್ನು ಪ್ರಶ್ನಿಸಿ ಕರ್ನಾಟಕದ ಉಚ್ಚನ್ಯಾಯಾಲಯದಲ್ಲಿ ಕೆಲವರು 'ರಿಟ್' ಅರ್ಜಿಗಳನ್ನು ಸಲ್ಲಿಸಿದಾಗ ನ್ಯಾಯಾಲಯವು ಆ ಆಜ್ಞೆಗೆ ತಡೆಯಾಜ್ಞೆಯನ್ನು ನೀಡಿತು.

ಆದರೆ ಆ ತಡೆಯಾಜ್ಞೆಯ ತೆರವಿಗಾಗಿ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೆ ಅಲಕ್ಷ್ಯದಿಂದಿರುವುದನ್ನು ಪ್ರತಿಭಟಿಸಲು ಹಾಗೂ ಕನ್ನಡ ಕಾರ್ಯಕರ್ತರ ಮೇಲಿನ ಮೊಕದ್ದಮೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಲು ಸಾಹಿತಿ ಕಲಾವಿದರ ಬಳಗ ಮತ್ತೊಂದು ಹೋರಾಟವನ್ನು ಅನಿರ್ದಿಷ್ಟ ಸರದಿ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುವ ಮೂಲಕ ಯೋಜಿಸಿತು. ಅದಕ್ಕಾಗಿ ಗೋಪಾಲಗೌಡ ಚೌಕದ ಬಳಿ "ಕನ್ನಡದ ಗುಡಿಸಲು" ನಿರ್ಮಾಣವಾಯಿತು. ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಸಿದ್ದಯ್ಯ, ವಲಸಣ್ಣ, ಕನ್ನಡ ಕಾರ್ಯಕರ್ತರಾದ ರೆಹಮಾನ್ ಖಾನ್ ಮುಂತಾದವರು ಶ್ರಮದಾನ ಮಾಡಿ ಯಶವಂತಪುರದಿಂದ ಬೊಂಬು ಮತ್ತಿತರ ಅಗತ್ಯ ವಸ್ತುಗಳನ್ನು ತಂದು ಕನ್ನಡದ ಗುಡಿಸಲನ್ನು ಕಟ್ಟಿದರು.

೧೯.೬.೧೯೭೩ ರಂದು ಸತ್ಯಾಗ್ರಹವನ್ನು ಆರಂಭಿಸುವ ಮುಂಚೆ ನಡೆದ ಮೆರವಣಿಗೆಯಲ್ಲಿ ಎಲ್.ಎಸ್. ಶೇಷಗಿರಿರಾವ್, ಬರಗೂರು ರಾಮಚಂದ್ರಪ್ಪ, ಪಿ.ವಿ. ನಾರಾಯಣ, ಹಿ.ಮ. ನಾಗಯ್ಯ, ಜಿ.ಕೆ. ಸತ್ಯ, ಸುಮತೀಂದ್ರ ನಾಡಿಗ್, ಮಾಪಿನಕೆರೆ ರಂಗನಾಥನ್, ಜಾನುಪ್ರಿಯ, ದೊಡ್ಡರಂಗೇಗೌಡ, ಮುಂತಾದ ಹಿರಿಯ ಸಾಹಿತಿಗಳು ಭಾಗವಹಿಸಿದರು.

ಅಂದು ನಡೆದ ಉಪವಾಸ ಸತ್ಯಾಗ್ರಹದಲ್ಲಿ ಡಾ. ಚಿದಾನಂದ ಮೂರ್ತಿ, ಕೋಡಿ ಹೊಸಹಳ್ಳಿ ರಾಮಣ್ಣ ಮುಂತಾದವರು ಭಾಗವಹಿಸಿ ಮುಷ್ಕರಕ್ಕೆ ಆರಂಭದ ಚಾಲನೆ ಕೊಟ್ಟರು.

ಎರಡನೆಯ ದಿನ ಅಂದರೆ ೨೦.೬.೧೯೭೩ರಂದು ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಹಾಗೂ ಕಾಳಿಂಗರಾಯರ ಬಳಗದ ಸದಸ್ಯರು ಭಾಗವಹಿಸಿದ್ದರು.

ಸಮಿತಿಯ ಕೆ.ವಿ. ವಲಸಣ್ಣ ೪೮ ಗಂಟೆಗಳ ಉಪವಾಸವನ್ನು ಕೈಗೊಂಡರು.

ಸಂಜೆಯ ಬಹಿರಂಗ ಸಭೆಯಲ್ಲಿ ಸಿದ್ಧಯ್ಯ, ಬೇ.ಕಾ. ಮೂರ್ತೀಶ್ವರಯ್ಯ ಹಾಗೂ ಮು. ಪಾರ್ಥಸಾರಥಿ ಅವರುಗಳು "ಕನ್ನಡ ಕಾರ್ಮಿಕರ ಹಿತರಕ್ಷಣೆ" ಎಂಬ ವಿಚಾರವಾಗಿ ಮಾತನಾಡಿ ಕೇಂದ್ರ ಸರ್ಕಾರದ ಉದ್ಯಮಗಳಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕೆಂದೂ, ಖಾಸಗಿ ಉದ್ಯಮಿಗಳೂ ಕನ್ನಡ ಕಾರ್ಮಿಕರನ್ನೇ ನೇಮಿಸಿ ಕೊಳ್ಳಬೇಕೆಂದೂ, ಕಾರ್ಖಾನೆಗಳ ಆಡಳಿತ ಸಂಪೂರ್ಣವಾಗಿ ಕನ್ನಡದಲ್ಲಿ ನಡೆಯಬೇಕೆಂದೂ ಒತ್ತಾಯ ಮಾಡಿದರು.

ಆರನೆಯ ದಿನದಂದು ಅಂದರೆ ೨೫.೦೬.೧೯೮೩ರಂದು ಉಪವಾಸ ಸತ್ಯಾಗ್ರಹದಲ್ಲಿ ಬೆಂಗಳೂರು ದೂರದರ್ಶನ ವೀಕ್ಷಕವೃಂದದ ಪ್ರಧಾನ ಕಾರ್ಯದರ್ಶಿ ಟಿ.ಎನ್. ರಾಮಚಂದ್ರ ಹಾಗೂ ಇತರರು ಭಾಗವಹಿಸಿದ್ದರು.

ಸಂಜೆ ವೀಕ್ಷಕವೃಂದದ ಸದಸ್ಯರು ಹಾಗೂ ಕಾರ್ಯಕರ್ತರು ಮೈಸೂರು ಬ್ಯಾಂಕ್ ಚೌಕದಿಂದ "ಕನ್ನಡದ ಗುಡಿಸಲು" ಸತ್ಯಾಗ್ರಹ ಶಿಬಿರಕ್ಕೆ ಆಗಮಿಸಿ ಉಪವಾಸ ಸತ್ಯಾಗ್ರಹಕ್ಕೆ ತಮ್ಮ ಬೆಂಬಲ ಸೂಚಿಸಿದರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಬೆಂಗಳೂರು ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳನ್ನೇ ಬಿತ್ತರಿಸಬೇಕೆಂದು ವೀಕ್ಷಕವೃಂದದ ಅಧ್ಯಕ್ಷ ಜಿ.ವಿ.ಎಸ್. ನಾರಾಯಣ್ ಮತ್ತು ಜಂಟಿ ಕಾರ್ಯದರ್ಶಿ ಎನ್. ಆನಂದರಾಮರಾವ್ ಅವರು ಆಗ್ರಹ ಪಡಿಸಿದರು.

ದಿನಾಂಕ ೨೬.೬.೧೯೮೩ ಭಾನುವಾರದಂದು ರಾಜ್ಯಮಟ್ಟದ ಸಮಾವೇಶವೊಂದು ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ನಡೆಯಿತು.

- ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದನ್ನು ತೆರವುಗೊಳಿಸಿ ಗೋಕಾಕ್ ಭಾಷಾಸೂತ್ರವನ್ನು ಜಾರಿಗೆ ತರುವುದು.
- ಕನ್ನಡವನ್ನು ಆಡಳಿತ ಭಾಷೆಯಾಗಿ ಸಂಪೂರ್ಣವಾಗಿ ಜಾರಿಗೊಳಿಸುವುದು; ಕನ್ನಡಿಗರಿಗೆ ಉದ್ಯೋಗದಲ್ಲಿ ಪ್ರಾಧಾನ್ಯತೆ.
- ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳಿಗೆ ಆದ್ಯತೆ.
- ಸರ್ಕಾರ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಕಲಾವಿದರಿಗೆ ಅವಕಾಶ.

ಇವೇ ಮುಂತಾದ ಬೇಡಿಕೆಗಳನ್ನು ಆ ಸಮ್ಮೇಳನದಲ್ಲಿ ಮಂಡಿಸಲಾಯಿತು.

ಧಾರವಾಡದ ಕೇಂದ್ರ ಕನ್ನಡ ಕ್ರಿಯಾ ಸಮಿತಿಯೂ ತನ್ನ ಬೆಂಬಲವನ್ನು ಸಾರಿತು.

ಈ ಚಳುವಳಿಯ ಅಂಗವಾಗಿ ಸಾಹಿತಿ ಕಲಾವಿದರ ಬಳಗದ ಪ್ರಧಾನ ಸಂಚಾಲಕರಾದ ಜಿ.ಕೆ. ಸತ್ಯ ಅವರು ೬.೭.೧೯೮೩ರಿಂದ ಅನಿರ್ದಿಷ್ಟ ಅವಧಿಯ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. ಉಪವಾಸ ಕೈಗೊಂಡ ಆರು ದಿನಗಳ ನಂತರ ಸತ್ಯ ಅವರು ನಾಡಿನ ಹಿರಿಯರು ಹಾಗೂ ಗಣ್ಯರ ಮನವಿಗೆ ಓಗೊಟ್ಟು ೧೧.೭.೮೩ ರಂದು ಉಪವಾಸವನ್ನು ನಿಲ್ಲಿಸಿದರು. ಆದರೆ ಸರದಿ ಉಪವಾಸ ಸತ್ಯಾಗ್ರಹ ಮುಂದುವರೆದಿತ್ತು.

ದಿನಾಂಕ ೬.೮.೧೯೮೩ರಂದು ಸರ್ಕಾರ ಪ್ರಮುಖ ಬೇಡಿಕೆಗಳ ಪೈಕಿ ಐದು ಬೇಡಿಕೆಗಳನ್ನು ಒಪ್ಪಿದ್ದರಿಂದ ಅನಿರ್ದಿಷ್ಟ ಸರದಿ ಉಪವಾಸ ಮುಕ್ತಾಯವಾಯಿತು.

೪೯ ದಿನಗಳಷ್ಟು ಧೀರ್ಘಕಾಲ ನಡೆದ ಸರದಿ ಉಪವಾಸ ಸಂದರ್ಭದಲ್ಲಿ ಬಿ.ಇ.ಎಲ್. ಕಾರ್ಮಿಕರ ಹಿತರಕ್ಷಕ ಸಮಿತಿಯ ಕೆ.ವಿ. ವಲಸಣ್ಣ ೪೮ ಗಂಟೆಗಳ ಉಪವಾಸ ಮಾಡಿದರು.


ಈ ಸರದಿ ಉಪವಾಸ ಸತ್ಯಾಗ್ರಹದಲ್ಲಿ ೪೨೫ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.

ಕನ್ನಡದ ಗುಡಿಸಲಿನಲ್ಲಿ ನಡೆಸಿದ ಚಳುವಳಿಯಲ್ಲಿ ಬೆ.ರಾ. ನಾಗರಾಜ್, ಅಶೋಕ ಬಾಬು, ಕ್ರೈಸ್ತ ಸಂಘದ ವಿ.ಪೀಟರ್, ಕುಬೇರ ಬಳಗಾರ್, ಹೊಸಕೋಟೆ ಚಂದ್ರಶೇಖರ್, ಸಿದ್ಧಯ್ಯ, ಜಿ.ಸಿ. ನಾರಾಯಣ, ಕೆ.ರಾಜಕುಮಾರ್ ಮುಂತಾದವರು ಅವಿರತವಾಗಿ ದುಡಿದು ಯಶಸ್ಸಿಗೆ ಕಾರಣರಾದರು.

ಕಲಾವಿದರಾದ ಹಡಪದ್, ಜಿ.ಕೆ. ಸತ್ಯ, ಪ.ಸ. ಕುಮಾರ್, ನ. ಚಂದ್ರಶೇಖರ್, ಚಂದ್ರನಾಥ್, ಗುಜ್ಜಾರಪ್ಪ ಮುಂತಾದವರು ಸಮಸ್ಯೆಗಳ ಬಗ್ಗೆ ಚಿತ್ರಗಳನ್ನು ಬರೆಯುತ್ತಿದ್ದರು.

❑

ಗೋಕಾಕ್ ಚಳುವಳಿಯ ಉಪವಾಸದ ಇತಿಹಾಸ ನಿರ್ಮಿಸಿದ ಗಂಗಾಧರ ಕೊರಳ್ಳಿ



ಗೋಕಾಕ್ ಚಳುವಳಿಯ ಸಂದರ್ಭದಲ್ಲಿ, ಹೋರಾಟದ ಅಂಗವಾಗಿ, ಸರದಿ ನಿರಶನ ಎಲ್ಲೆಡೆ ನಡೆಯಿತು. ಕೆಲವರು ಎರಡು, ಮೂರು, ನಾಲ್ಕು ದಿನಗಳಷ್ಟು ನಿರಂತರವಾಗಿ ಉಪವಾಸ ಮಾಡಿ ಹೋರಾಟದಲ್ಲಿ ಭಾಗಿಯಾದರು.

ಆದರೆ ನಿರಂತರ ೪೯ ದಿನಗಳ ಉಪವಾಸ ಮಾಡಿ ಇತಿಹಾಸ ನಿರ್ಮಾಣ ಮಾಡಿದವರು ಬಿಜಾಪುರದ ಗಂಗಾಧರ ಕೊರಳ್ಳಿಯವರು. ರಾಜ್ಯದಾದ್ಯಂತ ಚಳುವಳಿ ನಡೆದ ಸಂದರ್ಭದಲ್ಲಿ ಚಳುವಳಿಗೆ ಹೊಸ ಆಯಾಮ ನೀಡಿದ ಗಂಗಾಧರ ಕೊರಳ್ಳಿಯವರು ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಆಲಮೇಲ ಗ್ರಾಮದವರು. ೧೯೪೦ರ ಮಾರ್ಚ್ ೫ ರಂದು ಜನಿಸಿದ ಕೊರಳ್ಳಿಯವರು ಬಿ.ಕಾಂ. ಪದವೀಧರರು.

ಚಳುವಳಿಯ ಅಂಗವಾಗಿ ರಾಜ್ಯದಾದ್ಯಂತ ರಸ್ತೆ ತಡೆ, ಸರದಿ ಉಪವಾಸ ಸತ್ಯಾಗ್ರಹಗಳು ನಡೆಯುತ್ತಿದ್ದಾಗ ಬಿಜಾಪುರದ ೪೨ ವರುಷದ ಬ್ರಹ್ಮಚಾರಿ ಗಂಗಾಧರ ಕೊರಳ್ಳಿ ಆಮರಣ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಗೋಕಾಕ್ ವರದಿ ಜಾರಿ ಆಗುವವರೆಗೂ "ನಾನು ಉಪವಾಸ ಬಿಟ್ಟು ಏಳುವುದಿಲ್ಲ" ಎನ್ನುವ ಗಟ್ಟಿ ನಿರ್ಧಾರದೊಂದಿಗೆ ದಿನಾಂಕ ೧೭.೩.೧೯೮೨ರಂದು ಬಿಜಾಪುರದ ಗಾಂಧೀವೃತ್ತದ ಸತ್ಯಾಗ್ರಹ ಶಿಬಿರದಲ್ಲಿ ತಮ್ಮ ಉಪವಾಸವನ್ನು ಆರಂಭಿಸಿದರು.

ಉಪವಾಸವನ್ನು ಮೊಟಕುಗೊಳಿಸುವಂತೆ ಯಾರೇ ಒತ್ತಡ ಹೇರಿದರೂ ಅದಕ್ಕೆ ಮಣಿಯದೇ ತಮ್ಮ ನಿರ್ಧಾರವನ್ನು ಮುಂದುವರೆಸಿಕೊಂಡೇ ಬಂದರು. ಡಾ. ರಾಜ್‌ಕುಮಾರ್, ಸಾಹಿತಿಗಳು, ನಾಯಕರು ಬಿಜಾಪುರಕ್ಕೆ ಆಗಮಿಸಿ ಬೆಂಬಲ ಸಹಾನುಭೂತಿ ವ್ಯಕ್ತಪಡಿಸಿದರು.

ದಿನೇ ದಿನೇ ಕೃಷವಾಗುತ್ತಿದ್ದರೂ ತಮ್ಮ ಅಚಲ ನಿರ್ಧಾರದಿಂದ ವಿಚಲಿತರಾಗದ ಕೊರಳ್ಳಿಯವರನ್ನು ಅವರ ಉಪವಾಸ ಸತ್ಯಾಗ್ರಹದ ಆಳನೇ ದಿನ ಪೋಲೀಸರು ಬಂಧಿಸಿದರು. ಕನ್ನಡ ಕ್ರಿಯಾ ಸಮಿತಿಯು ಪೋಲೀಸರ ಕ್ರಮವನ್ನು ಖಂಡಿಸಿತು. ಬಂಧಿತರಾದರೂ ಸಹ ಲೆಕ್ಕಿಸದೆ, ಕೊರಳ್ಳಿಯವರು, ಸೆರೆಮನೆಯಲ್ಲಿಯೂ ಸಹ ತಮ್ಮ ಉಪವಾಸವನ್ನು ಮುಂದುವರೆಸಿಯೇ ಇದ್ದರು. ಮೇ ೫, ೧೯೮೨ ರಂದು ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಕೋರಿಕೆ ಮೇರೆಗೆ ಗಂಗಾಧರ ಕೊರಳ್ಳಿಯವರು ತಮ್ಮ ಉಪವಾಸವನ್ನು ನಿಲ್ಲಿಸಲು ಒಪ್ಪಿದರು. ವಿರಕ್ತರಾಗಿದ್ದರೂ ಸಹ ಚಳುವಳಿಯ ಚೈತನ್ಯಶಕ್ತಿಯಾಗಿ ನಿಂತಿದ್ದ ಗದುಗಿನ ತೋಂಟದಾರ್ಯ ಮಠದ ಸ್ವಾಮಿಗಳಾದ ಶ್ರೀ ಸಿದ್ದಲಿಂಗ ಸ್ವಾಮಿಗಳು ತಮ್ಮ ಕೈಯಿಂದ ಕೊರಳ್ಳಿಯವರಿಗೆ ಹಣ್ಣಿನ ರಸವನ್ನು ಕುಡಿಸಿದರು. ಅಲ್ಲಿಗೆ ಗಂಗಾಧರ ಕೊರಳ್ಳಿಯವರ ೪೯ ದಿನಗಳ ಅವ್ಯಾಹತ ಉಪವಾಸವು ಮುಕ್ತಾಯವಾಯಿತು.

ಕನ್ನಡ ನಾಡಿನ ನೆಲ, ಜಲ, ಭಾಷೆಗಾಗಿ ಹೋರಾಟ ನಡೆಸಿದ ಕೊರಳ್ಳಿಯವರು ೪.೬.೨೦೦೩ರಂದು ದೈವಾಧೀನರಾದರು.

(ಛಾಯಚಿತ್ರ ಮತ್ತು ಮಾಹಿತಿ ಕೃಪೆ : ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ)

❑

ವಿವಿಧೆಡೆಯಲ್ಲಿ ಪ್ರತಿಭಟನೆ

ಬೆಂಗಳೂರು, ಧಾರವಾಡ, ಮೈಸೂರುಗಳಲ್ಲಿ ಗೋಕಾಕ್ ವರದಿಯ ಅನುಷ್ಠಾನಕ್ಕೆ ಒತ್ತಾಯಿಸಿ ಕ್ರಿಯಾ ಸಮಿತಿಗಳನ್ನು ರಚಿಸಿಕೊಂಡು ಹೋರಾಟಗಳನ್ನು ನಡೆಸಲಾಯಿತು. ಪ್ರಮುಖವಾಗಿ ಈ ಸ್ಥಳಗಳಲ್ಲಿ ಹೋರಾಟಗಳು ನಡೆದರೂ ಅದರ ಪ್ರಭಾವ ರಾಜ್ಯದ ಎಲ್ಲ ಪ್ರದೇಶಗಳಲ್ಲಿಯೂ ವ್ಯಾಪಕವಾಗಿ ಹಬ್ಬಿತು. ಆಯಾ ಸ್ಥಳೀಯ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಘ ಸಂಸ್ಥೆಗಳ ಸಹಾಯ ಸಹಕಾರದೊಂದಿಗೆ, ಮೆರವಣಿಗೆ, ಪ್ರತಿಭಟನೆ, ಬಂದ್ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸ್ಥಳೀಯ ಜನತೆಯಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನವನ್ನು ಮಾಡಲಾಯಿತು.

ಮಂಡ್ಯ, ಸಕಲೇಶಪುರ, ಕೋಲಾರ, ಹಾಸನ, ಚಿಕ್ಕಮಗಳೂರು, ಗದಗ್, ಪಿರಿಯಾಪಟ್ಟಣ, ಚಾಮರಾಜನಗರ, ಹುಣಸೂರು, ಟಿ. ನರಸೀಪುರ, ನಂಜನಗೂಡು, ಗುಂಡ್ಲುಪೇಟೆ, ತೀರ್ಥಹಳ್ಳಿ, ಗೋಕಾಕ್, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿಯೂ ಬಹಿರಂಗ ಸಭೆ, ಮೆರವಣಿಗೆಗಳು ನಡೆದುವು. ಆಯಾ ಸ್ಥಳೀಯ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕ್ರಿಯಾತ್ಮಕವಾಗಿ ಪಾಲ್ಗೊಳ್ಳುತ್ತಿದ್ದರು.

ಚಿತ್ರರಂಗದವರ ಪಾತ್ರ

ಕನ್ನಡದ ಮೇರು ನಟ ಡಾ. ರಾಜಕುಮಾರ್ ಅವರು ಚಳುವಳಿಯಲ್ಲಿ ಭಾಗವಹಿಸಿ, ಬೆಂಬಲ ವ್ಯಕ್ತಪಡಿಸಿದ್ದಲ್ಲದೆ, ಜನ ಜಾಗೃತಿಗಾಗಿ ಏರ್ಪಡಿಸಿದ್ದ ಜಾಥಾದಲ್ಲಿ ಭಾಗವಹಿಸಿದ್ದರು.

ಅವರೊಂದಿಗೆ ಚಿತ್ರರಂಗದ ಹಿರಿಯ ಕಿರಿಯ ನಟರೂ, ನಿರ್ದೇಶಕರೂ, ಸಾಹಿತಿಗಳೂ, ನಿರ್ಮಾಪಕರೂ ಭಾಗವಹಿಸಿದ್ದರು. ನಟರಾದ ವಿಷ್ಣುವರ್ಧನ್, ಅನಂತನಾಗ್, ಲೋಕೇಶ್, ಅಶೋಕ, ಧೀರೇಂದ್ರ ಗೋಪಾಲ್ ಜೂ. ನರಸಿಂಹರಾಜು, ಮುಸುರಿ ಕೃಷ್ಣಮೂರ್ತಿ, ಶ್ರೀನಾಥ್, ಎಂ.ಪಿ. ಶಂಕರ್,

ದ್ವಾರಕೀಶ್, ಸುಧೀರ್, ಚೇತನ್ ರಾಮರಾವ್, ಅಂಬರೀಶ್, ಮಾನು, ಚಂದ್ರಶೇಖರ್, ಉಮೇಶ್, ಶಿವರಾಂ, ಜೈಜಗದೀಶ್, ವಜ್ರಮುನಿ, ನಿರ್ದೇಶಕ ಭಗವಾನ್, ನಿರ್ಮಾಪಕರಾದ ಅಬ್ಬಯ್ಯ ನಾಯಿಡು, ಜಗನ್ನಾಥ್, ಟಿ.ಜಿ. ಆರಾಧ್ಯ ಎಂ.ಎಸ್.ಎಸ್ ಮೂರ್ತಿ, ಎಸ್. ರಾಮಮೂರ್ತಿ, ವಿತರಕರಾದ ನಾಗರಾಜ್ ರಂಗಭೂಮಿಯ ಪ್ರಸಿದ್ಧ ಕಲಾವಿದ ಮಾಸ್ಟರ್ ಹಿರಣ್ಣಯ್ಯ ಮುಂತಾದವರು ಜಾಥಾ, ಬಹಿರಂಗ ಸಭೆ, ಪ್ರದರ್ಶನಗಳು ಮುಂತಾದ ಒಂದಿಲ್ಲೊಂದು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಚಳುವಳಿಯ ಯಶಸ್ಸಿಗೆ ಕಾರಣರಾದರು.

ಪ್ರಮುಖರ ರಾಜೀನಾಮೆ

ಗೋಕಾಕ್ ವರದಿ ಜಾರಿಯಲ್ಲಿ ಸರ್ಕಾರದ ವಿಳಂಬ ನೀತಿಯನ್ನು ವಿರೋಧಿಸಿ ನಾನಾ ಅಕಾಡಮಿಗಳು ಹಾಗೂ ವಿಶ್ವ ಕನ್ನಡ ಸಮ್ಮೇಳನ ಮತ್ತು ಅದರ ಹಲವು ಉಪ ಸಮಿತಿಗಳಿಗೆ ರಾಜೀನಾಮೆ ಇತ್ತ ಪ್ರಮುಖರು:

ರಾಜ್ಯ ಸಾಹಿತ್ಯ ಅಕಾಡಮಿ	ಚನ್ನವೀರ ಕಣವಿ
	ಶಾಂತದೇವಿ ಮಾಳವಾಡ
	ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
	ಶಾಂತರಸ
	ಕಮಲಾಹಂಪನಾ
	ಪ್ರೊ. ಸಂಗಮನಾಥ ಹುಂಡಿ
ಜಾನಪದ ಅಕಾಡಮಿ	ಡಾ. ಸಂಕಾಪುರ
ಸಂಗೀತ ನೃತ್ಯ ಅಕಾಡಮಿ	ಡಾ. ಗಂಗೂಬಾಯಿ ಹಾನಗಲ್
ಲಲಿತ ಕಲಾ ಅಕಾಡಮಿ	ಜೆ.ಎಸ್. ಶೆಣೈ
ನಾಟಕ ಅಕಾಡಮಿ	ಡಾ. ನ. ರತ್ನ
	ಸಿಂಧುವಳ್ಳಿ ಅನಂತಮೂರ್ತಿ
ಪತ್ರಿಕಾ ಅಕಾಡಮಿ	ಡಾ. ನಾಡಿಗ ಕೃಷ್ಣಮೂರ್ತಿ
ಕರಕುಶಲ ವಸ್ತುಗಳ ಅಭಿವೃದ್ಧಿ ಮಂಡಲಿ	ಭಾರತೀ ವಿಷ್ಣುವರ್ಧನ್

ವಿಶ್ವ ಕನ್ನಡ ಸಮ್ಮೇಳನ ಉಪಸಮಿತಿಗಳಿಗೆ	ಡಾ. ವೃಷಭೇಂದ್ರ ಸ್ವಾಮಿ ಡಾ. ಪಾಟೀಲ ಪುಟ್ಟಪ್ಪ. ಡಾ. ಸಿದ್ದಯ್ಯ ಪುರಾಣಿಕ ಡಾ. ಜಿ.ಎಸ್. ಶಿವರುದ್ರಪ್ಪ ಡಾ. ಎಂ. ಚಿದಾನಂದ ಮೂರ್ತಿ ಎಚ್ಚೆಸ್ಕೆ ಕೃಷ್ಣಮೂರ್ತಿ ಪುರಾಣಿಕ ಡಾ. ಚಂದ್ರಶೇಖರ ಕಂಬಾರ ಕೆ.ಎಸ್ ನಿಸಾರ್ ಅಹ್ಮದ್ ಅ.ರಾ. ಮಿತ್ರ ಎಸ್.ಎಲ್. ಭೈರಪ್ಪ ಡಾ. ಸಿ.ಪಿ. ಕೃಷ್ಣಕುಮಾರ್
ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯದರ್ಶಿ ಸ್ಥಾನಕ್ಕೆ	ಡಿ. ಲಿಂಗಯ್ಯ ಲಕ್ಷ್ಮಣ ತೆಲಗಾವಿ
ಪರಿಷತ್ತಿನ ಚಿತ್ರಕಲಾ ಸಮಿತಿಗೆ	ಎಂ.ಟಿ.ವಿ. ಆಚಾರ್ಯ ಜಿ.ವೈ. ಹುಬ್ಳೀಕರ್ ಕಮಲೇಶ್
ಕನ್ನಡ ನಿಘಂಟಿನ ಸಂಪಾದಕ ಸಮಿತಿಗೆ	ಡಾ. ಆರ್.ಸಿ. ಹಿರೇಮಠ ಪ್ರೊ. ಎಸ್.ಎಸ್. ಮಾಳವಾಡ
ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನಕ್ಕೆ	ಕೋದಂಡ ರಾಮಶೆಟ್ಟಿ
ಧಾರವಾಡ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನಕ್ಕೆ	ಡಾ. ಗುರುಲಿಂಗ ಕಾಪಸೆ

ಚಳುವಳಿಯ ನಾನಾರೂಪಗಳು

ಎಲ್ಲ ಚಳುವಳಿಗಳಲ್ಲಿರುವಂತೆ ಗೋಕಾಕ್ ಚಳುವಳಿಯಲ್ಲಿಯೂ ಸಹ ಸಗದಿ ಉಪವಾಸ, ಆಮರಣ ಉಪವಾಸಗಳು ನಡೆದುವು. ಸಾಹಿತಿ-ಕಲಾವಿದರು, ಕಾರ್ಮಿಕರು, ವಿದ್ಯಾರ್ಥಿಗಳು, ವಕೀಲರು ಹೀಗೆ ಸಮಾಜದ ನಾನಾ ಸ್ತರದವರು ಭಾಗವಹಿಸಿದ್ದರು.

ಚಳುವಳಿಯ ಸ್ಮರಣೀಯ ಸಂಗತಿಗಳು:

ಬಿಜಾಪುರದಲ್ಲಿ ಗಂಗಾಧರ ಕೊರಳ್ಳಿಯವರು ೪೯ದಿನಗಳ ದೀರ್ಘ ಉಪವಾಸವನ್ನು ಮಾಡಿದರು.

ಮೈಸೂರಿನಲ್ಲಿ ಚಿತ್ರನಟರಾದ ಎಂ.ಪಿ.ಶಂಕರ್ ಹಾಗೂ ತೂಗುದೀಪ ಶ್ರೀನಿವಾಸ ಅವರು ತಮಟೆ ಬಾರಿಸಿಕೊಂಡು ಮೆರವಣಿಗೆಯಲ್ಲಿ ಸಾಗಿ ಬಂದರು.

ಶಂಕರ್‌ರವರು ಮೈಸೂರು ಪುರಭವನದ ಬಿಸಿಲು ಮಂಚದ ಮೇಲೆ ಶಂಖ ಊದಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಕನ್ನಡ ಪಕ್ಷದವರು ಜಾಗಟೆ, ತಮಟೆ, ಶಂಖವಾದ್ಯಗಳೊಡನೆ ಮೊಳಗುವ ಶಬ್ದಗಳೊಂದಿಗೆ ಮೆರವಣಿಗೆ ನಡೆಸಿದರು.

ಶಾರದಾವಿಲಾಸ ಕಾಲೇಜಿನ ಕನ್ನಡ ಅಧ್ಯಾಪಕ ಕೆ. ಶಿವರಾಮ ಐತಾಳರು ತಾತಯ್ಯಪ್ರತಿಮೆಯ ಆವರಣದ ಸುತ್ತ ಒಬ್ಬಂಟಿಯಾಗಿ ಮೌನ ಮೆರವಣಿಗೆ ನಡೆಸಿದರು. ತಮ್ಮ ಬಲಗೈ ಎತ್ತಿ ಹಿಡಿದು ಬಾಯಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ತಾತಯ್ಯ ಪ್ರತಿಮೆಯ ಉದ್ಯಾನವನಕ್ಕೆ ಅಪ್ರದಕ್ಷಿಣೆ ಹಾಕಿದರು.

ಧಾರವಾಡದಲ್ಲಿ ಕೇಂದ್ರ ಕನ್ನಡ ಕ್ರಿಯಾಸಮಿತಿಯವರ ಆದೇಶದಂತೆ ಚಳುವಳಿಗಾರರು ಅವರವರ ಮನೆಯ ಮುಂದೆ ಗಂಗಾಳಗಳನ್ನು (ಊಟದ ತಟ್ಟೆಗಳನ್ನು) ಬಡಿದು ವಿನೂತನ ರೀತಿಯ ಪ್ರದರ್ಶನ ನಡೆಸಿದರು.

ದೊಡ್ಡಬಳ್ಳಾಪುರದ ಬಾ.ವ. ಅಶ್ವತ್ಥ್ ಅವರು ಸುಮಾರು ೪೦೦ ಕಿ.ಮೀ. ದೂರದ ಮಂತ್ರಾಲಯದಿಂದ ಘಾಟಿಸುಬ್ರಮಣ್ಯಕ್ಕೆ ಉರುಳುಸೇವೆ ಮಾಡಿದರು.

ಮಂಡ್ಯದಲ್ಲಿ ಸಹಸ್ರಾರು ಮಕ್ಕಳು ಕೈಯಲ್ಲಿ ಬಾವುಟ ಹಿಡಿದು ಜಾಗಟೆ ಬಾರಿಸುತ್ತ ಮೆರವಣಿಗೆಯಲ್ಲಿ ಸಾಗಿ ಬಂದರು.

ಬೆಳಗಾವಿಯಲ್ಲಿ ಪ್ರತಿಭಟನಾಕಾರರು ಮಂಡಿಯೂರಿ ಅರ್ಧ ಕಿ.ಮೀ ನಡೆದು ಅಪರೂಪದ ಪ್ರದರ್ಶನ ನಡೆಸಿದರು.

ಧಾರವಾಡದಲ್ಲಿ ೫ ರಿಂದ ೧೨ ವರ್ಷದೊಳಗಿನ ಹನ್ನೊಂದು ಮಕ್ಕಳು ಬಂಧಿತರಾದರು. ರೈತರು ಭಾರಿ ಮೆರವಣಿಗೆ ನಡೆಸುವ ಮೂಲಕ ಚಳುವಳಿಗೆ ಹೊಸ ಶಕ್ತಿ ನೀಡಿದರು. ಭಾರೀ ಮಳೆಯನ್ನು ಲೆಕ್ಕಿಸದೆ, ೨೫ ಜೋಡಿ ಎತ್ತುಗಳನ್ನು ಅಲಂಕರಿಸಿಕೊಂಡು ಮೆರವಣಿಗೆಯಲ್ಲಿ ಸಾಗಿ ಬಂದರು.

ಬೆಂಗಳೂರಿನ ಕಟ್ಟೆಬಳಗದ ಸತ್ಯನಾರಾಯಣ, ಸುಧೀಂದ್ರ, ರಮೇಶಬಾಬು ಮುಂತಾದ ಹತ್ತು ಜನ ತರುಣರು ನರಸಿಂಹರಾಜ ಕಾಲೋನಿಯಿಂದ ಗೋಪಾಲಗೌಡ ವೃತ್ತದ ಕನ್ನಡದ ಗುಡಿಸಲಿನವರೆಗೆ ಸುಮಾರು ನಾಲ್ಕು ಮೈಲಿಗೂ ಮೀರಿ ಉರುಳು ಸೇವೆ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಧೋರಣೆ ಕನ್ನಡದ ಹಿತಕ್ಕೆ ಅನುಗುಣವಾಗಿಲ್ಲವೆಂದು ಮುನಿದ ಕನ್ನಡ ಪಕ್ಷದ ಬೆಂಬಲಿಗರು ೧೬.೪.೮೨ ರಂದು ಮಧ್ಯಾಹ್ನ ೩ ಗಂಟೆಯಿಂದ ಸಂಜೆ ೬ ಗಂಟೆಯವರೆಗೆ ಪರಿಷತ್ತಿನ ಕಛೇರಿಯ ದ್ವಾರಕ್ಕೆ ಬೀಗ ಜಡಿದು ಸಿಬ್ಬಂದಿಯನ್ನು ಕೂಡಿ ಹಾಕಿದರು.

ಕೋಲಾರದಲ್ಲಿ ಕೊಂಬು-ಕಹಳೆ, ತಾಳ-ಮದ್ದಲೆ, ಶಂಖ-ಜಾಗಟೆಗಳ ಸಮೇತವಾದ ಮೆರವಣಿಗೆ ನಡೆದು ನಗರದ ನಾಗರಿಕರನ್ನು ಆಕರ್ಷಿಸಿತು. ಬಹುಪಾಲು ಹಳ್ಳಿಗರಾಗಿದ್ದು, ವಿಭಿನ್ನ ವೇಷಗಳಲ್ಲಿದ್ದ ಪ್ರದರ್ಶನಕಾರರು, ಆವೇಶಪೂರಿತವಾಗಿ ತಮ್ಮಟೆ-ಜಾಗಟೆ ಬಡಿದು ಕೊಂಬು ಕಹಳೆ ಶಂಖಗಳನ್ನು ಊದಿ ಮೆರವಣಿಗೆಯಲ್ಲಿ ಸಾಗಿ ಬರುತ್ತಿದ್ದರು.

ಕನ್ನಡಕ್ಕೆ ಅಗ್ರಸ್ಥಾನ ದೊರೆಯುವವರೆಗೆ ಸಚಿವರಿಗೆ ಮತ್ತು ಶಾಸಕರಿಗೆ ಕ್ಷೌರ ಮಾಡಬಾರದೆಂದು ನಯನಜ ಕ್ಷತ್ರಿಯ ಶ್ರೇಯೋಭಿವೃದ್ಧಿ ಸಮಿತಿ ನಿರ್ಧರಿಸಿತು. ತನ್ನ ತಾಯಿಯನ್ನು ಗುರುತಿಸಲಾಗದೆ ಅನ್ಯ ಧರ್ಮ ಹಾಗೂ ಅನ್ಯ ಭಾಷೆಗಳನ್ನು ಮೇಲುಗೈ ಮಾಡಿರುವ ಮಂತ್ರಿ ಮಂಡಲದ ನಿರ್ಧಾರವನ್ನು ಬಹಿಷ್ಕರಿಸಿದ್ದೇವೆಂದು ಸಮಿತಿಯ ಅಧ್ಯಕ್ಷ ಬಿ.ಎಂ. ವೆಂಕಟೇಶಲು ಅವರು ತಿಳಿಸಿದರು.

ಬೆಂಗಳೂರು ನಗರದ ಸಾರ್ವಜನಿಕ ಕೇಂದ್ರೋದ್ಯಮಗಳಾದ ಬಿ.ಇ.ಎಲ್. ಐ.ಟಿ.ಐ, ಹೆಚ್.ಎಂ.ಟಿ ಹಾಗೂ ಇನ್ನಿತರೆ ಕಾರ್ಖಾನೆಗಳ ಕಾರ್ಮಿಕರು ಹೊಸದುರ್ಗಕ್ಕೆ ತೆರಳಿ ಅಲ್ಲಿ ನಡೆಯಲ್ಲಿದ್ದ ಉಪಚುನಾವಣೆಗಳಲ್ಲಿ ಗೋಕಾಕ್ ಪರ ನಿಲುವು ಹೊಂದಿರುವ ಅಭ್ಯರ್ಥಿಗೆ ಮತಚಲಾಯಿಸಬೇಕೆಂದು ಪ್ರಚಾರ ಮಾಡಿದರು.

ಧಾರವಾಡದಲ್ಲಿ ನಿಷೇಧಾಜ್ಞೆ ಜಾರಿಯಾದ ಕೂಡಲೆ, ಅದನ್ನು ಉಲ್ಲಂಘಿಸುವ ಸೂಚನೆ ಇದ್ದುದರಿಂದ ಸಿಬ್ಬಂದಿಯೊಡನೆ ಧಾವಿಸಿದ ಉಪ ಪೋಲೀಸ್

ಮುಖ್ಯಾಧಿಕಾರಿಯು ವಿದ್ಯಾವರ್ಧಕ ಸಂಘ ಕಟ್ಟಡದಿಂದ ಕಪ್ಪು ಪಟ್ಟಿ ಧರಿಸಿಕೊಂಡು ಹೊರಬಂದ "ಸತ್ಯಾಗ್ರಹಿಗಳನ್ನು" ನೋಡಿ ಚಕಿತರಾದರು. ಅವರು ಮಿಕಿ ಮಿಕಿ ನೋಡುತ್ತಿರುವಂತೆಯೇ ಸತ್ಯಾಗ್ರಹಿಗಳು ಆಕಾಶಕ್ಕೆ ಹಾರಿ ಮೇಲೆ ಮೇಲೆ ಏರಿ ಹೋದರು. ಪೋಲೀಸರ ಕೈಗೆ ಸಿಕ್ಕದೆ ಹಾರಿ ಹೋದ ಸತ್ಯಾಗ್ರಹಿಗಳು ಕನ್ನಡ ಕ್ರಿಯಾ ಸಮಿತಿಯ ನಾಯಕರು ವಿದ್ಯಾವರ್ಧಕ ಸಂಘದಿಂದ ಹೊರಕ್ಕೆ ಬಿಟ್ಟ ಪಾರಿವಾಳಗಳು ಮಾತ್ರ. ಅವುಗಳ ಕಾಲಿಗೆ ಪ್ರತಿಭಟನಾರ್ಥ ಕಪ್ಪು ಬಣ್ಣದ ಬಟ್ಟೆ ಚೂರುಗಳನ್ನು ಕಟ್ಟಲಾಗಿತ್ತು.

ಮೈಸೂರಿನಲ್ಲಿ ಬಂಧಿತರಾದ ಚಳುವಳಿಕಾರರನ್ನು ಬಿಡುಗಡೆ ಮಾಡುವ ಮುನ್ನ ಪೋಲಿಸರು ತಂದೆ ತಾಯಿಗಳ ಹೆಸರನ್ನು ಕೇಳಿದಾಗ ತಂದೆ-ಕನ್ನಡ, ತಾಯಿ-ಕನ್ನಡ, ವಿಳಾಸ-ಮೈಸೂರು ಎಂದು ಚಳುವಳಿಕಾರರು ಹೇಳಿ ಪೋಲೀಸರಿಗೆ ವಿನೋದ ನೀಡಿದರು.

ಮೈಸೂರಿನ ತಾತಯ್ಯ ಪ್ರತಿಮೆಯ ಆವರಣದಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿ ಬಂಧನಕ್ಕೆ ಒಳಗಾದ ೯ ಜನರಲ್ಲಿ, ಕಿಶೋರನಲ್ಲೊಬ್ಬನಾದ ದಕ್ಷಿಣಾಮೂರ್ತಿಯನ್ನು ಪೋಲೀಸರು ವ್ಯಾನಿಗೆ ಹತ್ತಿಸಿಕೊಳ್ಳಲಿಲ್ಲ. "ನೀನು ಬೇಡ ಹೋಗು, ಇನ್ನೊಮ್ಮೆ ಸತ್ಯಾಗ್ರಹದಲ್ಲಿ ಕುಳಿತುಕೊಳ್ಳಬೇಡ" ಎಂದು ಪೋಲಿಸರು ಅವನಿಗೆ ಕಿವಿ ಮಾತು ಹೇಳಿ ಹಿಂದಕ್ಕೆ ಕಳಿಸಿದರು. ನಿರಾಶನಾದ ಪುಟಾಣಿ ದಕ್ಷಿಣಾಮೂರ್ತಿ ಪ್ರತಿಮೆಯ ಆವರಣಕ್ಕೆ ಹಿಂತಿರುಗಿ ಸತ್ಯಾಗ್ರಹಿಗಳಿಗೂ, ಪೋಲೀಸರಿಗೂ ನೀರು ಒದಗಿಸುವ ಕೆಲಸಕ್ಕೆ ನಿಂತ !

❑




ಗೋಕಾಕ್ ಚಳುವಳಿಯಲ್ಲಿ ಡಾ. ರಾಜ್‌ಕುಮಾರ್, ಲೋಕೇಶ್, ಅಶೋಕ್



ಗೋಕಾಕ್ ವರದಿಗಾಗಿ ಉರುಳು ಸೇವೆ-ನರಸಿಂಹರಾಜ ಕಾಲೋನಿಯಿಂದ
ವಿಧಾನಸೌಧದವರೆಗೆ
ಶ್ರೀ ಸತ್ಯನಾರಾಯಣ (ಕಟ್ಟೆ ಸತ್ಯ) ಹಾಗೂ ಪ್ರಸಾದ್



ಗೋಕಾಕ್ ವರದಿ ಜಾರಿಗಾಗಿ ಸರದಿ ಉಪವಾಸ
ಕನ್ನಡ ಗುಡಿಸಿಲಿನಲ್ಲಿ ಸಾಹಿತಿ ಕಲಾವಿದರ ಬಳಗ ಮತ್ತು
ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಸದಸ್ಯರಿಂದ



ಕನ್ನಡ ಮಾತೃಭಾಷಾ ಶಿಕ್ಷಣ ಕಡ್ಡಾಯಕ್ಕಾಗಿ ಧರಣಿ ಸತ್ಯಾಗ್ರಹ

ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳ ಪ್ರಸಾರಕ್ಕಾಗಿ ಚಳುವಳಿ

ದಿನಾಂಕ ೧.೧೧.೮೧ ಕನ್ನಡಿಗರಿಗೆ ಮೆಚ್ಚಿನ ದಿನವಾದ ರಾಜ್ಯೋತ್ಸವ ದಿನ ಮತ್ತೂ ವಿಶೇಷವೆಂದರೆ ರಾಜ್ಯೋತ್ಸವದ ಬೆಳ್ಳಿ ಹಬ್ಬದ ಆಚರಣೆ. ಅಂದು ನಗರಕ್ಕೆ ಕಾಲಿಟ್ಟಿದ್ದು ಬೆಂಗಳೂರು ದೂರದರ್ಶನ ಮರುಪ್ರಸಾರ ಕೇಂದ್ರ. ಕನ್ನಡದ ವಿನಃ ಬೇರೆ ಭಾಷೆಗಳ ಅಂದರೆ ತಮಿಳು, ಹಿಂದಿ, ಮರಾಠಿಯ ಮುಖಾಂತರ ಕಾರ್ಯಕ್ರಮಗಳ ಮರುಪ್ರಸಾರ. ಹೀಗಾಗಿ ಕನ್ನಡಿಗರು ವಿಧಿಯಿಲ್ಲದೆ ಪರಭಾಷೆಗಳ ಮರುಪ್ರಸಾರ ಕಾರ್ಯಕ್ರಮಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ.

ಆಗ ಪ್ರತಿದಿನವೂ ರಾತ್ರಿ ೭.೩೦ರಿಂದ ೧೦ರವರೆಗೆ ಸೋಮವಾರದಿಂದ ಶುಕ್ರವಾರದವರೆಗೆ ಮದ್ರಾಸ್ ಕೇಂದ್ರದಿಂದಲೂ, ಶನಿವಾರ ಮತ್ತು ಭಾನುವಾರಗಳಂದು ಮುಂಬಯಿ ಕೇಂದ್ರಗಳಿಂದಲೂ ಕಾರ್ಯಕ್ರಮಗಳು ಮರು ಪ್ರಸಾರ ವಾಗುತ್ತಿದ್ದವು.

ಅಂದರೆ ಸಹಜವಾಗಿಯೇ, ಮದ್ರಾಸಿನಿಂದ ತಮಿಳು ಕಾರ್ಯಕ್ರಮಗಳೂ ಮುಂಬಯಿಯಿಂದ ಮರಾಠಿ ಮತ್ತು ಹಿಂದಿ ಕಾರ್ಯಕ್ರಮಗಳೂ ಮರು ಪ್ರಸಾರವಾಗುತ್ತಿದ್ದುವು. ಕನ್ನಡ ಕಾರ್ಯಕ್ರಮಗಳು ಕೈಗೆಟುಕದ ನಕ್ಷತ್ರದಂತಾಗಿತ್ತು.

ಎಲ್ಲಾ ಭಾಷೆಗಳನ್ನು ಹೃದಯಪೂರಕವಾಗಿ ಸ್ವಾಗತಿಸುವ ಮನೋಭಾವವನ್ನು ಹೊಂದಿದ್ದ ಕನ್ನಡ ಜನತೆ ಮೌನವಾಗಿ ಮರುಪ್ರಸಾರ ಕಾರ್ಯಕ್ರಮಗಳ ಮೂಕ ವೀಕ್ಷಕರಾಗಿದ್ದರೆ, ಪರಭಾಷಿಗರಲ್ಲಿ ಮರುಪ್ರಸಾರವು ಮುಂಬಯಿಯಿಂದ ಬೇಕೆನ್ನುವ ಒಂದು ವರ್ಗ, ಮದರಾಸಿನಿಂದ ಬೇಕೆನ್ನುವ ಒಂದು ವರ್ಗವಾಗಿ ಪತ್ರಿಕೆಗಳಲ್ಲಿ ತಮ್ಮ ಬೇಡಿಕೆಗಳನ್ನು ಮಂಡಿಸುವ ಮಟ್ಟಕ್ಕೆ ಹೋಗಿದ್ದರು.

ದೂರದರ್ಶನ ವೀಕ್ಷಕ ವೃಂದ

ಇಂತಹ ಸಂದರ್ಭದಲ್ಲಿ ಬೆಂಗಳೂರಿನ ಬಿ.ಇ.ಎಲ್. ಕಾರ್ಖಾನೆಯ ಕೆಲವು ಉದ್ಯೋಗಿಗಳು "ದೂರದರ್ಶನ ವೀಕ್ಷಕ ವೃಂದ"ವೆಂಬ ಸಂಸ್ಥೆಯನ್ನು ರಚಿಸಿಕೊಂಡು ತನ್ಮೂಲಕ ಪತ್ರಿಕೆಗಳಲ್ಲಿ ಕನ್ನಡ ಕಾರ್ಯಕ್ರಮಗಳಿಗೆ ಆಗ್ರಹಿಸ ತೊಡಗಿದರು. "ಮದ್ರಾಸ್

ದೂರದರ್ಶನದಿಂದಾಗಲೀ ಮುಂಬಯಿ ದೂರದರ್ಶನದಿಂದಾಗಲೀ ಮರುಪ್ರಸಾರ ಬೇಡ. ನಮಗೆ ಸ್ವತಂತ್ರ ದೂರದರ್ಶನ ಕೇಂದ್ರ ಸ್ಥಾಪಿತವಾಗಿ ಕನ್ನಡ ಕಾರ್ಯಕ್ರಮಗಳ" ಪ್ರಸಾರವೇ ಆಗಬೇಕು" ಎಂದು ಆಗ್ರಹಿಸ ತೊಡಗಿದರು.

ದೂರದರ್ಶನ ಮರುಪ್ರಸಾರದ ಕೇಂದ್ರದ ಮುಖ್ಯಾಧಿಕಾರಿಗಳಿಗೆ ಮನವಿಯೊಂದನ್ನು ಅರ್ಪಿಸಿ ಕನ್ನಡ ಕಾರ್ಯಕ್ರಮಗಳ ಪ್ರಸಾರಕ್ಕೆ ಒತ್ತಾಯ ಪಡಿಸಲಾಯಿತು. ಅಂದಿನ ವಾರ್ತಾ ಮತ್ತು ಪ್ರಸಾರ ಸಚಿವರಾಗಿದ್ದ ಹೆಚ್.ಕೆ.ಎಲ್. ಭಗತ್ ಅವರಿಗೆ ಸಹಸ್ರಾರು ಸಹಿಗಳುಳ್ಳ ಮನವಿಪತ್ರವನ್ನು ಅರ್ಪಿಸಿತು.

ಈ ವೇಳೆಗೆ ಇಂದಿರಾ ನಗರದಲ್ಲಿ ಸ್ಥಾಪಿತವಾಗಿದ್ದ 'ಬೆಂಗಳೂರು ಟಿ.ವಿ. ವೀಕ್ಷಕರ' ಸಂಘವು ಸಹ ಕನ್ನಡ ಕಾರ್ಯಕ್ರಮಗಳಿಗೆ ಒತ್ತಾಯಿಸತೊಡಗಿತು.

ಗೋಕಾಕ್ ಚಳುವಳಿಯ ನಂತರ ಮೂಡಿದ ಕನ್ನಡದ ಬೇಡಿಕೆಗಳಲ್ಲಿ ಕನ್ನಡ ದೂರದರ್ಶನಕ್ಕೆ ಒತ್ತಾಯಿಸುವ ಕಾರ್ಯಕ್ರಮವೂ ಒಂದಾಗಿ ಸಾಹಿತಿ ಕಲಾವಿದರ ಬಳಗವೂ ಇನ್ನಿತರ ಕನ್ನಡ ಸಂಘಟನೆಗಳೊಂದಿಗೆ ಪ್ರಮುಖ ಪಾತ್ರ ವಹಿಸುವುದರೊಂದಿಗೆ ಕನ್ನಡ ಕಾರ್ಯಕ್ರಮಗಳ ಪ್ರಸಾರಕ್ಕೆ ಚಳುವಳಿಯ ಕಾವೇರಿತು.

ಕನ್ನಡದ ಹಿರಿಯ ಸಾಹಿತಿಗಳಾದ ಕುವೆಂಪು, ವಿ.ಕೃ. ಗೋಕಾಕ್, ಪು.ತಿ.ನ., ಶ್ರೀರಂಗ, ಯು.ಆರ್. ಅನಂತ ಮೂರ್ತಿ, ಲಂಕೇಶ್, ಬಿ.ವಿ. ವೈಕುಂಠರಾಜು, ಚೆನ್ನವೀರ ಕಣವಿ, ಚಿದಾನಂದ ಮೂರ್ತಿ, ಎಂ.ಎಂ. ಕಲಬುರ್ಗಿ ಮುಂತಾದವರು ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡದಿರುವುದನ್ನು ಪ್ರತಿಭಟಿಸಿ ಆಕಾಶವಾಣಿ ಕಾರ್ಯಕ್ರಮಗಳಿಗೆ ಬಹಿಷ್ಕಾರ ಹಾಕುವುದಾಗಿ ತಿಳಿಸಿದರು. ಹಲವಾರು ನಾಟಕ ತಂಡಗಳು, ಬಂಡಾಯ ಸಾಹಿತ್ಯ ಸಂಘಟನೆ ಮುಂತಾದ ಸಂಸ್ಥೆಗಳು ಈ ಬಹಿಷ್ಕಾರ ಕಾರ್ಯಕ್ರಮಕ್ಕೆ ಬೆಂಬಲವಿತ್ತವು.

ದಿನಾಂಕ ೧೩.೪.೧೯೮೩ರಂದು ದೂರದರ್ಶನ ಮರುಪ್ರಸಾರ ಕೇಂದ್ರದ ಎದುರು ಸಾಹಿತಿ ಕಲಾವಿದರ ಬಳಗದ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಹಲವಾರು ಕಲಾವಿದರು, ಸಾಹಿತಿಗಳು ಭಾಗವಹಿಸಿದ್ದರು. ದೂರದರ್ಶನ ವೀಕ್ಷಕ ವೃಂದವೂ ಸೇರಿದಂತೆ ನಾನಾ ಕನ್ನಡ ಪರ ಸಂಘಟನೆಗಳು ಭಾಗವಹಿಸಿದ್ದವು.

ಸಾಹಿತಿ ಕಲಾವಿದರ ಬಳಗವು ೧೫, ಆಗಸ್ಟ್ ೧೯೮೩ರ ಒಳಗೆ ಕನ್ನಡ ಕಾರ್ಯಕ್ರಮಗಳ ಪ್ರಸಾರವಾಗದಿದ್ದರೆ ಮರುಪ್ರಸಾರವನ್ನೇ ನಿಲ್ಲಿಸಿ ಎಂದು ಆಗ್ರಹ ಪಡಿಸಿತು.

ಆದರೆ ಯಾವುದೇ ಪರಿಣಾಮಕಾರೀ ಫಲಿತಾಂಶ ಕಾಣದಿದ್ದಾಗ ವಿಧಿ ಇಲ್ಲದೆ ಆಗಸ್ಟ್ ೧೫, ಸ್ವಾತಂತ್ರ್ಯ ದಿನಾಚರಣೆಯನ್ನು ಕರಾಳದಿನವನ್ನಾಗಿ ಆಚರಿಸುವ ನಿರ್ಣಯ ಕೈಗೊಳ್ಳಲಾಯಿತು.

ಕರಾಳ ದಿನವಾಗಿ ಸ್ವಾತಂತ್ರೋತ್ಸವ

ಆಗಸ್ಟ್ ೧೫, ೧೯೮೩, ಸೋಮವಾರ. ದೇಶಕ್ಕೆ ಸ್ವಾತಂತ್ರ್ಯ ಸಂದು ೩೬ ವರ್ಷಗಳು ಕಳೆದು ೩೭ನೇ ವರ್ಷಕ್ಕೆ ಕಾಲಿಟ್ಟ ಸಂತಸದ ದಿನ. ಇಡೀ ರಾಷ್ಟ್ರವೇ ಸಂಭ್ರಮದಿಂದ ಆಚರಿಸುವ ಹರ್ಷದ ದಿನ.

ಪ್ರಧಾನ ಮಂತ್ರಿ ಇಂದಿರಾಗಾಂಧಿ ರಾಜಧಾನಿ ನವದೆಹಲಿಯ ಕೆಂಪು ಕೋಟೆಯಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ, ಇಡೀ ರಾಷ್ಟ್ರವನ್ನು ಉದ್ದೇಶಿಸಿ ಮಾಡುವ ಭಾಷಣ, ರಾಷ್ಟ್ರದ ಎಲ್ಲ ಉದ್ದಗಲಕ್ಕೆ ದೂರದರ್ಶನದಿಂದ ಪ್ರಸಾರವಾಗಿ ಎಲ್ಲರಿಗೂ ತಲುಪಬೇಕಾದ ಭಾಷಣ. ಆದರೆ ಆ ಭಾಷಣ ಅಂದು ರಾಷ್ಟ್ರಾದ್ಯಂತ ಪ್ರಸಾರವಾದರೂ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಗಲಿಲ್ಲ. ಇಡೀ ದೇಶದ ಜನ ಪ್ರಧಾನಿಗಳ ಭಾಷಣವನ್ನು ವೀಕ್ಷಿಸಿದರೂ ಸಹ ಬೆಂಗಳೂರಿನ ಜನ ನೋಡಲಾಗಲಿಲ್ಲ. ಕನ್ನಡ ಕಾರ್ಯಕ್ರಮಗಳ ಪ್ರಸಾರಕ್ಕೆ ಕೇಂದ್ರ ಸರ್ಕಾರವು ತೋರಿದ ನಿರಾಸಕ್ತಿ, ಅಸಡ್ಡೆಗಳಿಂದ ರೊಚ್ಚಿಗೆದ್ದಿದ್ದ ಕನ್ನಡ ಜನತೆ ಮತ್ತು ಕನ್ನಡ ಕಾರ್ಯಕರ್ತರು. ಬೆಂಗಳೂರು ದೂರದರ್ಶನ ಕೇಂದ್ರದಿಂದ ಸ್ವತಂತ್ರ ಕನ್ನಡ ಕಾರ್ಯಕ್ರಮಗಳ ಪ್ರಸಾರದಲ್ಲಿ ಆಗುತ್ತಿದ್ದ ವಿಳಂಬ ನೀತಿಯನ್ನು ಪ್ರತಿಭಟಿಸಿ ಸ್ವಾತಂತ್ರ್ಯ ದಿನವನ್ನು ಸಾಹಿತಿ ಕಲಾವಿದರ ಬಳಗದವರು ಆಚರಿಸಿದ್ದು ದೂರದರ್ಶನ ಕಾರ್ಯಕ್ರಮಗಳ ಪ್ರಸಾರವನ್ನು ವ್ಯವಸ್ಥಿತವಾಗಿ ತಡೆಯುವ ಮೂಲಕ. ಅಂದು ಮರುಪ್ರಸಾರ ಗೋಪುರದ (ಕಾಫೀಬೋರ್ಡ್ ಹತ್ತಿರ) ಬಳಿ ಸಾಹಿತಿ ಕಲಾವಿದರ ಬಳಗದವರ ಪ್ರತಿಭಟನೆ ಮತ್ತು ಧರಣಿ ಪ್ರಾರಂಭವಾಯಿತು.

ಕಾರ್ಯಕರ್ತರ ಒಂದು ಪಡೆ ದೂರದರ್ಶನ ಮರುಪ್ರಸಾರದ ಗೋಪುರಕ್ಕೆ ವಿದ್ಯುಚ್ಛಕ್ತಿ ಸರಬರಾಜನ್ನು ಸ್ಥಗಿತಗೊಳಿಸಿತು. ಮಿಲ್ಲರ್ ರಸ್ತೆಯಲ್ಲಿದ್ದ ವಿದ್ಯುತ್ ಸರಬರಾಜು ಕೇಂದ್ರಕ್ಕೆ ನುಗ್ಗಿದ ಬಳಗದ ನಾಲ್ಕು ಜನ ಕಾರ್ಯಕರ್ತರು ಬಾಗಿಲನ್ನು ಭದ್ರಪಡಿಸಿಕೊಂಡು ವಿದ್ಯುಚ್ಛಕ್ತಿ ಸರಬರಾಜನ್ನು ಸ್ಥಗಿತಗೊಳಿಸಿದರು.

ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು ಬೆಳಿಗ್ಗೆ ಏಳಕ್ಕೆ; ಮತ್ತೆ ಬಂದಿದ್ದು ಎಂಟೂಕಾಲಿಗೆ. ಈ ಅವಧಿಯಲ್ಲಿಯೇ ಪ್ರಧಾನಿಯವರ ಕೆಂಪುಕೋಟೆಯ ಭಾಷಣ ಪ್ರಸಾರ ಆಗಬೇಕಿದ್ದು, ಆಗದೆ ನಿಂತದ್ದು.

ಈ ನಿಲುಗಡೆಯ ಸಂಬಂಧ ಬಳಗದ ಕಾರ್ಯಕರ್ತರಾದ ಎಸ್. ರಘುಕುಮಾರ್, ವಿ. ಸತ್ಯನಾರಾಯಣರಾವ್ ಮಾನೆ, ನಾಡಹಳ್ಳಿ ಶ್ರೀಪಾದರಾವ್ ಮತ್ತು ಜಿ.ಎಂ. ಮೂರ್ತಿ ಮತ್ತು ಇಬ್ಬರು ಕೆ.ಇ.ಬಿ. ನೌಕರರನ್ನು ಪೋಲೀಸರು ಬಂಧಿಸಿದರು.

ಇತ್ತ ಮರುಪ್ರಸಾರ ಗೋಪುರದ ಬಳಿ ಕಪ್ಪು ಬ್ಯಾಡ್ಜ್ ಧರಿಸಿ ಘೋಷಣೆಗಳನ್ನು ಕೂಗಿ ಧರಣಿ ಆಚರಿಸಿದ ೭೧ ಜನ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಅನಂತರ ಬಿಡುಗಡೆ ಮಾಡಿದರು.

ಪ್ರೊ. ಎಂ. ಗೋಪಾಲಕೃಷ್ಣ ಅಡಿಗ, ಡಾ. ಜಿ.ಎಸ್. ಶಿವರುದ್ರಪ್ಪ, ಪಿ.ಲಂಕೇಶ್, ಚಂದ್ರನಾಥ್, ಸುಮತೀಂದ್ರ ನಾಡಿಗ್, ಪ್ರೊ. ಬಿ.ಕೆ. ಹನುಮಂತಯ್ಯ, ಡಾ. ಎಂ. ಚಿದಾನಂದ ಮೂರ್ತಿ, ಜಿ.ಕೆ. ಸತ್ಯ, ಡಾ. ಪಿ.ವಿ. ನಾರಾಯಣ, ನರೇಂದ್ರ ಬಾಬು ಬಂಧಿತರಲ್ಲಿ ಪ್ರಮುಖರು.

ರಾತ್ರಿಯೂ ಮರುಪ್ರಸಾರಕ್ಕೆ ಭಂಗ – ಎಂ.ಜಿ.ಆರ್ ಭಾಷಣಕ್ಕೆ ನಿಲುಗಡೆ

ಬೆಳಿಗ್ಗೆ ಪ್ರಧಾನಿಯವರ ಸ್ವಾತಂತ್ರ್ಯೋತ್ಸವದ ಭಾಷಣ ಮರುಪ್ರಸಾರ ನಿಲುಗಡೆಯಾದರೆ, ರಾತ್ರಿಯೂ ಸಹ ಸಾಹಿತಿ ಕಲಾವಿದರ ಬಳಗದ ಕಾರ್ಯಕರ್ತರು ಸುಮಾರು ನಲವತ್ತು ನಿಮಿಷಗಳ ಕಾಲ ದೂರದರ್ಶನದ ಮರುಪ್ರಸಾರವನ್ನು ಸ್ಥಗಿತಗೊಳಿಸುವಲ್ಲಿ ಯಶಸ್ವಿಯಾದರು.

ಬಸವೇಶ್ವರ ವೃತ್ತದ ಬಳಿಯಿರುವ ಮೈಕ್ರೋವೇವ್ ಕೇಂದ್ರಕ್ಕೆ ನುಗ್ಗಿ ದೂರದರ್ಶನದ ಕಾರ್ಯಕ್ರಮಗಳು ಹೊರಗಡೆಯಿಂದ ಬಾರದಂತೆ ಸ್ವಿಚ್ ಆರಿಸಿದರು. ಇದರಿಂದ ೭.೪೦ ರಿಂದ ೮.೨೦ರವರೆಗೆ ಇದ್ದ ದೂರದರ್ಶನ ಕಾರ್ಯಕ್ರಮಗಳನ್ನು ಜನತೆ ವೀಕ್ಷಿಸಲಾಗಲಿಲ್ಲ. ರಾತ್ರಿಯ ಕಾರ್ಯಕ್ರಮ ಮದ್ರಾಸ್ ಕೇಂದ್ರದ ಮರುಪ್ರಸಾರವಾಗಿದ್ದು ತಮಿಳುನಾಡು ಮುಖ್ಯಮಂತ್ರಿ ಎಂ.ಜಿ. ರಾಮಚಂದ್ರನ್ ಭಾಷಣವಾಗಿತ್ತು.

ಈ ನಿಲುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆಂಬ ಆಪಾದನೆ ಮೇರೆಗೆ ಆಶೋಕ್ ಬಾಬು, ಪೀಟರ್, ನಂಜುಂಡೇಗೌಡ, ಮೈ.ರಾ. ಭರತ್ ಜ್ಯೋತಿ, ಎಚ್.ಕೆ. ಚಂದ್ರಶೇಖರ್ ಮತ್ತು ಕೃಷ್ಣ ಎಂಬ ಕಾರ್ಯಕರ್ತರನ್ನು ಬಂಧಿಸಿದರು.

ಈ ಘಟನೆಯಿಂದ ಎಚ್ಚೆತ್ತ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಹೆಚ್.ಕೆ.ಎಲ್. ಭಗತ್ ಅವರು ನವೆಂಬರ್ ಒಂದರಿಂದ ಬೆಂಗಳೂರು ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರಮಾಡುವುದಾಗಿ ತಿಳಿಸಿದರು.

ಆದರೆ ನವೆಂಬರ್ ಒಂದು, ಕನ್ನಡ ರಾಜ್ಯೋತ್ಸವದ ಕೊಡುಗೆಯಾಗಿ ಕನ್ನಡ ಕಾರ್ಯಕ್ರಮಗಳು ಬರುವುದರ ಬದಲಿಗೆ ನವೆಂಬರ್ ೧೯ರಿಂದ ಅಂದರೆ ಇಂದಿರಾ ಗಾಂಧಿಯವರ ಜನ್ಮದಿನಾಚರಣೆಯಿಂದ ಕನ್ನಡದ ಕಾರ್ಯಕ್ರಮಗಳು ಪ್ರತಿದಿನ ಅರ್ಧ ಘಂಟೆಗಳ ಕಾಲ ಪ್ರಸಾರವಾಗಲು ಆರಂಭವಾಯಿತು.

ಹೀಗಾಗಿ ದೂರದರ್ಶನದಲ್ಲಿ ಕನ್ನಡ ಪ್ರಸಾರಕ್ಕಾಗಿ ನಡೆದ ಹೋರಾಟಕ್ಕೆ ಜಯ ಸಿಗುವಲ್ಲಿ ದಿಟ್ಟ ಹೋರಾಟ ನಡೆಸಿದ ಕನ್ನಡ ಕಾರ್ಯಕರ್ತರೆಲ್ಲ ಅಭಿನಂದನಾರ್ಹರು.

ಕರ್ನಾಟಕದಾದ್ಯಂತ ಕನ್ನಡ ಪ್ರಸಾರಕ್ಕೆ ಹೋರಾಟ

ಬೆಂಗಳೂರು ದೂರದರ್ಶನ ಕೇಂದ್ರದಿಂದ ಪ್ರತಿದಿನ ಅರ್ಧ ಘಂಟೆಯ ಕನ್ನಡ ಕಾರ್ಯಕ್ರಮದ ಪ್ರಸಾರವೇನೋ ಆರಂಭವಾಯಿತು. ಆದರೆ ಪೂರ್ಣ ಪ್ರಮಾಣದ ಈ ಪ್ರಸಾರಕ್ಕೆ ಆಗ್ರಹಿಸಿ ಹೋರಾಟ ಮುಂದುವರೆಯಿತು. ನಂತರ ಪ್ರಸಾರದ ಅವಧಿ ಒಂದು ಘಂಟೆ ನಲವತ್ತು ನಿಮಿಷಗಳಿಗೆ ಏರಿತು. ಆದರೆ ಪ್ರಸಾರದ ವ್ಯಾಪ್ತಿ ಬೆಂಗಳೂರು ಮತ್ತು ಸುತ್ತಲ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ಬೆಂಗಳೂರಿನಿಂದ ಅರವತ್ತು ಕಿಲೋ ಮೀಟರ್ ವ್ಯಾಪ್ತಿಯ ಆಚೆ ಪ್ರಸಾರವಾಗುತ್ತಿರಲಿಲ್ಲ. ಅಲ್ಲದೆ ಕಾರ್ಯಕ್ರಮದ ಗುಣಮಟ್ಟವೂ ಸಮರ್ಪಕವಾಗಿರಲಿಲ್ಲ. ಹಾಗಾಗಿ ಉತ್ತಮ ಗುಣಮಟ್ಟದ ಕಾರ್ಯಕ್ರಮ, ಪ್ರಸಾರದ ಅವಧಿಯಲ್ಲಿ ಹೆಚ್ಚಳ, ಕರ್ನಾಟಕದಾದ್ಯಂತ ಕನ್ನಡ ಕಾರ್ಯಕ್ರಮಗಳಿಗೆ ಪ್ರಸಾರದ ವ್ಯವಸ್ಥೆ, ಹೀಗೆ ಹಲವಾರು ಬೇಡಿಕೆಗಳ ಸಮೇತ ಹೋರಾಟ ಹಲವು ಹಂತಗಳಲ್ಲಿ ನಡೆಯತೊಡಗಿತು.

ರಾಮಾಯಣ ಪ್ರಸಾರಕ್ಕೆ ತಡೆ

೧೯೮೮ರ ಸಮಯದಲ್ಲಿ 'ರಾಮಾಯಣ' ಧಾರಾವಾಹಿ ಅತ್ಯಂತ ಜನಪ್ರಿಯ ಕಾರ್ಯಕ್ರಮವಾಗಿ ಪ್ರತಿ ಭಾನುವಾರ ಪ್ರಸಾರವಾಗತೊಡಗಿತ್ತು. ಇಡೀ ದೇಶಾದ್ಯಂತ ಈ ಕಾರ್ಯಕ್ರಮ ಅತ್ಯಧಿಕ ವೀಕ್ಷಕರನ್ನು ಹೊಂದಿ ಮೆಚ್ಚುಗೆ ಗಳಿಸಿತ್ತು.

೭.೨.೧೯೮೮ ರಂದು ಸಾಹಿತಿ ಕಲಾವಿದರ ಬಳಗದ ಕಾರ್ಯಕರ್ತರು ರಾಮಾಯಣ ಪ್ರಸಾರವನ್ನು ನಿಲ್ಲಿಸಿ ತನ್ಮೂಲಕ ಕನ್ನಡಿಗರ ಬೇಡಿಕೆಯನ್ನು ಸಂಬಂಧಪಟ್ಟವರ ಗಮನಕ್ಕೆ ತರುವಂತಹ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅದರಂತೆ ಬಳಗದ ಕಾರ್ಯಕರ್ತರಾದ ಹಿರಿಯೂರು ರಾಘವೇಂದ್ರ, ನಾ.ಸು. ಗಣೇಶ ಪ್ರಸಾದ್, ಬೆಂ.ವ. ಯೋಗೀಶ, ಜಗನ್ನಾಥ, ಶ್ರೀಧರ ಮತ್ತು ರಾಮಕೃಷ್ಣ ಮುಂತಾದ ಕಾರ್ಯಕರ್ತರು ರಾಮಾಯಣ ಪ್ರಸಾರವನ್ನು ಯಶಸ್ವಿಯಾಗಿ ತಡೆ ಹಿಡಿದರು. ಪೋಲೀಸರು ಈ ಆರೂ ಜನರನ್ನು ಬಂಧಿಸಿದರು.

ಈ ಘಟನೆ ಅಂದು ಬಹು ದೊಡ್ಡ ಸುದ್ದಿಯಾಯಿತು. ಅಲ್ಲದೆ ಮುಂದಿನ ಹೋರಾಟಗಳಿಗೆ ಉತ್ಸಾಹದಾಯಕವಾಗಿಯೂ ಪ್ರೇರೇಪಿಸಿತು.

ದಿನಾಂಕ ೨೧.೨.೧೯೮೮ರಂದು ದೂರದರ್ಶನಕ್ಕೆ ಮುತ್ತಿಗೆ ಕಾರ್ಯಕ್ರಮವನ್ನು ಸಾಹಿತಿ ಕಲಾವಿದರ ಬಳಗವು ಹಮ್ಮಿಕೊಂಡಿತು. ಅಂದು ಬೆಂಗಳೂರಿನ ಹಾಗೂ ಸುತ್ತಮುತ್ತಲ ಪ್ರದೇಶಗಳ ಹಲವಾರು ಕನ್ನಡ ಸಂಘಟನೆಗಳು ಹಾಗೂ ಕನ್ನಡ ಕಾರ್ಯಕರ್ತರು ಸಹಸ್ರಾರು ಸಂಖ್ಯೆಯಲ್ಲಿ ದೂರದರ್ಶನ ಕೇಂದ್ರದ ಮುಂದೆ ನೆರೆದಿದ್ದರು.

ಕಾರ್ಯಕ್ರಮವನ್ನು ಡಾ. ವಿ. ವೆಂಕಟೇಶ್ ಅವರು ಉದ್ಘಾಟಿಸಿದರು. ಲಂಕೇಶ್, ಚಿದಾನಂದಮೂರ್ತಿ, ಎಲ್.ಎಸ್. ಶೇಷಗಿರಿರಾವ್, ಜಿ.ಕೆ. ಸತ್ಯ, ಚಿತ್ರನಟ ಅಶೋಕ್, ಮುಖ್ಯಮಂತ್ರಿ ಚಂದ್ರು, ಡಾ. ಪಿ.ವಿ. ನಾರಾಯಣ, ನಗರಸಭಾ ಸದಸ್ಯ ಶಿವಣ್ಣ, ಪೈಲ್ವಾನ್ ನಾಗಣ್ಣ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ದೂರದರ್ಶನ ಮುತ್ತಿಗೆ ಸಂದರ್ಭದಲ್ಲಿ ನಗರ ಸಭಾ ಸದಸ್ಯರಾದ ವಿ. ಸೋಮಣ್ಣ, ಶ್ರೀ ರಾಮೇಗೌಡ, ಪ್ರಕಾಶ್ ಮತ್ತು ಹಲವಾರು ಕಾರ್ಮಿಕ ಮುಖಂಡರನ್ನು ಬಂಧಿಸಲಾಯಿತು.

ಮೈಸೂರಿನಲ್ಲಿಯೂ ಸಹ ಅಲ್ಲಿನ ಕನ್ನಡ ಕ್ರಿಯಾಸಮಿತಿಯು ಸ.ರ. ಸುದರ್ಶನ, ಡಾ. ತಿಪ್ಪೇರುದ್ರಸ್ವಾಮಿ, ಕೆ. ರಾಮದಾಸ್ ಮುಂತಾದವರ ನಾಯಕತ್ವದಲ್ಲಿ ಅಲ್ಲಿಯ ಆಕಾಶವಾಣಿ ಕೇಂದ್ರದ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಈ ಎಲ್ಲಾ ಹೋರಾಟಗಳ ಪ್ರತಿಫಲವಾಗಿ ೧೯೯೦ರ ರಾಜ್ಯೋತ್ಸವ ದಿನದಂದು (೧.೧೧.೧೯೯೦ರಂದು) ಬೆಂಗಳೂರು ದೂರದರ್ಶನಕೇಂದ್ರ ತಯಾರಿಸಿ ಬಿತ್ತರಿಸುವ ಕನ್ನಡ ಹಾಗು ಇತರ ಕಾರ್ಯಕ್ರಮಗಳು ಅರಬ್ ಉಪಗ್ರಹದ ಮೂಲಕ ಬಿತ್ತರಗೊಳ್ಳುವ ವ್ಯವಸ್ಥೆಯಾಯಿತು. ರಾಜ್ಯದ ಜನತೆಯ ಬಹು ದಿನಗಳ ಕನಸು ನನಸಾಯಿತು.

❑

ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ - ಹೋರಾಟ- ಸರೋಜಿನಿ ಮಹಿಷಿ ಸಮಿತಿ ರಚನೆ

ಎಂಭತ್ತರ ದಶಕದಲ್ಲಿ ಇಡೀ ಕರ್ನಾಟಕಾದ್ಯಂತ ನಡೆದ ಗೋಕಾಕ್ ವರದಿ ಚಳುವಳಿ, ಮಲಗಿದಂತಿದ್ದ ಕನ್ನಡಿಗರನ್ನು ಬಡಿದೆಬ್ಬಿಸಿ, ಜನ ಸಾಮಾನ್ಯರಲ್ಲೂ ನಾಡು-ನುಡಿಯ ಬಗ್ಗೆ ಜಾಗೃತಗೊಳಿಸಿದ ಮಹತ್ತರ ಐತಿಹಾಸಿಕ ಘಟನೆಯಾಯಿತು.

ಜಾಗೃತ ಕನ್ನಡಿಗ ತನ್ನ ಹಕ್ಕುಗಳಿಗಾಗಿ ಹೋರಾಟದ ಹಾದಿ ಹಿಡಿಯುವುದಕ್ಕೆ ಪ್ರೇರಕವಾದ ಈ ಘಟನೆ ಕನ್ನಡಿಗರಿಗೆ ತಮ್ಮ ನಾಡಿನಲ್ಲಿ ಉದ್ಯೋಗದಲ್ಲಿ ಆದ್ಯತೆಗಾಗಿ ಬೇಡಿಕೆಯನ್ನು ಸಲ್ಲಿಸಿ ಹೋರಾಡುವ ಮನೋಭಾವವನ್ನು ತಂದು ಕೊಟ್ಟಿತು.

ಆ ಹೋರಾಟದ ಫಲವಾಗಿ ಸರ್ಕಾರವು ದಿನಾಂಕ ೨೫.೧.೧೯೮೪ರಲ್ಲಿ ಡಾ. ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು.

ಈ ಸಮಿತಿಯಲ್ಲಿ ಈ ಕೆಳಕಂಡವರು ಸದಸ್ಯರಾಗಿದ್ದರು:

೧. ಪ್ರೊ. ಗೋಪಾಲಕೃಷ್ಣ ಅಡಿಗ
೨. ಡಾ. ಸಿದ್ಧಯ್ಯ ಪುರಾಣಿಕ
೩. ಶ್ರೀ ಬಿ.ಎಸ್. ಹನುಮಾನ್
೪. ಶ್ರೀ ಜಿ.ಕೆ. ಸತ್ಯ
೫. ಶ್ರೀ ಪ್ರಭಾಕರ ರೆಡ್ಡಿ
೬. ಶ್ರೀ ಜಿ. ನಾರಾಯಣ ಕುಮಾರ್

ಈ ಸಮಿತಿಯು ನಾಡಿನಾದ್ಯಂತ ಸುಮಾರು ಮೂರು ವರ್ಷಗಳ ಕಾಲ ಪ್ರವಾಸ ಮಾಡಿ ಕೇಂದ್ರೋದ್ಯಮಗಳು, ರಾಜ್ಯೋದ್ಯಮಗಳು, ಬ್ಯಾಂಕ್‌ಗಳು ಹಾಗೂ ಖಾಸಗಿ ವಲಯದ ಉದ್ಯಮಗಳೇ ಮೊದಲಾದವುಗಳಿಂದ ವಿವರಗಳನ್ನು ಪಡೆದು ದಿನಾಂಕ ೩೦.೧೨.೧೯೮೬ ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಅದರಲ್ಲಿ ಒಟ್ಟು ೫೮ ಶಿಫಾರಸ್ಸುಗಳಿದ್ದವು. ಅವುಗಳಲ್ಲಿ ಮುಖ್ಯವಾದುದೆಂದರೆ:

೧. ಅರ್ಹತೆಯುಳ್ಳ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿರುವಾಗ ಉದ್ಯೋಗಾವಕಾಶದಲ್ಲಿ ಅವರಿಗೆ ಹೆಚ್ಚಿನ ಭಾಗ ದೊರಕಿಸುವಂತೆ ಶಿಫಾರಸು ಮಾಡಿರುವುದು.

೨. ಕೇಂದ್ರ ಸರಕಾರೀ ವಲಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಸಲ್ಲತಕ್ಕ ಉದ್ಯೋಗ ಪ್ರಮಾಣ ಈ ಕೆಳಗಿನಂತಿರಬೇಕು.

ನಾಲ್ಕನೆಯ ವರ್ಗದ (ಗ್ರೂಪ್ 'ಡಿ') ಹುದ್ದೆಗಳಲ್ಲಿ	ಶೇ. ೧೦೦
ವೇತನ ಶ್ರೇಣಿ ರೂ. ೧೨೫೦ರ ತನಕ ಇರುವ ಇತರ ಹುದ್ದೆಗಳಲ್ಲಿ	ಶೇ. ೮೦
ಉಳಿದ ಮೇಲ್ಮಟ್ಟದ ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡುವ ಹುದ್ದೆಗಳಲ್ಲಿ	ಶೇ. ೬೫

೩. ರಾಜ್ಯ ಸರಕಾರಿ ವಲಯದ ಉದ್ಯಮಗಳಲ್ಲಿ, ಉನ್ನತ ಮಟ್ಟದ ತಾಂತ್ರಿಕ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರೆಯದೆ ಇರುವ ಹುದ್ದೆಗಳನ್ನು ಬಿಟ್ಟು ಇನ್ನುಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು.

೪. ಖಾಸಗಿ ಉದ್ಯಮಗಳು ರಾಜ್ಯ ಸರಕಾರದಿಂದ ನೆಲ, ಜಲ, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವುದರಿಂದ ಅವುಗಳ ಮೇಲೆ ಒತ್ತಡ ತರಲು ಸಾಧ್ಯವಿದೆ. ಉದ್ಯಮಗಳಲ್ಲಿ ಉನ್ನತ ಮಟ್ಟದ ಆಡಳಿತ ಹುದ್ದೆಗಳನ್ನು ಅವಶ್ಯ ಬಿದ್ದಲ್ಲಿ ಬಿಟ್ಟು ಉಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸುವಂತೆ ಕಡ್ಡಾಯ ಮಾಡಬೇಕು.

೫. ಉದ್ಯಮಗಳಲ್ಲಿ ಅಪ್ರೆಂಟೀಸುಗಳನ್ನು ನೇಮಕ ಮಾಡುವಾಗ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಆದೇಶಗಳನ್ನು ಹೊರಡಿಸಬೇಕು.

೬. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸುವ ಮೊದಲು ಅಭ್ಯರ್ಥಿಗಳು ೧೫ ವರ್ಷಗಳ ಕಾಲ ರಾಜ್ಯದಲ್ಲಿ ವಾಸವಾಗಿದ್ದರೆಂಬುದನ್ನು ರುಜುವಾತು ಪಡಿಸಲು ನೋಂದಣಿ ಅಧಿಕಾರಿಗಳು ಈ ಕೆಳಗಿನ ದಾಖಲೆಗಳನ್ನು ಪರಿಶೀಲಿಸಬೇಕು.

   ೧. ಶಾಲೆಯ ಸರ್ಟಿಫಿಕೇಟ್ (ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್, ಪ್ರಾಥಮಿಕ ಸರ್ಟಿಫಿಕೇಟ್)

   ೨. ಪಡಿತರ ಚೀಟಿ (ರೇಷನ್ ಕಾರ್ಡ್)

   ೩. ಮತದಾರರ ಪಟ್ಟಿ (ಅದರಲ್ಲಿ ಅಭ್ಯರ್ಥಿಯ ಅಥವಾ ಅವರ ಹೆತ್ತವರ ಸಂರಕ್ಷಕರ ಹೆಸರು ಸೇರಿರಬೇಕು)

೪. ಜನ್ಮದಾಖಲೆ (ಬರ್ಥ್ ಸರ್ಟಿಫಿಕೇಟ್)

ಅಭ್ಯರ್ಥಿಗಳ ಕನ್ನಡ ಭಾಷಾಜ್ಞಾನವನ್ನು ಹೆಸರು ನೋಂದಾಯಿಸುವ ಮೊದಲು ನೋಂದಣಿ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಪರೀಕ್ಷಿಸಬೇಕು.

೭. ನೂರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಇರುವ ಖಾಸಗಿ ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿ ರಾಜ್ಯಸರಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಿಗಳನ್ನು ಒತ್ತಾಯಿಸಬೇಕು.

೮. ಉದ್ಯಮಗಳಲ್ಲಿ ನೌಕರರ ಮಕ್ಕಳಿಗೆ ಆದ್ಯತೆ ಮೇಲೆ ನೇಮಕ ಮಾಡುವುದರಿಂದ ಕನ್ನಡೇತರರು ಬಹು ಸಂಖ್ಯೆಯಲ್ಲಿರುವ ಉದ್ಯಮಗಳಲ್ಲಿ ಕನ್ನಡಿಗರ ಸಂಖ್ಯೆಯನ್ನು ಹೆಚ್ಚಿಸುವ ಸಾಧ್ಯತೆ ಇರುವುದಿಲ್ಲ ಮತ್ತು ಅರ್ಹತೆಯಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶದಲ್ಲಿ ಸರಿಸಮಾನವಾದ ಅವಕಾಶ ಕೊಟ್ಟಂತಾಗುವುದಿಲ್ಲ. ಆದುದರಿಂದ ಈ ಪದ್ಧತಿಯನ್ನು ರದ್ದುಮಾಡಬೇಕು.

೯. ಸರಕಾರದಲ್ಲಿರುವ ಮುಖ್ಯವಾದ ಸ್ಥಾನಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಕನ್ನಡಿಗರ ಬಗ್ಗೆ ಕಳಕಳಿಯಿರುವ ಅಥವಾ ಅವರ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸುವ ಮನೋಭಾವ ಇರುವ ಅಧಿಕಾರಿಗಳನ್ನು ಆಯ್ಕೆ ಮಾಡಿ ನೇಮಕ ಮಾಡಬೇಕು.

೧೦. ಅಭ್ಯರ್ಥಿಗಳ ಆಯ್ಕೆಗಾಗಿ ಲೋಕಸೇವಾ ಆಯೋಗ ಅಥವಾ ಇತರ ನೇಮಕಾತಿ ಸಮಿತಿಗಳು ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು ಕನ್ನಡ ಪ್ರಶ್ನೆ ಪತ್ರಿಕೆಯನ್ನು ಕಡ್ಡಾಯವಾಗಿ ಸೇರಿಸಬೇಕು. ಈ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಉತ್ತೀರ್ಣರಾಗದೆ ಇರುವವರು ಆಯ್ಕೆಗೆ ಅನರ್ಹರಾಗುವಂತೆ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕು.

ಮಹಿಷಿ ವರದಿಯನ್ನು ಜಾರಿಗೊಳಿಸುವಂತೆ ಕನ್ನಡ ಪರ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿದವು.

ವರದಿಯು ಮಾಡಿದ್ದ ೫೮ ಶಿಫಾರಸುಗಳಲ್ಲಿ ೫೪ ಶಿಫಾರಸುಗಳನ್ನು ಸರ್ಕಾರವೇ ಮಾಡಬಹುದಾಗಿದ್ದರೂ ಸರ್ಕಾರವು ಅವುಗಳನ್ನು ಜಾರಿಗೊಳಿಸದೆ, ಸಮಿತಿಗಳ ಮೇಲೆ ಸಮಿತಿಗಳನ್ನು ರಚಿಸಿ ವಿಳಂಬ ನೀತಿಯನ್ನು ಅನುಸರಿಸಿತು.

ಸಮಸ್ತ ಕನ್ನಡಿಗರ ಬದುಕಿಗೆ ಪೂರಕವಾಗುವ ಮಹಿಷಿ ಸಮಿತಿಯ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಲು ಡಾ. ಸರೋಜಿನಿ ಮಹಿಷಿ ಅವರ

ಅಧ್ಯಕ್ಷತೆಯಲ್ಲಿ ದಿನಾಂಕ ೨೭.೦೯.೮೯ರಂದು ಕನ್ನಡ ಶಕ್ತಿ ಕೇಂದ್ರವು ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಸಹಕಾರದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತು.

ಪ್ರೊ. ಗೋಪಾಲಕೃಷ್ಣ ಅಡಿಗ, ಡಾ. ಸಿದ್ಧಲಿಂಗಯ್ಯ, ಡಾ. ಪಿ.ವಿ. ನಾರಾಯಣ, ಪಿ. ಲಂಕೇಶ್, ಕೆ. ಪ್ರಭಾಕರ ರೆಡ್ಡಿ, ಜಿ.ಕೆ. ಸತ್ಯ ಮುಂತಾದವರು ಈ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

೨೩.೧೦.೮೯ ರಂದು ಬೆಳಿಗ್ಗೆ ವಿಧಾನ ಸೌಧದ ಮುಂದೆ ಧರಣಿ ಸತ್ಯಾಗ್ರಹ ನಡೆದು, ಸಂಜೆ ಡಾ. ಎಂ. ಚಿದಾನಂದಮೂರ್ತಿಗಳ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು.

ಮಾಸ್ಟರ್ ಹಿರಣ್ಣಯ್ಯ, ಎಚ್.ಎಸ್. ದೊರೆಸ್ವಾಮಿ, ಡಾ. ಎಚ್.ಎಂ. ಮರುಳಸಿದ್ಧಯ್ಯ, ದೊಡ್ಡರಂಗೇಗೌಡ, ಶ್ರೀ ರಾಮೇಗೌಡ, ಎಸ್.ಜಿ. ಮೈಸೂರು ಮಠ, ರೆಹಮಾನ್ ಖಾನ್, ಶ್ರೀಮತಿ ಪ್ರಮಿಳ ನೇಸರ್ಗಿ ಅವರಿಂದ ಭಾಷಣಗಳನ್ನು ಏರ್ಪಡಿಸಲಾಗಿತ್ತು.

ಏತನ್ಮಧ್ಯೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಜನತಾದಳದ ಸರ್ಕಾರ ಬದಲಾಗಿ ಕಾಂಗ್ರೆಸ್ ಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿಯಿತು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾದರು. ೧೭.೯.೯೦ ರಂದು ಅವರು ಮಹಿಷಿ ವರದಿ ಜಾರಿಮಾಡುವುದಾಗಿ ಹೇಳಿದರು. ಕೆ.ಎಚ್. ಶ್ರೀನಿವಾಸರ ಅಧ್ಯಕ್ಷತೆಯಲ್ಲಿ 'ಕನ್ನಡ ಅಭಿವೃದ್ಧಿ ಮಂಡಲಿ'ಯನ್ನು ರಚಿಸಿ ಆ ಸಮಿತಿಯು ಕನ್ನಡದ ಸಮಸ್ಯೆಗಳನ್ನು ಅಧ್ಯಯನ ಮಾಡಿ ತಕ್ಕ ಪರಿಹಾರವನ್ನು ಕೈಗೊಳ್ಳುವ ಅಧಿಕಾರವನ್ನು ಆ ಸಮಿತಿಗೆ ನೀಡಿದರು.

ಈ ಮಧ್ಯೆ ಅನಾರೋಗ್ಯ ಪೀಡಿತರಾದ ವೀರೇಂದ್ರ ಪಾಟೀಲರ ಬದಲಿಗೆ ಬಂಗಾರಪ್ಪನವರು ಮುಖ್ಯಮಂತ್ರಿ ಆದರು. ಶ್ರೀನಿವಾಸ್ ರಾಜೀನಾಮೆ ಕೊಟ್ಟರು.

ಏನಾದರೇನು? ಮಹಿಷಿ ವರದಿ ಇನ್ನೂ ಜಾರಿಗೆ ಬರಲಿಲ್ಲ.

❑

ತಿರುವಳ್ಳುವರ್ ಪ್ರತಿಮೆ ವಿರುದ್ಧ ಹೋರಾಟ

ಒಂದಿಲ್ಲೊಂದು ಕಾರಣಕ್ಕೆ ಹೋರಾಡುವುದೇ ಕನ್ನಡಿಗರ ಹಣೆಯ ಬರಹವಾಗಿದೆ. ಇದಕ್ಕೆ ಬಹು ಮುಖ್ಯ ಕಾರಣ ವಲಸೆ ಬಂದು ಇಲ್ಲಿ ನೆಲೆಸಿದ ಅನ್ಯ ಭಾಷಿಗರಿಗೆ ತಮ್ಮ ಭಾಷೆ, ಸಂಸ್ಕೃತಿ ಬಗ್ಗೆ ಇರುವ ಅಪಾರ ಅಭಿಮಾನ, ಆಸಕ್ತಿ. ಅದನ್ನು ಕಾಪಾಡಿ ಕೊಳ್ಳಲು ತಾವು ನೆಲೆಸಿದ ಜಾಗಗಳಲ್ಲಿ ತಮ್ಮ ಭಾಷೆಯ ಧಾರಾಳ ಬಳಕೆ, ತಮ್ಮ ಸಂಸ್ಕೃತಿಯ ಪ್ರಸರಿಕೆ, ಚಾರಿತ್ರಿಕ ವ್ಯಕ್ತಿಗಳ ಪ್ರತಿಮೆಗಳ ಸ್ಥಾಪನೆ, ರಸ್ತೆಗಳ ಹೆಸರಿಗೆ ಅವರ ನಾಮಕರಣ ಇತ್ಯಾದಿ ಇತ್ಯಾದಿ. ಇದಕ್ಕೆ ನಮ್ಮವರೇ ಆದ ರಾಜಕಾರಣಿಗಳಿಂದ ಮತಗಳಿಕೆಯ ದುರಾಸೆಯಿಂದ ತಮ್ಮತನವನ್ನು ಬಲಿಕೊಟ್ಟು ಪರಭಾಷಿಗರ ಓಲೈಕೆ, ಅವರಿಗೆ ಅಗ್ರ ಮನ್ನಣೆ. ಸ್ಥಳೀಯ ಕನ್ನಡಿಗರ ಬಗ್ಗೆ ಉಪೇಕ್ಷೆ, ಅನಾದರಣೆ.

ಹೀಗಾಗಿ ಕರ್ನಾಟಕದಲ್ಲಿ ಬಂದು ನೆಲೆಸಿ ಕನ್ನಡಿಗರ ವಿರುದ್ಧವಾಗಿ ವರ್ತಿಸುವ ಬೇರೆ ಪ್ರಾಂತದವರು ಒಂದೆಡೆಯಾದರೆ, ಹೊರಗಿನವರೊಂದಿಗೆ ಕೂಡಿಕೊಂಡು ಕರ್ನಾಟಕವನ್ನು, ಕನ್ನಡವನ್ನು ತಮ್ಮ ಸ್ವಾರ್ಥಕ್ಕಾಗಿ ಬಲಿಕೊಡುವ ಕನ್ನಡಿಗರು ಇನ್ನೊಂದೆಡೆ. ಇಂತಹವರ ಬೆಂಬಲ ಹಾಗೂ ಪ್ರೋತ್ಸಾಹದಿಂದಲೇ ಕರ್ನಾಟಕದಲ್ಲಿ ಅದರಲ್ಲಿಯೂ ಪ್ರಮುಖವಾಗಿ ಬೆಂಗಳೂರಿನಲ್ಲಿ ಪರಭಾಷಾ ಸಂಸ್ಕೃತಿಯು ವೃದ್ಧಿಯಾಗುತ್ತಿದೆಯೆಂದು ಹೇಳಬಹುದು.

ಬೆಂಗಳೂರಿನಲ್ಲಿ ಇತಿಹಾಸ ಪ್ರಸಿದ್ಧವಾಗಿದ್ದ ಕ್ಯಾವಲ್ರಿ ರಸ್ತೆ, ಕಾಮರಾಜ ರಸ್ತೆಯಾಯಿತು. ಬಡಾವಣೆಯೊಂದು ರಾಜಾಜಿನಗರವಾಯಿತು. ಪ್ರಶ್ನಿಸಿದರೆ ಅವರು ರಾಷ್ಟ್ರನಾಯಕರೆಂಬ ಕಾರಣ. ಆದರೆ ಪರಪ್ರಾಂತ್ಯದಲ್ಲಿ, ಬೇರೆ ನಗರಗಳಲ್ಲಿ ಕನ್ನಡಿಗರ ಹೆಸರನ್ನು ಇಡುವ ಧಾರಾಳತನ ಮಾತ್ರ ಇಲ್ಲ.

ಪರಿಸ್ಥಿತಿ ಹೀಗಿರುವಾಗ ೧.೯.೯೧ ರಂದು ಅಲಸೂರಿನ ಕೆರೆಯ ಬಳಿ ತಿರುವಳ್ಳವರ್ ಪ್ರತಿಮೆ ಸ್ಥಾಪನೆಗೆ ವ್ಯವಸ್ಥೆಮಾಡಿ ಅದರ ಉದ್ಘಾಟನೆಗೆ ಅಂದಿನ ಮುಖ್ಯ ಮಂತ್ರಿ ಬಂಗಾರಪ್ಪ, ರೈಲ್ವೆ ಸಚಿವ ಸಿ.ಕೆ. ಜಾಫರ್ ಷರೀಫ್, ನಗರಾಭಿವೃದ್ಧಿ ಸಚಿವ ಜಾರ್ಜ್, ನಗರದ ಪ್ರಥಮ ಪ್ರಜೆ ನಾರಾಯಣಸ್ವಾಮಿ ಇವರುಗಳು ಭಾಗವಹಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ಇದನ್ನು ಪ್ರತಿಭಟಿಸಿ ಆಗಸ್ಟ್, ೨೭ರಂದು ನಗರದಲ್ಲಿ "ತಿರುವಳ್ಳುವರ್ ಪ್ರತಿಮೆ ಬೇಡ" ಎಂದು ಕನ್ನಡ ಗೆಳೆಯರ ಬಳಗದಿಂದ ರಾ.ನಂ. ಚಂದ್ರಶೇಖರ್ ಅವರು ಪತ್ರಿಕಾ ಹೇಳಿಕೆ ಕೊಟ್ಟರು. ಅದರ ಪರಿಣಾಮ ಕನ್ನಡ ಸಂಘಟನೆಗಳು ಜಾಗೃತವಾದುವು.

ದಿನಾಂಕ ೩೦.೮.೧೯೯೧ರಂದು ನಗರಸಭೆಯ ಮಾಸಿಕ ಸಭೆಯು ಮೇಯೋ ಹಾಲ್‌ನಲ್ಲಿ ನಡೆಯುತ್ತಿದ್ದಾಗ ಪ್ರತಿಮೆಯ ಅನಾವರಣವನ್ನು ವಿರೋಧಿಸಿ ಕನ್ನಡ ಶಕ್ತಿ ಕೇಂದ್ರವು ಪ್ರತಿಭಟನಾ ಪ್ರದರ್ಶನವನ್ನು ನಡೆಸಿತು.

ಪ್ರತಿಮೆಯ ಸ್ಥಾಪನೆಯ ವಿರುದ್ಧ ಚಾಮರಾಜ ಪೇಟೆಯ ಪುಲಿಕೇಶಿ ಕನ್ನಡ ಸಂಘವು ಉಚ್ಚನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ಕೋರಿತು. ತಡೆಯಾಜ್ಞೆಯೂ ಸಿಕ್ಕಿತು. ಈ ಸಂದರ್ಭದಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಪ್ರಸಿದ್ಧ ನ್ಯಾಯವಾದಿ ಪ್ರಮೀಳ ನೇಸರ್ಗಿ ಮತ್ತು ಸಂಘದ ಪದಾಧಿಕಾರಿಗಳ ಸಮಯೋಚಿತ ಮುನ್ನೆಚ್ಚರಿಕೆಯಿಂದ ಪ್ರತಿಮೆಯ ಅನಾವರಣವು ತಪ್ಪಿತು.

ಶಾಸಕರೂ ಕನ್ನಡ ಚಳುವಳಿಯ ನಾಯಕರೂ ಆದ ವಾಟಾಳ್ ನಾಗರಾಜ್, ಮಾಜಿ ಶಾಸಕ ಜಿ. ನಾರಾಯಣ ಕುಮಾರ್, ಕನ್ನಡ ರಣಧೀರರ ಪಡೆ ಮುಂತಾದವರು ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಿರುವಂತೆ ಮುಖ್ಯ ಮಂತ್ರಿಯವರನ್ನು ಕೋರಿದರು.

ದಿನಾಂಕ ೪.೯.೯೧ ರಂದು ಮಹಾನಗರ ಪಾಲಿಕೆ ಕಟ್ಟಡದ ಎದುರು ಬೃಹತ್ ಪ್ರತಿಭಟನಾ ಸಭೆಯು ನಡೆಯಿತು. ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ, ಪುಲಿಕೇಶಿ ಕನ್ನಡ ಸಂಘ, ರಾಜಕುಮಾರ್ ಅಭಿಮಾನಿಗಳ ಸಂಘ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕನ್ನಡ ಕ್ರಿಯಾ ಸಮಿತಿ, ಕನ್ನಡ ಸಂಘರ್ಷ ಸಮಿತಿ, ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಮುಂತಾದ ಸಂಘಗಳು ಕನ್ನಡ ಶಕ್ತಿ ಕೇಂದ್ರದ ನೇತೃತ್ವದಲ್ಲಿ ನಡೆದ ಈ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದವು.

ದಿನಾಂಕ ೫.೯.೯೧ ಗುರುವಾರ ಬೆಳಗಿನಿಂದ ಮಹಾನಗರ ಪಾಲಿಕೆಯ ಕಛೇರಿ ಮುಂದೆ ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಕೆ.ಪಿ. ಶಿವಶಂಕರ್, ಸಿದ್ದಯ್ಯ, ರಾ. ಚಂದ್ರೇಗೌಡ, ಜಿ.ವಿ.ಎಲ್ ಮೂರ್ತಿ, ರಾಜಾಶೆಟ್ಟಿ, ಟಿ. ರಾಮಕೃಷ್ಣ, ಕೆ.ವಿ. ವಲಸಣ್ಣ , ಬಿ.ಕೆ. ನಾರಾಯಣ, ಶ್ರೀಮತಿ ಶಕುಂತಲ, ಶ್ರೀಮತಿ ಅನಸೂಯ, ವಿ.ಜಿ. ಅಶ್ವತ್ಥಯ್ಯ, ಆರ್.ಎಸ್. ಕೃಷ್ಣರೆಡ್ಡಿ

ಮತ್ತು ಕನ್ನಡ ಸಂಘರ್ಷ ಸಮಿತಿಯ ಕಾರ್ಯದರ್ಶಿ ಕೆ.ವಿ. ರಾಮಕೃಷ್ಣೇಗೌಡರು ಧರಣಿಯಲ್ಲಿ ಭಾಗವಹಿಸಿದರು.

ತಡೆಯಾಜ್ಞೆ ಅವಧಿ ಮುಗಿಯುವುದರೊಳಗೆ ಪ್ರತಿಮೆ ಸ್ಥಾಪಿಸುವ ವಿಷಯವನ್ನು ಮಹಾನಗರ ಪಾಲಿಕೆಯು ಕೈಬಿಡದಿದ್ದಲ್ಲಿ ಮುಂದೆ ತೀವ್ರ ರೂಪದ ಕಾರ್ಯಕ್ರಮಗಳನ್ನು ಹಮ್ಮಿಕ್ರೊಳ್ಳಲಾಗುವುದೆಂದು ಕನ್ನಡ ಶಕ್ತಿ ಕೇಂದ್ರದ ಕಾರ್ಯಾಧ್ಯಕ್ಷ ಡಾ. ಎಂ. ಚಿದಾನಂದಮೂರ್ತಿಯವರು ತಿಳಿಸಿದರು.

೧೫.೯.೯೧ರಂದು ಪ್ರತಿಮೆ ಸ್ಥಾಪನೆ ವಿರೋಧಿಸಿ ಕನ್ನಡ ಚಳುವಳಿ ಕೇಂದ್ರ ಕೂಟದವರ ನೇತೃತ್ವದಲ್ಲಿ ತಮಟೆ ಚಳುವಳಿ, ಕಪ್ಪು ಬಾವುಟ ಪ್ರದರ್ಶನ ನಡೆಯಿತು. ಚಿದಾನಂದ ಮೂರ್ತಿ, ನಾರಾಯಣ ಕುಮಾರ್, ಸೋಸಲೆ ಜವರಯ್ಯ, ಮಹದೇವ ಪ್ರಕಾಶ್, ಲಕ್ಷ್ಮೀನಾರಾಯಣ, ನಗರಪಾಲಿಕೆ ಸದಸ್ಯರಾದ ವಿ. ಸೋಮಣ್ಣ, ರಾಮೇಗೌಡ, ಮಲ್ಲಿಕಾರ್ಜುನ್, ಪಿ.ಎಸ್. ಪ್ರಕಾಶ್ ಮುಂತಾದವರು ಪಾಲ್ಗೊಂಡಿದ್ದರು.

ಇಂದಿಗೂ ತಡೆಯಾಜ್ಞೆ ತೆರವಾಗಿಲ್ಲ ಪ್ರತಿಮೆಯ ಅನಾವರಣವೂ ಆಗಿಲ್ಲ.

ನಾಡಿನ ಶ್ರೇಷ್ಠರ ಪ್ರತಿಮೆಗಳ ಸ್ಥಾಪನೆ

ಈ ಘಟನೆಯ ನಂತರ ಬೆಂಗಳೂರಿನ ಕೆಂಪು ತೋಟದ (ಲಾಲ್‌ಬಾಗ್) ಮುಂಭಾಗದಲ್ಲಿ **ರಾಷ್ಟ್ರ ಕವಿ ಕುವೆಂಪು** ಅವರ ಪ್ರತಿಮೆ ಹಾಗೂ ನ್ಯಾಷನಲ್ ಹೈಸ್ಕೂಲ್ ಮುಂಭಾಗದಲ್ಲಿ **ಬಿ.ಎಂ.ಶ್ರೀ.** ಪ್ರತಿಮೆ, ಸೌತ್ ಎಂಡ್ ವೃತ್ತದಲ್ಲಿ **ತೀ.ನಂ.ಶ್ರೀ.** ಅವರ ಪ್ರತಿಮೆ, ಮೇಯೋ ಹಾಲ್ ಮುಂಭಾಗದ ವೃತ್ತದಲ್ಲಿ **ರೆ. ಕಿಟ್ಟೆಲ್** ಅವರ ಪ್ರತಿಮೆ ಸ್ಥಾಪಿತವಾಗಿವೆ.

ನಗರಭವನದ ಹಾಗೂ ರವೀಂದ್ರ ಕಲಾಕ್ಷೇತ್ರದ ನಡುವಿನ ಪ್ರಮುಖ ಸ್ಥಳದಲ್ಲಿ ಅಶ್ವಾರೋಹಿ **ಕಿತ್ತೂರು ರಾಣಿ ಚನ್ನಮ್ಮನ** ಪ್ರತಿಮೆಯು ಭವ್ಯವಾಗಿ ನಿಂತಿದೆ.

ಅಲ್ಲದೆ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ನಗರದ ಮುಖ್ಯ ಭಾಗದಲ್ಲಿ ಸ್ಥಾಪಿಸುವ ಸಿದ್ಧತೆಗಳು ನಡೆಯುತ್ತಿವೆಯೆಂಬ ಸುದ್ದಿಯೂ ಚಾಲನೆಯಲ್ಲಿದೆ.

ಬೆಂಗಳೂರಿನಲ್ಲಿ ಕನ್ನಡ - ಕನ್ನಡಿಗರ ಸಂಸ್ಕೃತಿ ಉಳಿಯಬೇಕಾದರೆ ಕನ್ನಡ ನಾಡು ನುಡಿಗಳಿಗೆ ಹೋರಾಡಿದ ಇತಿಹಾಸ ಪುರುಷರ, ನಾಯಕರ ಪ್ರತಿಮೆಗಳನ್ನು ಪ್ರಮುಖ ಸ್ಥಳಗಳಲ್ಲಿ ಸ್ಥಾಪಿಸುವುದು ಹಾಗೂ ರಸ್ತೆಗಳಿಗೆ, ವಿಸ್ತರಣ (Extension) ಗಳಿಗೆ ಅಂತಹ ಪ್ರಾತಃಸ್ಮರಣೀಯರ ಹೆಸರುಗಳನ್ನು ಇಡುವುದು ಉಚಿತವೂ ಹಾಗೂ ಅಗತ್ಯವಾದುದೂ ಆಗಿದೆ.

ಆದರೆ ೧೦.೧.೯೪ರಂದು ಸದಾಶಿವ ನಗರದ ಭಾಷ್ಯಂ ವೃತ್ತದಲ್ಲಿ ಶಿವಾಜಿಯ ಪ್ರತಿಮೆಯ ಅನಾವರಣ ನಡೆದಾಗ ಕನ್ನಡ ಪರ ಸಂಘಟನೆಗಳು ವಿರೋಧಿಸಿದುವು.

ಮುಖ್ಯ ಮಂತ್ರಿ ವೀರಪ್ಪ ಮೊಯ್ಲಿ, ರಾಮಕೃಷ್ಣ ಹೆಗಡೆ, ಶರದ್ ಪವಾರ ಮುಂತಾದವರು ಪಾಲ್ಗೊಂಡ ಈ ಕಾರ್ಯಕ್ರಮವು, ಕನ್ನಡಿಗರ ಮೇಲೆ ಆಕ್ರಮಣಕಾರಿ ಧೋರಣೆ ತಳೆದಿರುವ ಮರಾಠಿಗರ ನಿಲುವನ್ನು ಪ್ರತಿಬಿಂಬಿಸುವುದರಿಂದ, ನೂರಾರು ಕಾರ್ಯಕರ್ತರು ಉಗ್ರ ಪ್ರತಿಭಟನೆ ಮಾಡಿದರು.

ಜಾಣಗೆರೆ ವೆಂಕಟರಾಮಯ್ಯ, ಚಿದಾನಂದಮೂರ್ತಿ ಮುಂತಾದವರು ಸೇರಿದಂತೆ ನೂರಾರು ಜನ ಕಾರ್ಯಕರ್ತರು ಬಂಧನಕ್ಕೊಳಗಾದರು.

ಆದರೂ ರಾಜಕೀಯ ಶಕ್ತಿಯ ಮೇಲುಗೈನಿಂದಾಗಿ ಪ್ರತಿಮೆಯ ಅನಾವರಣವಾಗಿಯೇ ಹೋಯಿತು.

❑

ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯ

ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿ ಮೈಸೂರು (ಇಂದಿನ ಕರ್ನಾಟಕ) ಹಾಗೂ ಮದರಾಸು (ಇಂದಿನ ತಮಿಳುನಾಡು) ಪ್ರಾಂತ್ಯಗಳಲ್ಲಿ ಅಸಹನೆ, ಅಶಾಂತಿ ಉಂಟಾಗಿ ಪರಸ್ಪರ ಮನಸ್ತಾಪ, ದ್ವೇಷಗಳು ತಲೆ ದೋರಿವೆ. ಶತಮಾನಕ್ಕೆ ಮೀರಿದ ಹಳೆಯದಾದ ಕಾವೇರಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಪಟ್ಟ ಕೆಲವು ಮುಖ್ಯ ಘಟನಾವಳಿಗಳು ಹೀಗಿವೆ.

ಕಾವೇರಿ ವಿವಾದ: ನೂರು ವರ್ಷಗಳ ಇತಿಹಾಸ

೧೮೯೨: ಮದರಾಸು ರಾಜ್ಯ ಹಾಗೂ ಆಳರಸರ ಆಳ್ವಿಕೆಯಲ್ಲಿದ್ದ ಮೈಸೂರು ರಾಜ್ಯದ ನಡುವೆ ಕಾವೇರಿ ನೀರು ಹಂಚಿಕೆ ಕುರಿತಂತೆ ಮೊದಲ ಬಾರಿಗೆ ಒಪ್ಪಂದವೊಂದು ಏರ್ಪಟ್ಟಿತು. ಆದರನ್ವಯ, ಮದರಾಸಿನ ಪೂರ್ವಾನುಮತಿ ಇಲ್ಲದೆ ಮೈಸೂರು ವಲಯದಲ್ಲಿ ಯಾವುದೇ ನೀರಾವರಿ ಯೋಜನೆ ಕೈಗೊಳ್ಳಬಾರದು. ಈ ಒಪ್ಪಂದದ ಬೆನ್ನಲ್ಲೇ ಮೈಸೂರು ಆಡಳಿತ ಕೃಷ್ಣರಾಜ ಸಾಗರ ಜಲಾಶಯ ನಿರ್ಮಾಣಕ್ಕೆ ತೀರ್ಮಾನಿಸಿತು. ಮದರಾಸು ರಾಜ್ಯ ಇದನ್ನು ವಿರೋಧಿಸಿತು.

೧೯೧೪: ವಿವಾದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಿಕೆ ವಹಿಸಿದ ಸರ್.ಎಚ್.ಡಿ. ಗ್ರಿಫ್ಫಿನ್, ಮೈಸೂರು ರಾಜ್ಯದ ಪರವಾಗಿ ತೀರ್ಪು ನೀಡಿದರು. ಅದನ್ನು ಭಾರತ ಸರಕಾರ ಅನುಮೋದಿಸಿತು. ಈ ತೀರ್ಪಿನ ವಿರುದ್ಧ, ಮದರಾಸು ಭಾರತದ ಕಾರ್ಯದರ್ಶಿಗೆ ಮೇಲ್ಮನವಿ ಸಲ್ಲಿಸಿತು.

೧೯೨೪: ವಿವಾದ ಪರಿಹಾರ ಕಾಣದಾಗ ಮದರಾಸಿನೊಂದಿಗೆ ಮಾತುಕತೆ ನಡೆಸುವಂತೆ ಮೈಸೂರು ಅರಸರಿಗೆ ಬ್ರಿಟಿಶ್ ಸರಕಾರ ಸೂಚಿಸಿತು. ಎರಡೂ ಆಡಳಿತದ ಮಧ್ಯೆ ಎರಡನೇ ಒಪ್ಪಂದವೊಂದು ಏರ್ಪಟ್ಟಿತು. ೫೦ ವರ್ಷಗಳವರೆಗೆ ಚಾಲ್ತಿಯಲ್ಲಿರುವಂತೆ ಮಾಡಿಕೊಳ್ಳಲಾದ ಈ ಒಪ್ಪಂದದನ್ವಯ ತಮಿಳುನಾಡಿಗೆ ನೀರಿನಲ್ಲಿ ಹೆಚ್ಚಿನ ಪಾಲು ಲಭಿಸಿತು.

೧೯೨೯: ದಕ್ಷಿಣ ಕರ್ನಾಟಕದ ಭವಿಷ್ಯ ನಿರ್ಮಾಣಕ್ಕೆ ಹೊಸ ತಿರುವು ನೀಡಿದ ವರ್ಷವದು. ಸರ್.ಎಂ. ವಿಶ್ವೇಶ್ವರಯ್ಯ ಅವರ ಉಸ್ತುವಾರಿಯಲ್ಲಿ ಐತಿಹಾಸಿಕ ಕನ್ನಂಬಾಡಿ ಅಣೆ ನಿರ್ಮಿಸಲ್ಪಟ್ಟಿತು.

೧೯೩೪: ಕಾವೇರಿ ನದಿಗೆ ಅತಿದೊಡ್ಡದಾದ ಮೆಟ್ಟೂರು ಅಣೆ ನಿರ್ಮಾಣ ಪೂರ್ಣವಾಯಿತು. ಇದರೊಂದಿಗೆ ಮೈಸೂರು ಹಾಗೂ ಮದರಾಸು ಆಡಳಿತ ಕೆಲವು ಚಿಕ್ಕ ಚಿಕ್ಕ ಅಣೆಗಳನ್ನು ತಮ್ಮ ನೆಲದಲ್ಲಿ ನಿರ್ಮಿಸಿದವು.

೧೯೭೦: ೧೯೨೪ ರಲ್ಲಿ ಉಭಯ ರಾಜ್ಯಗಳು ಮಾಡಿಕೊಂಡ ಒಪ್ಪಂದ ೧೯೭೪ರಲ್ಲಿ (೫೦ ವರ್ಷ ಪೂರ್ತಿಗೊಳ್ಳುತ್ತಿತ್ತು) ತನ್ನಿಂತಾನೆ ರದ್ದಾಗುವುದು ಎಂದು ಕರ್ನಾಟಕ ಸರಕಾರ ಸಾರಿತು. ಈ ಬಗ್ಗೆ ನ್ಯಾಯ ಪಂಚಾಯತಿಯೊಂದನ್ನು ರಚಿಸುವಂತೆ ತಮಿಳುನಾಡು ಮೇಲಿಂದ ಮೇಲೆ ಕೇಂದ್ರಕ್ಕೆ ಮನವಿ ಸಲ್ಲಿಸಿತು. ಆದರೆ ಪರಸ್ಪರ ಚರ್ಚೆಯ ಮೂಲಕ ಉಭಯ ರಾಜ್ಯಗಳೂ ನೀರಿನ ಪಾಲನ್ನು ತೀರ್ಮಾನಿಸಬೇಕು ಎಂದು ಉದ್ದಕ್ಕೂ ಕರ್ನಾಟಕ ಪ್ರತಿಪಾದಿಸಿತು.

೧೯೭೨: ಚರ್ಚೆಯ ಮೂಲಕ ವಿವಾದವನ್ನು ಬಗೆಹರಿಸಿಕೊಳ್ಳಲು ಎರಡೂ ರಾಜ್ಯಗಳು ಒಪ್ಪಿಕೊಂಡವು. ಕಾವೇರಿ ನದಿಯಲ್ಲಿ ಹರಿಯುವ (ವರ್ಷಕ್ಕೆ) ನೀರಿನ ಪ್ರಮಾಣವನ್ನು ಗೊತ್ತುಮಾಡಲು ಸಮಿತಿಯೊಂದು ನೇಮಿಸಲ್ಪಟ್ಟಿತು. ಅನಂತರ ೧೮ ವರ್ಷಗಳ ಕಾಲ ಕರ್ನಾಟಕ ಹಾಗೂ ತಮಿಳುನಾಡಿನ ಮುಖ್ಯಮಂತ್ರಿಗಳು ೨೦ ಬಾರಿ ಮಾತುಕತೆ ನಡೆಸಿದರು.

೧೯೭೬: ಕಾವೇರಿ ನದಿ ಹರಿದಿರುವ ಕೇರಳ, ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳಿಗೆ ವಿವಿಧ ಪ್ರಮಾಣದಲ್ಲಿ ನೀರು ಹಂಚಿಕೆ ಮಾಡಿ ಒಪ್ಪಂದವೊಂದು ಏರ್ಪಟ್ಟಿತು. ಇದರನ್ವಯ ಕೇರಳಕ್ಕೆ ೩೪ ಕರ್ನಾಟಕಕ್ಕೆ ೮೭ ಹಾಗೂ ತಮಿಳುನಾಡಿಗೆ ೪ ಟಿ.ಎಂ.ಸಿ. ಅಡಿ ನೀರು ದೊರೆಯಬೇಕು. ಹಾಗೂ ಕಾವೇರಿ ಕಣಿವೆ ಪ್ರಧಿಕಾರ ರಚನೆ.

೧೯೭೭: ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದ್ದಾಗ ಈ ಒಪ್ಪಂದ ಏರ್ಪಟ್ಟಿದೆ ಎಂದು ಆಗಷ್ಟೇ ಅಧಿಕಾರಕ್ಕೆ ಬಂದ ಎಂ.ಜಿ. ರಾಮಚಂದ್ರನ್ ನೇತೃತ್ವದ ಎ.ಐ.ಎ.ಡಿ.ಎಂ.ಕೆ ಸರಕಾರ ಒಪ್ಪಂದವನ್ನು ಮಾನ್ಯ ಮಾಡಲು ಒಪ್ಪಲಿಲ್ಲ.

೨೬-೪-೯೦: ವಾಸ್ತವಾಂಶದ ಮೇರೆಗೆ ವಿವಾದ ಬಗೆಹರಿಸಲ್ಪಡಬೇಕು. ಮುಂದೆ ತಾನು ಈ ಬಗ್ಗೆ ಮಾತುಕತೆ ನಡೆಸಬಯಸುವುದಿಲ್ಲ ಎಂದು, ಸರ್ವೋಚ್ಚ ನ್ಯಾಯಾಲಯ ಕೇಳಿದ ಸ್ಪಷ್ಟನೆಗೆ ರಾಷ್ಟ್ರೀಯ ರಂಗ ಸರಕಾರ ಸ್ಪಷ್ಟೀಕರಣ ನೀಡಿತು.

೪-೫-೧೯೯೦: ಒಂದು ತಿಂಗಳೊಳಗಾಗಿ ಕಾವೇರಿ ನ್ಯಾಯ ಪಂಚಾಯತಿ ರಚನೆ ಮಾಡುವಂತೆ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರಕಾರಕ್ಕೆ ಸೂಚಿಸಿತು.

೨-೬-೧೯೯೦: ನವದೆಹಲಿಯನ್ನು ಮುಖ್ಯ ಕಚೇರಿಯನ್ನಾಗಿಟ್ಟುಕೊಂಡು ಮೂವರು ಹೈಕೋರ್ಟ್ ನ್ಯಾಯಾಧೀಶರನ್ನೊಳಗೊಂಡ ಕಾವೇರಿ ನ್ಯಾಯ ಪಂಚಾಯತಿಯನ್ನು ರಚಿಸಿ ವಿ.ಪಿ. ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರಕಾರ ಪ್ರಕಟಣೆ ಹೊರಡಿಸಿತು.

೨೮-೭-೧೯೯೦: ನ್ಯಾಯ ಪಂಚಾಯತಿ ವಿಚಾರಣೆಯನ್ನು ಆರಂಭಿಸಿತು. ಕರ್ನಾಟಕ ತನ್ನ (ತಮಿಳುನಾಡಿನ) ಹಕ್ಕಿನ ನೀರನ್ನು ಹಿಡಿದಿಟ್ಟುಕೊಳ್ಳದಂತೆ ಸೂಚಿಸಿ ಮಧ್ಯಂತರ ತೀರ್ಪೊಂದನ್ನು ನೀಡುವಂತೆ ತಮಿಳುನಾಡು ನ್ಯಾಯ ಪಂಚಾಯತಿ ಮುಂದೆ ವಾದಿಸಿತು.

೫-೧-೧೯೯೧: ಮಧ್ಯಂತರ ಆದೇಶವು ತನ್ನ ನಿಗದಿತ ಕಾರ್ಯವ್ಯಾಪ್ತಿಗೆ ಬಾರದ ಕಾರಣ ಅಂಥ ಆದೇಶವೊಂದನ್ನು ನೀಡದಿರಲು ನ್ಯಾಯ ಪಂಚಾಯತಿ ತೀರ್ಮಾನ.

೨೬-೪-೧೯೯೧: ತಮಿಳುನಾಡಿನ ಪರಿಶೀಲನಾ ಅರ್ಜಿಯನ್ನು ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯ, ಮಧ್ಯಂತರ ತೀರ್ಪು ನೀಡಲು ನ್ಯಾಯ ಪಂಚಾಯತಿಗೆ ಅಧಿಕಾರವಿದೆ ಎಂದು ಸ್ಪಷ್ಟನೆ ನೀಡಿತು.

೨೫-೬-೧೯೯೧: ಕರ್ನಾಟಕಕ್ಕೆ ಭಾರೀ ಅಘಾತ. ನ್ಯಾಯ ಪಂಚಾಯತಿ ಮಧ್ಯಂತರ ಆದೇಶ ಹೊರಡಿಸಿತು. ತಮಿಳುನಾಡಿಗೆ ವರ್ಷಕ್ಕೆ ಕನಿಷ್ಠ ೨೦೫ ಟಿ.ಎಂ.ಸಿ.ಎಫ್. ನೀರು ಬಿಡುಗಡೆ ಮಾಡಬೇಕು. ೧೯೯೦ರ ಜೂನ್‌ನಲ್ಲಿ ತಿಳಿಸಿದಂತೆ ಕರ್ನಾಟಕ ನೀರಾವರಿಯೂ ೧೧.೨೧ ಲಕ್ಷ ಎಕರೆ ಭೂಮಿಗೆ ಮೀರಬಾರದು ಎಂದು ತೀರ್ಪಿನಲ್ಲಿ ಸೂಚಿಸಲಾಯಿತು.

೨೫-೭-೧೯೯೧: ಕರ್ನಾಟಕದಿಂದ ವಿವಾದಾತ್ಮಕ ಸುಗ್ರೀವಾಜ್ಞೆ ಪ್ರಕಟ. ಕಾವೇರಿ ಜಲಾನಯನ ಪ್ರದೇಶದಲ್ಲಿನ ನೀರಾವರಿಯ ರಕ್ಷಣೆ ಮಾಡಿ ಈ ಸುಗ್ರೀವಾಜ್ಞೆ ಹೊರಡಿಸಲಾಯಿತು. ನ್ಯಾಯ ಪಂಚಾಯತಿ ಮಧ್ಯಂತರ ತೀರ್ಪು ಕರ್ನಾಟಕದಲ್ಲಿ ಪರಿಣಾಮಕಾರಿಯಾಗದು ಎಂಬ ವಿವಾದಾತ್ಮಕ ಅಂಶ ಇದರಲ್ಲಿ ಸೇರಿತು.

೨೮-೭-೧೯೯೧: ಕಾವೇರಿ ನ್ಯಾಯ ಪಂಚಾಯತಿ ತೀರ್ಪು ಹಾಗೂ ಸುಗ್ರೀವಾಜ್ಞೆ ಮೂರು ಪ್ರಮುಖ ಅಂಶಗಳ ಬಗ್ಗೆ ರಾಷ್ಟ್ರಪತಿ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಕೇಳಿದರು, ಅದೆಂದರೆ: ಅ) ಕರ್ನಾಟಕದ ಸುಗ್ರೀವಾಜ್ಞೆ ಸಂವಿಧಾನಾತ್ಮಕವೇ? ಬ) ಅಂತರರಾಜ್ಯ ಜಲವಿವಾದ ಕಾಯ್ದೆಯ ೫(೨)ನೇ ಪರಿಚ್ಛೇದಕ್ಕನುಗುಣವಾಗಿ ನ್ಯಾಯ ಪಂಚಾಯತಿ ಮಧ್ಯಂತರ ತೀರ್ಪು ಹೊರಡಿಸಿದೆಯೇ ಮತ್ತು ಅದು ಜಾರಿಗೆ ಬರಬೇಕಾದರೆ ಅದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಬೇಕಾಗುವುದೇ? ಕ) ಮಧ್ಯಂತರ ತೀರ್ಪನ್ನು ಹೊರಡಿಸಲು ನ್ಯಾಯ ಪಂಚಾಯತಿಗೆ ಅಧಿಕಾರವಿದೆಯೇ?

೨೨-೧೧-೧೯೯೧: ಕರ್ನಾಟಕ ಹೊರಡಿಸಿದ ಕಾವೇರಿ ಜಲಾನಯನ ಪ್ರದೇಶ ನೀರಾವರಿ ರಕ್ಷಣಾ ಸುಗ್ರೀವಾಜ್ಞೆ ಸಂವಿಧಾನ ಬಾಹಿರ ಎಂದು ಸರ್ವೋಚ್ಚನ್ಯಾಯಾಲಯ ಅಭಿಪ್ರಾಯಪಟ್ಟಿತು.

೧೧-೧೨-೧೯೯೧: ಕೇಂದ್ರದಿಂದ ಕಾವೇರಿ ನ್ಯಾಯ ಪಂಚಾಯತಿಯ ಮಧ್ಯಂತರ ತೀರ್ಪಿನ ಪ್ರಕಟಣೆ.

ಹೀಗೆ ನೂರು ವರ್ಷಗಳಿಗೂ ಮೀರಿದ ವಿವಾದ ದಿನಾಂಕ ೧೧.೧೨.೯೧ರಂದು ಕೇಂದ್ರ ಸರ್ಕಾರ ಗೆಜೆಟ್‌ನಲ್ಲಿ ಪ್ರಕಟಿಸಲು ನಿರ್ಧರಿಸಿದೆ ಎಂದು ಅಂದಿನ ಜಲಸಂಪನ್ಮೂಲ ಸಚಿವ ವಿದ್ಯಾಚರಣ ಶುಕ್ಲಾ ಲೋಕ ಸಭೆಯಲ್ಲಿ ತಿಳಿಸಿದಾಗ, ರಾಜ್ಯದಲ್ಲಿ ಜನತೆ ತೀವ್ರ ಪ್ರತಿಭಟನೆಗೆ ತೊಡಗಿದರು.

ಕಾವೇರಿಯ ಮೇಲುಭಾಗದ ಜನರಾಗಿ ತಮ್ಮದೇ ಸಂಪತ್ತನ್ನು ತಾವು ಅನುಭವಿಸಲು ಸಾಧ್ಯವಾಗದೆ, ಕೆಳಭಾಗದ ಜನ ಎಲ್ಲಾ ಸೌಲಭ್ಯವನ್ನು ಉಪಯೋಗಿಸಿಕೊಂಡಿದ್ದು, ಕರ್ನಾಟಕದ ಜನ ಅಸಮಾಧಾನಗೊಳ್ಳಲು ಕಾರಣವಾಗಿದ್ದು ಸಹಜವೇ ಆಗಿದೆ.

ರಾಜ್ಯದ ಜನತೆಯ ಪ್ರತಿಭಟನೆ

ರಾಜ್ಯ ಸರ್ಕಾರದ, ಹಾಗೂ ರಾಜ್ಯ ಜನತೆಯ ಹಿತಾಸಕ್ತಿಗೆ ಮಾರಕವಾದ ಮಧ್ಯಂತರ ತೀರ್ಪು ಗೆಜೆಟ್ ಪ್ರಕಟವಾದ ತಕ್ಷಣ, ರಾಜ್ಯದಲ್ಲಿ ಅದರಲ್ಲೂ ಪ್ರಮುಖವಾಗಿ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಪ್ರತಿಭಟನೆ ಆರಂಭವಾಯಿತು. ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ, ಕಲ್ಲು ತೂರಾಟ ಮುಂತಾದ ಪ್ರಕರಣಗಳು ನಡೆದುವು. ಈ ಎರಡೂ ನಗರಗಳಲ್ಲಿ ಜನಜೀವನ ಅಸ್ತವ್ಯಸ್ತವಾಯಿತು.

ಬೆಂಗಳೂರಿನಲ್ಲಿ ರಾಜಕುಮಾರ್ ಅಭಿಮಾನಿ ಸಂಘದವರು ಹದಿನೈದು ಸಾವಿರಕ್ಕೂ ಮೀರಿದ ಪ್ರತಿಭಟನಾಕಾರರಿದ್ದ ಬೃಹತ್ ಮೆರವಣಿಗೆಯನ್ನು ನಡೆಸಿದರು. "ಕೋಡಿ ಹರಿಸೇವು ಕಾವೇರಿ ಬಿಡೆವು" ಎಂದು ಘೋಷಣೆ ಕೂಗಿದರು.

ಕರ್ನಾಟಕ ಬಂದ್

ಬೆಂಗಳೂರಿನಲ್ಲಿ ಸರ್ವ ಪಕ್ಷಗಳ ಮುಖಂಡರು ಸಭೆ ಸೇರಿ ಡಿಸೆಂಬರ್ ೧೩, ೧೯೯೧ ರಂದು ಕರ್ನಾಟಕ ಬಂದ್‌ಗೆ ಕರೆಕೊಟ್ಟರು.

ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬಂದ್ ಸಂಪೂರ್ಣ ಯಶಸ್ವಿಯಾಯಿತು. ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಶಾಲಾ, ಕಾಲೇಜುಗಳು, ಸರ್ಕಾರಿ ಕಛೇರಿಗಳು, ಕಾರ್ಖಾನೆಗಳು ಬಂದ್‌ನಲ್ಲಿ ಭಾಗಿಯಾದವು.

ಅಂದು ತಮಿಳು ಕನ್ನಡಿಗರ ಘರ್ಷಣೆಯಿಂದಾಗಿ ಹೆಚ್ಚಿನ ರೀತಿಯ ಹಿಂಸಾಚಾರ ನಡೆಯಿತು. ಬೆಂಗಳೂರಿನ ಕಾವೇರಿ ನೀರು ಕುಡಿದರೂ ಬಂದ್‌ಗೆ ಬೆಂಬಲ ಕೊಡದ ತಮಿಳರ ವಿರುದ್ದ ಸಹಜವಾಗಿಯೇ ರೋಷ ಉಂಟಾಯಿತು. ಆಗ ನಡೆದ ಹಿಂಸಾಚಾರದಲ್ಲಿ ಪೋಲಿಸರು ಲಾಠೀ ಚಾರ್ಜು ಮಾಡಿದರು, ಗುಂಡು ಹಾರಿಸಿದರು. ನೂರಾರು ಜನ ಗಾಯಗೊಂಡು ೧೬ ಜನ ಮೃತರಾದರು.

ಈ ಘಟನೆಯನ್ನು ತಮಿಳರ ಮೇಲೆ ದುರಭಿಮಾನಿ ಕನ್ನಡಿಗರು ನಡೆಸಿದ ಆಕ್ರಮಣ ಎಂದು ತಮಿಳು ಸಂಘ ಆಪಾದನೆ ಮಾಡಿತು ಕರ್ನಾಟಕ ವಿಮೋಚನಾ ರಂಗ ಮುಂತಾದವು ಇದನ್ನು ಮೂಲಭೂತವಾದಿಗಳ ಕೃತ್ಯ ಎಂದು ಸಾರಿದರು.

“ಕರ್ನಾಟಕದಲ್ಲಿ ತಮಿಳು ವಿರೋಧಿ ಭಾವನೆಯು ಬೆಳೆಯುತ್ತಿದೆ ಇದಕ್ಕೆ ಒಂದು ಉದಾಹರಣೆಯೆಂದರೆ ಬೆಂಗಳೂರಿನಲ್ಲಿ ಕವಿ ತಿರುವಳ್ಳುವರ್ ಪ್ರತಿಮೆಗೆ ವ್ಯಕ್ತವಾಗಿರುವ ವಿರೋಧ” ಎಂದು ಕರುಣಾನಿಧಿ ತಿಳಿಸಿದರು. ಅಲ್ಲದೆ ಇದಕ್ಕೆ ಪ್ರತಿಯಾಗಿ ತಮಿಳು ನಾಡಿನಲ್ಲಿ ಪ್ರತಿ ಚಳುವಳಿ ನಡೆಸುವುದಾಗಿಯೂ ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಶಕ್ತಿ ಕೇಂದ್ರದ ಕಾರ್ಯಾಧ್ಯಕ್ಷರಾದ ಡಾ.ಎಂ. ಚಿದಾನಂದ ಮೂರ್ತಿಯವರು ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ಅದರಲ್ಲಿ, ಬಂದ್‌ನ ದಿನ ನಡೆದ ಹಿಂಸಾಚಾರದ ಹಿಂದಿದ್ದ, “ಕನ್ನಡಿಗರು, ತಮ್ಮ ರಾಜ್ಯದಲ್ಲಿಯೇ ತಾವು ಅಲ್ಪ ಸಂಖ್ಯಾತರಾಗುತ್ತಿದ್ದೇವೆನ್ನುವ ಭಯ, ಹುದ್ದೆಗಳು ಹೊರ ರಾಜ್ಯದವರಾಗುತ್ತಿರುವ ವಿರುದ್ಧ ಆಕ್ರೋಶ ಹಾಗೂ ಹತಾಶೆ”ಯೆಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ನಿವೃತ್ತ ನೀರಾವರಿ ಕಾರ್ಯದರ್ಶಿಗಳು ಹಾಗೂ ನೀರಾವರಿ ತಜ್ಞರಾದ ಎಸ್.ಜಿ ಬಾಳೇಕುಂದ್ರಿಯವರು ರಚಿಸಿದ “ಕಾವೇರಿ ಕರ್ನಾಟಕಕ್ಕಾಗಿರುವ ಅನ್ಯಾಯ ಮತ್ತು ದೊರಕಬೇಕಾದ ನ್ಯಾಯ” ಎಂಬ ಪುಸ್ತಕವನ್ನು ಶಕ್ತಿ ಕೇಂದ್ರವು ಪ್ರಕಟಿಸಿತು.

ಅಲ್ಲದೆ “ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕಾಗಿರುವ ಅನ್ಯಾಯ” ಎಂಬ ಕರಪತ್ರವನ್ನು ಸಾಹಿತಿ ಕಲಾವಿದರ ಬಳಗದ ಸಹಕಾರದಿಂದ ಪ್ರಕಟಿಸಿತು.

ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ ಮುಂತಾದ ಸಂಘಟನೆಗಳು ಈ ಕರಪತ್ರದ ಸಾವಿರಾರು ಪ್ರತಿಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ತಿಳುವಳಿಕೆಗಾಗಿ ಹಂಚಿದರು.

ಅಂತರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಬಹಿಷ್ಕಾರ

೧೦.೧.೯೨ ರಂದು ಬೆಂಗಳೂರಿನಲ್ಲಿ ನಡೆಯಬೇಕಿದ್ದ ೨೩ನೆಯ ಅಂತರ್ರಾಷ್ಟ್ರೀಯ ಚಲನಚಿತ್ರೋತ್ಸವವನ್ನು ರಾಜ್ಯಕ್ಕೆ ಆದ ಅನ್ಯಾಯದ ವಿರುದ್ಧ

ರದ್ದುಪಡಿಸಬೇಕೆಂದು ರಾಜ್ಯ ರೈತ ಸಂಘದ ಅಧ್ಯಕ್ಷ ಪ್ರೊ. ನಂಜುಂಡಸ್ವಾಮಿಯವರು ಆಗ್ರಹಿಸಿದರು.

ಅಲ್ಲದೆ ಡಾ. ರಾಜಕುಮಾರ್, ನಟರಾದ ಅನಂತನಾಗ್, ಚಿತ್ರ ನಿರ್ಮಾಪಕ ನಂಜುಂಡೇಗೌಡ, ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ಸಂಗೀತ ನಿರ್ದೇಶಕ ಹಂಸಲೇಖ ಸೇರಿದಂತೆ ಚಿತ್ರೋದ್ಯಮದ ಹಲವಾರು ಮಂದಿ ವಿರೋಧ ವ್ಯಕ್ತಪಡಿಸಿದರು.

ರಂಗಭೂಮಿ ಕ್ರಿಯಾ ಸಮಿತಿಯವರು ಪನೋರಮ ಚಿತ್ರಪ್ರದರ್ಶನ ನಡೆಯುತ್ತಿದ್ದ ಸಪ್ನ ಚಿತ್ರ ಮಂದಿರದ ಮುಂದೆ ಪ್ರತಿಭಟನಾ ಪ್ರದರ್ಶನ ಏರ್ಪಡಿಸಿದರು.

ಇವರೆಲ್ಲರ ಬಹಿಷ್ಕಾರದ ನಡುವೆಯೂ, ಸರ್ಪಗಾವಲಿನಲ್ಲಿ, ಚಿತ್ರೋತ್ಸವವು ಪ್ರಾರಂಭಗೊಂಡಿತು. ಆದರೆ ಸಾಗರದೋಪಾದಿಯಲ್ಲಿ ಉತ್ಸವವನ್ನು ತಡೆಯಲು ಬೆಂಗಳೂರಿಗೆ ಬಂದ ಇಪ್ಪತ್ತು ಸಾವಿರಕ್ಕೂ ಹೆಚ್ಚು ರೈತರನ್ನು ಬಂಧಿಸಲಾಯಿತು.

ಸಮಾರಂಭದ ಅಂಗವಾಗಿ ನಡೆಯಬೇಕಿದ್ದ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿತ್ತು.

ಚಿತ್ರೋತ್ಸವವನ್ನು ಉದ್ಘಾಟನೆ ಮಾಡಬೇಕಾಗಿದ್ದ ಡಾ. ರಾಜಕುಮಾರ್‌ರವರನ್ನು ಕರೆ ತರಲು ಸಂಘಟಕರು ಮಾಡಿದ ಭಗೀರಥ ಪ್ರಯತ್ನ ಫಲಿಸಲಿಲ್ಲ.

೨೬.೧.೯೨ ರಂದು ಕನ್ನಡ ಶಕ್ತಿ ಕೇಂದ್ರವು ಮಹಾತ್ಮಾ ಗಾಂಧೀ ರಸ್ತೆಯ ಗಾಂಧಿ ಪ್ರತಿಮೆಯ ಬಳಿಯಿಂದ ಅಲಸೂರು ಕೆರೆಯ ಪಕ್ಕದ ಮಹಾನಗರ ಪಾಲಿಕೆ ಉದ್ಯಾನವನದವರೆಗೆ "ಕಾವೇರಿ ಕನ್ನಡ ಜಾಗೃತಿ" ಮೌನ ಮೆರವಣಿಗೆಯನ್ನು ಆಯೋಜಿಸಿತು.

ಡಾ. ಜಿ.ಎಸ್. ಶಿವರುದ್ರಪ್ಪನವರಿಂದ ಉದ್ಘಾಟಿಸಲ್ಪಟ್ಟ ಈ ಮೌನ ಮೆರವಣಿಗೆಯ ಕೊನೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾವೇರಿ ಜಲವಿವಾದ ಹಿನ್ನೆಲೆಯಲ್ಲಿ ಮೊದಲು ರಾಷ್ಟ್ರೀಯ ಜಲ ನೀತಿಯು ರೂಪುಗೊಳ್ಳಬೇಕು. ಈ ಮಧ್ಯೆ ಹೊರಡಿಸಿರುವ ಮಧ್ಯಂತರ ಆಜ್ಞೆಯನ್ನು ಕೇಂದ್ರ ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು ಎಂಬ ನಿರ್ಣಯದೊಂದಿಗೆ ನಾಡು ನುಡಿಗೆ ಪೂರಕವಾದ ಮತ್ತೆಂಟು ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು.

ಈ ಸಭೆಯಲ್ಲಿ ಅರವತ್ತಕ್ಕೂ ಮೀರಿದ ಕನ್ನಡ ಸಂಘಟನೆಗಳು ಭಾಗವಹಿಸಿದ್ದವು.

ಜಯಲಲಿತರಿಂದ ಉಪವಾಸ ಸತ್ಯಾಗ್ರಹ

ತಮಿಳು ನಾಡಿನ ಮುಖ್ಯ ಮಂತ್ರಿ ಜಯಲಲಿತ ಅವರು ಕಾವೇರಿ ಮಧ್ಯಂತರ ತೀರ್ಪನ್ನು ಅನುಷ್ಠಾನಗೊಳಿಸಲು ಹಠಾತ್ತನೆ ಉಪವಾಸ ಸತ್ಯಾಗ್ರಹವನ್ನು ಜುಲೈ ೯೩ರಲ್ಲಿ ಆರಂಭಿಸಿದರು. ಇದಕ್ಕೆ ತಮಿಳು ಚಿತ್ರರಂಗದ ಖ್ಯಾತರಾದ ಶ್ರೀದೇವಿ, ರಜನೀಕಾಂತ್ ಮುಂತಾದವರು ಬೆಂಬಲ ಸೂಚಿಸಿದರು.

ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆ ನಡೆಸಲಾಯಿತು. ಕನ್ನಡ ಶಕ್ತಿ ಕೇಂದ್ರದ ಸಲಹೆಯಂತೆ ಬೆಂಗಳೂರಿನ ವಿವಿಧ ಭಾಗಗಳಲ್ಲಿ "ಕಾವೇರಿ ಕನ್ನಡ ಜಾಗೃತಿ" ಸಪ್ತಾಹವನ್ನು ಆಚರಿಸಲಾಯಿತು.

ದಿನಾಂಕ ೨೦.೭.೯೩ ರಂದು ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಆಶ್ರಯದಲ್ಲಿ ಮೆರವಣಿಗೆ ನಡೆದು ಜಯಲಲಿತ ಅವರ ಪ್ರತಿಕೃತಿಯನ್ನು ಸುಟ್ಟು ಹಾಕಲಾಯಿತು.

ಆ ಸಂದರ್ಭದಲ್ಲಿ ಶ್ರೀಮತಿ ಬಿ.ಟಿ. ಲಲಿತನಾಯಕ್ ಹಾಗೂ ಡಾ. ಚಿದಾನಂದ ಮೂರ್ತಿಯವರುಗಳು ಮಾತನಾಡಿ ಕಾವೇರಿ ಗಲಭೆಗಳ ಸಂದರ್ಭದಲ್ಲಿ ನಡೆದ ಗಲಭೆಗಳು, ಅಂದು ಮಡಿದ ಕನ್ನಡಿಗರು ಮತ್ತು ಉಂಟಾದ ಆಸ್ತಿ ಪಾಸ್ತಿ ನಾಶ ಇವುಗಳಿಂದ ಹೆದರಿದ ಮಾನ್ಯ ಪ್ರಧಾನಿಯವರು ಮಧ್ಯಂತರ ತೀರ್ಪಿನ ಪ್ರಕಾರ ಕರ್ನಾಟಕ ನೀರು ಬಿಡುವಂತೆ ಒತ್ತಾಯಿಸುವ ಕಾರ್ಯ ಮುಂದೆ ಹಾಕಿದರು. ಜನತೆ ಎಚ್ಚೆತ್ತು ತೀವ್ರ ಪ್ರತಿಭಟನೆ ತೋರದಿದ್ದರೆ ಕರ್ನಾಟಕವು ಶಾಶ್ವತವಾಗಿ ಕಾವೇರಿಯನ್ನು ಕಳೆದುಕೊಳ್ಳುವ ಅಪಾಯವಿದೆಯೆಂದರು. ಇಂದಿಗೂ ಈ ವಿವಾದ ಬಗೆಹರಿಸಲಾಗಿಲ್ಲ.

❑

ಉರ್ದು ವಾರ್ತಾಪ್ರಸಾರಕ್ಕೆ ವಿರೋಧ

೧.೧೧.೯೦ರಿಂದ ಕನ್ನಡ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಪ್ರಸಾರ ಮಾಡಲು ಆರಂಭಿಸಿದರೂ ಕಾರ್ಯಕ್ರಮದಲ್ಲಿ ಗುಣಮಟ್ಟದ ಕೊರತೆ ಕಾಣುತ್ತಿತ್ತು. ಹೀಗಾಗಿ ಮತ್ತಷ್ಟು ಹೋರಾಟಗಳು ಅನಿವಾರ್ಯವೆನಿಸಿತು.

ಹೀಗಿರುವಲ್ಲಿ ೧೯೯೪ ಗಾಂಧೀ ಜಯಂತಿಯ ದಿನ ಬೆಳಗಿನ ಪತ್ರಿಕೆ ಓದುತ್ತಿದ್ದಾಗ ಪ್ರಕಟವಾಗಿದ್ದ ಸುದ್ದಿಯೊಂದು ಕನ್ನಡಿಗರಿಗೆ ಆಘಾತವನ್ನುಂಟು ಮಾಡುವಂತಹುದ್ದಾಗಿತ್ತು. ಅದೆಂದರೆ ದೂರದರ್ಶನದಿಂದ ಅಂದಿನಿಂದಲೇ ಅಂದರೆ ಅಕ್ಟೋಬರ್ ೨, ೧೯೯೪ರ ಭಾನುವಾರದಿಂದಲೇ ಬೆಂಗಳೂರು ಕೇಂದ್ರದಿಂದ ರಾತ್ರಿ ಕನ್ನಡ ವಾರ್ತಾ ಪ್ರಸಾರದ ನಂತರ ೭.೪೫ರಿಂದ ಹತ್ತು ನಿಮಿಷಗಳ ಕಾಲ ಉರ್ದು ವಾರ್ತೆಯನ್ನು ಪ್ರಸಾರ ಮಾಡಲು ಯೋಜಿಸಲಾಗಿದೆಯೆಂಬ ಸುದ್ದಿ ಪ್ರಕಟವಾಗಿತ್ತು.

ನವಂಬರ್ ೨೬ ರಿಂದ ನಡೆಯಲು ಉದ್ದೇಶಿಸಲಾಗಿದ್ದ ರಾಜ್ಯ ವಿಧಾನ ಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಲ್ಪ ಸಂಖ್ಯಾತರ ಒಲವು ಗಳಿಸುವ ಉದ್ದೇಶದಿಂದ ಉರ್ದು ವಾರ್ತಾಪ್ರಸಾರ ಆರಂಭವಾಗುತ್ತದೆ ಎಂಬುದು ಬಹು ಜನರ ಅಭಿಮತವಾಗಿತ್ತು.

ಆದ್ದರಿಂದ ದಿಗ್ಭ್ರಮೆಗೊಂಡ ಸಂಘಟನೆಗಳು ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎನ್. ಶೇಷನ್ ಅವರಿಗೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದುವು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಮೊದಲಿಗೆ ಪತ್ರಿಕಾಗೋಷ್ಠಿಯನ್ನು ನಡೆಸಿ ವಿರೋಧವನ್ನು ವ್ಯಕ್ತಪಡಿಸಿದರು.

ಕನ್ನಡ ಪರ ಸಂಘಟನೆಗಳು ತಮ್ಮ ತೀವ್ರ ಪ್ರತಿರೋಧವನ್ನು ವ್ಯಕ್ತ ಪಡಿಸಿದುವು.

ಕನ್ನಡ ಪರ ಸಂಘಟನೆಗಳ ನಿಲುವು

ಉರ್ದು ಭಾಷೆಯ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ ಕನ್ನಡ ಕಾರ್ಯಕ್ರಮಗಳಿಗೇ ಸಮಯವಿಲ್ಲದಿರುವಾಗ ಉರ್ದು ವಾರ್ತಾಪ್ರಸಾರ ಮಾಡುವುದು

ನೈತಿಕವಾಗಿ ಸರಿಯಲ್ಲ. ಜತೆಗೆ ಈ ದಿನಗಳಲ್ಲಿ ನಿರ್ಧಾರ ಕೈಗೊಂಡಿರುವುದು ಯಾಕೆ? ಇದು ಸರಿಯೇ ಎಂಬುದು ಕನ್ನಡ ಪರ ಸಂಘಟನೆಗಳ ನಿಲುವಾಗಿತ್ತು.

ಆಗ ಬೆಂಗಳೂರು ದೂರದರ್ಶನ ಕೇಂದ್ರದ ನಿರ್ದೇಶಕರಾಗಿದ್ದ ಅನಿಸ್ ಉಲ್ ಹಕ್ ಅವರು ಅಕ್ಟೋಬರ್ ಒಂದರಂದು ಒಂದು ಸುತ್ತೋಲೆ ಹೊರಡಿಸಿ ಎರಡನೇ ತಾರೀಖಿನಿಂದಲೆ, ತುರ್ತಾಗಿ ಸುದ್ದಿ ಪ್ರಸಾರಕ್ಕೆ ಹೊರಟಿದ್ದು ತೀವ್ರ ಸಂಶಯಕ್ಕೊಳಗಾಯಿತು.

ಈ ಹುನ್ನಾರದ ವಿರುದ್ಧ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡಿಗರ ಹೋರಾಟ ರಂಗ, ಕಾವೇರಿ ಕನ್ನಡ ಯುವಕರ ಸಂಘ, ವೀರ ಸೇನಾನಿ ದಿ.ಮ. ರಾಮಮೂರ್ತಿ ಕನ್ನಡ ಬಳಗ ಎಂ.ಇ.ಐ. ಕನ್ನಡ ಹಿತರಕ್ಷಣಾ ಸಮಿತಿ ಹೆಚ್.ಎಂ.ಟಿ. ಗಡಿಯಾರ ಕಾರ್ಖಾನೆಯ ಕನ್ನಡ ಬಳಗ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದುವು.

ಉರ್ದು ಸುದ್ದಿ ಪ್ರಸಾರ ರದ್ದಾಗದಿದ್ದರೆ ತಮ್ಮದೇ ಆದ ರೀತಿಯಲ್ಲಿ ಪ್ರತಿಭಟಿಸುವುದು ಅನಿವಾರ್ಯವಾಗುತ್ತದೆ ಎಂದು ಡಾ. ಎಂ. ಚಿದಾನಂದ ಮೂರ್ತಿ, ಡಾ. ಗುರುಲಿಂಗ ಕಾಪಸೆ, ಸಿಸು ಸಂಗಮೇಶ, ಪ್ರೊ. ಚನ್ನವೀರ ಕಣವಿ, ಡಾ. ಶ್ರೀನಿವಾಸ ಹಾವನೂರು, ವ್ಹಿ.ಸಿ. ಮಾಲಗತ್ತಿ, ಪ್ರೊ. ಎಂ.ಎಚ್, ಕೃಷ್ಣಯ್ಯ, ಡಾ. ವಿಜಯಾ, ಬರಗೂರು ರಾಮಚಂದ್ರಪ್ಪ, ಡಾ. ಪಿ.ವಿ. ನಾರಾಯಣ ಮತ್ತು ಡಾ. ಎಂ.ಎಚ್ ಮರುಳಸಿದ್ಧಯ್ಯ ಅವರುಗಳು ಜಂಟಿ ಪತ್ರಿಕಾ ಹೇಳಿಕೆ ನೀಡಿ, ತಾವು ಯಾರೂ ಮತೀಯ ಅಥವಾ ಭಾಷಿಕ ಅಲ್ಪ ಸಂಖ್ಯಾತರ ವಿರೋಧಿಗಳಲ್ಲ. ಆದರೆ, ಉರ್ದುವಿಗೆ ಮಿತಿ ಮೀರಿದ ಪ್ರಾಮುಖ್ಯ ದೊರಕಿರುವುದನ್ನು ಆತಂಕದಿಂದ ಗಮನಿಸಿದ್ದೇವೆ ಎಂದು ಹೇಳಿದರು.

ಉರ್ದು ಸುದ್ದಿ ಪ್ರಸಾರ ರಾಷ್ಟ್ರೀಯ ಜಾಲದಲ್ಲಾದರೆ ಅದು ಬೇರೆ ಮಾತು. ಆದರೆ ಕನ್ನಡ ಕಾರ‌ಕಮಗಳ ಮಧ್ಯೆ ಉರ್ದು ಸುದ್ದಿ ಪ್ರಸಾರವನ್ನು ತುರುಕಿರುವುದು ಈ ಉಭಯ ಭಾಷಾ ಬಂಧುಗಳ ಭಾವನಾತ್ಮಕ ಸಂಬಂಧವನ್ನು ಕೆಡಿಸುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗೊ.ರು. ಚನ್ನಬಸಪ್ಪನವರು ಅಭಿಪ್ರಾಯ ಪಟ್ಟು "ಕನ್ನಡದ ಕೈ ಕಟ್ಟುವ ಈ ಹುನ್ನಾರ ಇನ್ನು ಸಾಕು" ಎಂದರು. "ಅಲ್ಲದೆ ಈ ಕ್ರಮವು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗಿದ್ದು ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್ ಅವರಿಗೆ ಫ್ಯಾಕ್ಸ್ ಮೂಲಕ ದೂರು ನೀಡಲಾಗಿದೆ ಎಂದರು.

ಪ್ರತಿಭಟನೆ, ನೂರಾರು ಬಂಧನ

೩.೧೦.೯೪ರಂದು ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಜಿ.ನಾರಾಯಣ ಕುಮಾರ್ ನೇತೃತ್ವದಲ್ಲಿ ನೂರಾರು ಮಂದಿ ಚಳುವಳಿಗಾರರು ದೂರದರ್ಶನ ಕೇಂದ್ರಕ್ಕೆ ಮುತ್ತಿಗೆ ಹಾಕಲು ಯತ್ನಿಸಿದಾಗ ಅವರನ್ನು ಬಂಧಿಸಲಾಯಿತು.

ನಾಗನಾಥಪುರ ಮೈಕೊ ಕನ್ನಡ ಬಳಗದ ಆಶ್ರಯದಲ್ಲಿ ಹೊಸೂರು ರಸ್ತೆಯಲ್ಲಿ ರಸ್ತೆ ತಡೆ ಚಳುವಳಿ ನಡೆಯಿತು.

ಎಸ್.ಕೆ.ಎಫ್. ಕನ್ನಡ ಹಿತ ರಕ್ಷಣಾ ಸಮಿತಿ, ಚೆನ್ನಕೇಶವ ನಗರ ಕನ್ನಡ ಗೆಳೆಯರ ಸೇವಾ ಸಂಘ, ಸಿಂಗಸಂದ್ರ ಕನ್ನಡ ಯುವಕರ ಸಂಘದ ಸದಸ್ಯರು ರಸ್ತೆ ತಡೆ ಚಳುವಳಿಯಲ್ಲಿ ಭಾಗವಹಿಸಿದ್ದರು.

ಅಲ್ಪ ಸಂಖ್ಯಾತರ ಮತಗಳಿಕೆಯ ಕುತಂತ್ರ

ಉರ್ದು ವಾರ್ತಾಪ್ರಸಾರವನ್ನು ತೀವ್ರವಾಗಿ ಪ್ರತಿಭಟಿಸಿದ ಭಾರತೀಯ ಜನತಾಪಕ್ಷದ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್ ಹಾಗೂ ಜೀವರಾಜ್ ಆಳ್ವ ಅವರುಗಳು, ಉರ್ದು ವಾರ್ತಾಪ್ರಸಾರಕ್ಕೆ ಯಾರಿಂದಲೂ ಬೇಡಿಕೆ ಬರದಿದ್ದರೂ ಇದ್ದಕ್ಕಿದ್ದಂತೆ ಪ್ರಸಾರ ಮಾಡುತ್ತಿರುವುದೇಕೆ ಎಂದು ಪ್ರಶ್ನಿಸಿ, ಚುನಾವಣೆ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಅಲ್ಪ ಸಂಖ್ಯಾತರನ್ನು ಓಲೈಸುವ ಕ್ರಮ ಇದಾಗಿದೆ, ಈ ಕುರಿತು ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಅವರಿಗೆ ಪತ್ರ ಬರೆಯುವುದಾಗಿ ತಿಳಿಸಿದರು.

ದಿನಾಂಕ ೫.೧೦.೯೪ರಂದು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಕನ್ನಡ ಶಕ್ತಿ ಕೇಂದ್ರ ಮತ್ತು ಹಿರಿಯ ಸಾಹಿತಿಗಳ ಸಂಯುಕ್ತಾಶ್ರಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಗೊ.ರು. ಚನ್ನಬಸಪ್ಪ, ಡಾ. ಚಿದಾನಂದಮೂರ್ತಿ ಹಾಗೂ ಸಿ.ಎಚ್. ಹನುಮಂತರಾಯ ಅವರುಗಳು ಮಾತನಾಡಿ ಉರ್ದು ವಾರ್ತಾಪ್ರಸಾರವನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಿ ದಿನಾಂಕ ೯.೧೦.೯೪ ರಂದು ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಶಕ್ತಿ ಕೇಂದ್ರ ಹಾಗೂ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಮತ್ತು ರಾಜ್ಯದ ಹಲವಾರು ಕನ್ನಡ ಸಂಘ ಸಂಸ್ಥೆಗಳು ಸೇರಿ ಬೃಹತ್ ಪ್ರತಿಭಟನೆ ನಡೆಸಲಿವೆ ಎಂದರು.

ಪ್ರತಿಭಟನೆಯ ನೇತೃತ್ವವನ್ನು ಖ್ಯಾತ ಸಾಹಿತಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಜಿ.ಎಸ್. ಸಿದ್ಧಲಿಂಗಯ್ಯ, ಸಾಹಿತ್ಯ ಪರಿಷತ್ ಅಧ್ಯಕ್ಷ

ಗೊ.ರು. ಚನ್ನಬಸಪ್ಪ ಶಕ್ತಿ ಕೇಂದ್ರದ ಕಾರ್ಯಾಧ್ಯಕ್ಷ ಡಾ. ಚಿದಾನಂದ ಮೂರ್ತಿ ಮತ್ತು ಎಚ್.ಎಸ್. ದೊರೆಸ್ವಾಮಿ ಮುಂತಾದ ಗಣ್ಯರು ವಹಿಸಲಿದ್ದಾರೆ ಎಂದರು.

ಅಲ್ಲದೆ ಗೋಕಾಕ್ ಚಳುವಳಿಯ ಮಾದರಿಯಲ್ಲೇ ರಾಜ್ಯಾದ್ಯಂತ ವ್ಯಾಪಕ ಚಳುವಳಿ ನಡೆಸಲಾಗುವುದು. ಡಾ. ರಾಜಕುಮಾರ್ ಅವರನ್ನೂ ಈ ಚಳುವಳಿಯಲ್ಲಿ ಭಾಗವಹಿಸಲು ಮನವಿಪತ್ರ ಬರೆಯಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಗೊ.ರು. ಚನ್ನಬಸಪ್ಪ, ಡಾ. ಸಿದ್ದಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಸಿ.ಎಚ್. ಹನುಮಂತರಾಯ, ಸಿ. ಚಂದ್ರ ಶೇಖರ್, ಹೇಮಲತಾ ಮಹಿಷಿ, ಎಚ್.ಎಸ್. ಪಾರ್ವತಿ, ತ.ರಂ. ಕೃಷ್ಣೇಗೌಡ, ಸಿ. ಅಶ್ವತ್ಥ್ ಮತ್ತಿತರ ಗಣ್ಯರು ಭಾಗವಹಿಸಿದ್ದರು.

ಹಲವೆಡೆ ರಸ್ತೆತಡೆ ಕಾರ್ಯಕ್ರಮ

ಮಾಗಡಿ ರಸ್ತೆ, ಆಡುಗೋಡಿ, ಮೈಸೂರು ರಸ್ತೆ ಮುಂತಾದ ಪ್ರದೇಶಗಳಲ್ಲಿ ಕಾರ್ಯಕರ್ತರು ರಸ್ತೆ ತಡೆ ನಡೆಸಿದರು.

ಆಡುಗೋಡಿ ಪ್ರದೇಶದಲ್ಲಿ ಅಂಗಡಿ ಮುಂಗಟ್ಟುಗಳನ್ನು ಸಂಪೂರ್ಣವಾಗಿ ಮುಚ್ಚುವುದರ ಮೂಲಕ ಬಂದ್ ಆಚರಿಸಲಾಯಿತು.

ವ್ಯಾಪಕ ಪ್ರತಿಭಟನೆ

೬.೧೦.೯೪ರ ರಂದು ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಕಾರ್ಯಕರ್ತರು ಕಬ್ಬನ್ ಉದ್ಯಾನವನದಿಂದ ದೂರದರ್ಶನ ಕೇಂದ್ರಕ್ಕೆ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಅವರು ಹೋರಾಟ ಅಲ್ಪಸಂಖ್ಯಾತರ ವಿರುದ್ಧವಾಗಲೀ ಅಥವಾ ಮುಸ್ಲಿಂ ಜನಾಂಗದ ವಿರುದ್ಧವಾಗಲೀ ಅಲ್ಲ. ಕನ್ನಡ ನಾಡುನುಡಿಯನ್ನು ರಕ್ಷಿಸುವುದೊಂದೇ ಈ ಹೋರಾಟದ ಉದ್ದೇಶ ಎಂದರು. ರಾಜಕೀಯರಹಿತವಾದ ಈ ಹೋರಾಟ ಉರ್ದು ವಾರ್ತಾಪ್ರಸಾರ ನಿಲ್ಲುವವರೆಗೂ ನಿಲ್ಲದು ಎಂದು ಎಚ್ಚರಿಸಿದರು.

ಕನ್ನಡ ಚಲನಚಿತ್ರ ನಿರ್ಮಾಪಕ, ನಿರ್ದೇಶಕ ರಾಜೇಂದ್ರ ಸಿಂಗ್‌ಬಾಬು ಮತ್ತಿತರರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಚಳುವಳಿಗೆ ವಿದ್ಯಾರ್ಥಿಗಳ ಪ್ರವೇಶ

ನೃಪತುಂಗ ರಸ್ತೆಯಲ್ಲಿ ಸರ್ಕಾರಿ ಕಲೆ ಮತ್ತು ವಿಜ್ಞಾನಗಳ ಕಾಲೇಜು ವಿದ್ಯಾರ್ಥಿಗಳು ಪ್ರದರ್ಶನ ನಡೆಸುತ್ತಿದ್ದಾಗ ಅಲ್ಲಿಗೆ ಬಂದ ಸಚಿವ ಮಲಕರೆಡ್ಡಿಯವರ ಕಾರಿನ ಗಾಜುಗಳು ಪುಡಿ ಪುಡಿಯಾದುವು.

ವಿ.ವಿ.ಪುರಂ ಕಾಲೇಜು, ಆರ್.ವಿ. ಕಾಲೇಜು ವಿದ್ಯಾರ್ಥಿಗಳೂ ಪ್ರತಿಭಟನೆಯಲ್ಲಿ ಪಾಲ್ಗೊಂಡು ಒಂದು ಗಂಟೆ ಕಾಲ ರಸ್ತೆ ತಡೆ ನಡೆಸಿದರು.

ನೃಪತುಂಗ ಕನ್ನಡ ಗೆಳೆಯರ ಬಳಗ, ದಂಡು ಪ್ರದೇಶ ಕನ್ನಡ ಸಂಘ ಸಂಸ್ಥೆಗಳ ಒಕ್ಕೂಟ ಮುಂತಾದ ಸಂಸ್ಥೆಗಳು ಡಾ. ರಾಜ್‌ಕುಮಾರ್ ಅವರು ಚಳುವಳಿಯ ನೇತೃತ್ವವನ್ನು ವಹಿಸುವಂತೆ ಮನವಿಮಾಡಿಕೊಂಡವು.

ಅಕ್ಟೋಬರ್ ಏಳನೆಯ ತಾರೀಖಿನಂದು ದೂರದರ್ಶನ ಕೇಂದ್ರದ ಮುಂದೆ ಹಿಂದೂ ಜಾಗರಣಾವೇದಿಕೆ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ತಿಳಿಸಿತು.

ತುಮಕೂರು ರಸ್ತೆಯಲ್ಲಿ ರಸ್ತೆ ತಡೆ ನಡೆಸಿದ ಶಾಸಕ ಜಿ.ನಾರಾಯಣ ಕುಮಾರ್ ಸೇರಿದಂತೆ ೪೦೦ ಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ಬಂಧಿತರಲ್ಲಿ ಎಂ.ಇ.ಐ. ಕನ್ನಡ ಹಿತರಕ್ಷಣಾ ಸಮಿತಿಯವರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ವಾಟಾಳ್ ನಾಗರಾಜರಿಂದ ಖಂಡನೆ

ಶಾಸಕ ವಾಟಾಳ್ ನಾಗರಾಜರು ತಮಿಳುನಾಡಿನಲ್ಲಿ ಹಿಂದಿ ವಾರ್ತಾಪ್ರಸಾರ ರದ್ದಾದಂತೆ ಕರ್ನಾಟಕದಲ್ಲಿ ಉರ್ದು ವಾರ್ತಾಪ್ರಸಾರ ರದ್ದಾಗಬೇಕೆಂದು ಒತ್ತಾಯಿಸಿದರು.

ದೂರದರ್ಶನ ನಿರ್ದೇಶಕ ಹಕ್ ಅವರಿಂದ ಸಮರ್ಥನೆ

ಏಕಾ ಏಕಿ ದೂರದರ್ಶನದಲ್ಲಿ ಉರ್ದು ವಾರ್ತೆ ಪ್ರಸಾರವಾಗಲು ಕಾರಣರೆನ್ನಲಾದ ಬೆಂಗಳೂರು ದೂರದರ್ಶನ ಕೇಂದ್ರದ ಉಪ ಮಹಾನಿರ್ದೇಶಕರಾದ ಅನಿಸ್ ಉಲ್ ಹಕ್ ಅವರು, ಇಷ್ಟೆಲ್ಲಾ ಪ್ರತಿಭಟನೆಯಾದ ನಂತರ, ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರಿಗೆ ಪತ್ರವೊಂದನ್ನು ಬರೆದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ನಿರ್ದೇಶನದ ಮೇರೆಗೆ ಬೆಂಗಳೂರು ಕೇಂದ್ರದಿಂದ ಉರ್ದು ವಾರ್ತಾ ಪ್ರಸಾರವನ್ನು ಪ್ರಾರಂಭಿಸಲಾಗಿದೆ ಎಂದು ಸ್ಪಷ್ಟೀಕರಣ ನೀಡಿದರು.

ಆದರೆ ಈ ಸ್ಪಷ್ಟೀಕರಣ ಕೇವಲ ಕಣ್ಣೊರೆಸುವ ತಂತ್ರ ಎಂದು ತಿಳಿದ ಚಳುವಳಿಗಾರರು ಚಳುವಳಿಯನ್ನು ಮುಂದುವರೆಸಿದರು. ಅಲ್ಲದೆ ದೂರದರ್ಶನ ಮಹಾನಿರ್ದೇಶಕರಾದ ಆರ್. ಬಸು ಅವರು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಅಂತಹ ಪತ್ರ ಬರೆಯುವ ಯಾವುದೇ ಅಧಿಕಾರ ಹಕ್‌ಗೆ ಇಲ್ಲವೆಂದು ಹೇಳಿದರೆನ್ನಲಾಗಿದೆ.

ಪ್ರತಿಭಟನೆ - ಗೋಲೀಬಾರ್

ದಿನಾಂಕ ೭.೧೦.೯೪ರ ಶುಕ್ರವಾರ. ಉರ್ದು ವಾರ್ತಾಪ್ರಸಾರದ ವಿರುದ್ಧದ ಚಳುವಳಿಯ ಐದನೆಯ ದಿನ.

ಇದುವರೆಗೆ ಶಾಂತಿಯುತವಾಗಿ ನಡೆಯುತ್ತಿದ್ದ ಚಳುವಳಿ ಹಿಂಸಾಚಾರಕ್ಕೆ ತಿರುಗಿ ಉದ್ರಿಕ್ತ ಗುಂಪುಗಳನ್ನು ಚದುರಿಸಲು ಗೋಲಿಬಾರ್ ನಡೆಯಿತು. ಹಲವಾರು ಹೋರಾಟಗಾರರು ಸಾವನ್ನಪ್ಪಿದರು. ಅಧಿಕ ಸಂಖ್ಯೆಯಲ್ಲಿ ಗಾಯಗೊಂಡರು.

ಇವು ಬೆಂಗಳೂರಿನ ಹಲವಾರು ಬಡಾವಣೆಗಳಲ್ಲಿ ನಡೆದ ದುರ್ದೈವದ ಅಹಿತಕರ ಘಟನೆಗಳು.

ಉರ್ದು ವಾರ್ತಾಪ್ರಸಾರ ವಿರೋಧಿ ಮೆರವಣಿಗೆಯಲ್ಲಿ ಭಾಗವಹಿಸಲು ಬಸವನಗುಡಿ, ವಿಶ್ವೇಶ್ವರಪುರದ ಸುತ್ತಮುತ್ತಲ ಕಾಲೇಜು ವಿದ್ಯಾರ್ಥಿಗಳು ಕಲೆತು ದೂರದರ್ಶನ ಕೇಂದ್ರದ ಮುಂದೆ ಪ್ರದರ್ಶನ ನಡೆಸಲು ಹೊರಬಿದ್ದಾಗ ಪೂಜಾಮಂದಿರ ಒಂದರಲ್ಲಿ ಜಮಾಯಿಸಿದ್ದ ಒಂದು ಕೋಮಿನ ಜನ ಕಲ್ಲು, ಬಾಟಲಿ, ಪೆಟ್ರೋಲ್ ಬಾಂಬ್ ಎಸೆದದ್ದೆ ಹಿಂಸಾಚಾರಗಳಿಗೆ ನಾಂದಿಯಾಯಿತು.

ಈ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ ಮಾರ್ಕೆಟ್‌ನ ಸುತ್ತಮುತ್ತಲೂ ಅಲ್ಲದೆ ನಗರದ ನಾನಾ ಭಾಗಗಳಿಗೆ ಹಿಂಸಾಚಾರ ಹರಡಿತು. ಲೂಟಿ, ಅಗ್ನಿಸ್ಪರ್ಶ ಕಲ್ಲೆಸೆತ ವ್ಯಾಪಕವಾಗಿ ನಡೆಯಿತು. ನಿಲ್ಲಿಸಿದ್ದ ವಾಹನಗಳಿಗೆ ಬೆಂಕಿ ಹಚ್ಚಲಾಯಿತು.

ಶನಿವಾರವೂ ಸಹ ಹಿಂಸಾಚಾರ ಮುಂದುವರೆದು ಎರಡು ಕಡೆ ಗೋಲೀಬಾರ್ ನಡೆಯಿತು. ಈ ಘಟನೆಯಲ್ಲಿ ಸತ್ತವರ ಸಂಖ್ಯೆ ೨೩ಕ್ಕೆ ಮೀರಿತ್ತು.

ಗಲಭೆಯ ತೀವ್ರತೆಯನ್ನು ಗಮನಿಸಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಯಿತು.

ಗಲಭೆ-ಹಿಂಸಾಚಾರದ ನಂತರ ಹಕ್‌ರಿಗೆ ಕೊಕ್

ಇಷ್ಟೆಲ್ಲಾ ವ್ಯಾಪಕ ಹಿಂಸಾಚಾರ, ಅನಾಹುತಗಳಾದ ಮೇಲೆ ಈ ಸಮಸ್ಯೆಗೆ ಮೂಲ ಕಾರಣರಾದ ದೂರದರ್ಶನ ಕೇಂದ್ರದ ನಿರ್ದೇಶಕ ಹುದ್ದೆಯಿಂದ ಅನಿಸ್ ಉಲ್ ಹಕ್ ಅವರನ್ನು ಕಿತ್ತು ಹಾಕಲಾಯಿತು.

ಅವರ ಜಾಗಕ್ಕೆ ಕನ್ನಡಿಗರೇ ಆದ ಭುವನೇಶ್ವರ ದೂರದರ್ಶನ ಕೇಂದ್ರದ ನಿರ್ದೇಶಕರಾದ ಎನ್.ಜಿ. ಶ್ರೀನಿವಾಸ್ ಅವರನ್ನು ನೇಮಿಸಲಾಯಿತು.

ವ್ಯಾಪಕ ಹಿಂಸಾಚಾರದ ಹಿನ್ನೆಲೆಯಲ್ಲಿ ಉರ್ದು ಸುದ್ದಿ ಪ್ರಸಾರವನ್ನು ನಿಲ್ಲಿಸಬೇಕೆಂದು ರಾಜ್ಯ ಸರ್ಕಾರವೂ ಕೇಂದ್ರವನ್ನು ಕೋರಿತು.

ಉರ್ದು ಪ್ರಸಾರ ಸ್ಥಗಿತ : ವೀರಪ್ಪಮೊಯ್ಲಿ
ಚಳುವಳಿ ನಿಲ್ಲದು : ಚಿದಾನಂದ ಮೂರ್ತಿ

ಈ ಮಧ್ಯೆ ಶನಿವಾರ ರಾತ್ರಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಉರ್ದು ವಾರ್ತಾಪ್ರಸಾರವನ್ನು ಭಾನುವಾರದಿಂದ ಸ್ಥಗಿತಗೊಳಿಸಲಾಗುವುದೆಂದೂ, ಆದರೆ ನಂತರ ಪ್ರಸಾರದ ವೇಳೆಯುನ್ನು ನಿಗದಿಪಡಿಸಲಾಗುವುದೆಂದೂ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆದರೆ ಬೆಂಗಳೂರು ದೂರದರ್ಶನ ಕೇಂದ್ರದಿಂದ ಯಾವ ಸಮಯದಲ್ಲೂ ಉರ್ದು ವಾರ್ತೆ ಪ್ರಸಾರವಾಗಕೂಡದು. ಅಂತಹ ಸ್ಪಷ್ಟ ಆಶ್ವಾಸನೆ ಸಿಗುವವರೆಗೆ ನಮ್ಮ ಪ್ರತಿಭಟನೆ ಮುಂದುವರೆಯುತ್ತದೆ ಎಂದು ಡಾ. ಎಂ. ಚಿದಾನಂದಮೂರ್ತಿಯುವರು ಮುಖ್ಯಮಂತ್ರಿಗಳ ಹೇಳಿಕೆಗೆ ಪ್ರತಿಕ್ರಿಯಿಸಿದರು.

ದಿನಾಂಕ ೯.೧೦.೧೯೯೪ರಂದು ದೂರದರ್ಶನ ಕೇಂದ್ರದ ಬಳಿ ಪ್ರತಿಭಟನಾ ಸಭೆ ನಡೆಯಿತು. ಹಿರಿಯ ಸಾಹಿತಿಗಳು, ಕಲಾವಿದರು, ಕನ್ನಡ ಪರಸಂಘಟನೆಗಳು ಭಾಗವಹಿಸಿದ್ದ ಈ ಸಭೆಯಲ್ಲಿ ಬೆಂಗಳೂರು ದೂರದರ್ಶನವು ಉರ್ದು ವಾರ್ತಾ ಪ್ರಸಾರವನ್ನು ರದ್ದು ಮಾಡಲಾಗಿದೆ ಎಂದು ಸ್ಪಷ್ಟವಾಗಿ ಪ್ರಕಟಿಸದಿರುವ ಕಾರಣ ಚಳುವಳಿಯನ್ನು ಮುಂದುವರೆಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಡಾ. ಚಿದಾನಂದ ಮೂರ್ತಿ, ಗೊ.ರು. ಚನ್ನಬಸಪ್ಪ, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಡಾ. ಶಿವರುದ್ರಪ್ಪ, ಡಾ. ಸಾ.ಶಿ. ಮರುಳಯ್ಯ, ಎಚ್.ಎಸ್. ದೊರೆಸ್ವಾಮಿ, ಕಲಾವಿದರಾದ ಅಶ್ವತ್ಥ್, ಚಿತ್ರಸಾಹಿತಿ ಹಂಸಲೇಖ, ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ವಕೀಲ ಸಿ.ಹೆಚ್. ಹನುಮಂತರಾಯ ಮುಂತಾದವರು ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಜಾನಪದ ಪ್ರಶಸ್ತಿ ತಿರಸ್ಕರಿಸಿದ ಗೊ.ರು.ಚ.

ಬೆಂಗಳೂರು ದೂರದರ್ಶನ ಕೇಂದ್ರದಿಂದ ಉರ್ದುವಾರ್ತೆಯ ಪ್ರಸಾರಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿರುವುದನ್ನು ಪ್ರತಿಭಟಿಸಿ ಜಾನಪದ ಪ್ರಶಸ್ತಿಯನ್ನು ತಿರಸ್ಕರಿಸುವುದಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಪ್ರಕಟಿಸಿದರು.

ಚಿತ್ರರಂಗದ ಆಗ್ರಹ

ಯಾವ ಕಾರಣಕ್ಕೂ ಯಾವುದೇ ಕಾಲದಲ್ಲಿ ಬೆಂಗಳೂರು ದೂರದರ್ಶನದಿಂದ ಉರ್ದು ವಾರ್ತೆಯನ್ನು ಪ್ರಸಾರ ಮಾಡಕೂಡದು ಎಂದು ಡಾ. ರಾಜಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿ, ಕನ್ನಡ ನಿರ್ಮಾಪಕರ ಸಂಘ, ಕನ್ನಡ ಚಲನಚಿತ್ರ ಕಲಾವಿದರ ಸಂಘ ಹಾಗೂ ಕನ್ನಡ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು.

ಉರ್ದು ವಾರ್ತೆ ಪ್ರಸಾರ ಸ್ಥಗಿತ

ಇಷ್ಟೆಲ್ಲಾ ಅನಾಹುತ, ಹಿಂಸಾಚಾರ, ಪ್ರಾಣಹಾನಿಗಳುಂಟಾದ ಮೇಲೆ ಕೇಂದ್ರ ವಾರ್ತಾ ಪ್ರಸಾರ ಖಾತೆಯ ಆದೇಶದಂತೆ ಬೆಂಗಳೂರು ದೂರದರ್ಶನ ಕೇಂದ್ರವು ಭಾನುವಾರದಿಂದ ಉರ್ದು ವಾರ್ತಾಪ್ರಸಾರವನ್ನು ಸ್ಥಗಿತಗೊಳಿಸಿತು. ಹಾಗಾಗಿ ಅಕ್ಟೋಬರ್ ೨ ರಂದು ಗಾಂಧೀ ಜಯಂತಿಯ ದಿನವಾದ ಆರಂಭಗೊಂಡ ಉರ್ದುವಾರ್ತೆ, ಒಂದು ವಾರ ಗಲಭೆ, ದೊಂಬಿ, ಪ್ರಾಣಾಹುತಿಗಳಿಗೆ ಕಾರಣವಾಗಿ, ೯ ನೇ ದಿನಾಂಕದಿಂದ ನಿಲ್ಲುವುದರೊಂದಿಗೆ, ಅದರ ವಿರುದ್ಧ ಚಳುವಳಿಯೂ ನಿಲುಗಡೆಯಾಯಿತು.

ಸ್ಥಗಿತಕ್ಕೆ ಕೊಟ್ಟ ಕಾರಣ: ತಾಂತ್ರಿಕ ಕಾರಣ

ಪ್ರಧಾನ ಮಂತ್ರಿಯವರ ಸಚಿವಾಲಯದೊಂದಿಗೆ ಸಮಾಲೋಚನೆ ನಡೆಸಿದ ನಂತರ ವಾರ್ತಾ ಮತ್ತು ಪ್ರಸಾರ ಇಲಾಖೆ ಉರ್ದು ವಾರ್ತಾಪ್ರಸಾರದ ಬಗ್ಗೆ ಅಂತಿಮ ತೀರ್ಮಾನವನ್ನು ಕೈಗೊಳ್ಳುವುದಾಗಿಯೂ ತಿಳಿಸಿತು.

ಚಳುವಳಿಗೆ ದಕ್ಕಿದ ಜಯ

ಬಹುಶಃ ಇದುವರೆಗೆ ನಡೆದ ಕನ್ನಡಪರ ಹೋರಾಟ - ಬೇಡಿಕೆಗಳಲ್ಲಿ ಉರ್ದು ವಾರ್ತಾ ಪ್ರಸಾರದ ವಿರುದ್ಧ ನಡೆದಷ್ಟು ಭಾರೀ ಪ್ರಮಾಣದಲ್ಲಿ ಹಿಂಸಾಚಾರ, ಗಲಭೆ, ದೊಂಬಿ, ಪ್ರಾಣ ಹಾನಿಗಳು ಹಿಂದೆಂದೂ ಆಗಿರಲಿಲ್ಲವೆಂದು ಹೇಳಬಹುದು.

ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟ ಶಾಂತಿಯುತ ಹಾಗೂ ಅಹಿಂಸಾತ್ಮಕವಾಗಿ ನಡೆದಿದ್ದರೂ ಒಬ್ಬನೇ ಒಬ್ಬ ಕನ್ನಡ ಬಂಧು ರಂಜಾನ್ ಸಾಬ್‌ರವರು ಹುತಾತ್ಮರಾದರು.

ನಂತರ ಅಷ್ಟೇ ಮಹತ್ವ ಪಡೆದ ಗೋಕಾಕ್ ವರದಿ ಜಾರಿಗಾಗಿ ನಡೆದ ಹೋರಾಟದಲ್ಲಿ ಚಿತ್ರದುರ್ಗದಲ್ಲಿ ಇಬ್ಬರು ಬಲಿದಾನ ಮಾಡಬೇಕಾಯಿತು.

ಆದರೆ ಉರ್ದು ವಾರ್ತೆ ಪ್ರಸಾರದ ಸಂದರ್ಭದಲ್ಲಿ ಸುಮಾರು ೨೫ ಜನ ಪ್ರಾಣತ್ಯಾಗ ಮಾಡಬೇಕಾದ ಪ್ರಸಂಗ ಒದಗಿ ಬಂದಿದ್ದು ಅತ್ಯಂತ ದುಃಖಕರ ಪ್ರಸಂಗ. ಅಷ್ಟೇ ಅಲ್ಲದೆ ನೂರಾರು ಜನ ಗಾಯಗೊಂಡು, ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗುವಂತೆ ಆಗಿದ್ದು ನಿಜಕ್ಕೂ ಖೇದಕರ.

ಇದಕ್ಕೆಲ್ಲ ಅಧಿಕಾರ ಸ್ಥಾನದಲ್ಲಿದ್ದ ಒಬ್ಬ ಅಧಿಕಾರಿಯ ಅನಿಷ್ಟ ಕ್ರಮವೇ ಕಾರಣ. ಆತನ ಸತತ ಒತ್ತಡ ಒತ್ತಾಯಗಳೇ ಈ ಎಲ್ಲಾ ಅನಾಹುತಕ್ಕೆ ಮುಖ್ಯ ಕಾರಣವೆನ್ನುವುದು ದೂರದರ್ಶನ ವಾರ್ತಾ ವಿಭಾಗದ ಹಿರಿಯ ಅಧಿಕಾರಿಗಳ ಅಭಿಪ್ರಾಯ.

ಇಷ್ಟೆಲ್ಲ ರಾದ್ಧಾಂತವಾಗಿ, ಉರ್ದು ವಾರ್ತಾಪ್ರಸಾರ ನಿಲುಗಡೆಯಾಗಿದ್ದು ಚಳುವಳಿಗೆ ದೊರೆತ ಜಯ ಎನಿಸಿದರೂ, ಮೃತಪಟ್ಟವರ, ಗಾಯಗೊಂಡವರ, ಆಸ್ತಿ ಪಾಸ್ತಿ ಹಾನಿಗೊಳಪಟ್ಟ ಅಮಾಯಕರನ್ನು ನೆನೆದರೆ ಸಂಕಟವಾಗುತ್ತದೆ. ಯಾರ ತಪ್ಪಿಗೆ ಯಾರ ಹೊಣೆ? ಇನ್ನೂ ಮೇಲಾದರೂ ಅಧಿಕಾರಿಗಳು ನಿರ್ಣಯ ತೆಗೆದುಕೊಳ್ಳುವಾಗ ವಿವೇಚನೆಯಿಂದ ನಡೆಯುವರೆಂದು ಆಶಿಸೋಣ.

ಮಡಿದವರ ಆತ್ಮಕ್ಕೆ ಶಾಂತಿ ಕೋರೋಣ, ನೊಂದವರಿಗೆ ಸಾಂತ್ವನ ಹೇಳೋಣ.

❑

ಚರ್ಚುಗಳಲ್ಲಿ ಕನ್ನಡ ಪೂಜಾ ವಿಧಿಗಾಗಿ ಆಗ್ರಹಿಸಿ ಕನ್ನಡ ಕ್ರೈಸ್ತರ ಹೋರಾಟ

ಕನ್ನಡಿಗರಿಗೆ ಉದ್ಯೋಗ, ಕನ್ನಡ ಕಲಿಕೆಗಾಗಿ ಒತ್ತಾಯಗಳಂತೆಯೇ ಚರ್ಚುಗಳಲ್ಲಿ ಕನ್ನಡ ಪೂಜಾವಿಧಿಗಳಿಗಾಗಿ ಪ್ರಾರ್ಥನೆಗಾಗಿ ಹೋರಾಟ ಮಾಡಬೇಕಾಗಿ ಬಂದಿರುವುದರಿಂದ ರಾಜ್ಯದಲ್ಲಿ ಪರಭಾಷೀಯ ಆಕ್ರಮಣ ಶೀಲತೆ ಎಷ್ಟಿದೆಯೆಂಬುದು ವೇದ್ಯವಾಗುತ್ತದೆ.

ಭಾರತದ ಎಲ್ಲ ರಾಜ್ಯಗಳಲ್ಲಿ, ಚರ್ಚುಗಳಲ್ಲಿ, ಆಯಾ ಪ್ರಾಂತೀಯ ಭಾಷೆಗಳಲ್ಲಿಯೇ ಪೂಜೆಗಳು, ಪ್ರಾರ್ಥನೆಗಳು ನಡೆದರೆ, ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕನ್ನಡದಲ್ಲಿ ನಡೆಸಲು ಕನ್ನಡ ಕ್ರೈಸ್ತರು ಹೋರಾಟ ಮಾಡಬೇಕಾಗಿ ಬಂದುದು ಆಶ್ಚರ್ಯವಾದರೂ ಸತ್ಯವೇ ಆಗಿದೆ.

ಚರ್ಚುಗಳಲ್ಲಿ ಕನ್ನಡದ ಬಳಕೆಗಾಗಿ ಪ್ರಾಧಾನ್ಯತೆಗಾಗಿ ಆಗ್ರಹಿಸಿ ಕನ್ನಡ ಕ್ರೈಸ್ತರು ಹೋರಾಟ ನಡೆಸಲು 'ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ' ಎಂಬ ಹೆಸರಿನಲ್ಲಿ ಒಂದು ಸಂಘಟನೆಯನ್ನೇ ಸ್ಥಾಪಿಸಬೇಕಾಯಿತು.

ಜೆ.ಆರ್. ಪೆರೇರಾ, ರಫಾಯಲ್, ಜಾಕೋಬ್ ಫ್ರಾನ್ಸಿಸ್, ಎ. ಪೀಟರ್ ಅಂತೋಣಿರಾಜ್, ಬೌರಾರೆಡ್ಡಿ, ಗೇಬ್ರಿಯಲ್, ಅಗೇರ್ ಮುಂತಾದವರು ತೀವ್ರವಾದ ಹೋರಾಟವನ್ನು ನಡೆಸಿ, ಕನ್ನಡ ಸಂಘಸಂಸ್ಥೆಗಳ ಸಹಕಾರ ಹಾಗೂ ಸಹಯೋಗದೊಂದಿಗೆ ನಾನಾ ರೀತಿಯ ಪ್ರತಿಭಟನೆ, ಧರಣಿಗಳನ್ನು ನಡೆಸಿ ತಮ್ಮ ಹೋರಾಟಗಳನ್ನು ನಡೆಸಿದರು.

ಈ ಹೋರಾಟದ ಪ್ರತಿಫಲವಾಗಿ ಪೋಪ್ ಜಗದ್ಗುರುಗಳು ಬಿಷಪ್ ಹೆನ್ರಿ ಡಿಸೋಜರ ನೇತೃತ್ವದಲ್ಲಿ ಮೂರು ಜನರ ಆಯೋಗವನ್ನು ರಚಿಸಿ ಕನ್ನಡಿಗರ ಸಮಸ್ಯೆಯನ್ನು ಅಧ್ಯಯನ ಮಾಡಿ ವರದಿಯನ್ನು ನೀಡಲು ತಿಳಿಸಿದರು. ಅದರಂತೆ ಆಯೋಗವು ೧೯೮೮ರಲ್ಲಿ ಬೆಂಗಳೂರಿಗೆ ಬಂದು ಕನ್ನಡ ಕ್ರೈಸ್ತರ ಹಾಗೂ ಸಾಹಿತಿಗಳ ಹೇಳಿಕೆಯನ್ನು ಸ್ವೀಕರಿಸಿ ೧೯೮೭ರ ಡಿಸೆಂಬರ್‌ನಲ್ಲಿ ಒಂದು ವರದಿಯನ್ನು ಪೋಪರಿಗೆ ನೀಡಿದರು.

ಈ ವರದಿಯ ಆಧಾರದ ಮೇಲೆ ಕನ್ನಡಕ್ಕೆ ಪ್ರಾಧಾನ್ಯತೆಯನ್ನು ನೀಡುವ ಆದೇಶ ನೀಡಲಾಯಿತಾದರೂ ಅದು ಜಾರಿಗೆ ಬರಲಿಲ್ಲ.

ಈ ದಿಸೆಯಲ್ಲಿ ಸಂಘವು ಅನೇಕ ರೀತಿಯ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಚರ್ಚ್ ವ್ಯಾಪ್ತಿಯ ಶಾಲಾ ಕಾಲೇಜುಗಳಲ್ಲಿ, ಅನಾಥಾಲಯಗಳಲ್ಲಿ, ತರಬೇತಿ ಮಂದಿರಗಳಲ್ಲಿ, ದೇವಾಲಯಗಳಲ್ಲಿ ಕನ್ನಡಿಗರಿಗೂ ಸ್ಥಾನ ಕಲ್ಪಿಸಿ, ಉದ್ಯೋಗ ಕೊಡಿ ಎಂಬುದು ಕನ್ನಡ ಕ್ರೈಸ್ತರ ಪ್ರಮುಖ ಬೇಡಿಕೆ.

ಅವರ ಈ ಹೋರಾಟದಲ್ಲಿ ಕನ್ನಡ ಸಂಘಗಳು ಮತ್ತು ಕನ್ನಡ ಹೋರಾಟಗಾರರು, ಸಾಹಿತಿಗಳು ಸಂಪೂರ್ಣ ಬೆಂಬಲ ವ್ಯಕ್ತ ಪಡಿಸಿ ಅವರೊಂದಿಗೆ ಕೈಜೋಡಿಸುತ್ತಿದ್ದಾರೆ.

❑

ರೇಡಿಯೋ ಸಿಟಿಯಲ್ಲಿ ಕನ್ನಡ ಕಾರ್ಯಕ್ರಮಕ್ಕೆ ಒತ್ತಾಯ

೨೦೦೧ರ ಮಧ್ಯದಲ್ಲಿ ಬೆಂಗಳೂರಿನಲ್ಲಿ ರೇಡಿಯೋ ಸಿಟಿ ತನ್ನ ಕಾರ್ಯಕ್ರಮಗಳನ್ನು ಬಿತ್ತರಿಸತೊಡಗಿತು. ಹಿಂದಿ ಮತ್ತು ಇಂಗ್ಲೀಷ್ ಕಾರ್ಯಕ್ರಮಗಳ ಮಧ್ಯೆ ಜಾಹೀರಾತುಗಳನ್ನೇ ಪ್ರಧಾನವಾಗಿ ಬಿತ್ತರಿಸುತ್ತಿದ್ದು ಕನ್ನಡ ಕಾರ್ಯಕ್ರಮಗಳಿಗೆ ಅವಕಾಶವೇ ಇರಲಿಲ್ಲ.

ಹೀಗಾಗಿ ಕನ್ನಡ ಕಾರ್ಯಕ್ರಮಗಳಿಗೆ ಒತ್ತಾಯ ಮಾಡಲು, ಹೋರಾಟ, ಪ್ರತಿಭಟನೆಗಳನ್ನು ನಡೆಸಲೇಬೇಕಾದ ಅನಿವಾರ್ಯ ಪ್ರಸಂಗ ಒದಗಿ ಬಂದಿತು.

ಈ ದಿಸೆಯಲ್ಲಿ ಸ್ವಾಭಿಮಾನಿ ಕರ್ನಾಟಕ ವೇದಿಕೆ ೯.೯.೨೦೦೧ರಲ್ಲಿ ರೇಡಿಯೋ ಸಿಟಿ ಕೇಂದ್ರದ ಮುಂದೆ ಪ್ರತಿಭಟನೆಯನ್ನು ನಡೆಸಿತು.

ಮಾಜಿ ಸಚಿವೆ ಬಿ.ಟಿ. ಲಲಿತನಾಯಕ್ ಹಾಗೂ ವೇದಿಕೆಯ ಸಂಚಾಲಕ ಪ್ರೊ. ಚಂದ್ರಶೇಖರ ಪಾಟೀಲರು ಮಾತನಾಡಿ ಕನ್ನಡ ಕಾರ್ಯಕ್ರಮಗಳಿಗೆ ಆಗ್ರಹಿಸಿ ರೇಡಿಯೋ ಸಿಟಿ ತನ್ನ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ, ಕನ್ನಡವಿರೋಧಿ ನಿಲುವು ಬದಲಿಸದಿದ್ದರೆ, ಹೋರಾಟವನ್ನು ತೀವ್ರಗೊಳಿಸ ಬೇಕಾಗುತ್ತದೆಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ತುಮಕೂರು ಜಿಲ್ಲಾ ಶಕ್ತಿ ಕೇಂದ್ರದ ಅಧ್ಯಕ್ಷ ಹ.ಬ. ಮಹದೇವಪ್ಪ, ಚಾಮರಾಜನಗರ ಜಿಲ್ಲಾ ಕನ್ನಡ ಕ್ರಿಯಾ ಸಮಿತಿಯ ಶಾ. ಮುರಳಿ, ವೇದಿಕೆಯ ಕಾರ್ಯಕರ್ತರಾದ ಗೋವಿಂದಹಳ್ಳಿ ದೇವೇಗೌಡ, ಜರಗನಹಳ್ಳಿ ಶಿವಶಂಕರ್, ಡಾ. ದೊಡ್ಡ ಮನೆ ಅಶೋಕ್, ರಾ.ನಂ. ಚಂದ್ರಶೇಖರ್, ನಳಿನಿ, ಮಹದೇವಸ್ವಾಮಿ, ರಮಾದೇವಿ ವಿಶ್ವೇಶ್ವರಯ್ಯ, ವ.ಚ. ಚನ್ನೇಗೌಡ, ರಫಾಯಲ್ ರಾಜ್ ಮತ್ತಿತರರು ಭಾಗವಹಿಸಿದ್ದರು.

ಈ ಹೋರಾಟದ ಫಲವಾಗಿ ರೇಡಿಯೋ ಸಿಟಿಯಲ್ಲಿ ಕೆಲವು ಗಂಟೆಗಳ ಕನ್ನಡ ಪ್ರಸಾರವೂ ಆಗಲು ಪ್ರಾರಂಭವಾಗಿದೆ.

❑

'ಕೊಡಗು ಪ್ರತ್ಯೇಕ ರಾಜ್ಯ ಚಳುವಳಿ ವಿರುದ್ಧ ಪ್ರತಿ ಚಳುವಳಿ':

ಪ್ರಾದೇಶಿಕ ಅಸಮಾನತೆಯನ್ನು ನೆಪಮಾಡಿಕೊಂಡು ಕೊಡಗಿನ ಕೆಲವು ಶಕ್ತಿಗಳು ಪ್ರತ್ಯೇಕ ಕೊಡಗು ರಾಜ್ಯಕ್ಕೆ ಹೋರಾಟ ಆರಂಭಮಾಡಿದರು. ಇದಕ್ಕಿದ್ದ ಬಹು ಮುಖ್ಯ ಕಾರಣ, ಕೊಡವರ ವಿಶಿಷ್ಟ ಸಂಸ್ಕೃತಿಯನ್ನು ನಾಶಮಾಡುವ ಸಂಚು ಹೂಡಲಾಗಿದೆ ಎಂಬುದು.

೧೯೯೭ರ ಡಿಸಂಬರ್‌ನಲ್ಲಿ 'ಕೊಡಗು ಬಂದ್'ಗೆ ಕರೆ ನೀಡುವ ಮೂಲಕ ಈ ಹೋರಾಟವನ್ನು ಆರಂಭಿಸಿದಾಗ, ಅಲ್ಲಿಯ ಜನತೆ ಎಚ್ಚೆತ್ತು, ಕೊಡಗು ಪ್ರಜಾವೇದಿಕೆಯನ್ನು ಸ್ಥಾಪಿಸಿಕೊಂಡು ಪ್ರತ್ಯೇಕತೆಯ ವಿರುದ್ಧ ಜನಾಭಿಪ್ರಾಯವನ್ನು ಮೂಡಿಸಿದರು. ೧೯೯೮ರ ನವಂಬರ್ ೨೩ರಂದು ಸೋಮವಾರ ಪೇಟೆಯಲ್ಲಿ ಬೃಹತ್ ಸಮಾವೇಶ ನಡೆದು ಎಂ. ಚಿದಾನಂದಮೂರ್ತಿ, ಎಲ್.ಎಸ್. ಶೇಷಗಿರಿ ರಾವ್, ಗೊ.ರು. ಚನ್ನಬಸಪ್ಪ, ಜಾಣಗೆರೆ ವೆಂಕಟರಾಮಯ್ಯ, ಪ್ರಭಾಕರ ರೆಡ್ಡಿ ಹಾಗೂ ಕೊಡಗಿನಿಂದ ಆಯ್ಕೆಯಾಗಿದ್ದ ಜನತಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಭೆಯ ಪೂರ್ವಭಾವಿ ಸಭೆಯಲ್ಲಿ ಕನ್ನಡ ಶಕ್ತಿ ಕೇಂದ್ರದ ಡಾ. ಚಿದಾನಂದ ಮೂರ್ತಿ, ರಾ.ನಂ. ಚಂದ್ರಶೇಖರ್, ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿಯ ಸಿದ್ದಯ್ಯ ಮುಂತಾದವರು ಭಾಗವಹಿಸಿದ್ದರು.

ಕೊಡಗು ಪ್ರಜಾವೇದಿಕೆಯ ಪ್ರತಿನಿಧಿಗಳು ಬೆಂಗಳೂರಿಗೆ ಜಾತಾ ಬಂದು ಕನ್ನಡ ಶಕ್ತಿ ಕೇಂದ್ರವು ಏರ್ಪಡಿಸಿದ್ದ ಸಭೆಯಲ್ಲಿ ಭಾಗವಹಿಸಿ ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದರು.

ಮೇ ೨೧, ೧೯೯೯ ರಂದು ಮತ್ತೊಂದು ಸಮಾವೇಶ ಮಡಿಕೇರಿಯಲ್ಲಿ ಜರುಗಿತು. ಈ ಎಲ್ಲ ಘಟನೆಗಳ ಪರಿಣಾಮ, ಪ್ರತ್ಯೇಕತೆಯ ಧ್ವನಿ ಕಡಮೆಯಾಗ ತೊಡಗಿದ್ದರೂ ಪೂರ್ಣವಾಗಿ ಅಡಗಿಲ್ಲ. ಅಖಂಡ ಕರ್ನಾಟಕದ ಬಗೆಗೆ ಜನ ಜಾಗೃತಿಯ ಕೆಲಸ ಇನ್ನೂ ನಡೆಯಬೇಕಾಗಿದೆ.

❑

ಕನ್ನಡದ ಇನ್ನಿತರ ಹೋರಾಟಗಳು

ಅರವತ್ತರ ದಶಕದಲ್ಲಿ ಕನ್ನಡಿಗರ ಸಮಸ್ಯೆಗಳ ಪರಿಹಾರಕ್ಕಾಗಿ ಚಳುವಳಿ ರೂಪದಲ್ಲಿ ಆರಂಭಗೊಂಡ ಪ್ರತಿಭಟನೆಗಳು ನಾನಾ ಕಾರಣಗಳಿಗಾಗಿ ನಾನಾ ರೂಪಗಳಲ್ಲಿ ಹರಡಿಕೊಂಡಿದ್ದನ್ನು ಗಮನಿಸಿದ್ದೇವೆ. ಆ ಹೋರಾಟಗಳಲ್ಲಿ ಕೆಲವಕ್ಕೆ ಜಯ ದೊರಕಿದರೂ ಇನ್ನೂ ಕೆಲವು ಸಮಸ್ಯೆಗಳು ಬಗೆ ಹರಿಯದೆ ಕಗ್ಗಂಟಾಗಿಯೇ ಉಳಿದೇ ಹೋಗಿವೆ. ಆದರೆ ಮತ್ತೆ ಮತ್ತೆ ಕೆಲ ಸಮಸ್ಯೆಗಳು ಉದ್ಭವವಾಗಿ ಅವುಗಳಿಗೆ ಹೋರಾಟ ನಡೆಸುವ ಅನಿವಾರ್ಯ ಸಂದರ್ಭಗಳು ತಲೆದೋರಿವೆ.

ಅವುಗಳಲ್ಲಿ ಪ್ರಮುಖವಾದುವೆಂದರೆ:

ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಜಾರಿಗೊಳಿಸುವುದು, ನಗರದ ಪತ್ರಿಕಾ ಸಮೂಹವೊಂದು ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕನ್ನಡ ಕಲಾವಿದರಿಗೆ ಪ್ರಾಧಾನ್ಯತೆಗಾಗಿ ಒತ್ತಾಯ, ಹೆಸರುಘಟ್ಟದ ನೃತ್ಯಗ್ರಾಮದಲ್ಲಿ ನಡೆಯುವ ವಸಂತ ಹಬ್ಬದಲ್ಲಿ ಕನ್ನಡ ಕಲಾವಿದರಿಗೆ ಅವಕಾಶವಿಲ್ಲದಿರುವುದು, ಪರಭಾಷಿಗರ ಪ್ರತಿಮೆ ಸ್ಥಾಪನೆ - ನಗರದ ರಸ್ತೆ ಹಾಗೂ ಬಡಾವಣೆಗಳಿಗೆ ಅವರ ಹೆಸರನ್ನಿಡುವುದರ ವಿರುದ್ಧ, ರೈಲ್ವೆ ನೈರುತ್ಯ ವಲಯಕ್ಕೆ ಒತ್ತಾಯ, ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒತ್ತಾಯ, ಜಪಾನ್ ಉದ್ಯಮ ವಿರೋಧಿ ಹೋರಾಟ, ಅಂಚೆ ತಂತಿ ವಿಭಾಗದಲ್ಲಿ, ರೈಲ್ವೆ ಇಲಾಖೆಯಲ್ಲಿ, ಅಕೌಂಟೆಂಟ್ ಜನರಲ್ ಕಛೇರಿಯಲ್ಲಿ ಹಾಗೂ ಬ್ಯಾಂಕುಗಳಲ್ಲಿ, ನಬಾರ್ಡ್ ಕಛೇರಿಯಲ್ಲಿ ಸ್ಥಳೀಯರನ್ನು ನಿರ್ಲಕ್ಷಿಸಿ ಅನ್ಯಭಾಷೆಯವರಿಗೆ ಅವಕಾಶ ನೀಡಿದ್ದಕ್ಕೆ ಪ್ರತಿಭಟನೆ ಹೀಗೆ ಒಂದೇ ಎರಡೇ? ಕನ್ನಡ ನಾಡಿನಲ್ಲಿ, ಕನ್ನಡಿಗರಿಗೆ, ಕನ್ನಡಕ್ಕೆ ಅವಕಾಶಕ್ಕಾಗಿ ಒತ್ತಾಯಿಸುವುದು, ಗೋಗರೆದುಕೊಳ್ಳುವುದು; ಬಹುಶಃ ದೇಶದ ಯಾವುದೇ ಒಂದು ಪ್ರಾಂತ್ಯದಲ್ಲಿಯೂ ಇಂತಹ ವಿಷಾದನೀಯ ಸಂದರ್ಭ ಬಂದಿರಲಿಕ್ಕೆ ಸಾಧ್ಯವೇ ಇಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಹಾಗೂ ಉಚ್ಚ ನ್ಯಾಯಾಲಯಕ್ಕಾಗಿ ಬೇಡಿಕೆ, ಪ್ರಾದೇಶಿಕ ಅಸಮತೋಲನದ ನಿವಾರಣೆಗಾಗಿ ಆಗ್ರಹ ಇವು ಹೋರಾಟದ ಇನ್ನಷ್ಟು ಮಜಲುಗಳು.

ಇದಕ್ಕೆ ಕಾರಣವೆಂದರೆ ಕನ್ನಡ ನಾಯಕರ, ಕನ್ನಡಿಗರ ನಿರಾಸಕ್ತಿ, ಭಾಷಾನಿರಭಿಮಾನ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ಪರಭಾಷಿಗರ ಪ್ರಾಬಲ್ಯವೇ ಹೆಚ್ಚಾಗಿರುವುದು. □



ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಬಿಟ್ಟುದನ್ನು ವಿರೋಧಿಸಿ
ಶ್ರೀರಾಮಪುರದಲ್ಲಿ ಮ. ರಾಮಮೂರ್ತಿ ಕನ್ನಡ ಬಳಗದವರಿಂದ ಹೋರಾಟ



ಸರೋಜಿನಿ ಮಹಿಷಿ ವರದಿ ಜಾರಿಗಾಗಿ ಹೋರಾಟದಲ್ಲಿ ಕನ್ನಡ ಚಳುವಳಿಗಾರರು ಮತ್ತು
ಕಾಳಿಂಗರಾಯರ ಬಳಗದ ಸದಸ್ಯರು



ಕಾವೇರಿ ನೀರು ಹಂಚಿಕೆ ವಿರುದ್ಧ ಬೆಂಗಳೂರಿನಿಂದ ಮೈಸೂರಿಗೆ ಜಾಥಾ
"ಜ್ಯೋತಿ" ಮೆರವಣಿಗೆ - ಮಂಡ್ಯದ ಆತ್ಮಾನಂದರವರಿಂದ ಸ್ವಾಗತ.



ಕಾವೇರಿಗಾಗಿ ಹೋರಾಟ ದೊಡ್ಡಬಳ್ಳಾಪುರದಲ್ಲಿ



ಮಹಾರಾಷ್ಟ್ರ ಸರ್ಕಾರದ ಭೂತದಹನ
ಕನ್ನಡ ಚಳುವಳಿಗಾರರಿಂದ ಮೈಸೂರು ಟೌನ್‌ಹಾಲ್‌ನ ಬಳಿ



ನ್ಯಾರೋಗೇಜ್ ರೈಲನ್ನು ರದ್ದುಪಡಿಸುವುದರ ವಿರುದ್ಧ ಮಾಲೂರು ರೈಲ್ವೆ
ಸ್ಟೇಷನ್ ಬಳಿ ಕನ್ನಡ ಚಳುವಳಿಗಾರರಿಂದ ಪ್ರದರ್ಶನ

ನಾಡಗೀತೆ

೧೯೨೪ರ ಡಿಸೆಂಬರ್‌ನಲ್ಲಿ ಬೆಳಗಾಂ ನಗರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ. ಅಧ್ಯಕ್ಷರಾಗಿದ್ದವರು - ಮಹಾತ್ಮಾಗಾಂಧಿ. ಅಂದು ಹಾಡಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಕವನವು ಕನ್ನಡಿಗರೆಲ್ಲ ಒಂದಾಗಬೇಕು, ಕನ್ನಡ ಪ್ರದೇಶಗಳೆಲ್ಲ ಒಂದುಗೂಡಬೇಕು ಎಂಬ ಕನ್ನಡ ಜನತೆಯ ಮನದಾಳದ ಆಸೆಯನ್ನು ಪ್ರತಿಬಿಂಬಿಸಿದ ಹುಯಿಲಗೋಳ ನಾರಾಯಣ ರಾಯರ ರಚನೆ. ಆ ಅಧಿವೇಶನದಲ್ಲಿ ಈ ಕವನವನ್ನು ಕನ್ನಡನಾಡಿನ ನಾಡಗೀತೆಯೆಂದು ಅಂಗೀಕರಿಸಲಾಗಿತ್ತು. ಅಂದಿನಿಂದ ಈ ಗೀತೆಯನ್ನು ಸಾರ್ವಜನಿಕ ಸಮಾರಂಭಗಳಲ್ಲಿ ಹೇಳುವ ವಾಡಿಕೆಯಿತ್ತು.

೧೯೫೬, ನವಂಬರ್ ಒಂದರಂದು "ವಿಶಾಲ ಮೈಸೂರು ರಾಜ್ಯ"ವಾದರೂ ಹುಯಿಲಗೋಳ ನಾರಾಯಣರಾಯರು ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂದೇ ಹೇಳಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

(೧೪.೬.೧೯೬೦ರ ಸಂಯುಕ್ತ ಕರ್ನಾಟಕದಲ್ಲಿ ಅವರ ಪತ್ರ)

ರಾಷ್ಟ್ರಕವಿ ಕುವೆಂಪುರವರು ೧೯೨೪ರಲ್ಲಿ ರಚಿಸಿದ್ದ "ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ" ಕವನವನ್ನೂ ಸಭೆ ಸಮಾರಂಭಗಳಲ್ಲಿ ಹೇಳುವ ವಾಡಿಕೆ ಇತ್ತು.

೨೦೦೩, ಡಿಸೆಂಬರ್ ೨೩ ರಿಂದ ಆರಂಭವಾದ ಕುವೆಂಪು ಜನ್ಮ ಶತಮಾನೋತ್ಸವದ ಆಚರಣೆಯ ಅಂಗವಾಗಿ ಈ ಗೀತೆಯನ್ನು ನಾಡಗೀತೆಯಾಗಿ ರಾಜ್ಯ ಸರ್ಕಾರದ ಸಚಿವ ಸಂಪುಟ ಸಭೆಯು ಅಂಗೀಕರಿಸಿತು.

ಈ ಕವನವು ೧೯೨೪, ಡಿಸೆಂಬರ್ ೭ ರಂದು ರಚಿತವಾಗಿ, ೧೯೩೦ರಲ್ಲಿ "ಕೊಳಲು" ಕವನ ಸಂಕಲನದಲ್ಲಿ ಪ್ರಕಟಿತವಾಗಿತ್ತು. ಮೈಸೂರಿನ ಉದಯ ರವಿ ಪ್ರಕಾಶನ ಹೊರತಂದಿತ್ತು.

ಸರ್ಕಾರ ಈ ಕವನವನ್ನು ನಾಡಗೀತೆಯಾಗಿ ಸ್ವೀಕರಿಸಿ ಪ್ರಕಟಣೆ ಹೊರಬಿದ್ದಾಗ, ಅದರಲ್ಲಿ ಮಧ್ವಾಚಾರ್ಯರ ಹೆಸರನ್ನು ಕೈ ಬಿಟ್ಟಿರುವುದನ್ನು ಒಂದು ಪ್ರಮಾದವೆಂದು ಮಧ್ವಮತದ ಪೀಠಾಧಿಪತಿಗಳು ಹಾಗೂ ಅನುಯಾಯಿಗಳು ಆಕ್ಷೇಪಣೆ ಮಾಡಿದರು.

ಈ ಜಿಜ್ಞಾಸೆ ನಡೆಯುತ್ತಿರುವಾಗಲೇ, ರಾಜ್ಯ ಸರ್ಕಾರ ಶಂಕರ ರಾಮಾನುಜ ಬಸವೇಶ್ವರರು ಇರುವ ಚರಣ ಹೊರತುಪಡಿಸಿ ಒಂದು ಪಲ್ಲವಿ, ಹಾಗೂ ಎರಡು ಚರಣಗಳನ್ನು ನಾಡಗೀತೆಯಾಗಿ ಮಾಡಿ, ೨೦೦೪, ಜನವರಿ ಏಳರಂದು ಆದೇಶವನ್ನು ಹೊರಡಿಸಿತು. ಹಾಗೂ "ಗೀತೆ ಹಾಡುವಾಗ ಎದ್ದು ನಿಂತು ಗೌರವ ಸಲ್ಲಿಸಬೇಕು, ಎಲ್ಲಾ ಶಾಲೆಗಳಲ್ಲಿ ದೈನಂದಿನ ಚಟುವಟಿಕೆಗಳು ಆರಂಭವಾಗುವ ಮುನ್ನ ಹಾಗೂ ಎಲ್ಲಾ ಸಾಂಸ್ಕೃತಿಕ ಹಾಗೂ ಇತರೆ ಅಧಿಕೃತ ಕಾರ್ಯಕ್ರಮಗಳಲ್ಲಿ ನಾಡಗೀತೆಯನ್ನು ಹಾಡಬೇಕು" ಎಂದು ಸ್ಪಷ್ಟಪಡಿಸಿತು.

'ಜಯಹೇ ಕರ್ನಾಟಕ ಮಾತೆ' ಪೂರ್ಣ ಪದ್ಯದಲ್ಲಿ ಪಲ್ಲವಿ ಐದು ಚರಣಗಳಿವೆ. ಹಾಗೂ ೪೪ ಸಾಲುಗಳಿವೆ. ಹಾಡಲು ಹಿಡಿಯುವ ಸಮಯದ ದೃಷ್ಟಿಯಿಂದ ಗೀತೆಯ ಚರಣಗಳನ್ನು ಕಡಿತಗೊಳಿಸಿ ೨೩ ಸಾಲುಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆಯೆಂದು ಸ್ಪಷ್ಟೀಕರಣ ನೀಡಲಾಯಿತು.

ಕುವೆಂಪು ಅವರ ನಾಡಗೀತೆಗೆ ತಂದ ತಿದ್ದುಪಡಿ ಅವರ ಅಭಿಮಾನಿಗಳಲ್ಲಿ ನೋವನ್ನುಂಟುಮಾಡಿತು. "ಮಹತ್ವದ ಕವಿಯೊಬ್ಬರ ಗೀತೆಯನ್ನು ಎಡಿಟ್ ಮಾಡೋದೆ ಅಪಚಾರ", "ಭಾರತೀಯ ಮತ್ತು ಕರ್ನಾಟಕ ಪರಂಪರೆಯ ಎಲ್ಲ ಶ್ರೇಷ್ಠ ವ್ಯಕ್ತಿಗಳ ಹೆಸರನ್ನೇ ತೆಗೆದಿರುವುದು ಸೂಕ್ತವಲ್ಲ, ವಿವೇಚನಾಯುತವಾದುದಲ್ಲ" ಎಂಬುದಾಗಿ ಹಲವರು ಅಭಿಪ್ರಾಯಪಟ್ಟರು.

ವಿಧಾನ ಸಭೆಯಲ್ಲಿಯೂ ಇದರ ಬಗ್ಗೆ ಟೀಕೆ ಟಿಪ್ಪಣಿಗಳಾದುವು.

ಸಮಾಜ ಸುಧಾರಕ ಬಸವಣ್ಣನವರ ಹೆಸರಿಲ್ಲದ ನಾಡಗೀತೆಯ ವಿರುದ್ಧ ವೀರಶೈವ ಮಹಾಸಭೆ ಅಸಮಾಧಾನವನ್ನು ವ್ಯಕ್ತಪಡಿಸಿತು. ಬಸವ, ಶಂಕರ, ರಾಮಾನುಜ, ರನ್ನ, ಪಂಪರ ಹೆಸರನ್ನು ಕೈ ಬಿಟ್ಟಿರುವ ನಾಡಗೀತೆಯಲ್ಲಿ ಏನು ಉಳಿದಿದೆ? ಎಂದು ಪ್ರಶ್ನಿಸಲಾಯಿತು.

ಕೃಷ್ಣಾ ಶರಾವತಿ, ತುಂಗೆ, ಕಾವೇರಿ ನದಿಗಳು, ಹಾಗೂ ರಾಘವ ಮಧುಸೂಧನ, ರನ್ನ, ಷಡಕ್ಷರಿ, ಪೊನ್ನ ಪಂಪ ಕವಿಗಳು, ಕಬೀರದಾಸರ ಹಾಗೂ ಹೊಯ್ಸಳ ಅರಸರ ಹೆಸರೂ ತೆಗೆದುಹಾಕಲಾಗಿದೆ. ಇವರೆಲ್ಲರ ಹೆಸರಿಲ್ಲದ ನಾಡಗೀತೆಯಲ್ಲಿ ಏನುಳಿದಿದೆ? ರಾಜ್ಯ ಸರ್ಕಾರ ನಾಡಗೀತೆಯನ್ನು ಸಂಪೂರ್ಣವಾಗಿ ಕೈಬಿಟ್ಟರೂ ಪರವಾಗಿಲ್ಲ, ಆದರೆ ಗೀತೆಯಲ್ಲಿನ ಮೇರುವ್ಯಕ್ತಿಗಳ ಹೆಸರನ್ನು ಕೈಬಿಡಲಾಗದು ಎಂದು ಜನತೆ ಅಭಿಪ್ರಾಯಪಟ್ಟಿತು.

ಜನರ ಈ ಎಲ್ಲಾ ಭಾವನೆಗಳಿಗೆ ಬೆಲೆ ಕೊಟ್ಟ ಸರ್ಕಾರ, ಕುವೆಂಪು ಅವರ "ವಿಚಾರ ಕ್ರಾಂತಿಗೆ ಆಹ್ವಾನ" ಕೃತಿಯಲ್ಲಿ ಮಧ್ವರ ಹೆಸರನ್ನು ಒಳಗೊಂಡಂತಿರುವ

"ಜೈ ಭಾರತ ಜನನಿಯ ತನುಜಾತೆ" ಗೀತೆಯನ್ನು 'ನಾಡಗೀತೆ' ಎಂದು ೨೯.೦೧.೨೦೦೪ರಂದು ನಡೆದ ಸಂಪುಟ ಸಭೆಯಲ್ಲಿ ಅಂಗೀಕರಿಸಿತು.

ನಾಡಗೀತೆ

ಜಯ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ
ಜಯ ಸುಂದರ ನದಿವನಗಳ ನಾಡೆ
ಜಯ ಹೇ ರಸಋಷಿಗಳ ಬೀಡೆ.

ಭೂದೇವಿಯ ಮಕುಟದ ನವಮಣಿಯೆ
ಗಂಧದ ಚಂದದ ಹೊನ್ನಿನ ಗಣಿಯೆ
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ.

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ

ಕುಮಾರವ್ಯಾಸರ ಮಂಗಳಧಾಮ
ಕವಿಕೋಗಿಲೆಗಳ ಪುಣ್ಯಾರಾಮ
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ.

ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರರಂಗ
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ.

❑

ಹೋರಾಟದಲ್ಲಿ ಭಾಗವಹಿಸಿದ ಕನ್ನಡ ಸಂಘಸಂಸ್ಥೆಗಳು

- ಕನ್ನಡ ಸಾಹಿತ್ಯ ಕುಟೀರ
- ನವಚೇತನ ಯುವಕ ಸಂಘ
- ಸಾಹಿತ್ಯ ಕಲಾ ಸಂಘ
- ಕನ್ನಡ ಕಲಾನಿಕೇತನ
- ಕನ್ನಡ ಸೇವಾ ಸಮಾಜ
- ಜೈ ಕರ್ನಾಟಕ ಕಲಾ ಸಂಘ
- ಕನ್ನಡ ಕಲಾ ಸಂಘ
- ಕನ್ನಡ ಹಿತರಕ್ಷಕ ಸಂಘ
- ಜೈ ಕರ್ನಾಟಕ ಮಿತ್ರ ಸೇವಾ ಸಂಘ
- ನೇತಾಜಿ ಮಿತ್ರ ಸಂಘ
- ಆಶಾ ಕಲಾವಿದರು
- ಕಲ್ಪನಾ ಕಲಾನಿಕೇತನ
- ಕನ್ನಡ ಮಿತ್ರ ಕೂಟ
- ಹೆಚ್.ಎಂ.ಟಿ. ಕರ್ನಾಟಕ ಸಂಘ
- ಲಾ ಕಾಲೇಜು ಸಂಘ
- ರಾಜಾಜಿನಗರದ ಕನ್ನಡ ಸಹೃದಯರ ಸಂಘ
- ರಾಮಚಂದ್ರಪುರದ ಕರ್ನಾಟಕ ಸಂಘ
- ಹುಳಿಯೂರು ಕನ್ನಡ ಸಂಘ
- ವಿಶ್ವೇಶ್ವರಪುರದ ಕನ್ನಡ ತರುಣರ ಸಂಘ
- ಮುನೇಶ್ವರ ಬ್ಲಾಕ್‌ನ ಕನ್ನಡ ಮಿತ್ರ ಮಂಡಳಿ
- ಸಾಹಿತಿ ಕಲಾವಿದರ ಬಳಗ
- ಕನ್ನಡ ಶಕ್ತಿ ಕೇಂದ್ರ

- ಕರ್ನಾಟಕ ವಿಕಾಸ ವೇದಿಕೆ
- ಕರ್ನಾಟಕ ರಾಜ್ಯ ರೈತಸಂಘ
- ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ
- ರಂಗಭೂಮಿ ಕ್ರಿಯಾ ಸಮಿತಿ
- ಅಖಿಲ ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡಸಂಘ
- ಎಚ್.ಎ.ಎಲ್. ಕರ್ನಾಟಕ ಸಂಘ
- ಮೈಕೋ ಕನ್ನಡ ಬಳಗ
- ಪುಲಿಕೇಶಿ ಕನ್ನಡ ಸಂಘ
- ಆರ್ಮ್ಕೋ ಕಾರ್ಮಿಕರ ಕನ್ನಡ ಕಲಾಸಂಘ
- ಎಚ್.ಎಂ.ಟಿ ಕನ್ನಡ ಸಂಪದ
- ಕನ್ನಡ ಶಕ್ತಿ ಕೇಂದ್ರ (ಮಹಿಳಾಘಟಕ)
- ಸ್ನೇಹಾ
- ಹಿಂದೀ ಸಾಮ್ರಾಜ್ಯಶಾಹಿ ವಿರೋಧಿ ಕ್ರಿಯಾ ಸಮಿತಿ
- ಕನ್ನಡ ನವಜ್ಯೋತಿ ಸಂಘ
- ಕರ್ನಾಟಕ ಸಂಸ್ಕೃತಿ ಪ್ರಚಾರ ಪರಿಷತ್ತು
- ಕನ್ನಡ ಗೆಳೆಯರ ಬಳಗ
- ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು
- ಉದಯಭಾನು ಕಲಾ ಸಂಘ
- ಕಾರ್ ಮೊಬೈಲ್ ಕಾರ್ಮಿಕರ ಕನ್ನಡ ಬಳಗ
- ಕನ್ನಡ ಶಕ್ತಿ ಕೇಂದ್ರ, ತುಮಕೂರು
- ಕರ್ನಾಟಕ ಜಾಗೃತಿ ಪರಿಷತ್, ದೊಡ್ಡ ಬಳ್ಳಾಪುರ
- ಕಾಳಿಂಗ ರಾಯರ ಬಳಗ
- ಕರ್ನಾಟಕ ಸಾಂಸ್ಕೃತಿಕ ವೇದಿಕೆ
- ಮೆಕಾನ್ ಕನ್ನಡ ಸಂಘ
- ಎಚ್.ಎ.ಎಲ್. ಕನ್ನಡ ಸಂಘ
- ವೀರರಾಣಿ ಕಿತ್ತೂರು ಚನ್ನಮ್ಮ ಕನ್ನಡ ಸಂಘ
- ಬಸವ ಕಲ್ಯಾಣ ಸಮಿತಿ
- ಬಿ.ಇ.ಎಂ. ಎಲ್. ಕನ್ನಡ ಸಂಘ

- ಎನ್.ಜಿ.ಇ.ಎಫ್. ಡಾ. ರಾಜಕುಮಾರ ಕನ್ನಡ ಸಂಘ
- ಅಂಚಿಲೆಕ್ಕ ಉಪನಿರ್ದೇಶಕರ ಕಛೇರಿ ಕನ್ನಡ ಸಂಘ
- ನ್ಯೂ ಇಂಡಿಯ ಅಶ್ಯೂರೆನ್ಸ್ ಕಂಪನಿ ಕನ್ನಡ ಸಂಘ
- ಅಖಿಲ ಕರ್ನಾಟಕ ರೈಲ್ವೆ ನೌಕರರ ಕನ್ನಡ ಸಂಘ
- ಟಾಟಾ ವಿದ್ಯುನ್ಮಾನ ಅಭಿವೃದ್ಧಿ ಸಂಸ್ಥೆಯ ಕನ್ನಡ ಸಂಘ
- ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಕನ್ನಡ ಸಂಘ
- ಮೈಸೂರು ರಸ್ತೆ ಕನ್ನಡ ಕ್ರಿಯಾ ಸಮಿತಿ.
- ಕವಿಕಾ ಕನ್ನಡ ಸಂಘ
- ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
- ಸ್ನೇಹಶ್ರೀ ಕನ್ನಡ ಸಂಘ
- ನೃಪತುಂಗ ಕನ್ನಡ ಯುವಕರ ಸಂಘ
- ಶ್ರೀ ಮಾರುತಿ ಕನ್ನಡಿಗರ ಸಂಘ
- ಕನ್ನಡ ನವಜ್ಯೋತಿ ಸಂಘ
- ಕಸ್ತೂರಿ ಕನ್ನಡ ಸಂಘ
- ಅಖಿಲ ಕರ್ನಾಟಕ ದಲಿತ ಕನ್ನಡಿಗರ ಮಹಾಸಂಘ
- ಯು.ಬಿ. ಮೆಕ್ ಕನ್ನಡ ಹಿತರಕ್ಷಣಾ ಸಂಘ
- ಕನ್ನಡ ಶಕ್ತಿ ಗೆಳೆಯರ ಬಳಗ
- ಬನಶಂಕರಿ ಯುವಕ ಸಂಘ
- ಶಿವನಗರ ಕನ್ನಡ ಅಭಿಮಾನಿಗಳ ಬಳಗ
- ರಾಮಮೂರ್ತಿ ಕನ್ನಡ ಬಳಗ
- ಕರ್ನಾಟಕ ಸಾಬೂನು ಕಾರ್ಖಾನೆ ಕನ್ನಡ ಅಭಿಮಾನಿಗಳ ಸಂಘ
- ಅಲಸೂರು ಜೋಗುಪಾಳ್ಯದ ಯುವಕ ಕನ್ನಡ ಸಂಘ
- ಮಹಾನಗರ ಪಾಲಿಕೆ ಕನ್ನಡ ಕಾರ್ಮಿಕರ ಹಿತರಕ್ಷಣಾ ಸಂಘ
- ಬಿ.ಎಚ್.ಇ.ಎಲ್. ಕನ್ನಡ ಹಿತರಕ್ಷಣಾ ಸಮಿತಿ
- ಭಾರತೀಯ ದೂರವಾಣಿ ಕಾರ್ಖಾನೆ ಕನ್ನಡ ಸಂಘ
- ಕನ್ನಡ ಸಂಘರ್ಷ ವೇದಿಕೆ
- ಎನ್.ಜಿ.ಎಫ್. ಕನ್ನಡ ಸಂಘ
- ಚಾಮರಾಜಪೇಟೆ ವರ್ತಕರ ಸಂಘ

- ಯಶವಂತಪುರದ ಗಜಾನನ ಕನ್ನಡ ಕಲಾಸಂಘ
- ಜಾಲಹಳ್ಳಿ ಕನ್ನಡ ಮಿತ್ರ ಸಂಘ
- ಗವೀಪುರದ ರಾಜ್ ಕುಮಾರ್ ಅಭಿಮಾನಿಗಳ ಸಂಘ
- ವಿಷ್ಣು ಅಭಿಮಾನಿಗಳ ಸಂಘ
- ಹೇಮ ಕಲಾರಂಗ
- ಸಮಾಜ ಸೇವಾ ಯುವಕರ ಸಂಘ
- ಕಾಕ್ಸ್ ಟಾನ್ ಕನ್ನಡ ಅಭಿಮಾನಿಗಳ ಸಂಘ
- ಖಾಸಗೀ ಕಾಲೇಜು ಭೋಧಕೇತರ ಸಿಬ್ಬಂದಿ ಸಂಘ
- ಉತ್ತರ ತಾಲ್ಲೂಕು ಯುವ ಜಾಗೃತಿ ಸಮಿತಿ
- ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
- ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘ
- ಕರ್ನಾಟಕ ಚಲನಚಿತ್ರ ನಿರ್ಮಾಣ ಕಾರ್ಮಿಕರ ಸಂಘ
- ರಿಸರ್ವ್ ಬ್ಯಾಂಕ್ ಕನ್ನಡ ಸಂಘ
- ಹೆಚ್.ಎಂ.ಟಿ. ಕರ್ನಾಟಕ ಸಂಘ
- ಭಾರತೀಯ ಸ್ಟೇಟ್ ಬ್ಯಾಂಕ್ ಸಿಬ್ಬಂದಿ ಸಂಘ
- ಬಿ.ಹೆಚ್.ಇ.ಎಲ್. ಕನ್ನಡ ಸಾಂಸ್ಕೃತಿಕ ಸಂಘ
- ಬಿ.ಇ.ಎಂ.ಎಲ್. ರೈಲ್ ಕೋಚ್ ವಿಭಾಗದ ಕನ್ನಡ ಸಂಘ
- ಕರ್ನಾಟಕ ಮಿತ್ರ ಮಂಡಳಿ
- ಸಂಗೊಳ್ಳಿ ರಾಯಣ್ಣ ಕನ್ನಡಿಗರ ವೇದಿಕೆ
- ಕರ್ನಾಟಕ ರಕ್ಷಣಾ ವೇದಿಕೆ

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಂಗ ಸಂಸ್ಥೆಗಳು

- ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ
- ಕವಿಕಾ ಕನ್ನಡ ಸಂಘ
- ಎಚ್.ಎ.ಎಲ್. ಕೇಂದ್ರೀಯ ಕನ್ನಡ ಸಂಘ
- ಐ.ಟಿ.ಐ. ಕನ್ನಡ ಹಿತರಕ್ಷಣಾ ಸಮಿತಿ
- ಬಿ.ಇ.ಎಂ.ಎಲ್. ಕನ್ನಡ ಸಂಘ

- ಬಿ.ಇ.ಎಂ.ಎಲ್. ಕನ್ನಡ ಸಂಘ ಕೆ.ಜಿ.ಎಫ್.
- ಬಿ.ಎಚ್.ಇ.ಎಲ್. ಕನ್ನಡ ಹಿತರಕ್ಷಣಾ ಸಮಿತಿ
- ನಾಗನಾಥಪುರ ಮೈಕೋ ಕನ್ನಡ ಬಳಗ
- ಅಮ್ಕೋ ಕಾರ್ಮಿಕರ ಕನ್ನಡ ಕಲಾ ಸಂಘ
- ಎಂ.ಇ.ಐ. ಕನ್ನಡ ಹಿತರಕ್ಷಣಾ ಸಮಿತಿ
- ಜಿ.ಇ. ಕನ್ನಡ ಸಂಘ
- ಐ.ಪಿ.ಪಿ. ಕನ್ನಡ ಸಂಘ
- ಬಿ.ಪಿ.ಎಲ್. ಕನ್ನಡ ಸಂಘ
- ರೈಲ್ವೆ ನೌಕರರ ಕನ್ನಡ ಸಂಘ
- ಇಂಡಿಯನ್ ಏರ್ ಲೈನ್ಸ್ ಕನ್ನಡ ಸಂಘ
- ಕೆ.ಎಸ್.ಡಿ.ಎಲ್. ಕನ್ನಡ ಹಿತರಕ್ಷಣಾ ಸಮಿತಿ
- ೫೧೫ ಭೂ ಸೇನಾ ಕಾರ್ಯಾಗಾರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ
- ಆರ್.ಎಂ.ಎಸ್ ಕನ್ನಡ ಸಂಘ
- ಎಚ್.ಎಂ.ಟಿ. ಕನ್ನಡ ಸಂಘ
- ಎನ್.ಎ.ಎಲ್. ಕನ್ನಡ ಸಂಘ
- ಎಸ್ಕಾರ್ಟ್ಸ್ ಕನ್ನಡ ಸಂಘ
- ಕಾರ್ ಮೊಬೈಲ್ಸ್ ಕನ್ನಡ ಸಂಘ
- ಜೀವ ವಿಮೆ / ಸಾಮಾನ್ಯ ವಿಮೆ ಕನ್ನಡ ಸಂಘ
- ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕನ್ನಡ ಸಂಘ
- ಎಲ್ಲಾ ಕನ್ನಡ ಅಭಿಮಾನಿಗಳ ಅಂತರಾಷ್ಟ್ರೀಯ ವೇದಿಕೆ (ಈ-ಕವಿ)
- ಭುವನೇಶ್ವರಿ ಆಟೋ ಚಾಲಕರು ಹಾಗೂ ಮಾಲೀಕರ ಕನ್ನಡ ಸಂಘ, ಕೋರಮಂಗಲ
- ಜೈ ಕರ್ನಾಟಕ ಆಟೋ ಮಾಲೀಕರ ಕನ್ನಡ ಸಂಘ, ಆಗರ
- ಭಾಗ್ಯಲಕ್ಷ್ಮಿ ಸಮೂಹ ಕನ್ನಡ ಸಂಘ, ಮೈಸೂರು ರಸ್ತೆ, ಬೆಂಗಳೂರು-೨೬

ಕನ್ನಡ ಚಳುವಳಿಯಲ್ಲಿ ಭಾಗವಹಿಸಿದವರು

ಬಿ.ಇ.ಎಲ್

ಮು. ಪಾರ್ಥಸಾರಥಿ
ಸಿದ್ಧಯ್ಯ
ಕೆ.ವಿ. ವಲಸಣ್ಣ
ಕೆ.ಪಿ. ಶಿವಶಂಕರ್
ಸಂಪಂಗಿ
ಹ. ಹನುಮಂತಯ್ಯ
ಬೆ.ರ. ರಂಗರಾಜು
ರಾ. ಚಂದ್ರೇಗೌಡ
ವೆಂಕಟೇಶ ಮೂರ್ತಿ
ಎಸ್.ಆರ್. ಶಕುಂತಲ
ನ.ಹ. ಗುರುರಾಜ್
ನಾ. ಬಸವರಾಜು
ನರಸಿಂಹಶೆಟ್ಟಿ
ಸಿ.ಆರ್. ಗುರುರಾಜ
ಬಿ. ಪುಟ್ಟಸ್ವಾಮಿ
ಲ. ನಾಗಶೆಟ್ಟಿ
ಬಿ. ಹನುಮಯ್ಯ
ಬೆ.ವಿ. ಪಶುಪತಿ
ಬೆ.ಹ. ಲಕ್ಷ್ಮಣಯ್ಯ
ಸುರೇಂದ್ರ
ಅನುಸೂಯಬಾಯಿ

ಐ.ಟಿ.ಐ

ವರದರಾಜ
ಜಯರಾಜ್
ಬಸವರಾಜು
ಮು. ಲೋಕನಾಥ್

ಹೆಚ್.ಎಂ.ಟಿ. ಕನ್ನಡ ಸಂಪದ

ಕೆ.ಎಸ್. ಸೂರ್ಯನಾರಾಯಣ
ನರಸಿಂಹ
ರಾಮಚಂದ್ರ

ಬಿ.ಹೆಚ್.ಇ.ಎಲ್.

ಚಳವಳಿ ರಾಮಕೃಷ್ಣ

ಎನ್.ಎ.ಎಲ್.

ವಿಜಯಕುಮಾರ್

೫೧೫ ಕಾರ್ಯಾಗಾರ

ಸಮಿಉಲ್ಲಾ ಖಾನ್

ಅಕೌಂಟೆಂಟ್ ಜನರಲ್ ಕಛೇರಿ

ಕೃಷ್ಣೇಗೌಡ
ರುದ್ರಪ್ಪ
ರಿಚರ್ಡ್‌ಲೂಯಿಸ್

ಕ.ವಿ.ಕಾ.

ಕೃಷ್ಣೇಗೌಡ
ರಂಗಸ್ವಾಮಿ

ಕ.ರಾ.ರ.ಸಾ.ಸಂ

ವ.ಚ. ಚನ್ನೇಗೌಡ
ಕೃಷ್ಣಮೂರ್ತಿ
ಸುಜ್ಞಾನ ಮೂರ್ತಿ
ಗಜಣ್ಣ
ನೀ. ನೀಲಕಂಠ

ಮೈಕೋ

ಜವರಯ್ಯ
ಮಧುಸೂಧನರಾವ್
ಜೆ.ಸಿ. ನಾರಾಯಣ
ಗೇಬ್ರಿಯಲ್

ಕಾರ್ ಮೊಬೈಲ್

ಈಶ್ವರಿ ಪ್ರಸಾದ್
ಜೆ.ವಿ. ಲಕ್ಷ್ಮೀಕಾಂತ್

ದೂರದರ್ಶನ ವೀಕ್ಷಕ ವೃಂದ

ಜೆ.ವಿ.ಎಸ್. ನಾರಾಯಣ್
ಎಸ್. ರಾಮಶೇಷ್
ಟಿ.ಎನ್. ರಾಮಚಂದ್ರ
ಶಾಂತಮೂರ್ತಿ
ಎನ್. ಆನಂದರಾಮ ರಾವ್
ಹೆಚ್. ಶಿವರುದ್ರಯ್ಯ
ಟಿ.ಎಸ್. ಚಂದ್ರಶೇಖರಯ್ಯ

ಕಟ್ಟೆಬಳಗ

ಅಶೋಕ ಬಾಬು
ಸತ್ಯನಾರಾಯಣ (ಸತ್ಯ)
ನಾರಾಯಣ ಪ್ರಸಾದ
ಪ್ರಕಾಶ್
ರಾಜು
ಲಿಂಗಮೂರ್ತಿ
ದಿನಕರ (ದೀನು)
ಶಿವು
ಬಾಲಕೃಷ್ಣ
ಶೇಷಗಿರಿ
ನಿರಂಜನ್
ದುರ್ಗಾ ಪ್ರಸಾದ್
ನಾಗಭೂಷಣ
ರವಿ
ಕೃಷ್ಣಮೂರ್ತಿ
ಪದ್ಮನಾಭ
ರಾಮು
ಬದರಿ
ನಾಗರಾಜ್
ವಿಶ್ವನಾಥ
ಸುದೀಂದ್ರ
ಮಹೇಂದ್ರ
ಜಗನ್ನಾಥ
ಶ್ರೀಧರ

ಕರ್ನಾಟಕ ಯುವಕರ ಸಂಘ, ಸ್ವತಂತ್ರ ಪಾಳ್ಯ

ಜಯರಾಮ
ಎಸ್. ರಾಜು
ಲಿಂಗಪ್ಪ
ಸಿ. ಕೃಷ್ಣಪ್ಪ
ಮಾದು (ಆಟೋ)
ಕೆಂಚಣ್ಣ
ಚಿಕ್ಕಣ್ಣ
ಅಂದಾನಪ್ಪ
ರಾಮಣ್ಣ

ಕರ್ನಾಟಕ ಯುವಕರ ಸಂಘ ರಾಮಚಂದ್ರಪುರ, ಶ್ರೀರಾಮಪುರ

ಗಂಗಾಧರ್
ಕೃಷ್ಣಸಿಂಗ್
ವಿಶ್ವನಾಥ್
ವಸಂತೇಗೌಡ
ಮಾರಪ್ಪ
ನಂಜುಂಡೇಗೌಡ
ರಾಮಣ್ಣ
ರಾಮಯ್ಯ
ಶಿವರಾಜು
ವಿ. ಶ್ರೀನಿವಾಸ

ನೃಪತುಂಗ ಕನ್ನಡ ಸಂಘ, ಬಂಡಿರೆಡ್ಡಿ ವೃತ್ತ, ಶ್ರೀರಾಮಪುರ

ಚಂದ್ರಶೇಖರ
ಕೃಷ್ಣರೆಡ್ಡಿ
ಭಾಸ್ಕರ ರೆಡ್ಡಿ

ಮ. ರಾಮಮೂರ್ತಿ ಕನ್ನಡ ಬಳಗ, ಶ್ರೀರಾಮಪುರ

ಬಿ. ರಾಮಕೃಷ್ಣ, ಮಾಜಿ ನಗರ ಸಭಾ ಸದಸ್ಯರು
ರಂಗಪ್ಪ
ವೆ. ಶ್ರೀನಿವಾಸ
ಡಿ. ನಾಗರಾಜ
ಮ. ನಾರಾಯಣ
ನಾರಾಯಣ
ಕೃ. ನಾರಾಯಣ ಸಿಂಗ್
ಚಂದ್ರಪ್ಪ
ಅಪ್ಪಾಜಿ
ಗ. ರಾಮಯ್ಯ
ಕಜಾ ಗೋಪಾಲ
ಬಿ.ಎನ್. ಶ್ರೀಧರ
ತಿ. ಶ್ರೀನಿವಾಸ
ಸಂಜೀವ ಬಾಬು
ಗೋಪಾಲ
ಸಣ್ಣ
ಬಿ.ಹೆಚ್. ಶಂಕರನಾರಾಯಣ
ಮೋಹನ
ರಾಚಿ
ಶಿ. ಜಯರಾಮ
ರುದ್ರಪ್ಪ
ಕೆ.ಎನ್. ಗೋಪಾಲಕೃಷ್ಣ
ಮರಕೊಂಡ
ಸಿ. ಗೋವಿಂದ ರಾಜು
ಬಾಬು ಪಾಂಡೇಶ್ವರ
ರಾಮಣ್ಣ
ನಾರಾಯಣ
ತಿಮ್ಮೇಗೌಡ
ಆಂಜನಪ್ಪ
ಕೃಷ್ಣ
ಶ್ರೀನಿವಾಸ
ನಾಗರಾಜ
ಸಿದ್ದಲಿಂಗಯ್ಯ
ಕೆ. ಗೋಪಾಲ
ಗಂಗಾಧರ

ಸರ್ವಜ್ಞ ಮಿತ್ರ ವೃಂದ

ಪಿ.ಕೆ. ರಾಮದಾಸ (ಮಾಜಿ ನಗರಸಭಾ ಸದಸ್ಯ)
ಬಸವರಾಜು
ರಾಮಜಿ.
ಪುಟ್ಟಮಾದಶೆಟ್ಟಿ
ಡೊಮ್ಮಿಂಗ್
ಮಾಸ್ತಪ್ಪ
ಬಾಚಿ
ಕೃಷ್ಣೋಜಿ ರಾವ್
ಶಿವಣ್ಣ
ಚಂದ್ರಶೇಖರ್
ಬಾಲಕೃಷ್ಣ
ಗೋವಿಂದರಾಜ್
ಜಯರಾಮ
ಆರಾಧ್ಯ

ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘ

ಜೆ.ಆರ್. ಪೆರೇರಾ
ರಫಾಯಲ್
ಜಾಕೋಬ್ ಫ್ರಾನ್ಸಿಸ್
ಎ. ಪೀಟರ್
ಆಂತೋಣಿ ರಾಜ್
ಜಾರಾರೆಡ್ಡಿ
ಗೇಬ್ರಿಯಲ್ ಅಗೇರ್

ಕ್ರೈಸ್ತ ಸಂಘ

ಜಫಟ್
ಆರೋಗ್ಯ ಸ್ವಾಮಿ
ಲಾರೆನ್ಸ್
ಮೈಕಲ್ ಫರ್ನಾಂಡಿಸ್
ಸೆಬಾಸ್ಟಿಯನ್

ಕನ್ನಡ ಮಹಿಳಾ ಕಾರ್ಯಕರ್ತರು

ಅಮೃತ ನಾರಾಯಣ
ಸ.ನ. ರಮಾದೇವಿ
ಬಾಲಾಂಬ
ಜಯಮ್ಮ ಕರಿಯಣ್ಣ
ಮಂಜುಳಾಂಬ
ಜಿ.ಎಸ್. ಗಾಯಿತ್ರಿ
ಮಂಜುಳಾ ಮೋಹನ್
ರಮಾದೇವಿ ವಿಶ್ವೇಶ್ವರಯ್ಯ

ಇತರರು

ನಾರಾಯಣ ಗೌಡ (ಕರ್ನಾಟಕ ರಕ್ಷಣಾ ವೇದಿಕೆ)
ಪ್ರಸಾದ್ (ಕನ್ನಡ ಅನುಷ್ಠಾನ ಮಂಡಳಿ)
ಕೊ.ವೆಂ. ರಾಮಕೃಷ್ಣೇ ಗೌಡ
ಶ್ರ.ದೇ. ಪಾರ್ಶ್ವನಾಥ
ವಿಜಯೇಂದ್ರ
ಆರ್.ಎಸ್.ಎನ್. ಗೌಡ (ರಣಧೀರ ಪಡೆ)
ಬೆ.ರಾ. ನಾಗರಾಜ್
ಆಳ್ಳ ಚಿರಂಜೀವಿ
ಚನ್ನ ಬಸವರಾಜ್
ದೇವಕೀ ಕುಮಾರ್
ಚಿಕ್ಕಣ್ಣ
ಶರಣಪ್ಪ
ದೊಡ್ಡ ಕಣ್ಣಯ್ಯ
ಗೋಪಿನಾಥ್
ನಾ. ನಾಗರಾಜಯ್ಯ
ಕೆ.ಎಸ್. ಸುಬ್ರಮಣ್ಯಂ
ಎಲ್. ವೆಂಕಟಪ್ಪ
ಬಾ.ಹಾ. ಉಪೇಂದ್ರ
ಹೊಸೂರು ನಾಗರಾಜ್
ಡಿ.ಎಸ್. ರಾಜಶೇಖರ್
ಸಿದ್ದಲಿಂಗಪ್ಪ
ಜಯಚಂದ್ರ
ಕೆ.ವಿ. ನಾಗರಾಜಮೂರ್ತಿ
ಕೆ. ರಾಮಚಂದ್ರ
ರಾ. ಪ್ರಭುಶಂಕರ
ಎಸ್.ಬಿ. ಅಣ್ಣಯ್ಯಪ್ಪ
ಬಿ.ಸಿ. ಜಯರಾಂ
ಫಾಲನೇತ್ರ
ರೇ. ಸಿದ್ದಲಿಂಗಯ್ಯ
ಎಂ.ಎಸ್. ಮಲ್ಲಿಕಾರ್ಜುನ್

ರಂಗನಾಥ್
ಎಂ. ಚಂದ್ರಶೇಖರ್
ಕೆ. ರಾಜಕುಮಾರ್
ಅ. ವೆಂಕಟರಮಣ
ಮಹದೇವ ಪ್ರಕಾಶ್
ರವೀಂದ್ರ ರೇಷ್ಮೆ
ರಾಮೇಗೌಡ (ಮಾಜಿ ಉಪಮೇಯರ್)
ಅ.ತಿ. ರಂಗನಾಥ್
ದೊ.ಮ. ರಾಮಕೃಷ್ಣ
ಕೇಸರಿ ಗೋಪಿನಾಥ್
ಅಶೋಕ ಕಿಣಿ
ಗುರುಮೂರ್ತಿ (ಮೈಸೂರ್ ಬ್ಯಾಂಕ್)
ದೋಬಿ ನಾಗ
ರಾಧಾಕೃಷ್ಣ (ಉಪನ್ಯಾಸಕರು)
ವಾಮದೇವಯ್ಯ
ಸಿ. ಚಂದ್ರಶೇಖರ್ (ಕಲಾವಿದ)
ಕೃಷ್ಣಶೆಟ್ಟಿ (ಕಲಾವಿದ)
ಹೂಗಾರ
ಬೆನ್ನ ಲೋಕೇಶ್
ಟೋಪಿ ಬಸವರಾಜು (ದಂಡು)
ಟಿ.ಪಿ. ಪ್ರಸನ್ನ ಕುಮಾರ್
ನಾ. ಗೀತಾಚಾರ್ಯ
ಬೆ.ಕಾ. ಮೂರ್ತಿಶ್ವರಯ್ಯ
ತಲಕಾಡು ಚಿಕ್ಕ ರಂಗೇಗೌಡ
ಆರ್.ಎಸ್.ಎನ್. ಗೌಡ
ಗೋವಿಂದಹಳ್ಳಿ ದೇವೇಗೌಡ
ದೇವಕಿ ಸುತ (ದಂಡು)
ನಂಜುಂಡ (ಖಾನ್)
ಮೀಸೆ ಗಂಗಣ್ಣ
ಆಟೋರಾಜ
ಈ.ಹ. ಲಕ್ಷ್ಮಣ
ಆರ್. ಹರೀಶ್

ಗೋವಿಂದ
ರು. ಬಸಪ್ಪ
ರಾಜಣ್ಣ
ಫರ್ನಾಂಡಿಸ್
ಹನುಮಂತರಾಯ
ಪುರುಷೋತ್ತಮ
ಕು.ವೆಂ. ಗೋವಿಂದರಾಜು
ಜನಾರ್ಧನ
ಎಸ್. ಚಂದ್ರಶೇಖರ್
ಚಿಕ್ಕಣ್ಣ
ದೇವಯ್ಯ
ಪೈಲ್ವಾನ್ ನಾರಾಯಣ
ಪೈಲ್ವಾನ್ ಲಿಂಗಪ್ಪ
ರಂಗಸ್ವಾಮಿ
ಗೋವಿಂದ
ಗೋಪಾಲ
ಪರಮೇಶ
ಧೋಬಿ ವಿರೂಪಣ್ಣ
ಬಿ.ಟಿ. ರಾಮಚಂದ್ರ
ರಾಚಪ್ಪ
ಬೀರು. ಕೆಂಪಯ್ಯ
ಸೈಕಲ್ ಶಾಪ್ ಶ್ರೀಧರ
ಧೈರ್ಯನಾಥ್
ದೇವ
ಮಾಲ
ಮು. ವಸಂತಯ್ಯ
ಮಾರ್ಕೆಟ್ ರವಿ
ಗೋವಿಂದ
ರಾಜಣ್ಣ
ನಾಗೇಶ್
ಲಕ್ಷ್ಮೀನಾರಾಯಣ
ಕೆ. ರವಿ
ಕಹಳೆ ಗೋವಿಂದು

ಮೈಸೂರು ನಗರ ಜಿಲ್ಲಾ ಕನ್ನಡ ಚಳುವಳಿಗಾರರ ಕೇಂದ್ರ ಸಮಿತಿ

ಚಂದ್ರಶೇಖರಯ್ಯ	ಪಿ.ಸಿ. ಚಿಕ್ಕಸ್ವಾಮಿ
ಎ.ಸಿ. ಬಸಪ್ಪ (ಮಾಜಿ ನಗರಪಾಲಿಕೆ ಸದಸ್ಯರು)	ಜಯಕುಮಾರ್
ತಾಯೂರು ವಿಠಲಮೂರ್ತಿ	ಸಾ.ಪು. ಗುಂಡುರಾವ್
ಎಂ.ಬಿ. ದೊಡ್ಡೇಗೌಡ	ಗಾಶ. ಭೋಗಾನಂದೀಶ್ವರ
ಡಿ. ನಾಗಭೂಷಣ	ಅ. ಮಹೇಶ್ವರ
ಮೂಗೂರು ನಂಜುಂಡಸ್ವಾಮಿ	ಶ್ರೀನಿವಾಸ ಮಿತ್ರ
ಎಸ್.ಎಸ್. ಶಾಸ್ತ್ರಿ	ನಾಗೇಶ್ ಯಾದವ್
ಬಿ.ಜೆ. ಅಶೋಕ್ ಕುಮಾರ್ (ಮಾಜಿ ನಗರಪಾಲಿಕೆ ಸದಸ್ಯರು)	ರಾ. ಪರಮೇಶ್ವರ ಗೌಡ
	ಗಿರೀಶ್
ಮೈಶಿ. ವಾಸು	ಎ. ಚಂದ್ರಶೇಖರ್

ದೊಡ್ಡಬಳ್ಳಾಪುರ

ಡಾ. ವೆಂಕಟರೆಡ್ಡಿ	ಪ್ರಭುದೇವ

ಗ್ರಂಥ ಋಣ

ಆಚಾರ್ಯ ಬಿ.ಎಂ.ಶ್ರೀ. - ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಅ.ನ.ಕೃ ಮತ್ತು ಕನ್ನಡ ಚಳುವಳಿ - ಪ್ರೊ. ಬಿ.ಕೆ. ಅನಂತ ಸ್ವಾಮಿ
ಕರ್ನಾಟಕ ಏಕೀಕರಣ ಇತಿಹಾಸ - ಡಾ. ಎಚ್.ಎಸ್. ಗೋಪಾಲರಾವ್
ಕರ್ನಾಟಕ ಏಕೀಕರಣ ಸಿದ್ಧಿ ಮತ್ತು ಸಾಧನೆ - ಡಾ. ಸೂರ್ಯನಾಥ ಕಾಮತ್
ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ - ಡಾ. ಸಿ.ಆರ್. ಗೋವಿಂದ ರಾಜು
ಕರ್ನಾಟಕ-ಕನ್ನಡ-ಕರ್ಮಕಥೆ - ಕೋ. ಚನ್ನಬಸಪ್ಪ (ಪ್ರ:ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ)
ಕನ್ನಡರ ಸ್ಥಿತಿಗತಿ - ಎಚ್ಚೆಸ್ಕೆ
ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ - ಡಾ. ಎಂ. ಚಿದಾನಂದಮೂರ್ತಿ
ಕನ್ನಡ ಚಿಂತನೆ ಮತ್ತು ಪರಂಪರೆ - ಕಾ.ವೆಂ.ಶ್ರೀ.
ಕನ್ನಡ ಹೋರಾಟಗಳು - ಒಂದು ನೋಟ - ರಾ. ನಂ. ಚಂದ್ರಶೇಖರ್
ಕನ್ನಡ ಚಳುವಳಿಗಳು - ಡಾ. ಸಿ.ಆರ್. ಗೋವಿಂದರಾಜು
ಕನ್ನಡದ ಹಿತ - ಡಾ. ಯು.ಆರ್. ಅನಂತ ಮೂರ್ತಿ
ಕನ್ನಡದ ಕಣ್ವ ಬಿ.ಎಂ.ಶ್ರೀ. - ಹೊ. ಶ್ರೀನಿವಾಸಯ್ಯ
ಕನ್ನಡ ಶಕ್ತಿ - ರಾ.ನಂ. ಚಂದ್ರಶೇಖರ್
ಕನ್ನಡ ಸಿನಿಮಾ-ಇತಿಹಾಸದ ಪುಟಗಳಲ್ಲಿ - ಗಂಗಾಧರ ಮೊದಲಿಯಾರ್
ಕಾವೇರಿ-ಒಂದು ಚಿಮ್ಮು - ಒಂದು ಹೊರಳು - ಶೇಷ ನಾರಾಯಣ
ಕಾವೇರಿ ಜಲ - ಕರ್ನಾಟಕಕ್ಕಾಗಿರುವ ಅನ್ಯಾಯ ಮತ್ತು ದೊರಕ ಬೇಕಾದ ನ್ಯಾಯ ಎಸ್.ಜಿ. ಬಾಳೆಕುಂದ್ರಿ
ಗೋಕಾಕ್ ಸಮಿತಿ ವರದಿ - ಭಾಷಾ ಸಮಿತಿ ವರದಿ - ಕನ್ನಡ ಸಾಹಿತ್ಯ ಪರಿಷತ್ತು
ಗೋಕಾಕ್ ವರದಿ ಅನುಷ್ಠಾನಕ್ಕೆ ನಡೆದ ಕನ್ನಡ ಚಳುವಳಿ - ಹುಚ್ಚಪ್ಪ
ಡಾ. ಸರೋಜಿನಿ ಮಹಿಷಿ ಸಮಿತಿ ಶಿಫಾರಸುಗಳ ಸಾರಾಂಶ - ೧. ಕನ್ನಡ ಅಭಿವೃದ್ಧಿ ಪ್ರಾಧಿಕಾರ ೨. ಸಾಹಿತಿ ಕಲಾವಿದರ ಬಳಗ
ಸಂಪಾದಕರ ಡೈರಿ - ಬಿ.ವಿ. ವೈಕುಂಠರಾಜು

ಗ್ರಂಥ ಋಣ

ಜಿ. ನಾರಾಯಣ	- ಅಭಿನಂದನಾ ಗ್ರಂಥ
ರಾಜಧಾನಿ	ಬೆಂಗಳೂರು ನಗರ ಜಿಲ್ಲಾ
ಉದ್ಯಾನ ನಗರಿ	ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಗಳು
ಕನ್ನಡ ಸಂಘರ್ಷ ಸಮಿತಿ	- ಇಪ್ಪತ್ತನೆಯ ವಾರ್ಷಿಕೋತ್ಸವದ ಸ್ಮರಣ ಸಂಚಿಕೆ.
ಕನ್ನಡ ಸೇನಾನಿ	- ಮ. ರಾಮಮೂರ್ತಿ ಕನ್ನಡ ಬಳಗದ ಬೆಳ್ಳಿ ಹಬ್ಬ - ನೆನಪಿನ ಸಂಚಿಕೆ.
ಸ್ಮರಣೆ	- ಅ.ನ.ಕೃ ಸವಿ ನೆನಪಿನ ಸಂಚಿಕೆ
ಸುಕೃತ	- ಎಂ.ವಿ. ಸುಬ್ಬರಾಯರ ನೆನಪಿನ ಸಂಚಿಕೆ

ಪರಿಶೀಲಿಸಿದ ಪತ್ರಿಕೆಗಳು

ಪ್ರಜಾವಾಣಿ	ಮೈಸೂರು ಮಿತ್ರ
ಕನ್ನಡ ಪ್ರಭ	ಪ್ರಜಾಮತ
ಸಂಯುಕ್ತ ಕರ್ನಾಟಕ	ಕರ್ಮವೀರ
ಸಂಜೆವಾಣಿ	ಲಂಕೇಶ್ ಪತ್ರಿಕೆ
ಈ ಸಂಜೆ	ಸುಧಾ

ಮುಂತಾದವು.

ಮಾಹಿತಿ ಹಾಗೂ ಛಾಯಾ ಚಿತ್ರಗಳನ್ನು ಇತ್ತು ಸಹಕರಿಸಿದವರು

ಎಂ.ವಿ. ಸುಬ್ಬರಾವ್

ಕೆ.ಟಿ. ಚಂದ್ರಶೇಖರ್

ಎಂ.ವಿ. ವರದಯ್ಯ

ಮನೂ ಪಾಟೀಲ

ಮುಕುಂದ ಪುರೋಹಿತ

ಸತ್ಯನಾರಾಯಣ (ಕಟ್ಟೆ ಬಳಗದ ಸತ್ಯ) ನಗರ ಸಭಾಸದಸ್ಯರು.

ವೆ. ಶ್ರೀನಿವಾಸ - ಮ. ರಾಮಮೂರ್ತಿ ಕನ್ನಡ ಬಳಗ

ಕೋಡಿ ಹೊಸಹಳ್ಳಿ ರಾಮಣ್ಣ - ಕನ್ನಡ ಸಂಘರ್ಷ ಸಮಿತಿ.

ರಮಾದೇವಿ ವಿಶ್ವೇಶ್ವರಯ್ಯ

ಎಂ.ವಿ. ಗೋಪಾಲ ಕೃಷ್ಣ

ರಾ.ನ. ಚಂದ್ರಶೇಖರ್ - ಕನ್ನಡ ಗೆಳೆಯರ ಬಳಗ

ಗೋವಿಂದೇಹಳ್ಳಿ ದೇವೇಗೌಡ,

ಟಿ. ಪ್ರಸನ್ನಕುಮಾರ್

ಬೇ.ಕಾ. ಮೂರ್ತೀಶ್ವರಯ್ಯ,

ಕೆ. ರವಿ - ಸಂಗೊಳ್ಳಿರಾಯಣ್ಣ ಕನ್ನಡಿಗರ ವೇದಿಕೆ

ಎ.ಸಿ. ಬಸಪ್ಪ - ಕನ್ನಡ ಚಳುವಳಿಗಾರರ ಕೇಂದ್ರ ಸಮಿತಿ ಮೈಸೂರು

ಡಾ. ವೆಂಕಟರೆಡ್ಡಿ, ಪ್ರಭುದೇವ - ದೊಡ್ಡಬಳ್ಳಾಪುರ

ಸಂಘಸಂಸ್ಥೆಗಳ ಹಾಗೂ ಮಹನೀಯರ ಹೆಸರುಗಳನ್ನು ಪ್ರಕಟಿಸಿರುವಾಗ ಕೆಲವಾರು ಹೆಸರುಗಳು ಬಿಟ್ಟು ಹೋಗಿರಬಹುದು. ಅದಕ್ಕಾಗಿ ಕ್ಷಮೆ ಇರಲಿ.

ಬಿ. ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ
ಅಧಿಕಾರ ವರ್ಗ - ೨೦೦೨ - ೨೦೦೫

ಅಧ್ಯಕ್ಷರು

ಗೊ.ರು. ಚನ್ನಬಸಪ್ಪ

ಗೌರವ ಸಲಹೆಗಾರರು

ಡಾ. ಎಂ. ಚಿದಾನಂದ ಮೂರ್ತಿ

ಉಪಾಧ್ಯಕ್ಷರು

ನಾ. ಶ್ರೀಧರ

ಎಂ. ಗೋವಿಂದರಾಜು

ಪ್ರಧಾನ ಕಾರ್ಯದರ್ಶಿ

ಸಿದ್ಧಯ್ಯ

ಜಂಟಿ ಕಾರ್ಯದರ್ಶಿ

ಎಂ. ಜನಾರ್ಧನ

ಸಹ ಕಾರ್ಯದರ್ಶಿ

ಎಂ.ಕೆ. ಕೋಮಾರಿಗೌಡ

ಸಂಘಟನಾ ಕಾರ್ಯದರ್ಶಿಗಳು

ಎಲ್.ಜಿ. ರಾಮಚಂದ್ರಪ್ಪ

ಗೀತಾ

ಕೋಶಾಧಿಕಾರಿ

ಮಲ್ಲಿಕಾರ್ಜುನ

ಲೆಕ್ಕ ಪರಿಶೋಧಕರು

ಎ.ಕೆ. ವೆಂಕಟರಾಮ

ಇಟ್ಟ ಹೆಜ್ಜೆ - ಪಟ್ಟ ಶ್ರಮ

ಕನ್ನಡ ಚಳವಳಿ ನಡೆದು ಬಂದ ದಾರಿ

ಸಾಧಾರಣವೆನಿಸಿದರೂ ನನ್ನ ದೃಷ್ಟಿಯಲ್ಲಿ ಇದೊಂದು 'ಅಸಾಧಾರಣ' ಕೃತಿ. ಇದು ಸೃಜನಶೀಲ ಸಾಹಿತ್ಯಕೃತಿ ಅಲ್ಲದಿರಬಹುದು. ಆದರೆ ಒಂದು ನೆಲದ ಆಸೆ-ನಿರಾಸೆಗಳ, ಕೆಚ್ಚು - ನೆಚ್ಚುಗಳ ಮತ್ತು ನೋವು-ನಲಿವುಗಳ ಬದುಕಿನ ಒಂದು ವಸ್ತುನಿಷ್ಠ ನಿರೂಪಣೆಯ ಕೃತಿಯಂತೂ ಹೌದು.

ಈ ಕೃತಿಯಲ್ಲಿ 'ಕರ್ನಾಟಕ ಏಕೀಕರಣದ ಕನಸು-ಸಾಧನೆ' ಯಿಂದ ಹಿಡಿದು ಇಂದು ನಡೆಯುತ್ತಿರುವ 'ಶಿಕ್ಷಣ ಮಾಧ್ಯಮ' ಸಂಬಂಧದ ಹೋರಾಟದವರೆಗೆ ಅನೇಕ ಸಂಗತಿಗಳಿವೆ. ಕನ್ನಡಪರವಾದ ಪ್ರತಿಯೊಂದು ಚಳವಳಿಯ ಹಿನ್ನೆಲೆ, ಸ್ವರೂಪ ಮತ್ತು ಪರಿಣಾಮಗಳನ್ನು ತುಂಬ ಸರಳವಾಗಿ ನಿರೂಪಿಸಲಾಗಿದೆ. ಇಲ್ಲಿರುವ ವಸ್ತುನಿಷ್ಠತೆಗೆ ಮುಖ್ಯ ಕಾರಣ ಕೃತಿಕರ್ತರಾದ ಮೂವರೂ ಕನ್ನಡ ಚಳವಳಿಯ ಭಾಗವಾಗಿರುವುದು.

'ಇಟ್ಟ ಹೆಜ್ಜೆ - ಪಟ್ಟ ಶ್ರಮ' ಕೃತಿ ರಚನೆಗಾಗಿ ಕೃತಿಕರ್ತರು ಸಾಕಷ್ಟು ಶ್ರಮಪಟ್ಟು ಮಾಹಿತಿ ಸಂಗ್ರಹಿಸಿದ್ದಾರೆ. ಇದು ನಾಡುನುಡಿಗಳ ಬಗೆಗೆ ಅವರಿಗಿರುವ ಅನನ್ಯ ನಿಷ್ಠೆ ಮತ್ತು ಅಭಿಮಾನಗಳಿಗೆ ಸಾಕ್ಷಿಯಾಗಿದೆ.

ಕನ್ನಡ ಜನ ಸಮುದಾಯಕ್ಕೆ ಸ್ವಾಭಿಮಾನ ಮತ್ತು ಆತ್ಮ ವಿಶ್ವಾಸಗಳನ್ನು ತುಂಬಲು, ಕನ್ನಡ ನಾಡು-ನುಡಿಗಳ ಸ್ಥಾನಮಾನಕ್ಕೆ ಆಪತ್ತು ಒದಗಿದ ಸಂದರ್ಭಗಳಲ್ಲಿ ನಡೆಯುವ ನ್ಯಾಯಯುತ ಚಳವಳಿಗಳಲ್ಲಿ ಸ್ವಯಂಪ್ರೇರಿತರಾಗಿ ಪಾಲುಗೊಳ್ಳಲು 'ಇಟ್ಟ ಹೆಜ್ಜೆ - ಪಟ್ಟ ಶ್ರಮ' ಪ್ರೇರಣೆ ನೀಡುವಂತಾಗಲಿ.

- ಗೊ.ರು. ಚನ್ನಬಸಪ್ಪ